BROWEN BOOK ONLY

**TEXT PROBLEM WITHIN THE BOOK ONLY**

UNIVERSAL
LIBRARY
OU_200277
UNIVERSAL
LIBRARY

**OSMANIA UNIVERSITY LIBRARY**

Call No. K83 ~~K4351~~ R16V9 Accession No. K 4351

Author [illegible]

Title [illegible]

This book should be returned on or before the date last marked below.



83
16Va

ಬೆಲೆ ೦—೧೦—

ಬರೆದವರು :

ಗೊರೂರು ರಾಮಸ್ವಾಮಿ ಅಯ್ಯಂಗಾರ್

ಪ್ರಕಾಶಕರು :

ಮಾರುತಿ ಪುಸ್ತಕ ಮಂದಿರ

Checked 1969

ಬೆಲೆ ~~೦-೬-೦~~
೧-೧೦-೦

ಮುದ್ರಕರು
ಶಂಕರ ಮುದ್ರಣಾಲಯ

# ಮೊದಲ ಮಾತು

ಈ ದೊಡ್ಡ, ಸಣ್ಣ ಕತೆಯನ್ನು ನಾನು ೧೯೪೨ನೆಯ ಇಸವಿಯ ಆಗಸ್ಟ್‌ನಲ್ಲಿ ಸೆರೆಮನೆಗೆ ಹೋದ ೨-೩ ದಿನಗಳಲ್ಲಿ ಬರೆದೆ. ಅಂದಿನ ಕಾವಿನ ವಾತಾವರಣದಲ್ಲಿ ಬರೆದುದನ್ನು ಮತ್ತೊಂದು ಸಲ ತಿದ್ದಬೇಕೆಂದಿದ್ದೆ. ಸಾಧ್ಯವಾಗಲಿಲ್ಲ. ಕತೆ ಆಗ ಬರೆದಂತೆ ಈಗ ಅಚ್ಚಾಗುತ್ತಿದೆ.

ಶ್ರೀಮಾನ್ ಎಸ್. ವಿ. ಕೃಷ್ಣಮೂರ್ತಿಗಳಿಗೆ ಕರ್ನಾಟಕ ಸಂಘದ ಯೋಚನೆ ಜೈಲಿನಲ್ಲಿಯೂ ತಪ್ಪಿರಲಿಲ್ಲ. ಈ ಕತೆಗೆ ಅವರು ಆಗಲೆ ಬಲೆ ಹಾಕಿ ತೆಗೆದುಕೊಂಡರು. ಇದು ಅಚ್ಚಾಗಲು ಶ್ರೀಮಾನ್ ಕೃಷ್ಣಮೂರ್ತಿಗಳಿಗೂ ಶಿವಮೊಗ್ಗ ಕರ್ನಾಟಕ ಸಂಘಕ್ಕೂ ನನ್ನಲ್ಲಿರುವ ವಿಶ್ವಾಸವೇ ಮುಖ್ಯ ಕಾರಣ. ಈ ಮೂಲಕ ನನ್ನ ಕೃತಜ್ಞತೆ ಸೂಚಿಸುತ್ತೇನೆ. ನನ್ನ ಮಿತ್ರರಾದ, ಉಷಾ ಪ್ರೆಸ್ಸಿನ ಶ್ರೀ ಹಬ್ಬುರವರು ಗ್ರಂಥವನ್ನು ಅಂದವಾಗಿ ಮುದ್ರಿಸಿರುವುದಕ್ಕಾಗಿ ಅವರನ್ನು ವಂದಿಸುತ್ತೇನೆ.

**ಗೊರೂರು ರಾಮಸ್ವಾಮಯ್ಯಂಗಾರ್**

# ವಿಷಯ ಸೂಚಿಕೆ


| | | |
|---|---|---|
| ೧. | ಮಲ್ಲಿಗೆವಾಳು ರಂಗಪ್ಪನವರು .... .... | ೧ |
| ೨. | ಭಾಗ್ಯಲಕ್ಷಮ್ಮನವರ ತ್ಯಾಗ .... .... | ೬ |
| ೩. | ಲಗ್ನಪತ್ರಿಕೆಯ ಸಮಾರಂಭ .... .... | ೧೪ |
| ೪. | ವತ್ಸಲೆಯ ದರ್ಶನ .... .... | ೨೩ |
| ೫. | ಮೀನು ಬಲೆಗೆ ಬಿತ್ತು .... .... | ೨೭ |
| ೬. | ವಿವಾಹ ಮಹೋತ್ಸವ .... .... | ೩೭ |
| ೭. | ಅನಾಥ .... .... | ೪೩ |
| ೮. | ಎರಡು ಜತೆ–ಎರಡು ಮಾದರಿ .... .... | ೫೨ |
| ೯. | ಹಳ್ಳಿಯಲ್ಲಿ ಬಣ್ಣದ ಬೀಸಣಿಗೆ .... .... | ೬೦ |
| ೧೦. | ಶತ್ರು ಯಾರು, ಮಿತ್ರ ಯಾರು .... .... | ೭೭ |
| ೧೧. | ಪುನರ್ಜನ್ಮ .... .... | ೯೦ |


## ಮುಂದಿನ ಕಾದಂಬರಿ

# ಪದ್ಮ

# ವತ್ಸಲೆ

## ೧. ಮಲ್ಲಿಗೆಹಳ್ಳಿ ರಂಗಪ್ಪನವರು

ಮಲ್ಲಿಗೆಹಳ್ಳಿ ಅಗ್ರಹಾರದ ಸಣ್ಣ ಜಮೀನ್‌ದಾರರಾದ ರಂಗಪ್ಪನವರು ತಮ್ಮ ಹಳೆಯ ಮನೆಯ ಜಗುಲಿಯ ಮೇಲೆ ನಶ್ಯವನ್ನು ತೀಡುತ್ತಾ ಬಿಸಿಲು ಕಾಯಿಸಿಕೊಳ್ಳುತ್ತಿದ್ದರು. ಸುಮಾರು ಬೆಳಿಗ್ಗೆ ಹತ್ತು ಗಂಟೆಯಾಗಿತ್ತು. ಹೊಳೆಯಿಂದ ಸ್ನಾನ ಮಾಡಿಕೊಂಡು ತಲೆ ಮೇಲೆ ಹಿಂಡಿದ ಪಂಚೆಗಳನ್ನೂ ಬಲಗೈಯ್ಯಲ್ಲಿ ಸೂರ್ಯನಂತೆ ಹೊಳೆಯುತ್ತಿದ್ದ ಕೆಂಪಾದ ತಾಮ್ರದ ಚೆಂಬನ್ನೂ ಹಿಡಿದುಕೊಂಡು ಹೊದ್ದಿದ್ದ ಕೆಂಪು ಶಾಲು ಬಿಸಿಲಿಗೆ ಥಳಥಳಿಸುತ್ತಿರಲು, ರಾಮಣ್ಣನವರು ಮನೆಯ ದಾರಿಯಲ್ಲಿ ಅಲ್ಲಿಗೆ ಬಂದರು. ರಂಗಪ್ಪನವರ ಚಲಿಸುತ್ತಿದ್ದ ಕೈಯನ್ನು ನೋಡಿ "ನಶ್ಯ ಮಾಡ್ತ ಇದ್ದೀರೋ. ಒಳ್ಳೆ ದಾಯಿತು. ಒಂದು ಚಿಟಿಕೆ ಹಾಕಿಕೊಂಡೇ ಹೋಗೋಣ. ಮೂಗು ಸ್ವಲ್ಪ ನೆಗಡಿಯಿಂದ ಜುಗಡಿಸ್ತ ಇದೆ" ಎಂದು ಜಗಲಿಯ ಸಮೀಪಕ್ಕೆ ಬಂದು, ಕೈಯ್ಯಲ್ಲಿದ್ದ ಚೆಂಬಿನಿಂದ ಒಂದು ತೊಟ್ಟು ನೀರನ್ನು ಕೆಳಕ್ಕೆ ಸುರಿದು ಅದರ ಮೇಲೆ ಚೆಂಬನ್ನಿಟ್ಟು ನಿಂತುಕೊಂಡರು. ರಂಗಪ್ಪನವರು ತಾವು ಕುಳಿತಿದ್ದ ಮಣೆಯನ್ನು ಮುಂದಕ್ಕೆ ನೂಕಿ "ಎಲ್ಲಿ ಇದರ ಮೇಲೆ ನಿನ್ನ ವೇಷ್ಟಿ ಇಡು. ಕೂತುಕೊ ಹೋಗುವಿಯಂತೆ. ಇನ್ನೇನು ಸ್ನಾನವಾಯಿತು. ಊಟತಾನೇ, ಇನ್ನೂ ಈಗ ಹತ್ತು ಗಂಟೆ ಇರಬಹುದು" ಎಂದರು. ರಾಮಣ್ಣನವರು "ಮಣೆ ಹಾಕೊಳ್ಳಿ. ಈ ಚೌಕದ ಮೇಲೆ ಇಡುತ್ತೇನೆ. ಮನೇಲಿ ಹೋಗಿ ಕಡಿಯೋ ದೇನಿದೆ" ಎಂದು ಪಂಚೆ ಗಂಟನ್ನು ಮಗ್ಗುಲಲ್ಲಿ ಇಟ್ಟುಕೊಂಡು ಕುಳಿತರು.

ರಾಮಣ್ಣನವರು ಸುಮಾರು ಇಪ್ಪತ್ತು ವರುಷಗಳಿಂದ ನಶ್ಯ ಹಾಕುತ್ತಿದ್ದರು. ಆದರೆ ಅದು ಅವರಿಗೆ ಅಭ್ಯಾಸವಾಗಿರಲಿಲ್ಲ. ಸಿಕ್ಕಿದರೆ ಹಾಕುತ್ತಿದ್ದರು, ಸಿಕ್ಕದಿದ್ದರೆ ಇಲ್ಲ. ಅಗ್ರಹಾರದ ಕೆಲವು ಸ್ನೇಹಿತರು ಅವರಿಗೆ ನಶ್ಯದ ಅಭ್ಯಾಸ ಮಾಡಿಸಬೇಕೆಂದು ಎರಡು ಮೂರು ವರುಷ ರಾಮಣ್ಣನವರ ಮನೆಗೆ ಬಂದು ಅವರಿಗೆ ಗಳಿಗೆಗೆ ಒಂದು ಚಿಟಿಕೆಯಂತೆ ನಶ್ಯ ಕೊಡಲು

ಪ್ರಾರಂಭಿಸಿದರು. ಕೆಲವು ದಿನ ಅರ್ಧರಾತ್ರಿಯಲ್ಲಿಯೂ ರಾಮಣ್ಣನವರನ್ನು ನಿದ್ರೆಯಿಂದ ಎಬ್ಬಿಸಿ ಅವರಿಗೆ ನಶ್ಯವನ್ನು ಕೊಡುತ್ತಿದ್ದರು. ಬರಬರುತ್ತಾ ರಾಮಣ್ಣನವರಿಗೆ ನಶ್ಯದ ಯೋಗ್ಯತೆ ಹಿಡಿಯುವುದರಲ್ಲಿ ಪ್ರಾವೀಣ್ಯವುಂಟಾ ಯಿತು. ಶ್ರೇಷ್ಠನಾದ ಚಿನ್ನದ ವ್ಯಾಪಾರಿ ಚಿನ್ನವನ್ನು ವರೆಹಚ್ಚಿ ಪರೀಕ್ಷಿಸು ವಂತೆ ರಾಮಣ್ಣನವರು ನಶ್ಯದ ಯೋಗ್ಯತೆ ಪರೀಕ್ಷಿಸುವುದರಲ್ಲಿ ನಿಸ್ಸೀಮ ರಾದರು. ಯಾರಾದರೂ ನಶ್ಯ ಕೊಟ್ಟಕೂಡಲೇ ರಾಮಣ್ಣನವರು "ಪ್ರಯೋಜನವಿಲ್ಲ; ಪರವಾಯಿಲ್ಲ; ಸ್ವಲ್ಪ ಎಳತು ಸೊಪ್ಪು; ಹದ ಚೆನ್ನಾಗಿಲ್ಲ;" ಎಂದು ಹೇಳುತ್ತಿದ್ದರು. ಕೊನೆಯಲ್ಲಿ ಅವರಿಗೆ ನಶ್ಯವನ್ನು ತಂದು ಕೊಡುತ್ತಿದ್ದವರಿಗೆ ಅಭ್ಯಾಸ ಹೆಚ್ಚಾಯಿತೇ ಹೊರತು ರಾಮಣ್ಣನವರು ಅವರು ನಿರೀಕ್ಷಿಸಿದಂತೆ ಡಬ್ಬಿ ಇಡಲಿಲ್ಲ. ಇದರಿಂದ ಆ ಉತ್ಸಾಹಿಗಳಿಗೆ ಕೃತ ಕೃತ್ಯರಾಗದ ಮನೋಭಾವ ಬಂದರೂ, ಒಂದು ದಿನವಲ್ಲ ಮತ್ತೊಂದು ದಿನ ಈ ಪ್ರಾಣಿ ಬಲೆಗೆ ಬೀಳುವುದೆಂಬ ಆಸೆಯಿಂದ ಅವರು ಈಗಲೂ ಒಳ್ಳೆಯ ನಶ್ಯ ಸಿಕ್ಕಿದಾಗ ಒಳ್ಳೆಯ ನಶ್ಯವನ್ನೂ, ಇಲ್ಲದಿದ್ದಾಗ ತಾವು ಹಾಕಿಕೊಳ್ಳುತ್ತಿದ್ದ ಸಾಮಾನ್ಯ ನಶ್ಯವನ್ನೂ, ರಾಮಣ್ಣನವರಿಗೆ ಕೊಡುತ್ತಿದ್ದರು. ರಾಮಣ್ಣ ನವರೂ ನಶ್ಯದ ಉಪಾಸಕರಾಗಿದ್ದು ಅವರಷ್ಟೇ ಉತ್ಸಾಹದಿಂದ, ರುಚಿಯಿಂದ ನಾಸಿಕ ಚೂರ್ಣದ ಉಪಾಸನೆ ಮಾಡುತ್ತಿದ್ದರು.

ರಾಮಣ್ಣನವರು ಕುಳಿತುಕೊಂಡು ಒಂದು ನಿಮಿಷದ ನಂತರ "ರಂಗಪ್ಪ ನವರೇ ಈ ಸಲ ಮನೆಯಲ್ಲಿ ಮದುವೆ ಕಾರ್ಯ ಉಂಟುತಾನೇ? ಹೋದವರುಷದ ವರೆಗೆ ಗೋಪಾಲನಿಗೆ ಬಿ.ಎ. ಪ್ಯಾಸ್ ಆಗಲಿ ಅಂತ ಹೇಳುತ್ತಾ ಕಾಲಕಳೆದಿರಿ. ಬಿ. ಎ. ಯೂ ಆಯಿತು. ಸಂಬಳದ ಕೆಲಸವೂ ಆಯಿತು. ಇನ್ನು ಸಾವಕಾಶ ಮಾಡುವುದು ಸರಿಯಲ್ಲ. ಈಗಲೇ ಗೋಪಾಲನಿಗೆ ೨೫ ವರುಷ ವಯಸ್ಸಾ ಗಿಲ್ಲವೆ? ಮದುವೆ ವಯಸ್ಸು ಇನ್ನೇನು ಮೀರುತ್ತಲೇ ಬಂತಲ್ಲ ಸ್ವಾಮಿ. ನಾನು ಇಪ್ಪತ್ತು ವರುಷ ಪ್ರಾಯದವನಾಗುವ ವೇಳೆಗೆ ನನಗೆ ಒಂದು ಹೆಣ್ಣು ಮಗು ಆಗಿತ್ತು. ನಮ್ಮ ನಚ್ಚಿ ಗೋಪಾಲನ ವಯಸ್ಸಿನವನಲ್ಲವೇ ಸ್ವಾಮಿ. ಆಗಲೇ ಮೂರು ವರುಷದ ಮಗುವಿನ ತಂದೆಯಲ್ಲ. ಈ ಸಲ ಮಾಡಿಬಿಡಿ ಸ್ವಾಮಿ. ಮನೆಯಲ್ಲಿ ಜಯ ಜಯ ಅಂತ ಮದುವೆ ಸಂಭ್ರಮ ನಡೆದು ಹೋಗಲಿ. ನಿಮ್ಮ ಯಜಮಾಂತಿ ಬದುಕಿದ್ದರೆ ಇಲ್ಲಿಯವರೆಗೆ ಸುಮ್ಮನೆ

ಇರುತ್ತಿದ್ದರೆ ಸ್ವಾಮಿ. ಗೃಹಿಣಿ ಇಲ್ಲದ ಮೇಲೆ ಮನೆ ತಲೆ ಕೆಳಗಾಗುತ್ತೆ ಅನ್ನೋದು ಇದಕ್ಕೇ ಸ್ವಾಮಿ" ಎಂದರು. ರಂಗಪ್ಪನವರು "ನೀನು ಹೇಳೋದು ನಿಜ ರಾಮಣ್ಣ. ಮನೆ ಯಜಮಾಂತಿ ಇದ್ದಿದ್ದರೆ ಎಲ್ಲಾ ಸರಿಹೋಗುತ್ತಿತ್ತು. ಈ ಕಾಲದ ಹುಡುಗರ ಸ್ವಭಾವ ನಿನಗೆ ತಿಳಿಯದೆ ? ನಾನು ಗೋಪಾಲನಿಗೆ ಮದುವೆ ಮಾಡಿಬಿಡಬೇಕು ಅಂತ ಎರಡು ವರುಷದಿಂದ ಸವರಿಸ್ತಾ ಇರೋದು ಅಗ್ರಹಾರಕ್ಕೆಲ್ಲಾ ಗೊತ್ತಿದೆ. ಅವನೂ ಇಲ್ಲಿಯವರೆಗೆ ಒಪ್ಪಿರಲಿಲ್ಲ. ಈ ವರುಷ ಹೇಗಾದರೂ ಮಾಡಿ ನಿಮ್ಮೆಲ್ಲರ ಬೆಂಬಲದಿಂದ ಮಾಡಿಬಿಡ್ತೇನಪ್ಪ" ಎಂದರು. ರಾಮಣ್ಣನವರು "ಮಾಡಿಬಿಡಿ ಸ್ವಾಮಿ ನಮ್ಮ ಬೆಂಬಲವೇನು ? ಊಟ ತಿಂಡಿ ಕರಗಿಸೋದೆ ನಮ್ಮ ಬೆಂಬಲ. ಸೊಸೆ ಗಾಳಿ ಹಾಗೆ ಮನೇಲಿ ಬಂದು ಓಡಾಡ್ತಾ ಇರಲಿ. ನಿಮ್ಮ ಯಜಮಾಂತಿ ಹೊರಟುಹೋದ ಮೇಲೆ ಮನೆಯ ಕಳೆಯೇ ಹೋಯಿತು" ಎಂದರು. ರಂಗಪ್ಪನವರು ಎಲ್ಲೋ ದೂರದಲ್ಲಿ ದೃಷ್ಟಿಯುಳ್ಳವರಾಗಿ "ಮನೆಯ ಲಕ್ಷ್ಮಿ ಹೋದಮೇಲೆ ಮನೆಗೆ ಕಳೆಯೆಲ್ಲಿಯದು ? ಅವಳು ಬದುಕಿರುವವರೆಗೆ ನಾನೂ ಒಬ್ಬ ಮನುಷ್ಯ ನಾಗಿದ್ದೆ. ಈಗ ಯಮುನ ಹೆಜ್ಜೆಯ ಧ್ವನಿಯನ್ನು ಕೇಳ್ತಾ ಕಾಲಹಾಕ್ತಾ ಇದೀನಿ" ಎಂದರು. ರಾಮಣ್ಣನವರು "ಅಂತಹ ಮಾತುಗಳನ್ನೆಲ್ಲಾ ಹೇಳ ಬೇಡಿ ಸ್ವಾಮಿ. ನಿಮಗೆ ದೇವರು ಏನು ಕಡಿಮೆ ಮಾಡಿದ್ದಾನೆ. ನಾಲ್ಕು ಮಕ್ಕಳೂ ವಿದ್ಯಾವಂತರು. ಒಬ್ಬನಿಗೆ ಬಿ. ಏ. ಆಗಿದೆ; ಸಂಬಳ ಆಗಿದೆ. ಇನ್ನು ತಮ್ಮಂದಿರ ವಿದ್ಯೆ ಖರ್ಚು ಅವನೇ ನೋಡಿಕೊಳ್ಳುತ್ತಾನೆ. ಹೆಣ್ಣು ಹುಡುಗೀರಿಗೆಲ್ಲಾ ಮದುವೆ ಮಾಡಿ ಒಳ್ಳೆಯ ಮನೆ ಸೇರಿಸಿದಿರಿ. ಇದೆಲ್ಲಾ ಪುಣ್ಯಾತ್ಮರಿಗೆ ಮಾತ್ರ ದೊರಕುತ್ತೆ" ಎಂದರು. ರಂಗಪ್ಪನವರು "ನೀನು ಹೇಳುವುದು ನಿಜಪ್ಪ. ದೇವರು ನನ್ನನ್ನು ಚೆನ್ನಾಗಿಯೇ ಇಟ್ಟಿದ್ದಾನೆ. ಆದರೆ ಅವಳು ಇಲ್ಲದ ದುಃಖ ಹೇಗೆ ಕಳೆಯಲಿ, ಅಷ್ಟೆ" ಎಂದರು. ರಾಮಣ್ಣನವರು ನಶ್ಯ ಏರಿಸಿ "ಭೆಷ್ ಒಳ್ಳೇ ಗರಂ ಆಗಿದೆ. ನೀವು ಯಾವಾಗಲೂ ಒಳ್ಳೆ ನಶ್ಯಾನೆ ಆರಿಸ್ತೀರಿ......ಹುಡುಗಿ ಯಾವುದು. ಎಲ್ಲಾದರೂ ನೋಡಿದ್ದೀರಾ" ಎಂದರು. ರಂಗಪ್ಪನವರು "ನಿನಗೆ ಗೊತ್ತಿಲ್ಲದ್ದು ಏನಪ್ಪ. ಈ ಮನೆ ಯಜ ಮಾಂತಿ ಅಣ್ಣ ರಾಮಪುರದಲ್ಲಿದ್ದಾನಲ್ಲ. ತನ್ನ ಮಗಳನ್ನ ತಂದುಕೊ ಅಂತ ನಾಲ್ಕು ವರುಷದಿಂದ ಬೆನ್ನು ಹತ್ತಿದ್ದಾನೆ ಅವಳು ಬದುಕಿದ್ದಿದ್ದರೆ ಹೀಗೆಯೇ

ಆಗುತ್ತಿತ್ತು. ಹುಡುಗಿ ರಾಣಿ ಹಾಗೆ ಇದ್ದಾಳೆ, ಆದರೆ ಹಳ್ಳಿ ಹುಡುಗಿ. ಇದಲ್ಲದೆ ಮಲ್ಲಿಗೆಹಳ್ಳಿ ಹೆಣ್ಣು ಇದೆ. ಚಂದ್ರವಳ್ಳಿ ಕಿಟ್ಟುವಿನ ತಂಗಿ, ಹೋದ ವರುಷ ಇಲ್ಲಿಗೆ ಕರೆದುಕೊಂಡು ಬಂದಿದ್ದರೆಲ್ಲಾ. ಸ್ವಲ್ಪ ಇಂಗ್ಲೀಷೂ ಬರುತ್ತಂತೆ. ಯಾವುದು ಒಪ್ಪುತಾನೋ ಕಾಣೆ. ಹಳ್ಳಿ ಹುಡುಗಿ ಬೇಡ ಅಂತ ತನ್ನ ಅಕ್ಕನ ಹತ್ತಿರ ರಜಾದಲ್ಲಿ ಬಂದಿದ್ದಾಗ ಗೊಣಗುಟ್ಟುತ್ತಿದ್ದ" ಎಂದರು. ರಾಮಣ್ಣನವರು "ಹಳ್ಳಿ ಹುಡುಗಿ ಅಂದರೆ ಏನು ಸ್ವಾಮಿ. ನಿಮಗೆ ಗೊತ್ತಿಲ್ಲವೇ? ಒಳ್ಳೆ ಬಟ್ಟೆ ಉಡಿಸಿದರೆ ಇವರು ಪಟ್ಟಣದ ಹುಡುಗಿಯರನ್ನು ಮೆಟ್ಟಿ ನಿಲ್ಲುತ್ತಾರೆ. ನಮ್ಮಂತವರ ಸಂಸಾರಗಳಿಗೆ ಕಷ್ಟ ಸುಖಗಳನ್ನು ಸಹಿಸುವ ಗಟ್ಟುಮುಟ್ಟಾದ ಹುಡುಗಿಯರು ಬೇಕು ಸ್ವಾಮಿ. ಆ ಬರಿಯ ಬಣ್ಣದ ಬೀಸಣಿಗೆಗಳಿಂದ ಏನು ಪ್ರಯೋಜನ" ಎಂದರು. ರಂಗಪ್ಪನವರು "ಏನೋಪ್ಪ ದೇವರ ಇಷ್ಟವಿದ್ದಂತೆ ಆಗಲಿ" ಎಂದರು.

ರಾಮಣ್ಣನವರು ಎಲ್ಲಾ ಒಳ್ಳೇದೆ ಆಗುತ್ತೆ ಎಂದುಕೊಂಡು ವೇಷ್ಟಿಯನ್ನೂ ಚೆಂಬನ್ನೂ ಎತ್ತಿಕೊಂಡು ಮನೆಗೆ ಹೋದರು.

## ೨. ಭಾಗ್ಯ ಲಕ್ಷ್ಮಮ್ಮನವರ ತ್ಯಾಗ

ಮಲ್ಲಿಗೆಹಳ್ಳಿ ಅಗ್ರಹಾರ ಹೇಮಾವತಿಯ ತೀರದಲ್ಲಿರುವ ಪುಷ್ಟವಾದ ಗ್ರಾಮ. ಇಲ್ಲಿ ಸುಮಾರು ಬ್ರಾಹ್ಮಣರ ಮುವ್ವತ್ತು ಮನೆಗಳೂ ಒಕ್ಕಲಿಗರು ಬೆಸ್ತರು ಇವರ ನೂರಾರು ಮನೆಗಳೂ, ಊರಿನ ಹೊರಗೆ ಪದ್ಧತಿಯಂತೆ ದೊಡ್ಡ ಹೊಲಗೇರಿಯೂ ಇವೆ. ಬ್ರಾಹ್ಮಣರ ಮನೆಗಳ ಪೈಕಿ ಊರಿನ ಮಧ್ಯದಲ್ಲಿರುವ ದೊಡ್ಡದಾದರೂ ಹಳೆಯದಾಗಿರುವ ಪೂರ್ವಕಾಲದ ಮನೆ ರಂಗಪ್ಪನವರದು. ಅದು ಅವರ ಪೂರ್ವಿಕರು ಕಟ್ಟಿದ ಮನೆ. ಕಟ್ಟುವಾಗ ಒಳ್ಳೆಯ ಮಜಬೂತಾಗಿ ಕಟ್ಟಿದ್ದ ಮನೆ ಈಚೆಗೆ ಸರಿಯಾದ ಕಾಮಗಾರಿಯಿಲ್ಲದೆ ಬಹಳ ಹಳೆಯದಾಗಿದೆ. ರಂಗಪ್ಪನವರ ತಂದೆಯವರು ಬಹಳ ವೈದಿಕರಾಗಿ ಆಗಿನ ಕಾಲಕ್ಕೆ ಒಳ್ಳೆಯ ಸಾಹುಕಾರರು ಎನಿಸಿಕೊಂಡೇ ಇದ್ದರು. ಅವರ ಕಾಲಾನಂತರ ರಂಗಪ್ಪನವರು ಗೃಹಕೃತ್ಯದ ಜವಾಬ್ದಾರಿ ವಹಿಸಿಕೊಂಡಾಗಲೂ ಸಂಸಾರದ ಉತ್ಪತ್ತಿ ಕಡಿಮೆಯಾಗಿರಲಿಲ್ಲ. ಆದರೆ ರಂಗಪ್ಪನವರ ಕಾಲದ ವೇಳೆಗೆ, ಅವರ ಮನೆಗೆ ಪದ್ಧತಿಗಳೇ ಬದಲಾಯಿಸಿದುವು.

ಮೂರು ರೂಪಾಯಿನ ಮದುರೆ ಮದರಾಸು ಬುಟ್ಟಾ ಷೀರೆ, ೪೦-೪೫ ರೂಪಾಯಿ ಗಳ ಬೆಂಗಳೂರು ಆರಳೀಪೇಟೆ ಸೀರೆಗೆ ಜಾಗವನ್ನು ಕೊಟ್ಟಿತು. ಮನೆಯಲ್ಲಿ ಐದು ಹೆಣ್ಣು ನಾಲ್ಕು ಗಂಡುಗಳಾದರು. ಇಪ್ಪತ್ತು ನಾಲ್ಕು ಗಂಟೆಯೂ ಕಾಫಿಯ ಸಮಾರಾಧನೆ. ಕಂಚಿನ ಲೋಟಾಗಳ ಜಾಗವನ್ನು ಬೆಳ್ಳಿಯ ಲೋಟಾಗಳೂ, ಮುತ್ತಿಗ ಆಲದ ಊಟದೆಲೆಗಳ ಸ್ಥಳವನ್ನು ೮೦-೧೦೦ ರೂಪಾಯಿ ತೂಕದ ಬೆಳ್ಳಿಯ ತಟ್ಟೆಗಳೂ ಆಕ್ರಮಿಸಿದುವು. ರಂಗಪ್ಪನವರ ತಂದೆಯುವರ ಕಾಲ ದಲ್ಲಿ, ಹೆಣ್ಣಿನ ತಂದೆಯು ಮನೆ ಬಾಗಿಲಿಗೆ, ಗಂಡಿನ ಕಡೆಯವರು ಹೋಗಿ, ನಿಮ್ಮ ಮನೆಯ ಒಂದು ಕುಡಿಯನ್ನು ಕೊಟ್ಟು ನಮ್ಮ ಮನೆಯನ್ನು ಬೆಳಸಿ" ಎಂದು ಕೇಳಿಕೊಂಡು ಹೆಣ್ಣಿನ ತಂದೆಗೆ ವಿಶೇಷ ಖರ್ಚು ಇಲ್ಲದಂತೆ ಮದುವೆ ಮಾಡಿಕೊಂಡು ಬರುತ್ತಿದ್ದರು. ಸ್ವತಃ ರಂಗಪ್ಪನವರ ಮದುವೆ ಹೀಗೆ ಆಯಿತು. ಆದರೆ ರಂಗಪ್ಪನವರ ಹೆಣ್ಣುಮಕ್ಕಳ ಮದುವೆ ಕಾಲಕ್ಕೆ, ಪರಿಸ್ಥಿತಿ ಬಹಳ ಬದಲಾಯಿಸಿತು. ಆಗಲೇ ವರಗಳಿಗೆ ಪೈಪೋಟಿ ಪ್ರಾರಂಭವಾಯಿತು. ರಂಗಪ್ಪನವರ ಮೊದಲನೆಯ ಮಗಳು ಮಣಿಯ ಮದುವೆ ಕಾಲದ ವೇಳೆಗೇ, ವರದಕ್ಷಿಣೆಯ ಹೆಸರು ಪ್ರಚಾರಕ್ಕೆ ಬಂತು. ಎರಡನೆಯ ಮಗಳು ರಮಾವಿನ ಮದುವೆಯಲ್ಲಿ ರಂಗಪ್ಪನವರು ವರದಕ್ಷಿಣೆಯಲ್ಲದೆ ಎರಡು ಸಾವಿರ ರೂಪಾಯಿ ಖರ್ಚು ಮಾಡಬೇಕಾಯಿತು. ಆಗಲೇ ರಂಗಪ್ಪನವರಿಗೆ ಸಾಲ ಪ್ರಾರಂಭ ವಾಯಿತು. ಸರಿ ಅಲ್ಲಿಂದ ಮುಂದೆ ಸಾಲ ವಿಷದಂತೆ ಬೆಳೆಯತೊಡಗಿತು. ಮೂರನೆಯ ಮಗಳು ಕುಮಾರಿಯ ಮದುವೆಗೆ ರಂಗಪ್ಪನವರು ಪುರದ ಸಾಹುಕಾರನಿಂದ ಮೂರುಸಾವಿರ ರೂಪಾಯಿ ಸಾಲ ಮಾಡಿದರು. ನಾಲ್ಕ ನೆಯ ಮಗಳು ಇಂದಿರೆಯ ಮದುವೆಗೂ ಸಾಲವಾಯಿತು. ಐದನೆಯ ಮಗಳು ಶಾರದೆಯ ಮದುವೆಯಾಗುವ ವೇಳೆಗೆ ರಂಗಪ್ಪನವರ ಸಾಲ ಅಸಲು ಬಡ್ಡಿ ಸೇರಿ ಹದಿನಾರು ಸಾವಿರಕ್ಕೆ ಏರಿತ್ತು. ಸಾಲ ಪ್ರಾರಂಭವಾಗುವವರೆಗೆ ಇರುವ ಗಾಂಭೀರ್ಯ ದೊಡ್ಡಸ್ತಿಕೆಯೇ ಅವನ ಆಸ್ತಿ; ಒಂದು ಸಲ ಸಾಲ ಪ್ರಾರಂಭವಾಗಿಬಿಟ್ಟರೆ ಆ ಗಾಂಭೀರ್ಯ ದೊಡ್ಡಸ್ತಿಕೆ ಹಾಗೆಯೇ ಮಾಯವಾಗಿ ಬಿಡುತ್ತದೆ. ರಂಗಪ್ಪನವರು ತಮ್ಮ ಜೀವನಕ್ಕಾಗಿ ಒಂದು ಎಕರೆ ತರಿ ಜಮೀನು ಉಳಿಸಿಕೊಂಡು ಉಳಿದ ತಮ್ಮ ಎಲ್ಲಾ ಆಸ್ತಿಗಳನ್ನೂ ಸಾಹುಕಾರ ನಿಗೆ ಮಾರಿ ಋಣಮುಕ್ತರಾದರು.

ಗೋಪಾಲ ರಂಗಪ್ಪನವರ ಕಿರಿಯ ಮಗ. ಹೆಣ್ಣು ಮಕ್ಕಳೆಲ್ಲಾ ಅವನ ಅಕ್ಕಂದಿರೇ. ಗೋಪಾಲ ಬಾಲ್ಯದಿಂದಲೂ ಬಹಳ ಚುರುಕಾದ ಬುದ್ಧಿಯುಳ್ಳವ. ಅವನು ಎಲ್ಲಾ ತರಗತಿಗಳಲ್ಲಿಯೂ ಮೊದಲನೆಯವನಾಗಿ ತೇರ್ಗಡೆ ಹೊಂದುತ್ತಾ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಪ್ರಾಂತಕ್ಕೆ ಎರಡನೆಯವನಾಗಿ ತೇರ್ಗಡೆ ಹೊಂದಿದ. ರಂಗಪ್ಪನವರ ಸಂಸಾರದಲ್ಲಿ ಗೋಪಾಲ ಹೀಗೆ ಪ್ರಸಿದ್ಧನಾಗುವುದಕ್ಕೂ ರಂಗಪ್ಪನವರ ಆಸ್ತಿಯೆಲ್ಲಾ ನಾಶವಾಗುವುದಕ್ಕೂ ಸರಿಹೋಯಿತು. ರಂಗಪ್ಪನವರ ಹೆಣ್ಣುಗಳೆಲ್ಲಾ ಸುಂದರಿಯರೆ; ಅವರಿಗೆ ಒಳ್ಳೆಯ ಗಂಡಂದಿರೇ ಸಿಕ್ಕಿದರು. ಆದರೆ ಸಮಾಜದ ದುಷ್ಪದ್ಧತಿ. ಮತ್ತೊಬ್ಬ ನಿರ್ಗತಿಕನಾಗುವುದರಲ್ಲಿಯೇ ಸಮಾಜಕ್ಕೆ ಸಂತೋಷ. ಅಲ್ಲಿಯವರೆಗೆ ಅವರಿಗೆ ಸಮಾಧಾನವಿಲ್ಲ. ಅದಕ್ಕೆ ಬೇಕಾದ ಎಲ್ಲಾ ಕೆಲಸಗಳನ್ನೂ ಪ್ರಯತ್ನಗಳನ್ನೂ ಸಮಾಜ ಮಾಡುವುದು. ರಂಗಪ್ಪನವರು ಸ್ವಭಾವದಿಂದ ಒಳ್ಳೆಯವರು. ಅವರು "ಪಾಪರ್" ಆಗುವುದಕ್ಕೆ ಊರಿನವರೆಲ್ಲಾ ತಮ-ತಮಗೆ ಸಾಧ್ಯವಾದ ರೀತಿಗಳಲ್ಲೆಲ್ಲಾ ತರದೂದು ಮಾಡಿದರು. ಕೊನೆಯ ಮಗಳ ಮದುವೆಯಲ್ಲಿ ಸಾಹುಕಾರರ ಹತ್ತಿರ ಎರಡು ಸಾವಿರ ಸಾಲ ಸಾಕು ಎಂದು ರಂಗಪ್ಪನವರು ಯೋಚಿಸುತ್ತಿದ್ದಾಗ ಊರಿನ ಗೃಹಸ್ಥರೆಲ್ಲಾ ಸೇರಿ "ಇದೇ ಕಟ್ಟ ಕಡೆ ಹೆಣ್ಣು, ನೀವು ಖರ್ಚು ಮಾಡುವುದು ಇನ್ನು ಇದೊಂದಕ್ಕೇಯೆ. ಮುಂದೆ ನಿಮಗೆ ಉಳಿದಿರುವುದು ಗಂಡು ಮಕ್ಕಳು. ತೆವಲಿರವವನು ಕಾಲು ಕಟ್ಟಿಕೊಂಡು ಮದುವೆ ಮಾಡಿಕೊಟ್ಟು ಹೋಗುತ್ತಾನೆ. ಇದನ್ನು ಮಾತ್ರ ಚೆನ್ನಾಗಿ ಮಾಡಿ" ಎಂದು ಪುಸಲಾಯಿಸಿದರು. ಊರಿನಲ್ಲಿ ೮ ದಿನ ಹಗಲು ರಾತ್ರಿ ಯಾರೂ ಒಲೆ ಹೆಚ್ಚಲಿಲ್ಲ. ಕೆಲವರು ಆರು ತಿಂಗಳು ವರುಷಕ್ಕೆ ಬೇಕಾಗುವ ಸಾಮಾನುಗಳನ್ನು ಜಮಾಯಿಸಿ ಮನೆಗಳಿಗೆ ಹಾಕಿಕೊಂಡರು. ರಂಗಪ್ಪನವರ ಹೆಂಡತಿ ಭಾಗ್ಯಲಕ್ಷಮ್ಮನವರು ಸಾಧು ಪ್ರಾಣಿ. ಅವರಿಗೆ ವಿಷಯಗಳೊಂದೂ ತಿಳಿಯಲಿಲ್ಲ. ಬಂದಿದ್ದ ಹೆಣ್ಣುಮಕ್ಕಳು, ತಾವು ಭಾಗ್ಯಲಕ್ಷಮ್ಮನವರಿಗೆ ನೆರವಾಗುವುದರ ಬದಲು ಅವರಿಂದಲೇ ಶುಶ್ರೂಷೆ ಮಾಡಿಸಿಕೊಳ್ಳುತ್ತಾ ತಮ್ಮ ಗಂಡಂದಿರು ಮಕ್ಕಳ ಉಪಚಾರದಲ್ಲಿ ತೊಡಗಿದ್ದರು. ಎಲ್ಲಾ ಒಂದು ವಿಧವಾದ ದೊಡ್ಡಸ್ತಿಕೆಯ ಜರ್ಬಿನಲ್ಲಿ ನಡೆದುಹೋಯಿತು-

ಗಂಡನ ಬಂಡವಾಳ ಯಾವ ಸ್ಥಿತಿಗೆ ಬಂದಿದೆ ಎಂಬದು ಭಾಗ್ಯಲಕ್ಷ್ಮಮ್ಮ ನವರಿಗೆ ತಿಳಿಯಲಿಲ್ಲ.

ಇಂತಹ ಕಷ್ಟಕಾಲದಲ್ಲಿ ಗೋಪಾಲನಿಗೆ ಲೋವರ್ ಸೆಕೆಂಡರಿಯಲ್ಲಿ ಪ್ಯಾಸು ಆದ ಮಾತ್ರಕ್ಕೆ ಅದು ಅಂತಹ ಸಂತೋಷವನ್ನುಂಟುಮಾಡುವ ಸಮಾಚಾರವೇನೂ ಆಗಲಿಲ್ಲ. ಮಲ್ಲಿಗೆಹಳ್ಳಿಯಲ್ಲಿ ಹೈಸ್ಕೂಲು ಇರಲಿಲ್ಲ. ಹೈಸ್ಕೂಲು ಯಾಕೆ ಮಿಡಲ್ ಸ್ಕೂಲ್ ಸಹ ಇರಲಿಲ್ಲ. ಹೊಳೆ ಆಚೆ ಎರಡು ಮೈಲಿ ದೂರದಲ್ಲಿ ನಾಲ್ಕು ಹಳ್ಳಿಗೆ ಮಧ್ಯವಾದ ಬಯಲಿನಲ್ಲಿ ಸ್ಥಾಪಿತವಾಗಿದ್ದ ಮಿಡಲ್ ಸ್ಕೂಲಿಗೆ ಅಗ್ರಹಾರದ ವಿದ್ಯಾರ್ಥಿಗಳು ಹೋಗುತ್ತಿದ್ದರು. ಹೈಸ್ಕೂಲಿಗೆ ಹೋಗಬೇಕಾದರೆ ಮೈಸೂರಿಗೆ ಹೋಗಬೇಕು. ಅಲ್ಲಿ ಹೋಟಲಿನಲ್ಲಿಯೋ ಹಾಸ್ಟೆಲ್‌ನಲ್ಲಿಯೋ ಊಟಮಾಡಿಕೊಂಡು ಒಂದು ಕೊಠಡಿ ಬಾಡಿಗೆಗೆ ತೆಗೆದುಕೊಳ್ಳಬೇಕಾಗುತ್ತಿತ್ತು. ತಿಂಗಳಿಗೆ ೧೮-೨೦ ರೂಪಾಯಿಗಳಿಗೆ ಕಡಿಮೆ ಖರ್ಚು ಆಗುತ್ತಿರಲಿಲ್ಲ. ಹಿಂದಲ ಕಾಲವಾಗಿದ್ದರೆ ರಂಗಪ್ಪನವರು ಯೋಚಿಸುತ್ತಿರಲಿಲ್ಲ. ಆದರೆ ಈಗ ಅವರಿಗೆ ಸಂಸಾರ ನಿರ್ವಹಿಸುವುದೇ ಕಷ್ಟವಾಗಿತ್ತು. ಆಧುನಿಕ ಪದ್ಧತಿಗನುಸಾರವಾಗಿ ಗೋಪಾಲನನ್ನು ಇಂಗ್ಲಿಷ್ ವಿದ್ಯೆಯಲ್ಲಿ ಬಿಟ್ಟರೆ ಅವನು ಬಹು ಬೇಗ "ಮುಂದಕ್ಕೆ ಬರುವ"ನೆಂಬ ವಿಷಯದಲ್ಲಿ ಅವರಿಗೆ ಸಂಶಯವಿರಲಿಲ್ಲ. ಆದರೆ ಸಂಸಾರ ನಿರ್ವಹಿಸುವುದೇ ಕಷ್ಟವಾಗಿರುವಾಗ ತಿಂಗಳು ತಿಂಗಳು ೨೦ ರೂ ಒದಗಿಸುವುದು ಎಲ್ಲಿಂದ? ಯಾವ ಹುತ್ತದಲ್ಲಿಯಾದರೂ ಕೈ ಹಾಕಿ ಹಣ ತಂದು ಒದಗಿಸುತ್ತೇನೆ ಎಂಬ ಎದೆಗಾರಿಕೆಯೂ ಚಾಕಚಕ್ಯವೂ ಚಮತ್ಕಾರವೂ, ಮತ್ತೊಬ್ಬರ ಕೈಯಲ್ಲಿರುವ ಹಣ ತನ್ನ ಕಡೆಗೆ ಬರುವಂತೆ ಮಾಡುವ ವಿದ್ಯೆಯೂ ರಂಗಪ್ಪನವರಲ್ಲಿ ಇರಲಿಲ್ಲ. ಅವರು ವೈದಿಕ ಸಾಧುಪ್ರಾಣಿ. ಏನೂ ತೋಚದೆ "ಇಷ್ಟೆ ನಮ್ಮ ಅದೃಷ್ಟ" ಎಂದುಕೊಂಡು ಸುಮ್ಮನಾದರು.

ಆದರೆ ಸ್ತ್ರೀಯರು ಅಷ್ಟು ಸುಲಭವಾಗಿ ಸೋಲನ್ನು ಒಪ್ಪಿಕೊಳ್ಳುವವರಲ್ಲ. ಅದರಲ್ಲಿಯೂ ಗೋಪಾಲನು ಪ್ರಾಂತಕ್ಕೆ ಎರಡನೆಯವನಾಗಿ ತೇರ್ಗಡೆ ಹೊಂದಿರುವಾಗ ಅವನು ಮುಂದೆ ಓದದೆ ಮನೆಯಲ್ಲಿ ಎಮ್ಮೆ ಕಾಯ್ದು ಕೊಂಡಿರುವುದಕ್ಕೆ ತಾಯಿಯಾದವಳು ಒಪ್ಪುತ್ತಾಳೆಯೇ? ಅವಳು ಸುಮ್ಮನಿದ್ದರೂ ಊರಿನ ಇತರ ಮಹಿಳೆಯರು ಸುಮ್ಮನಿರಬೇಕಲ್ಲ. ಉಳಿದ ಸ್ತ್ರೀಯರಿಗೆ

ಅವರ ನಿಜವಾದ ಬಡತನ ಅದರ ಕರಾಳರೂಪದಲ್ಲಿ ಹೇಗೆ ಗೊತ್ತಾಗಬೇಕು. ಅವರು ರಂಗಪ್ಪನವರ ಹೆಂಡತಿಯೊಂದಿಗೆ "ಅಯ್ಯೋ ಎಲ್ಲಾದರೂ ಉಂಟೆ. ಅಂತಹ ಜಾಣ ಮಗನ್ನ ಮುಂದಕ್ಕೆ ಓದಿಸದೆ; ಬಿ.ಎ.,ಎಫ್.ಎ.,ಎಂ.ಎ. ವರೆಗೆ ಓದಿಸಬೇಕು. ನಿಮಗೆ ಏನು ಕಡಿಮೆಯಾಗಿರುವುದು." ಎಂದರು. ಈ ತೂಯಾಟದಲ್ಲಿ ಸಿಕ್ಕಿ ರಂಗಪ್ಪನವರು ಏನು ಮಾಡುವುದಕ್ಕೂ ತೋಚ ದವರಾಗಿ "ನಮ್ಮ ತಂದೆ ತಾವು ಸ್ವರ್ಗಸ್ಥರಾಗುವಾಗ ೨೦ ಸಾವಿರ ರೂಪಾಯಿ ಆಸ್ತಿ ಬಿಟ್ಟಿದ್ದರು. ನಾನು ಸಾಯುವ ವೇಳೆಗೆ ಇನ್ನು ಇರುವ ಒಂದು ಎಕರೆ ಗದ್ದೆಯೂ ಹೋಗಬಹುದು. ರುಣಕರ್ತಾ ಪಿತಾ ಶತ್ರುಃ ಎಂಬಂತೆ ಸದ್ಯಃ ನನ್ನ ಅನಂತರ ನನ್ನ ಮಕ್ಕಳನ್ನು ಕಾಡಲು ಸಾಲ ಒಂದನ್ನು ಇಡದಿದ್ದರೆ ಸಾಕು" ಎಂದು ನಿಟ್ಟುಸಿರು ಬಿಡುತ್ತಿದ್ದರು. ಅವರು ಹಾಗೆ ನಿರುತ್ಸಾಹ ಗೊಂಡಾಗಲೆಲ್ಲಾ ಅವರ ಹೆಂಡತಿ ಭಾಗ್ಯಲಕ್ಷ್ಮಮ್ಮನವರು "ನೀವು ಯಾಕೆ ಕೊರಗಬೇಕು. ಆಸ್ತಿ ನೀವು ದುರ್ವ್ಯಯ ಮಾಡಲಿಲ್ಲ. ಬರುವಾಗ ಬಂತು. ಹೋಗುವಾಗ ಹೋಯಿತು. ಮಕ್ಕಳಿಗೆ ವಿದ್ಯೆ ಕಲಿಸಿದರೆ ಈ ಕಾಲದಲ್ಲಿ ಅದೆ ಆಸ್ತಿ" ಎನ್ನುತ್ತಿದ್ದರು. ರಂಗಪ್ಪನವರು "ಗೋಪಾಲ ಒಬ್ಬನ್ನ ಮುಂದೆ ಬಿಟ್ಟರೆ, ಅವನ ತಮ್ಮಂದಿರ ಯೋಗ ಕ್ಷೇಮ ಅವನೇ ನೋಡಿಕೊಳ್ಳು ತ್ತಾನೆ. ಆಸ್ತಿ ಹೋದದಕ್ಕೆ ನನಗೆ ದುಃಖವಿಲ್ಲ. ಈ ಲೋಕದಲ್ಲಿ ಆಸ್ತಿ ಸಂಪತ್ತು ಇವೆಲ್ಲಾ ಬರಿಯ ಮಾಯೆ. ಆದರೆ ಈ ರಂಗಸ್ಥಳದಲ್ಲಿ ವೇಶ ಹಾಕಿದವನು ತನ್ನ ವೇಶಕ್ಕೆ ಅನುಸಾರವಾಗಿ ಕುಣಿಯಬೇಕಲ್ಲ. ಇಲ್ಲದಿದ್ದರೆ ಸ್ಟೇಜ್ ಮ್ಯಾನೇಜರು ಒಪ್ಪುತ್ತಾನೆಯೆ? ಗೋಪಾಲನನ್ನು ಮೈಸೂರಿನಲ್ಲಿ ಬಿಡಬೇಕಾದರೆ ವರುಷಕ್ಕೆ ಕೊನೆಯಪಕ್ಷ ೨೦೦ ರೂಪಾಯಿಗಳಾದರೂ ಬೇಕಲ್ಲ ಎಲ್ಲಿಂದ ತರಲಿ" ಎಂದರು.

ಭಾಗ್ಯಲಕ್ಷ್ಮಮ್ಮನವರ ಮೈಮೇಲೆ ಸುಮಾರು ಐದುಸಾವಿರ ರೂಪಾಯಿ ನಗಗಳಿದ್ದುವು. ಅದರಲ್ಲಿ ಅರ್ಧ ಅವರ ತಂದೆ ಲಕ್ಷ್ಮೀಪುರಂ ಜಹಗೀರ್ ದಾರರು ಮಗಳ ಮದುವೆಯ ಕಾಲದಲ್ಲಿ ಹಾಕಿದುವು.| ಉಳಿದುದು ಮಲ್ಲಿಗೆ ಹಳ್ಳಿಯ ತಮ್ಮ ಮನೆಯವು. ರಂಗಪ್ಪನವರ ಮದುವೆ ಕಾಲದಲ್ಲಿಯೂ ಅನಂ ತರ ಭಾಗ್ಯಲಕ್ಷ್ಮಿಯು ಮನೆಗೆ ಬಂದು ರಂಗಪ್ಪನವರೊಂದಿಗೆ ಸಂಸಾರ ಮಾಡು ವಾಗಲೂ ಅವರ ಮಾವಂದಿರು ಆಗಿಂದಾಗ್ಗೆ ಸ್ವಲ್ಪ ಚಿನ್ನವನ್ನು ಕೊಂಡು

ಭಾಗ್ಯಲಕ್ಷ್ಮಿಗೆ ಕೊಡುತ್ತಾ "ಸಂಸಾರ ಬೆಳೆಯುತ್ತಾ ಇದೆ. ಕೈಯ್ಯಲ್ಲಿ ಸ್ವಲ್ಪ ಚಿನ್ನ ಬಣ್ಣ ಸೇರಿಸಿಕೊಳ್ಳಬೇಕು" ಎಂದು ಹೇಳುತ್ತಿದ್ದರು. ಒಂದು ಸಲ ಹದಿನೈದು ಸವರನ್ನಿನ ಒಂದು ಜತೆ ಬಳೆ ಕೊಟ್ಟು ಈ ಯಾವುದನ್ನೂ ನಿನ್ನ ಗಂಡನಿಗೆ ಕೊಡಬೇಡ ಇದನ್ನು ನಾನು ನಿನಗಾಗಿಯೇ ಕೊಟ್ಟಿದ್ದೇನೆ" ಎಂದರು. ಭಾಗ್ಯಲಕ್ಷಮ್ಮನವರು ಒಡವೆ ಧರಿಸಿಕೊಂಡು ಮಾವಂದರಿಗೆ ಅಡ್ಡ ಬಿದ್ದು ಒಳಕ್ಕೆ ತಿರುಗಿದಾಗ ಅವರ ಮಾವಂದಿರು "ಇವಳಿಗೇನೋ ಹೀಗೆ ಹೇಳಿದೆ. ರಂಗಪ್ಪನ ಕೈ ಸ್ವಲ್ಪ ಧಾರಾಳವಾದುದರಿಂದ ಮೀರಿ ಚಾಚಿ, ಇವಳ ಕೈಯಲ್ಲಿರುವುದನ್ನು ಎಲ್ಲಿ ಕಿತ್ತುಕೊಳ್ಳುತ್ತಾನೋ ಎಂದು. ಆದರೆ ಅವನಿಗೆ ನಿಜವಾಗಿಯೂ ಕಷ್ಟ ಬಂದರೆ, ಇವಳು ಎಲ್ಲಿ ನನ್ನ ಮಾತನ್ನೇ ಗಟ್ಟಿಯಾಗಿ ಹಿಡಿದುಕೊಂಡು ಮೊಂಡುಬಿದ್ದು ತನ್ನ ಸುಖಕ್ಕೆ ಕಲ್ಲು ಹಾಕಿಕೊಳ್ಳುತ್ತಾಳೆಯೋ" ಎಂದು ಯೋಚಿಸಿ ನಿನ್ನ ಗಂಡನಿಗೆ ಕಷ್ಟವಾದರೆ ಅವನಿಗಿಂತ ಇವು ಹೆಚ್ಚಲ್ಲ ಎಂದು ಹೇಳಲಿ ಎಂದುಕೊಂಡರು. ಆ ಮೇಲೆ ಗಂಡನೊಂದಿಗೆ ಸಂಸಾರ ಮಾಡುವವಳಿಗೆ ತನ್ನ ಭಾಗ್ಯಯಾವುದು ಎಂಬುದು ತಿಳಿಯಬೇಡವೆ? ತಿಳಿಯದಿದ್ದರೆ ಅನುಭವಿಸಲಿ." ಎಂದುಕೊಂಡು ಸುಮ್ಮನಾದರು. ಭಾಗ್ಯಲಕ್ಷಮ್ಮನವರಿಗೆ, ಎಲ್ಲಾ ಹೆಂಗಸರಿಗೂ ಇರುವಂತೆ ಒಡವೆಗಳ ಆಸೆ ಬಲವಾಗಿದ್ದರೂ ಅವರ ಮಾವನವರ ಮಾತನ್ನು ಕೇಳಿ ಮನಸ್ಸಿನಲ್ಲಿ "ಅವರಿಗೆ ಬೇಕಾದಾಗ ಅವರಿಗೆ ಕೊಡದ ಮೇಲೆ ಇದು ನನ್ನಲ್ಲಿ ಇದ್ದು ಏನು ಪ್ರಯೋಜನ" ಎಂದುಕೊಂಡು ತಮ್ಮ ಕೆಲಸದ ಮೇಲೆ ತೊಡಗಿದರು. ಇವೆಲ್ಲಾ ನಡೆದು ರಂಗಪ್ಪನವರ ತಂದೆ (ತಾಯಿ ಮೊದಲೇ ಸ್ವರ್ಗಸ್ಥರಾಗಿದ್ದರು) ತೀರಿಹೋಗಿ ಭಾಗ್ಯಲಕ್ಷಮ್ಮನವರೇ ಮನೆಯ ಯಜಮಾನಿಯರಾಗಿ ಸಂಸಾರ ಮಾಡಲು ಪ್ರಾರಂಭಿಸಿಯೇ ಇಪ್ಪತ್ತೈದು ವರುಷಗಳ ಮೇಲಾಗಿತ್ತು. ಈ ಅವಧಿಯಲ್ಲಿ ರಂಗಪ್ಪನವರ ತಂದೆಯವರು ಊಹಿಸಿದ್ದಂತೆ ರಂಗಪ್ಪನವರು ಒಂದು ಕಾಸಿನ ಚಿನ್ನವನ್ನೂ ಕೊಂಡುಕೊಳ್ಳಲು ಸಾಧ್ಯವಾಗಲಿಲ್ಲ. ಮದುವೆ ಬಾಣಂತನ, ಹೆಣ್ಣುಮಕ್ಕಳ ಬಾಣಂತನ, ಅಳಿಯಂದಿರ ಮನಸ್ಸು ಪ್ರಸನ್ನತೆ, ಈವತ್ತು ಬೈಸಿಕಲ್ಲು, ಈವತ್ತು ಕೈಗಡಿಯಾರ, ಒಬ್ಬ ಮಗಳಿಗೆ ಅವಳ ಗಂಡ ಸ್ವಲ್ಪ ಅನಾನುಕೂಲಸ್ಥ ಎಂದು ಒಂದು ಹೆಂಡೆ ಮಾಡಿಸಿಕೊಟ್ಟರೆ ಎಲ್ಲರಿಗೂ ಅದೇ ಬೇಕು. ಒಬ್ಬಳಿಗೆ ಹಳ್ಳಿಯಲ್ಲಿ ಒಳ್ಳೆಯ ಹಸು ಸಿಕ್ಕಿತು

ಎಂದು ಒಂದು ತೆಗೆದುಕೊಟ್ಟರೆ ಉಳಿದವರು "ಅವಳನ್ನು ಕಂಡರೆಯೋ ಅಕ್ಕರೆ ನಮ್ಮಲ್ಲಿ ಔದಾಸೀನ್ಯ" ಎನ್ನುವುದು. ಹೀಗೆ ಅವರು ಯಾವುದು ಮಾಡಿದರೂ ಎಲ್ಲವನ್ನೂ ಐದ್ದೈದು ಮಡಿಯಾಗಿ ಮಾಡಬೇಕಾಗಿ ಬಂದು ಕೊನೆಯ ಮಗಳ ವಿವಾಹ ಪೂರೈಸುವ ವೇಳೆಗೆ ಕೈತೊಳೆದುಕೊಂಡು ನಿರಾಧಾರ ಪರಂ ಜ್ಯೋತಿಗಳಾದರು. ಹೀಗೆ ಈ ಕಬ್ಬಿನ ರಸ ಪೂರ್ಣವಾಗಿ ಇಂಗಿಹೋದ ಮೇಲೆ ಆ ಮಹಾಕಲ್ಯಾಣಿಗಳು ಇನ್ನೇನೂ ಈ 'ಪಿತೃಗ್ರಹಳಿಂದ' ತಮಗೆ ಉಪಕಾರವಿಲ್ಲವೆಂದುಕೊಂಡು ಈ ಕಡೆ ಬರುವುದನ್ನೇ ಬಿಟ್ಟರು. ತಮ್ಮ ಸ್ವಂತ ಕರುಳುಗಳೇ ತಮ್ಮನ್ನು ಈ ರೀತಿ ಕುಯ್ಯುತ್ತಿದ್ದರೂ ರಂಗಪ್ಪನವರು ಮಾತ್ರ "ಇದು ಮನುಷ್ಯ ಸ್ವಭಾವ. ಅದರಲ್ಲಿಯೂ ಹುಡುಗಿಯರಿಗೆ ದುರಾಸೆ ಹೆಚ್ಚು, ನನ್ನ ಮಕ್ಕಳಾದರೆ ತಾನೆ ಏನು? ಎಲ್ಲಿ ಏನು ಸಿಕ್ಕಿದರೆ ಅದನ್ನು ಸಂಗ್ರಹಿಸಿಟ್ಟುಕೊಳ್ಳುವುದೇ ಮನುಷ್ಯರ ಸ್ವಭಾವ" ಎಂದು ಸುಮ್ಮನಾದರು. ಆದರೆ ಭಾಗ್ಯಲಕ್ಷಮ್ಮನವರಿಗೆ ತಮ್ಮ ಹೆಣ್ಣುಗಳ ಮೇಲೆ ಬಹಳ ಕೋಪವೇ ಬಂತು. ಅದರಲ್ಲಿಯೂ ನಡುವಣ ಮೂರು ಹುಡುಗಿಯರ ಅತ್ಯಾಶೆ ಅವರ ಮನಸ್ಸನ್ನು ಬಹಳ ನೋಯಿಸಿತು. ಅವರ ಹಿರಿಯ ಮಗಳು ಮಣಿಯ ಗಂಡನ ಮನೆ ಅಷ್ಟು ಪುಷ್ಟವಾಗಿರಲಿಲ್ಲ. ಗಂಡ ಮುನಸೀಫ್ ಕೋರ್ಟಿನ ಸಣ್ಣ ನೌಕರ. ತುಮಕೂರು ವಾಸ. ಮನೆಬಾಡಿಗೆ ಇತ್ಯಾದಿ ವೆಚ್ಚಗಳು, ಸಾಲದುದಕ್ಕೆ ಹಿರಿಯರು ಮಾಡಿಟ್ಟ ಸಾಲ ಬೇರೆ ಇತ್ತು. ಮನೆಯಲ್ಲಿ ಮಣಿಗೆ ಹೆಣ್ಣು ಮಕ್ಕಳೇ ಹೆಚ್ಚಾಗುತ್ತಿದ್ದರು. ಅವಳ ಗಂಡನ ಆರೋಗ್ಯ ಸಹ ತೃಪ್ತಿಕರವಾಗಿರಲಿಲ್ಲ. ಅವಳ ಮನೆಯಲ್ಲಿ ಅವಳ ಗಂಡನ ಅಣ್ಣನ ಇಬ್ಬರು ಮಕ್ಕಳೂ ವಿದ್ಯಾಭ್ಯಾಸಕ್ಕಾಗಿ ಎಂದು ಬಂದು ಸೇರಿದ್ದರು. ಈ ಕಾರಣ ಗಳಿಂದ ಅವಳಿಗೆ ಸ್ವಲ್ಪ ಸಹಾಯಕರಾಗಬೇಕೆಂದು ಭಾಗ್ಯಲಕ್ಷ್ಮಿಯವರು ಹವಣಿಸಿ, ಒಂದು ಮೂಟೆ ಅಕ್ಕಿ ಅಕಸ್ಮಾತ್ತಾಗಿ ತುಮಕೂರಿಗೆ ರವಾನಿಸಿ ದರೆ, ಅದು ಹೇಗೆಹೇಗೋ ಅದಾವ ವೈರ್‌ಲೆಸ್ ಮೂಲಕವೋ ಉಳಿದ ಎಲ್ಲಾ ಹೆಣ್ಣುಗಳಿಗೂ ತಿಳಿದು ಮರುದಿವಸವೇ ಅವರಿಂದ, "ಇಲ್ಲಿಯ ಮಿಶನ್ ಅಕ್ಕಿ ಮಕ್ಕಳಿಗೆ ವೈಗೆ ಆಗುತ್ತಿಲ್ಲ. ಹೊಸ ಅಕ್ಕಿ ಸಿಕ್ಕುತ್ತೆ. ಹಳೆ ಅಕ್ಕಿ ಸಿಕು ವುದಿಲ್ಲ. ಹೊಸ ಅಕ್ಕಿ ತಿಂದರೆ ಹೊಟ್ಟೆ ನೋವು. ಒಂದು ಮೂಟೆ ಕಯ್ಯಲ್ಲಿ ಕುಟ್ಟಿದ ಹಳೆಯ ಅಕ್ಕಿ ಕಳುಹಿಸಿ" ಎಂದು ಬರುತ್ತಿತ್ತು. ಮನೆಗೆ ಬಾಣಂತ

ನಕ್ಕೆ ಹುಡುಗಿಯರು ಬಂದಾಗ, ಅವರ ಗಂಡಂದಿರು ತಿಂಗಳು ತಿಂಗಳೂ ಸ್ವಲ್ಪ ಸ್ವಲ್ಪ ಹಣ ಖರ್ಚಿಗೆ ಕಳುಹಿಸುತ್ತಿದ್ದರು. "ಪೂರ್ಣವಾಗಿ ಅತ್ತೆ ನಾದಿನಿಯರ ಹಂಗಿಗೆ ಪ್ರತಿ ಬಾಣಂತನದಲ್ಲೂ ಒಳಗಾಗಬಾರದು. ಸ್ವಲ್ಪ ಎಣ್ಣೆ ಬೆಣ್ಣೆ ಖರ್ಚಾದರೂ ನಮ್ಮದಾಗಿರಲಿ" ಎಂದು ಅವರು ಹೆಂಡತಿಯರಿಗೆ ಬರೆಯುತ್ತಿದ್ದರು. ಹೆಂಡತಿಯರು ಬರುತ್ತಿದ್ದ ಆ ಮನಿ ಆರ್ಡರುಗಳನ್ನು ಸ್ವೀಕರಿಸಿ ಇನ್ನೂ ಎರಡು ; ಮೂರು ತಿಂಗಳು ಹೆಚ್ಚಾಗಿಯೇ ತವರು ಮನೆಯಲ್ಲಿದ್ದು ಹೋಗುವಾಗ ಚಿನ್ನದ ನಗವೊಂದನ್ನು ಮಾಡಿಸಿಕೊಂಡು ಹೋಗುತಿದ್ದರು. ಈ ಕಡೆ ರಂಗಪ್ಪನವರ ಸಾಲ ಏರುತ್ತಲೇ ಹೋಗುತ್ತಿದ್ದಿತು. ಇನ್ನು ಆ ಹುಡುಗಿಯರಿಗೆ ಇದ್ದದ್ದು ಒಂದೇ ಆಸೆ. ಭಾಗ್ಯಲಕ್ಷ್ಮಮ್ಮನವರ ಮೈಮೇಲಿದ್ದ ಒಡವೆಗಳನ್ನು ಹಂಚಿಕೊಳ್ಳಬೇಕೆಂಬುದು. ಈ ಪಿತೂರಿಯಲ್ಲಿ ಆ ಎಲ್ಲಾ ಹೆಣ್ಣುಗಳೂ ತಾಯಿಯ ಒಡವೆಗಳನ್ನು ಲಪಟಾಯಿಸುವುದರಲ್ಲಿ ಒಮ್ಮುಖವಾಗಿ ಒಗ್ಗಟ್ಟಾಗಿಯೂ, ಇತರ ಅಕ್ಕ ತಂಗಿಯರಿಗೆ ತಿಳಿಯದಂತೆ ತಾವೇ ಹೆಚ್ಚಾಗಿ ಹೊಡೆಯುವುದರಲ್ಲಿ ತಮ್ಮದೇ ಗುಟ್ಟಾದ ಮತ್ತೊಂದು ಪಿತೂರಿಯುಳ್ಳವರಾಗಿಯೂ ಇದ್ದರು. ಈ ಕಾರಣಗಳಿಂದ ಒಬ್ಬ ಮಗಳು ಊರಿಗೆ ಬಂದಕೂಡಲೇ ಉಳಿದವರೆಲ್ಲರೂ ಯಾವುದಾದರೂ ಒಂದು ಕಾರಣದಿಂದ ಬಂದು ಮನೆಗೆ ಮುತ್ತಿಗೆ ಹಾಕುತ್ತಿದ್ದರು. ಭಾಗ್ಯಲಕ್ಷ್ಮಮ್ಮನವರಿಗೆ ತಾಯಿಯ ಕರುಳು ಒಂದೊಂದು ಸಲ ಮರೆಯಾಗಿ ರಂಗಪ್ಪನವರೊಂದಿಗೆ ಹೆಣ್ಣು ಹುಟ್ಟಿದ ಮನೆ ತೊಳೆದು ಹೋಗುತ್ತೆ ಅಂದರೆ ಇದೆಯೇ ಎನ್ನುತ್ತಿದ್ದರು. ರಂಗಪ್ಪನವರು "ಹಾಗೆಲ್ಲಾ ಹೇಳಬೇಡ. ಕೊಡವವನೂ ಅವನೇ ತೆಗೆದುಕೊಳ್ಳವವನೂ ಅವನೇ. ಇರುವವರೆಗೆ ತೆಗೆದುಕೊಂಡು ಹೋಗುತ್ತಾರೆ. ಆಮೇಲೆ ಏನು ತೆಗೆದುಕೊಂಡು ಹೋಗುತ್ತಾರೆ" ಎನ್ನುತ್ತಿದ್ದರು. ಭಾಗ್ಯಲಕ್ಷ್ಮಮ್ಮನವರು "ನೀವು ಹೇಳುವುದು ಚೆನ್ನಾಯಿತು. ಇನ್ನೂ ನಾಲ್ಕು ಗಂಡುಮಕ್ಕಳಿವೆ. ಅವರಿಗೆ ವಿದ್ಯೆ ಇಲ್ಲ. ಬುದ್ಧಿ ಇಲ್ಲ. ಮದುವೆ ಮುಂಜಿ ಎಲ್ಲಾ ಮುಂದೆ ಇದೆ. ನಾಳೆ ಸೊಸೆ ಮನೆಗೆ ಬಂದರೆ ಅಡಿಗೆಮನೇಲಿ ಬೇಯಿಸೋದಕ್ಕೆ ಕೂಡ ಒಂದು ಪಾತ್ರೆ ಇಲ್ಲ" ಎಂದರು. ರಂಗಪ್ಪನವರು "ಅದೆಲ್ಲಾ ಅವರವರ ಪುಣ್ಯ. ನಿನ್ನ ಮಕ್ಕಳಿಗೆ ಪುಣ್ಯವಿದ್ದರೆ ಸಂಪಾದಿಸಿಕೊಳ್ಳುತ್ತಾರೆ.

ನಾವು ಇಟ್ಟ ದುಡ್ಡು ಇರುತ್ತದೆಯೋ ? ಈಗ ನಮ್ಮ ತಂದೆ ಇಟ್ಟದ್ದ ಆಸ್ತಿ ಇದೆಯೇ. " ಎಂದರು.

ಹಣದ ಈ ಮುಗ್ಗಟ್ಟಿನಲ್ಲಿ ಗೋಪಾಲನಿಗೆ ವಿದ್ಯೆ ಕಲಿಸಲು ಅವಕಾಶ ವೆಲ್ಲಿಯದು ? ಮಲ್ಲಿಗೆಹಳ್ಳಿ ಜೋಡಿದಾರರ ಮಗನೆಂದು ಪ್ರಸಿದ್ಧವಾಗಿ ದೊಡ್ಡಸ್ತಿಕೆಯ ಹೊರ ಛಾಯೆಯಲ್ಲಿ ಹೊಳೆಯುತ್ತಿದ್ದವನು, ಮೈಸೂರಿನಲ್ಲಿ ಹೋಗಿ ವಾರ ಭಿಕ್ಷಾನ್ನಗಳಿಂದ ಹೇಗೆ ವಿದ್ಯಾಭ್ಯಾಸ ಕಾಲವನ್ನು ಕಳೆಯು ವುದು. ಕೊನೆಯಲ್ಲಿ ಭಾಗ್ಯಲಕ್ಷಮ್ಮನವರು ಒಂದು ಒಡವೆ ಮಾರಿದರು. ರಂಗಪ್ಪನವರು ಸಂಸಾರದಲ್ಲಿ ಆಗಲೇ ನಿರುತ್ಸಾಹಿಗಳಾಗತೊಡಗಿದ್ದರು. ಅವ ರಿಗೆ ತಮ್ಮ ಹೆಂಡತಿ ಒಡವೆ ಮಾರಿದುದರಿಂದ ಸ್ವಲ್ಪ ಬೇಜಾರಾದರೂ ಯಾವು ದನ್ನೂ ಮನಸ್ಸಿಗೆ ಹಚ್ಚಿಕೊಳ್ಳಲಿಲ್ಲ. ಭಾಗ್ಯಲಕ್ಷಮ್ಮನವರಲ್ಲಿ ಅಡಗಿದ್ದ ಕರ್ತವ್ಯ ನಿರ್ವಹಣ ಶಕ್ತಿ ಈಗ ಚೆನ್ನಾಗಿ ಪ್ರಕಾಶಕ್ಕೆ ಬಂತು. ಅವರು ಒಡವೆಯನ್ನು ೨೦೦ ರೂಪಾಯಿಗೆ ಮಾರಿ, ತಮ್ಮ ಸಂಸಾರದ ಮಿತ್ರರಾದ ರಾಮಣ್ಣನವರ ಜತೆಯಲ್ಲಿ ಗೋಪಾಲನನ್ನೂ ರಂಗಪ್ಪನವರನ್ನೂ ಮೈಸೂರಿಗೆ ಕಳುಹಿಸಿದರು. ಅವರು ಮೈಸೂರಿನಲ್ಲಿ ಒಂದು ಹೋಟಲಿನಲ್ಲಿ ಗೋಪಾಲನಿಗೆ ಊಟಕ್ಕೆ ಗೊತ್ತುಮಾಡಿ ಒಂದು ಕೊಠಡಿಯನ್ನು ಬಾಡಿಗೆಗೆ ತೆಗೆದು ಅಲ್ಲಿ ಗೋಪಾಲನನ್ನು ಸ್ಥಾಪಿಸಿ ಮಲ್ಲಿಗೆಹಳ್ಳಿಗೆ ಹಿಂದಿರುಗಿದರು. ಭಾಗ್ಯಲಕ್ಷಮ್ಮ ನವರು ರಂಗಪ್ಪನವರು ಮೈಸೂರಿಗೆ ತೆಗೆದುಕೊಂಡು ಹೋಗಿ ಉಳಿದ ಹಣ ವನ್ನು ದೇವರ ಪೆಟ್ಟಿಗೆಯಲ್ಲಿಟ್ಟು, " ಈ ರೂಪಾಯಿನಿಂದ ಒಂದು ಕಾಸನ್ನೂ ಯಾರಿಗೂ ಕೊಡುವುದಿಲ್ಲ. ಇದು ಗೋಪಾಲನ ವಿದ್ಯಕ್ಕೇ ಹೋಗಬೇಕು " ಎಂದು ಹೇಳಿದರು. ಪ್ರತಿ ತಿಂಗಳೂ ಗೋಪಾಲನಿಂದ ಕಾಗದ ಬಂದ ಕೂಡಲೇ ಮನಿ ಆರ್ಡರು ಫಾರಮ್ಮನ್ನೂ ರೂಪಾಯಿಯನ್ನೂ ರಂಗಪ್ಪನವರಿಗೆ ತಂದು ಕೊಟ್ಟು ಮನಿಆರ್ಡರ್ ಮಾಡಿಸುತ್ತಿದ್ದರು. ಗೋಪಾಲನಿಗೆ ರೂಪಾಯಿ ತಲಪಿ ಅವನಿಂದ ಬಂದ ರಶೀತಿಗಳನ್ನು ಉಳಿಸಿದ್ದ ರೂಪಾಯಿನ ಜತೆಯಲ್ಲಿ ದೇವರ ಪೆಟ್ಟಿಗೆಯಲ್ಲಿಯೇ ಇಡುತ್ತಿದ್ದರು. ಹೀಗೆ ಗೋಪಾಲನ ವಿದ್ಯದ ಪೂರ್ಣ ಜವಾಬ್ದಾರಿ ಅವನ ತಾಯಿಯ ಮೇಲೆಯೇ ಬಿದ್ದಿತು.

ಅಲ್ಲಿಂದ ಮುಂದೆ ಭಾಗ್ಯಲಕ್ಷ್ಮಿಯವರ ಹಣವೂ ಒಡವೆಗಳೂ ಯಾವ ರೀತಿ ಕರಗಲು ಪ್ರಾರಂಭಿಸಿದುವೆಂಬುದು ಮಕ್ಕಳನ್ನು ಪರಊರುಗಳಲ್ಲಿ ಓದಿ

ಸುವ ಪೋಷಕರಿಗೆಲ್ಲಾ ಗೊತ್ತು. ಗೋಪಾಲ ಎಸ್. ಎಸ್. ಎಲ್. ಸಿ. ಮಾಡುವ ಹೊತ್ತಿಗೆ ಭಾಗ್ಯಲಕ್ಷಮ್ಮನವರು ಸುಮಾರು ಸಾವಿರ ರೂಪಾಯಿ ಗಳ ಒಡವೆಗಳನ್ನು ಮಾರಿದರು. ಮುಂದಲ ನಾಲ್ಕು ವರುಷಗಳಲ್ಲಿ ಗೋಪಾಲ ನಿಗೆ ಬಿ. ಎ. ಆಗುವ ವೇಳೆಗೆ ಅವನ ಡ್ರೆಸ್ ಶೋಕಿ-ಕಾಲೇಜಿನ ಹುಡುಗರಿಗೆ ಇದು ಬೇಕು.-ಸಿಗರೇಟು, ಭಾರತದ ಮುಖ್ಯಮುಖ್ಯ ಸ್ಥಳಗಳನ್ನು ನೋಡಲು ಹೊರಟ ಪ್ರವಾಸದ ಖರ್ಚುಗಳು, ಎಲ್ಲೋರ್ ಅಜೆಂಟಾ-ತಾಜಮಹಲ್ ಮುಂತಾದ ಕಡೆಗಳಲ್ಲಿ ಫೋಟೋ ತೆಗೆದುಕೊಳ್ಳಲು ಕೊಂಡುಕೊಂಡ ಕ್ಯಾಮರಾ ( ಛಾಯಾ ಯಂತ್ರ ) ಅದರ ಇತರ ಖರ್ಚುಗಳು-ಫೋಟೊಗ್ರಾಫಿ ಬಹಳ ಹಣ ಖರ್ಚು ಮಾಡಿಸುವ ವಿನೋದ-ಎಲ್ಲಾ -ಸೇರಿ ಭಾಗ್ಯಲಕ್ಷಮ್ಮನವರ ಎಲ್ಲಾ ಒಡವೆಗಳೂ ಪೂರ್ಣವಾಗಿ ಅಂಗಡಿಯ ದಾರಿ ಹಿಡಿದುವು. ರಂಗಪ್ಪ ನವರಿಗೂ ಅವರ ಮಿತ್ರರಾದ ರಾಮಣ್ಣನವರಿಗೂ ಗೋಪಾಲನಿಗೆ ಬಿ. ಎ. ಮೊದಲನೆಯ ದರ್ಜೆಯಲ್ಲಿ ತೇರ್ಗಡೆಯಾದುದು ಆಶ್ಚರ್ಯವಾಗಲಿಲ್ಲ. ಅವರು ಅದನ್ನು ನಿರೀಕ್ಷಿಸಿಯೇ ಇದ್ದರು. ಆದರೆ ಈ ಏಳು ಎಂಟು ವರುಷಗಳ ಕಾಲ ವರುಷ ಎರಡು ವರುಷಗಳಿಗೆ ಒಂದೊಂದು ಒಡವೆ ಮಾರುತ್ತಾ ಎಂತಹ ಕಷ್ಟ ಬಂದರೂ ಆ ಹಣವನ್ನು ಬೇರೆ ಕಡೆ ತಿರುಗಿಸದೆ, ಒಂದು ಏಕಾಗ್ರವಾದ ತಪಸ್ಸಿನಂತೆ ತಿಂಗಳು ತಿಂಗಳೂ ಸರ್ಕಾರಿ ಸಂಬಳದ ಹಾಗೆ ಅದನ್ನು ಮಗನಿಗೆ ಕಳುಹಿಸಿ ಅವನನ್ನು ಈ ಸ್ಥಿತಿಗೆ ತಂದ ಭಾಗ್ಯಲಕ್ಷಮ್ಮನವರ ಸಾಹಸ ಕಂಡು ಅವರಿಗೆ ಆಶ್ಚರ್ಯವಾಯಿತು. ರಂಗಪ್ಪನವರಿಗೇ, ತಮ್ಮ ಹೆಂಡತಿಯು ಇಷ್ಟು ಶಕ್ತಳಾದ ಸ್ತ್ರೀ ಎಂಬುದು ಇದುವರೆಗೆ ಹೊಳೆದಿರಲಿಲ್ಲ.

ಗೋಪಾಲನಿಗೆ ಬಿ. ಎ. ಪ್ಯಾಸ್ ಆದ ವರುಷ ಅವನಿಗೆ ಮಾತೃ ವಿಯೋಗವುಂಟಾಯಿತು. ಗೋಪಾಲನಿಗಾಗಿಯೇ ಜೀವವನ್ನು ತೇಯ್ದಿದ್ದ ಭಾಗ್ಯಲಕ್ಷಮ್ಮನವರು ಪರೀಕ್ಷೆಯಾದ ಕೂಡಲೇ ತನ್ನ ತಮ್ಮನ ಮಗಳನ್ನೇ ಗೋಪಾಲನಿಗೆ ತಂದುಕೊಂಡು ವಿವಾಹವನ್ನು ನಡೆಸಬೇಕೆಂದಿದ್ದವರು, ಲಗ್ನ ಕಾಲಕ್ಕೆ ಒಂದು ತಿಂಗಳ ಮುಂದೆ, ಬಂದ ಜ್ವರದಿಂದ ಅನಾಯಾಸವಾಗಿ ಈ ಭವ ಬಂಧನದಿಂದ ಮುಕ್ತರಾದರು. ಅವರಿಗೇನೋ ಸಂಸಾರದ ಕಷ್ಟಸುಖ ಗಳೆಲ್ಲಾ ಪೂರ್ಣವಾಗಿ ಸಾಕಾಗಿದ್ದುವು. ಅವರ ಬಾಳು ಅತ್ಯಂತ ಸುಖ ದಿಂದಲೇ ಸಾಗಿದ್ದದಾದರೂ ಅವರು ಮತ್ತೆ ಅದೇ ಬಾಳನ್ನು ಏನು ಕೊಟ್ಟರೂ

ಬಾಳಲು ಸಿದ್ಧರಾಗಿರಲಿಲ್ಲ. ಆದರೆ ಮಲ್ಲಿಗೆಹಳ್ಳಿ ಜೋಡಿದಾರರ ಮನೆಯ ಬೆಳಕು ಅವರ ಜತೆಯಲ್ಲಿ ಆರಿಹೋಯಿತು. ರಂಗಪ್ಪನವರಿಗಂತೂ ಪಾಪ ಎಲ್ಲೆಲ್ಲಿಯೂ ಶೂನ್ಯವೇ ಆಯಿತು. ಗೋಪಾಲನ ಮೂರು ತಮ್ಮಂದಿರಲ್ಲಿ ಒಬ್ಬನು ಲೋವರ್ ಸೆಕೆಂಡರಿಯಲ್ಲಿ ಓದುತ್ತಿದ್ದನು. ಉಳಿದ ಇಬ್ಬರೂ ೮-೧೦ ವರುಷದ ಬಾಲಕರು ಮಲ್ಲಿಗೆಹಳ್ಳಿಯ ಪ್ರೈಮರಿ ಸ್ಕೂಲಿನಲ್ಲಿ ಓದುತ್ತಿದ್ದರು.

## ೩. ಲಗ್ನಪತ್ರಿಕೆಯ ಸಮಾರಂಭ

ಮನುಷ್ಯನಿಗೆ ಏರಿಕೆಯ ಕಾಲ ಒಂದು. ಇಳಿಕೆಯ ಕಾಲ ಒಂದು ಎಂದು ರಂಗಪ್ಪನವರಿಗೆ ಚೆನ್ನಾಗಿ ಗೊತ್ತಿದ್ದರೂ ಈಗ ಅದು ಅವರಿಗೆ ಅನುಭವಕ್ಕೇ ಬಂದಿತು. ಭಾಗ್ಯಲಕ್ಷ್ಮಮ್ಮನವರು ಸ್ವರ್ಗಸ್ಥರಾದ ನಂತರ ಮನೆ ಬಿಕೊ ಎನ್ನತೊಡಗಿತು. ಸಾವಿರಾರು ಜನಕ್ಕೆ ಅನ್ನ ಹಾಕುತ್ತಿದ್ದ ರಂಗಪ್ಪನವರಿಗೆ, ಈಗ ಒಂದು ತುತ್ತು ಅನ್ನ ಅವರ ಕೈಯಿಂದ ಬೇಯಿಸಿಕೊಂಡ ಹೊರತು ದೊರೆಯುವಂತೆ ಇರಲಿಲ್ಲ. ರಂಗಪ್ಪನವರ ಕಡೆಯಿಂದ ಯಾವ ಆಸೆಯನ್ನೂ ಕಾಣದ ಅವರ ಕೊನೆಯ ನಾಲ್ಕು ಹೆಣ್ಣು ಮಕ್ಕಳೂ ಮಲ್ಲಿಗೆಹಳ್ಳಿ ಕಡೆ ತಿರುಗಿನೋಡುವುದನ್ನೇ ಬಿಟ್ಟರು. ಹಿರಿಯವಳಾದ ಮಣಿ ಮಾತ್ರ "ಗೋಪಾಲನಿಗೆ ಮದುವೆಯಾಗುವವರೆಗೆ ಆ ಸಣ್ಣ ತಮ್ಮಂದಿರನ್ನು ಕಾಪಾಡೋಣ. ಅನ್ಯಾಯವಾಗಿ ಹುಡುಗರಿಗೆ ಸ್ಕೂಲು ಹೋಗುತ್ತೆ. ಗೋಪಾಲನಿಗೆ ಮದುವೆಯಾದ ನಂತರ ಅವನು ಮೈಸೂರಿನಲ್ಲಿಯೋ ಬೆಂಗಳೂರಿನಲ್ಲಿಯೋ ಸಂಸಾರ ಮಾಡುತ್ತಾನೆ. ತಮ್ಮಂದಿರನ್ನೆಲ್ಲಾ ಕರೆದುಕೊಂಡು ಹೋಗಿ ವಿದ್ಯೆ ಬುದ್ಧಿ ಕಲಿಸುತ್ತಾನೆ. ಅವರ ಯೋಗಕ್ಷೇಮ ಅವನ ತಲೆಗೆ ಕಟ್ಟಿದ್ದು. ಅನಂತರ ಅಪ್ಪನಿಗೇನಾಗಬೇಕು. ಹಿಂದೆ ಇದ್ದಷ್ಟು ದಿವಸ ಮುಂದೆ ಇರಬೇಕೆ? ಅಲ್ಲಿ ಇಲ್ಲಿ ಇದ್ದುಕೊಂಡು ಕಾಲ ಹಾಕಿದರೆ ಆಯಿತು" ಎಂದು ಯೋಚಿಸಿ ಮಲ್ಲಿಗೆಹಳ್ಳಿಗೆ ಬಂದಳು. ಅವಳ ಗಂಡ ಸಣ್ಣ ಸಂಬಳದ ಸಾಧು ಪ್ರಾಣಿ ಯಾದುದರಿಂದ "ಈ ಅಡಿಗೆ ಕೆಲಸವೂ ಕೆಲವು ದಿನ ನನ್ನ ತಲೆಗೇ ಕಟ್ಟಿದ್ದು" ಎಂದುಕೊಂಡು ಮಣಿಯನ್ನು ಮಲ್ಲಿಗೆಹಳ್ಳಿಗೆ ಕಳುಹಿಸಿದ. ತುಮಕೂರಿನಲ್ಲಿ ಅಡಿಗೆ ಮಾಡಿಕೊಳ್ಳುವುದಕ್ಕೂ ಅವನಿಗೆ ಅಷ್ಟೇನೂ ಬೇಸರಿಕೆಯಾಗಲಿಲ್ಲ. ಕೆಲವರಿಗೆ ಕೆಲವು ಕೆಲಸಗಳು ಒಗ್ಗಿಹೋಗುತ್ತವೆ. ಮಣಿಯ ಗಂಡ ಬೆಳಗಿನ

ಜಾವ ಎದ್ದು ಒಂಭತ್ತು ಗಂಟೆ ವೇಳೆಗೆ ಅಡಿಗೆ ಮಾಡಿ ಊಟಮಾಡಿ ಕೊಂಡು ಬೈಸಿಕಲ್ ಏರಿಕೊಂಡು ಆಫೀಸಿಗೆ ಹೋಗಿಬಿಡುತಿದ್ದ. ಆ ಮೇಲೆ ಅವನ ಹಿರಿಯಮಗಳು ಹತ್ತು ವರುಷದ ಕುಮುದುವೇ ತಮ್ಮಂದಿರಿಗೆ ಬಡಿಸಿ ತಾನೂ ಊಟಮಾಡಿ ಮಗ್ಗುಲಲ್ಲಿಯೇ ಇದ್ದ ಹುಡುಗಿಯರ ಸ್ಕೂಲಿಗೆ ಹೋಗುತ್ತಿದ್ದಳು. ಅವಳ ತಮ್ಮಂದಿರು ಬೀದಿಯ ತುದಿಯಲ್ಲಿದ್ದ ಹುಡುಗರ ಸ್ಕೂಲಿಗೆ ಹೋಗುತ್ತಿದ್ದರು. ಮನೆಯಲ್ಲಿ ಮಣಿಯ ಗಂಡನ ಮುದಿ ಚಿಕ್ಕಮ್ಮ ಅರ್ಧ ಕುರುಡಿ ಒಬ್ಬರು ಇದ್ದರು. ಹುಡುಗರು ಸ್ಕೂಲಿನಿಂದ ಬರುವವರೆಗೆ ಮನೆಗೆ ಅವರದೇ ಕಾವಲು. ಐದುವರೆ ಆರು ಗಂಟೆ ವೇಳೆಗೆ ಮಣಿಯ ಗಂಡ ಕಛೇರಿಯಿಂದ ಬಂದು, ತೋಳಿನ ತುದಿ ಹರಿದಿದ್ದ ಕೋಟನ್ನೂ ಪೂರ್ಣವಾಗಿ ಹರಿದಿದ್ದ ಬನೀನನ್ನೂ ಹರಕಲು ರುಮಾಲನ್ನೂ ತೆಗೆದುಹಾಕಿ, ಒಂದು ಜೀರ್ಣವಾದ "ಕಿತ್ತಾನಾರು" ಮಗುಟವನ್ನು ಉಟ್ಟುಕೊಂಡು ರಾತ್ರಿಯ ಅಡಿಗೆ ಮಾಡಿ ೯ ಗಂಟೆ ವೇಳೆಗೆ ಎಲ್ಲರಿಗೂ ಬಡಿಸಿ ತಾನೂ ಊಟಮಾಡಿ ಮಲಗುತ್ತಿದ್ದನು. ಒಂದು ಸಲ ಮಣಿಯು "ಪಾಪ ನೀವು ಆಫೀಸಿಗೂ ಹೋಗಬೇಕು. ಮನೆಯಲ್ಲಿಯೂ ಅಡಿಗೆ ಮಾಡಬೇಕು. ಕೆಲಸ ಹೆಚ್ಚು ಏನು ಮಾಡಲಿ" ಎಂದು ಬರೆದಳು. ಅವಳ ಗಂಡ "ನನಗೆ ಆಫೀಸಿಗೆ ಹೋಗುವುದು ಅಭ್ಯಾಸವಾದಂತೆ ಇದೂ ಅಭ್ಯಾಸವಾಯಿತು ಇದನ್ನೂ ನನ್ನ ನಿತ್ಯ ಕಾರ್ಯಕ್ರಮದಲ್ಲಿ ಸೇರಿಸಿಕೊಂಡುಬಿಟ್ಟೆ. ಸಾಯುವವರೆಗೆ ಇನ್ನು ಹೀಗೆಯೇ ಮಾಡುತ್ತಿರುತ್ತೇನೆ. ನಮ್ಮಂತಹ ಸಣ್ಣ ಅಧಿಕಾರದಲ್ಲಿರುವವರಿಗೆ ಇವೆಲ್ಲಾ ಅಭ್ಯಾಸವಾಗಲೇಬೇಕು. ಆದರೆ ಇದು ಮಾತ್ರ ನಮ್ಮ ಸಾಹೇಬರಿಗೆ ತಿಳಿಯಕೂಡದು. ನನಗೆ ಅಡಿಗೆ ಮಾಡುವುದಕ್ಕೆ ಬರುತ್ತೆ ಅಂತ ತಿಳಿದು ಬಿಟ್ಟರೆ ಸಾಕು. ಸಾಹೇಬರ ಹೆಂಡತಿ ಮೊವಲು ಮೊದಲು ಹೆಚ್ಚುಗಟ್ಟಲೆ ದಿನಗಳಲ್ಲಿಯೂ, ಹಬ್ಬ ತಿಥಿಗಳಲ್ಲಿಯೂ ಅಡಿಗೆ ಮಾಡಲು ಹೇಳಿ ಕಳುಹಿಸು ತ್ತಾರೆ ಬರಬರುತ್ತಾ ನಿತ್ಯಾ ನನಗೆ ಅದೇ ಕೆಲಸವಾಗುತ್ತೆ. ಆ ಮೇಲೆ ಅವರ ಮನೆ ಪರಿಚಾರಕೆಯೇ ನನ್ನ ಡ್ಯೂಟಿ ಆಗುತ್ತೆ. ಆಫೀಸಿನಿಂದ ವಿರಾಮ ವೇನೋ ಸಿಕ್ಕುತ್ತೆ. ಆದರೆ ಆಫೀಸಿನಲ್ಲಿ ಹನ್ನೊಂದು ಗಂಟೆಯಿಂದ ಐದರ ವರೆಗೆ ದುಡಿದರೆ ತೀರಿತು ದಣಿಯ ಋಣ ಹರಿಸಿದಂತಾಗುತ್ತೆ. ಆದರೆ ಸಾಹೇಬರ ಮನೆಯಲ್ಲಿ ಹಗಲು ರಾತ್ರಿ ಮೂಗಿಗೆ ಕವಡೆ ಕಟ್ಟಿಕೊಂಡು ದುಡಿ

ದರೂ ಅವರಿಗೆ ತೃಪ್ತಿಯಾಗುವುದಿಲ್ಲ. ಕೊನೆಗೂ ಸಾಹೇಬರ ಹೆಂಡತಿ ಸ್ನೇಹಿತೆಯರೊಂದಿಗೆ "ಆಫೀಸಿನ ಕೆಲಸ ಇವನ ಕೈಯ್ಯಲ್ಲಿ ಹರಿಯೋದಿಲ್ಲ. ತಲೆ ಸಾಲದು. ಆದ್ದರಿಂದ ಇಲ್ಲೇ ಓಡ್ಯಾಡಿಕೊಂಡು ನಿನ್ನ ಸಂಬಳ ನೀನು ತೆಗೆದುಕೊ" ಎಂದು ಹೇಳಿದೆ ಎನುತ್ತಾರೆ. ಇದನ್ನು ಅನುಭವಿಸುತ್ತಿರುವವರು ನಮ್ಮ ಆಫೀಸಿನಲ್ಲಿ ಇದ್ದಾರೆ. ನೀನು ಬರುವುದು ಅತಿ ಸಾವಕಾಶವಾದರೆ ಸಾಹೇಬರು ಗೂಢಚಾರರ ಮೂಲಕ ನನ್ನ ಮನೆಯಲ್ಲಿ ನಾನೇ ಅಡಿಗೆ ಮಾಡಿಕೊಳ್ಳುವದನ್ನು ತಿಳಿದುಕೊಂಡರೆ ಅಲ್ಲಿಗೆ ನನ್ನ ಕೆಲಸ ಮುಗಿಯಿತು. ಆದುದರಿಂದ ಬರ್ತಾ ಹೋಗ್ತಾ ಇರು. ಸಾಹೇಬರ ವಕ್ರದೃಷ್ಟಿ ನನ್ನಮೇಲೆ ಆಗ ಬೀಳುವದಿಲ್ಲ."

ಮಣಿ ಕಾಗದ ನೋಡಿ ನಗುತ್ತಾ ತುಮಕೂರಿಗೂ ಮಲ್ಲಿಗೆಹಳ್ಳಿಗೂ ಮಧ್ಯೆ ತಿರುಗುತ್ತಾ ಗಂಡನ ಮನೆಯಲ್ಲಿ ಒಂದು ತಿಂಗಳು ತಂದೆಯ ಮನೆಯಲ್ಲಿ ಮೂರು ತಿಂಗಳು ಹೀಗೆ ಕಾಲಹಾಕುತ್ತಿದ್ದಳು. ತಾಯಿ ಸತ್ತ ವರುಷ ಗೋಪಾಲನಿಗೆ ಮದುವೆಯಾಗುವ ಸಂಭವವಿರಲಿಲ್ಲ. ಅವನು ಕೆಲಸ ಹುಡುಕಿಕೊಂಡು ಇದ್ದಕ್ಕಿದ್ದಂತೆ ಬೊಂಬಾಯಿಗೆ ಹೋದನು. ಅಲ್ಲಿ ಯಾವುದೋ ಖಾಸಗಿ ಸ್ಕೂಲಿನಲ್ಲಿ ಉಪಾಧ್ಯಾಯನಾಗಿ ಕೆಲಸಮಾಡುತ್ತಿದ್ದನು. ರಂಗಪ್ಪನವರು ಒಂದು ಸಲ "ನಮ್ಮ ದೇಶದಲ್ಲಿಯೇ ಎಲ್ಲಿಯಾದರೂ ಹತ್ತಿರದಲ್ಲಿ ಕೆಲಸ ಸಿಕ್ಕಿದರೆ ಮಾಡಿಕೋ. ತಮ್ಮಂದಿರಿಗೆ ವಿದ್ಯಾಭ್ಯಾಸಕ್ಕೆ ಸಹಾಯವಾಗುತ್ತೆ. ಬೊಂಬಾಯಿ ಎಲ್ಲಿ ನಾವೆಲ್ಲಿ? ಒಂದು ಹಿಡಿ ಅನ್ನಕ್ಕಾಗಿ ದೇಶ ಬಿಟ್ಟು ದೇಶ ಅಲೆಯಬೇಕು?" ಎಂದು ಬರೆದರು. ಗೋಪಾಲನಿಗೆ ತಂದೆಯ ಮಾತಿನಂತೆ ಬೊಂಬಾಯಿ ಬಿಟ್ಟುಬರಲು ಇಷ್ಟವಿತ್ತೊ ಇಲ್ಲವೋ ತಿಳಿಯದು ಆದರೆ ಅವನು ಉಪಾಧ್ಯಾಯನಾಗಿದ್ದ ಸ್ಕೂಲು, ಭಾರತದ ಸ್ವಾತಂತ್ರ್ಯದ ಚಳುವಳಿಯ ಕಡೆಗೆ ಮನಸ್ಸನ್ನುಳ್ಳದೆಂದು ಸರ್ಕಾರಕ್ಕೆ ಗುಮಾನಿ ಬಂದುದರಿಂದ, ಅವರು ಆ ಸ್ಕೂಲಿನ ಮೇಲೆ ಅನೇಕ ವಿಧಗಳಾದ ಕಿರುಕುಳಗಳನ್ನು ತಂದು ಒಡ್ಡಿದರು. ಪಾಠಶಾಲೆ ನಡೆಯುವದು ನಿಂತಿತು. ಗೋಪಾಲನು ಬೊಂಬಾಯಿನಿಂದ ಹಿಂದಿರುಗಿ ಕೆಲಸ ಹುಡುಕುತ್ತಾ ಮೈಸೂರಿನಲ್ಲಿಯೇ ನಿಂತನು.

ಅನೇಕರು ಕನ್ಯಾಪಿತೃಗಳು ರಂಗಪ್ಪನವರಲ್ಲಿಗೆ ಬರತೊಡಗಿದರು. ರಂಗಪ್ಪನವರದು ಎಲ್ಲರಿಗೂ ಒಂದೇ ಜವಾಬು "ಗೋಪಾಲನು ಒಪ್ಪಿದರೆ ನಾನು ಸಿದ್ಧ" ಬಂದವರು ಕನ್ಯೆಯನ್ನು ಕರೆದುಕೊಂಡು ಮೈಸೂರಿನಲ್ಲಿ ಗೋಪಾಲ

ನಿದ್ದ ಕೊಠಡಿಯನ್ನು ಪತ್ತೆ ಹಚ್ಚಿ ಅವನಿಗೆ ಹೆಣ್ಣನ್ನು ತೋರಿಸುತ್ತಿದ್ದರು. ಅವನು ಏನು ಜವಾಬು ಕೊಡುತ್ತಿದ್ದನೋ ತಿಳಿಯದು. ರಂಗಪ್ಪನವರಿಗೇನೋ ಬಂದ ಕನ್ಯೆಯರ ಪೈಕಿ ಹತ್ತಕ್ಕೆ ಒಂಬತ್ತು ಉತ್ತಮವಾಗಿ ಸುಂದರಿಯರಾಗಿ ಯಾವ ಗಂಡಿಗೂ ಕೂಡ ಲಾಯಕ್ಕಾದ ವಧುಗಳಾಗಿ ತೋರುತ್ತಿದ್ದರು. ರಂಗಪ್ಪನವರು "ಇವರುಗಳ ಪೈಕಿ ಯಾರನ್ನಾದರೂ ಗೋಪಾಲ ಒಪ್ಪುತ್ತಾನೆ. ಇವತ್ತು ನಾಳೆ ಕಾಗದ ಬರುತ್ತೆ" ಎಂದು ನಿರೀಕ್ಷಿಸುತ್ತಲೇ ಇದ್ದರು. ರಾಮಣ್ಣನವರು ಅವರೊಂದಿಗೆ ಹಿಂದೆ ಮಾತನಾಡಿದ್ದ ದಿನಕ್ಕೆ, ಸುಮಾರು ೧ ತಿಂಗಳು ಕೆಳಗೆ ಭಾಗ್ಯಲಕ್ಷ್ಮಮ್ಮನವರ ತಮ್ಮ ಶೀನಿ, ತನ್ನ ಮಗಳು ಜಯುವನ್ನು ಕರೆದುಕೊಂಡು ಬಂದ. ಜಯು ನೋಡುವುದಕ್ಕೆ ರಾಜಕುಮಾರಿಯಂತಿದ್ದಳು. ಅವಳ ಅಂಗಾಂಗಗಳಲ್ಲಿ ಲಾವಣ್ಯ ತುಂಬಿತುಳುಕುತ್ತಿದ್ದಿತು. ಬಂದು ನಮಸ್ಕರಿಸಿದ ಹುಡುಗಿಯನ್ನೂ ಶೀನಿಯನ್ನೂ ನೋಡಿ ರಂಗಪ್ಪನವರು "ಈ ಹುಡುಗಿಯನ್ನು ಮದುವೆಯಾಗೋನೆ ರಾಜ. ಅದರಲ್ಲಿ ಅನುಮಾನವೇ ಇಲ್ಲ ಅವಳು ಬದುಕಿದ್ದರೆ ಜಯು ಹೀಗೆ ಬೆಳೆದಿರುವುದನ್ನು ನೋಡಿ ಎಷ್ಟು ಸಂತೋಷ ಪಡುತ್ತಿದ್ದಳೋ. ನನಗೇನೋ! ಈಗಲೇ ಲಗ್ನ ಪತ್ರಿಕೆಮಾಡಿಬಿಡೋಣ ಅಂತ ತೋರುತ್ತೆ. ಆದರೆ ಈ ಕಾಲದ ಹುಡುಗರು; ಕೇಳಲಿಲ್ಲ ಅಂತ ಆಕ್ಷೇಪಣೆ ಬರಬಾರದು. ಮೈಸೂರಿಗೆ ಹೋಗಿ ಗೋಪಾಲನಿಗೆ ಒಂದು ಮಾತು ಹೇಳಿ ಬಿಟ್ಟು ಬಾ" ಎಂದರು. ಶೀನಿ "ಹಾಗೆಯೇ ಆಗಲಿ ಭಾವ. ಭಾಗ್ಯ ಬದುಕಿದಾಗ ಹೇಗೋ ಅದೇ ಪ್ರೀತಿ ಇಟ್ಟುಕಾಪಾಡಬೇಕು." ಎಂದನು. ರಂಗಪ್ಪನವರು "ಹೋಗಿ ಬಾಪ್ಪ ದೇವರು ಎಲ್ಲಾ ಒಳ್ಳೆಯದು ಮಾಡಲಿ" ಎಂದರು. ಜಯುವೂ ಶೀನಿಯೂ ಗಾಡಿಹತ್ತಿ ಮೈಸೂರಿನ ಕಡೆಯ ಬಸ್ಸನ್ನು ಹಿಡಿಯಲು ಹೊರಟಾಗ ರಂಗಪ್ಪನವರು ತಮ್ಮಷ್ಟಕ್ಕೆ ತಾವೇ "ಜಯು ಎಲ್ಲಾ ರೀತಿಯಿಂದಲೂ ಸಮರ್ಪಕವಾಗಿದ್ದಾಳೆ. ನಮ್ಮ ನಮ್ಮದು. ಮೊದಲೇ ಸಂಬಂಧ. ತಾಯಿಯಿಲ್ದ ಮಕ್ಕಳನ್ನು ಚೆನ್ನಾಗಿ ಕಾಪಾಡ್ತಾಳೆ. ಭಗವಂತ ಅವಳನ್ನು ಚೆನ್ನಾಗಿ ಇಟ್ಟಿರಲಿ" ಎಂದು ನಿಟ್ಟುಸಿರು ಬಿಟ್ಟರು.

ಶೀನಿ ಮೈಸೂರಿಗೆ ಹೋದವನು ರಂಗಪ್ಪನವರಿಗೆ ಕಾಗದ ಬರೆಯಲಿಲ್ಲ. ರಂಗಪ್ಪನವರು "ಲಗ್ನ ಯಾವತ್ತು ಇಡೋಣ. ಇವತ್ತು ಶೀನಿಯಿಂದ

ಕಾಗದ ಬರುತ್ತೆ ; ನಾಳೆ ಬರುತ್ತೆ. ಅವನೇ ಇವತ್ತು ಬರಬಹುದು" ಎಂದು ನಿತ್ಯಾ ದಾರಿ ನೋಡಿ ನೋಡಿ ಬೇಸತ್ತರು. ಕೊನೆಗೆ ನಿರುತ್ಸಾಹದಿಂದ "ಆ ಕಕವ ಎಲ್ಲೋ ಬೇಡ ಅಂತ ಹೇಳಿದೆ. ಈ ಮನೆಯ ಭಾಗ್ಯ, ಭಾಗ್ಯಳ ಜತೆಯಲ್ಲಿಯೇ ಹೋಯಿತು. ಇಂತಹವಳನ್ನು ಸೊಸೆಯಾಗಿ ಮಾಡಿಕೊಳ್ಳುವ ಭಾಗ್ಯ ನನಗೆಲ್ಲಿ ಬರಬೇಕು. ಅಯ್ಯೋ ದುರದೃಷ್ಟದ ಮುಂಡೆಗಂಡ ; ಇಂತಹ ಮಾಣಿಕ ಬೇಡ ಅಂದು ಇನ್ನು ಯಾವ ಗಾಜು ಹುಡುಕಿಕೊಂಡು ಹೋಗ್ತೀಯೊ. ಶೀನಿಯಾದರೂ ಇಲ್ಲಿಗೆ ಬಂದರೆ ಅವನ ಜತೆಯಲ್ಲಿ ನಾನು ಹೋಗಿ ಆ ಮಡ್ಡಿಗೆ ವಿವೇಕ ಹೇಳಬಹುದಲ್ಲಾ" ಎಂದು ಕೊಂಡರು. ಈ ಕಥೆಯ ಪ್ರಾರಂಭದಲ್ಲಿ ಬಂದ ರಾಮಣ್ಣನವರೊಡನೆಯ ಸಂಭಾಷಣೆ ಮುಗಿದ ಒಂದು ಗಂಟೆಕಾಲದೊಳಗೆ ಟಪಾಲಿನ ಮೇಷ್ಟ್ರು ರಂಗಪ್ಪನವರಿಗೆ ಅರಸಿನ ಹಚ್ಚಿದ್ದ ಒಂದು ಕವರನ್ನು ತಂದು ಕೊಟ್ಟರು. ಅದನ್ನು ನೋಡುವಾಗಲೇ ಅದೊಂದು ಲಗ್ನ ಪತ್ರಿಕೆ ಎಂಬುದು ರಂಗಪ್ಪನವರಿಗೆ ಗೊತ್ತಾಯಿತು. ಸಾಧಾರಣವಾಗಿ ಲಗ್ನ ಪತ್ರಿಕೆಗಳು ಬುಕ್ ಪೋಸ್ಟಿನಲ್ಲಿ ತೆರೆದ ಲಕ್ಕೋಟೆಯಲ್ಲಿ ಬರುವ ಪದ್ಧತಿ. ಆದರೆ ಈ ಲಕೋಟೆಗೆ ಅಂಟು ಹಾಕಿತ್ತು. ರಂಗಪ್ಪನವರು ಲಗ್ನ ಪತ್ರಿಕೆಯ ಜತೆಯಲ್ಲಿ ಯಾರೋ ಕಾಗದವನ್ನೂ ಬರೆದಿಟ್ಟಿರಬೇಕು ಎಂದುಕೊಂಡು ಲಕೋಟೆ ಒಡೆದರು. ಅವರು ನಿರೀಕ್ಷಿಸಿದಂತೆ ಲಕ್ಕೋಟೆಯಿಂದ ಒಂದು ಲಗ್ನ ಪತ್ರಿಕೆಯೂ ಕಾಗದವೂ ಕೆಳಗೆ ಬಿದ್ದಿತು. ರಂಗಪ್ಪನವರು ಲಗ್ನ ಪತ್ರಿಕೆಯನ್ನು ಮೊದಲು ತೆಗೆದುಕೊಂಡು ಓದಿದರು. ಅದು ಅವರ ಹೆಸರಿನ ಲಗ್ನ ಪತ್ರಿಕೆಯಾಗಿದ್ದಿತು "ಅವರ ಮಗ ಗೋಪಾಲನಿಗೆ ಮೈಸೂರಲ್ಲಿರುವ ಡೆಪುಟ್ಯಕಮಿಶನರ್ ಸುಂದರರಾಜರ ಮಗಳು ವತ್ಸಲೆಯನ್ನು ಕೊಟ್ಟು ಮೈಸೂರಿನಲ್ಲಿ ಆವತ್ತಿಗೆ ಸರಿಯಾಗಿ ಎಂಟು ದಿವಸಕ್ಕೆ ಮದುವೆ. ಲಗ್ನ ಪತ್ರಿಕೆ ನೋಡಿ ರಂಗಪ್ಪನವರು ಹಾಗೇ ನೆಲದ ಮೇಲೆ ಕುಳಿತರು. ಎರಡು ನಿಮಿಷ ಸುದಾರಿಸಿಕೊಂಡು ಲಕೋಟೆಯಲ್ಲಿದ್ದ ಮತ್ತೊಂದು ಕಾಗದ ಓದಿದರು. ಅದು ಅವರ ಮಗ ಗೋಪಾಲ ಬರೆದ ಕಾಗದವಾಗಿತ್ತು. ಅದರಲ್ಲಿ "ನಾನು ವತ್ಸಲೆಯನ್ನು ಒಪ್ಪಿದೆ. ನೀವು ಬಂದು ಅವಳನ್ನು ನೋಡಿದರೆ ನೀವೂ ಖಂಡಿತ ಒಪ್ಪುವುದರಲ್ಲಿ ಸಂದೇಹವಿಲ್ಲ, ಜಾಗ್ರತೆ ಬಂದು ಮದುವೆಗೆ ಬೇಕಾದ ಎಲ್ಲಾ ಸಿದ್ಧತೆಗಳನ್ನೂ ಏರ್ಪಡಿಸ

ಬೇಕೆಂದು ಬೇಡುತ್ತೇನೆ" ಎಂದು ಇತ್ತು. ರಂಗಪ್ಪನವರು ಮಣಿಯ ಕೈಯಿಂದ ಒಂದು ಲೋಟ ನೀರನ್ನು ತರಿಸಿ ಕುಡಿದು ಸುಧಾರಿಸಿಕೊಂಡು ಅವಳನ್ನು ಕರೆದು ಲಗ್ನಪತ್ರಿಕೆಯನ್ನೂ ಕಾಗದವನ್ನೂ ಮಣಿಯ ಕೈಗೆ ಕೊಟ್ಟರು. ಮಣಿಯು ಕಾಗದವನ್ನೂ ಲಗ್ನಪತ್ರಿಕೆಯನ್ನೂ ನೋಡಿ "ಈ ಡೆಪುಟಿ ಕಮಿಶನರ್ ಸುಂದರರಾಜರು ನಿನಗೆ ಗೊತ್ತೇ ಅಣ್ಣಾ" ಎಂದಳು. "ಕೇಳಿದ್ದೇನೆ ಇನ್ನೇನು ರಿಟೈರು ಆಗುವ ಕಾಲ ಅಂತ ಕಾಣುತ್ತೆ, ಯಾವಾಗಲೋ ನೋಡಿದ ಜ್ಞಾಪಕ. ಸ್ವಲ್ಪ ವಯಸ್ಸಾದವರು" ಎಂದರು ರಂಗಪ್ಪನವರು. ಮಣಿ "ಇದು ಒಳ್ಳೆ ಚೆನ್ನಾಗಿದೆ; ಗೋಪಾಲನಿಗೆ ಹುಚ್ಚು ಹತ್ತಿದಂತೆ ಕಾಣುತ್ತೆ. ನಿನ್ನ ಒಂದು ಮಾತು ಕೇಳಬೇಡವೆ? ಅಣ್ಣಾ ನಾವು ಮದುವೆಗೆ ಹೋಗುವುದು ಬೇಡ. ಅವನ ಪಾಡಿಗೆ ಅವನೇ ಮಾಡಿಕೊಳ್ಳಲಿ. ಡೆವುಟಿಕಮಿಶನರ್ ಸುಂದರರಾಜಂತೆ ಸುಂದರರಾಜ! ಹುಟ್ಟುವಾಗಲೇ ಡೆಪುಟಿಕಮಿಶನರಾಗಿ ಹುಟ್ಟಿದನೇನೋ? ಬಹಳ ಕಷ್ಟಪಟ್ಟು ಸಾಕಿ ಬೆಳೆಸಿದ್ದ ಗೋಪಾಲನ್ನು. ಮುಖ್ಯ ಗೋಪಾಲನಿಗೆ ಬುದ್ಧಿ ಇಲ್ಲ ಅಣ್ಣ. ಎಲ್ಲೊ ಹೋಗಿ ಗುಂಡಿಬಿದ್ದು ಬಿಡತು. ಹೇಗಾದರೂ ಆಗಲಿ, ಅವನ ಹಣಪಾಡು, ನಾವಂತೂ ಮದುವೆಗೆ ಹೋಗುವುದು ಬೇಡ" ಎಂದಳು. ರಂಗಪ್ಪನವರು "ನನಗೆ ಒಂದೂ ತಿಳಿಯುವುದಿಲ್ಲ. ತಲೆ ಒಂದು ತರಹ ತಿರುಗುತಿದೆ" ಎಂದು ಹೇಳಿಕೊಂಡು ನದಿಗೆ ಸ್ನಾನಕ್ಕೆ ಹೋದರು.

ಗೋಪಾಲ ಬಿ. ಎ. ಪ್ಯಾಸು ಮಾಡಿದನಂತರ ಅವನಿಗೂ ತನ್ನ ಮದುವೆಯ ಯೋಚನೆ ಪ್ರಾರಂಭವಾಯಿತು. ಹೆಣ್ಣು ಒಳ್ಳೆ ವಯಸ್ಸಾದವಳಾಗಿರಬೇಕು. ವಿದ್ಯಾವತಿಯಾಗಿರಬೇಕು. ನಯ ನಾಜೂಕು ಒಳ್ಳೆಯ ಸಂಸ್ಕೃತಿ ಎಲ್ಲಾ ಬೇಕು. ಮುಖ್ಯವಾಗಿ ಸಂಗೀತಬೇಕು. ಗೋಪಾಲನಿಗೆ ಸಂಗೀತ ಎಂದರೆ ಹುಚ್ಚು. ಅವನು ಮೈಸೂರಿನಲ್ಲಿ ನಡೆಯುತ್ತಿದ್ದ ಯಾವ ಸಂಗೀತ ಕಛೇರಿಗೂ ತಪ್ಪಿಸಿಕೊಳ್ಳುತ್ತಿರಲಿಲ್ಲ. ಒಳ್ಳೆಯ ಗಾಯಕರು ಬೆಂಗಳೂರು ಗಾಯನ ಸಮಾಜದಲ್ಲಿ ಬಂದು ಹಾಡಿದಾಗ ಗೋಪಾಲ ಮೈಸೂರಿನಿಂದ ಅದಕ್ಕಾಗಿಯೇ ಬೆಂಗಳೂರಿಗೆ ಹೋಗುತ್ತಿದ್ದನು. ಬರಬರುತ್ತಾ ಗೋಪಾಲನಿಗೆ ತಾನು ಯಾವುದಾದರೂ ಒಂದು ವಾದ್ಯದಲ್ಲಿ ಪ್ರಾವೀಣ್ಯವನ್ನು ಹೊಂದುವ ಯೋಗ್ಯತೆ ತನಗೆ ಇದೆಯೆಂದು ತೋರಿತು. ಅವನು ಪಿಟೀಲನ್ನು

ಅಭ್ಯಾಸಮಾಡಲು ಆರಂಭಿಸಿದನು. ಸಂಗೀತದಲ್ಲಿ ಅವನಿಗೆ ಸ್ವಾಭಾವಿಕ ವಾಗಿದ್ದ ಅಭಿರುಚಿಯಿಂದ ಪಿಟೀಲು ಬಹು ಬೇಗ ಅವನ ಸ್ವಾಧೀನಕ್ಕೆ ಬಂದಿತು. "ಸಂಗೀತವಿಲ್ಲದ ಬಾಳು ವ್ಯರ್ಥ. ನನಗೆ ಹೆಂಡತಿಯಾಗುವವಳು ಸಂಗೀತ ದಲ್ಲಿ ಸರಸ್ವತಿಯಾಗಿರಬೇಕು. ಅವಳು ಒಂದು ಕಡೆ ಪಿಟೀಲು ನುಡಿಸುತ್ತಾ ಅದಕ್ಕೆ ಉತ್ತರವಾಗಿ ನಾನು ಒಂದು ಕಡೆ ನುಡಿಸುತ್ತಾ ಗಾನಲೋಲರಾಗಿ ಯಕ್ಷಕಿನ್ನರರಂತೆ ಈ ಬಾಳನ್ನು ಸಾಗಿಸಿಬಿಡಬೇಕು" ಎಂಬುದು ಅವನ ಆಸೆ ಯಾಯಿತು. ಈ ರೀತಿ ಎಲ್ಲಾ ವಿಧದಲ್ಲಿಯೂ ಸಮರ್ಪಕವಾದ ಹೆಣ್ಣು ಮನುಷ್ಯನಿಗೆ ದೊರೆಯುವುದುಂಟೆ? ಗೋಪಾಲ ತನ್ನನ್ನು ಮದುವೆಯಾಗಲು ಬಂದ ಹುಡುಗಿಯರನ್ನೆಲ್ಲ "ಅವರಿಗೆ ಮೊದಲು ಸಂಗೀತ ಬರುತ್ತದೆಯೇ" ಎಂದು ಕೇಳುತ್ತಿದ್ದನು. ಅನಂತರ ಅವರ ರೂಪು ಲಾವಣ್ಯಗಳನ್ನು ನೋಡು ತ್ತಿದ್ದನು. ಅವನಿಗೆ, ತನ್ನ ಹೆಂಡತಿಯಾಗುವವಳಲ್ಲಿ ಬಾಯಿ ಹಾಡುಗಾರಿಕೆ ಗಿಂತ ವೀಣೆ ಪಿಟೀಲು ಮುಂತಾದ ಯಾವುದಾದರೂ ವಾದ್ಯದಲ್ಲಿ ಒಳ್ಳೆಯ ಪರಿಶ್ರಮವಿರಬೇಕೆಂಬುದೇ ಹಂಬಲವಾಗಿತ್ತು. ಯಾಕೆಂದರೆ "ಬಾಯಿಹಾಡು ಗಾರಿಕೆ ಬರಬರುತ್ತಾ ಹಾಡುಗರಿಗೆ ವಯಸ್ಸು ಆದಂತೆ ತನ್ನ ಸಾರಸ್ಯವನ್ನು ಕಳೆದುಕೊಳ್ಳುತ್ತದೆ. ಆದರೆ ವಾದ್ಯದ ಪರಿಶ್ರಮ ದಿನದಿನಕ್ಕೂ ಹೆಚ್ಚು ಹೆಚ್ಚು ಸುಖವಾಗಿ ಇಂಪಾಗಿ ಬೆಳೆಯುತ್ತಾ ಹೋಗುತ್ತದೆ" ಎಂಬುದು ಗೋಪಾಲನ ತಪ್ಪು ಅಭಿಪ್ರಾಯವಾಗಿತ್ತು. ವೀಣೆ ಪಿಟೀಲನ್ನು ಅಷ್ಟು ಇಂಪಾಗಿ ನುಡಿಸುತ್ತಿರುವ ಹುಡುಗಿ ಮದುವೆಯಾಗಿ ಒಂದು ಮಗುವಾದ ಕೂಡಲೆ, ಆ ವೀಣೆಯನ್ನೂ ಪಿಟೀಲನ್ನೂ ಅಟ್ಟದ ಮೇಲಕ್ಕೆ ಎಸೆದುಬಿಡುತ್ತಾಳೆಂಬುದೂ, ಹುಡುಗಿಯರ ಆ ವೀಣೆ ಪಿಟೀಲು, ಗಂಡು ಎಂಬ ಮೃಗವನ್ನು ಮದುವೆಯ ಬಲೆಗೆ ಕೆಡವಿಕೊಳ್ಳುವುದಕ್ಕಾಗಿಯೇ ಎಂಬುದೂ ಆ ಬಡಪಾಯಿ ಅನುಭವ ವಿಲ್ಲದ ಗೋಪಾಲನಿಗೆ ಹೇಗೆ ಗೊತ್ತಾಗಬೇಕು. ಹಾವಾಡಿಗನು ನಾಗಸ್ವರದಿಂದ ಹಾವನ್ನು ಅದು ಒಳ್ಳೆ ಎಂದರೂ ಬಿಡದೆ ಸಮೀಪಕ್ಕೆ ಆಕರ್ಶಿಸಿ ಅದನ್ನು ಬುಟ್ಟಿಗೆ ಕೂಡಿ ಅದರ ಹಲ್ಲು ಮುರಿದು ಪಳಗಿಸಿ ತನ್ನ ವ್ಯವಹಾರವನ್ನು ಸಾಗಿಸಿಕೊಳ್ಳುವಂತೆ, ಹೆಣ್ಣು ಗಂಡನ್ನು ಪಳಗಿಸಿ ತನ್ನ ಸೃಷ್ಟಿಕಾರ್ಯಕ್ಕೆ ನೆರವು ಮಾಡಿಕೊಳ್ಳುತ್ತದೆ. ಇದು, ಹಲ್ಲು ಮುರಿಸಿಕೊಂಡು ಬುಟ್ಟಿಯಲ್ಲಿ ಬಂಧಿತವಾಗಿ ಹಾವಾಡಿಗನ ಸ್ವರಕ್ಕೆ ಅನುಸಾರವಾಗಿ ಕುಣಿಯುವವರೆಗೆ

ಹಾವಿಗೆ ಗೊತ್ತಾಗುವುದಿಲ್ಲ. ಆಮೇಲೆ ಗೊತ್ತಾಗುತ್ತದೆ. ಆದರೆ ಅಷ್ಟು ಹೊತ್ತಿಗೆ ಮಂತ್ರಗಾರನ ಮಾಟದಿಂದ ತಪ್ಪಿಸಿಕೊಳ್ಳುವ ಶಕ್ತಿ ಅದಕ್ಕೆ ಮಾಯವಾಗಿರುತ್ತದೆ.

ಗೋಪಾಲನಿಗೆ, ಒಂದು ಯೋಗ್ಯತೆಗಾಗಿ ಒಪ್ಪಿದ ಹೆಣ್ಣು ಇನ್ನೊಂದು ಯೋಗ್ಯತೆಗಾಗಿ ಒಪ್ಪಿಗೆಯಾಗಲಿಲ್ಲ. ಒಳ್ಳೆಯ ಹಾಡುಗಾರಿಕೆಯುಳ್ಳವಳಿಗೆ ರೂಪು ಕುಬ್ಜವಾಗಿರುತ್ತಿತ್ತು. ಗಂಭೀರವಾಗಿ ಎತ್ತರವಾಗಿ ಗಂಧರ್ವ ಕನ್ನಿಕೆಯತೆ ಬೆಳೆದ ಹುಡುಗಿಗೆ, ಗೋಪಾಲನಿಗೆ ತೃಪ್ತಿಯಾಗುವಷ್ಟು ಸಂಗೀತದ ಪರಿಶ್ರಮವಿರಲಿಲ್ಲ. ಸಂಗೀತವನ್ನು ಅರಿತ ಕೊಕ್ಕರೆಗಿಂತ ಸಂಗೀತವಿಲ್ಲದಿದ್ದರೂ ಲಕ್ಷಣವಾದ ಒಳ್ಳೆ ಬೆಳವಣಿಗೆಯುಳ್ಳ ಹುಡುಗಿ ಸಂಸಾರದ ಸರಸ್ವತಿ ಎಂಬುದು ಅವನಿಗೆ ತಿಳಿಯಬೇಕಾದರೆ ಇನ್ನೂ ನಾಲ್ಕಾರು ವರುಷಗಳ ಅನುಭವ ಬೇಕಾಗಿದ್ದಿತು. ಗೋಪಾಲ ತನ್ನನ್ನು ನೋಡುವುದಕ್ಕೆ ಬಂದ ಹುಡುಗಿಯರನ್ನೆಲ್ಲ ಬಿಡುತ್ತಾ ಬಂದನು. ಯಾವ ಹುಡುಗಿಯೂ ಅವನಿಗೆ ಸಾಲದು. ಬರಬರುತ್ತಾ ಇವನ ಬಳಿಗೆ ಹುಡುಗಿಯರನ್ನು ಕರೆದುಕೊಂಡು ಬರುವವರ ಸಂಖ್ಯೆ ಕಡಿಮೆಯಾಯಿತು. ಜನರಿಗೆ ಇವನಲ್ಲಿ ತಿರಸ್ಕಾರ ಹೆಚ್ಚಾಯಿತು. ಇವನು ತಿರಸ್ಕರಿಸಿದ ಹುಡುಗಿಯರಿಗೆ, ಇವನಿಗಿಂತಲೂ ಎಲ್ಲಾ ವಿಧಗಳಲ್ಲಿಯೂ ಉತ್ತಮರಾದ ವರಗಳು ದೊರಕಿದವು. ಮದುವೆ ಕಾಲದಲ್ಲಿ ಆ ಹುಡುಗಿಯರನ್ನು ಗೋಪಾಲನು ನೋಡಿದಾಗ "ನನಗೆ ಕಣ್ಣು ಎಲ್ಲಿ ಹೋಗಿತ್ತು. ಇವತ್ತು ದೇವಕನ್ನಿಕೆಯಾಗಿದ್ದಾಳಲ್ಲ. ನಾನೇಕೆ ಇವಳನ್ನು ಬೇಡವೆಂದೆ" ಎಂದು ಅವನಿಗೆ ಪಶ್ಚಾತ್ತಾಪವಾಗುತ್ತಿತು. ಹೆಣ್ಣು ಮತ್ತೊಬ್ಬನ ಹೆಂಡತಿಯಾಗುವ ವರೆಗೆ ಚೆನ್ನಾಗಿ ಕಾಣುವದಿಲ್ಲವೆಂಬುದು ಆಗ ಅವನ ಅನುಭವಕ್ಕೆ ಚೆನ್ನಾಗಿ ಬಂದಿತು.

"ಇನ್ನು ಪ್ರಯೋಜನವಿಲ್ಲ. ಯಾವುದಾದರೂ ಒಂದು ಹೆಣ್ಣನ್ನು ಮದುವೆಯಾಗಿಬಿಡಬೇಕು. ಇನ್ನು ಮಾಡಿಕೊಳ್ಳುತ್ತೀಯಾ ಅಂತ ಕೇಳುವವರ ಸಂಖ್ಯೆಯೂ ಕಡಿಮೆಯಾಗುತ್ತಾ ಬರುತ್ತಿದೆ" ಎಂದು ಗೋಪಾಲನು ಯೋಚಿಸಿದನು. ಅವನು ಹೀಗೆ ಯೋಚಿಸುತ್ತಿರುವಾಗ ಶೀನಿ ಮಾವನು ಅವನ ಕೊಟಡಿಯ ಮುಂದೆ ಜಟಕಾದಲ್ಲಿ ಇಳಿದನು. ಶೀನಿಯ ಹಿಂದೆ ಜಯುವೂ ಇಳಿದಳು. ಗೋಪಾಲನಿಗೆ ಶೀನಿಯ ಗುರುತು ತತ್‌ಕ್ಷಣ ಹತ್ತಿದರೂ, ಎರಡು ಮೂರು ವರ್ಷಗಳಿಂದ ಜಯುವನ್ನು ನೋಡದೆ ಇದ್ದುದರಿಂದಲೂ ಜಯು ಈ

ಕಾಲದಲ್ಲಿ ಚೆನ್ನಾಗಿ ಬೆಳೆದಿದ್ದುದರಿಂದಲೂ ಅವನಿಗೆ ಅವಳ ಗುರುತು ಹತ್ತುವದು ಸ್ವಲ್ಪ ಕಷ್ಟವಾಯಿತು. ಮೊದಲು "ಇದಾರು ಈ ಚೆಲುವೆ" ಎಂದುಕೊಂಡನು. ಜಯ ಎಂಬುದು ತಿಳಿದಕೂಡಲೇ ಔದಾಸೀನ್ಯದಿಂದ ಹೊ ಎಂದನು. ಶೀನಿಯ ಜತೆಯಲ್ಲಿ ಅಲ್ಲದೆ ಜಯವನ್ನು ಇನ್ನಾವದಾದರೂ ದೊಡ್ಡ ಬಂಗಲೆಯಲ್ಲಿ ಒಬ್ಬಳನ್ನೇ ನೋಡಿದ್ದರೆ ಗೋಪಾಲನು 'ನಿನ್ನ ಪಾದ ಹೊರ್ತೇನೆ' ಎನ್ನುತ್ತಿದ್ದನು. ಆದರೆ ಇಲ್ಲಿ ಈಗ ಬಂದಿರುವವಳು ತಾನು ನೋಡಿದಾಗ ಲಂಗ ಸಿಕ್ಕುಹಾಕಿಕೊಂಡು, ಗೆಜ್ಜುಗ "ಪಲ್ಲಾಂಗುಣಿ" ಆಡುತ್ತಿದ್ದ ಮಾವ ಶೀನಿಯ ಮಗಳು. ಗೋಪಾಲನು "ಮಾವ ಸಂಗೀತದ ಹುಚ್ಚು ಬಹಳ. ಏನು ಮಾಡಲಿ. ಸಂಗೀತವಿಲ್ಲದ ಹೆಣ್ಣನ್ನು ಮದುವೆಯಾಗಲು ಮನಸ್ಸು ಒಪ್ಪುವದಿಲ್ಲ. ಅದೇನೋ ಹಳ್ಳಿಯ ಹುಡುಗಿಯರನ್ನು ಕಂಡರೂ ಮನಸ್ಸಿಗೆ ಹಿಡಿಯುವುದಿಲ್ಲ. ಈ ಪಟ್ಟಣವಾಸದ ಹುಡುಗಿಯರನ್ನು ನೋಡಿದಮೇಲೆ ಹಳ್ಳಿಯ ಹುಡುಗಿಯರು ಅಂದರೆ ಬೇಜಾರೇ ಆಗುತ್ತೆ" ಎಂದನು. ಶೀನಿಯು "ನಿನಗೆ ಒಂದು ಮಂಕು. ಆದರೆ ಈ ಮಂಕು ನಿನ್ನ ಸ್ವಂತ ಅನುಭವದಿಂದ ಹೊರತು ಮತ್ತಾವುದರಿಂದಲೂ ಹರಿಯುವುದಿಲ್ಲ. ಜಯ ನಿನ್ನ ಮದುವೆ ಆಗಬೇಕು ಅನ್ನೋದು ನಿಮ್ಮ ತಾಯಿ ಭಾಗ್ಯಾವಿನ ಆಸೆಯಾಗಿತ್ತು. ಆದರೆ ಅದು ಪರಮೇಶ್ವರನ ಇಚ್ಛೆಯಾಗಿ ತೋರುವುದಿಲ್ಲ. ಮಲ್ಲಿಗೆಹಳ್ಳಿ ಕಸ್ತೂರಿ ಮಗ ರಘುರಾಮನಿಗೆ ಮಾಡಿಕೊಳ್ಳಬಹುದೆಂದು ಆಸೆ ಇದೆ. ಅವರಲ್ಲಿ ಹೋಗಿ ಪ್ರಯತ್ನಿಸುತ್ತೇನೆ. ಯಾವುದಕ್ಕೂ ನಿನ್ನಿಂದ ಮೊದಲು ಆಗುವುದಿಲ್ಲ ಎನಿಸಿಕೊಂಡಲ್ಲದೆ ಮುಂದಲ ಕೆಲಸಕೂಡದು ಅಂತ ಜಯ ಮೊಂಡುಹಿಡಿದಳು" ಎಂದನು. ಗೋಪಾಲನು "ಸಾಹುಕಾರ್ ಕಸ್ತೂರಿ ಮಗ ರಘುರಾಮ ತಾನೆ. ಈ ವರುಷ ಬಿ. ಎ. ಆಗಿದೆ. ಭರ್ಜರಿ ವರ. ಆಸ್ತಿ ಒಂದು ಲಕ್ಷ್ಯಕ್ಕೆ ಕಮ್ಮಿ ಇಲ್ಲ. ಒಬ್ಬನೇ ಮಗ. ಜಯ ಅದೃಷ್ಟಶಾಲಿ" ಎಂದನು. ಶೀನಿ "ಹಳೆ ಸಂಬಂಧ ನೀನು ಮುಂದುವರಿಸ್ತೀಯ ಅಂತ ಮಾಡಿದ್ದೆ. ನಿನ್ನ ಚಿತ್ತಕ್ಕೆ ಬರಲಿಲ್ಲ ಎಂದುಕೊಂಡು ತಿರಸ್ಕಾರದ ನೋಟದಿಂದ ಗೋಪಾಲನನ್ನು ನೋಡುತ್ತಾ ಹೊರಟನು. ಗೋಪಾಲ ಜಯವಿನ ಕಡೆಗೆ ನೋಡಿದಾಗ ಅವಳ ಮುಖದಲ್ಲಿಯೂ ತಿರಸ್ಕಾರ ಹೊರತೂ ಯಾವ ಭಾವವೂ ಗೋಪಾಲನಿಗೆ ಕಾಣಲಿಲ್ಲ.

# ೫. ವತ್ಸಲೆಯ ದರುಶನ

ಆ ಸಂಜೆ ರಾಮಮಂದಿರದಲ್ಲಿ ಇಶ್ಯವಾಣಿ ಕೋಕಿಲಗಾನ ಸುಬ್ಬುಲಕ್ಷ್ಮಿಯವರ ದಿವ್ಯ ಸಂಗೀತ. ಸಂಗೀತ ಸಂಧ್ಯಾಕಾಲ ೫ ಗಂಟೆಗೆ ಪ್ರಾರಂಭವಾಗುವುದಾಗಿದ್ದರೂ ಎರಡು ಗಂಟೆಗೇ ರಾಮಮಂದಿರವು ಭರ್ತಿಯಾಗಿಹೋಗಿ ಮಂದಿರದ ಸುತ್ತಾ ಜನ ಕಿಕ್ಕಿರಿದು ನೆರೆದಿದ್ದರು. ಇಶ್ಯವಾಣಿಯ ಪ್ರಸಿದ್ಧಿಯನ್ನು ಚೆನ್ನಾಗಿ ಅರಿತಿದ್ದ ಮತ್ತು ಹಗಲು ರಾತ್ರಿ ಇಶ್ಯವಾಣಿಯ ಹಾಡುಗಳನ್ನು ಹಾಡಿಕೊಳ್ಳುತ್ತಿದ್ದ ಗೋಪಾಲ ಮೊದಲೇ ಒಂದು ಜಾಗ "ರಿಸರ್ವ್" ಮಾಡಿಸಿ ಇಟ್ಟುಕೊಂಡಿದ್ದ. ಸುಬ್ಬುಲಕ್ಷ್ಮಿ ಹಾಡುವುದಕ್ಕೆ ಪ್ರಾರಂಭಿಸಿದ ಕೂಡಲೆ ಈ ಜಗತ್ತು ಗಂಧರ್ವಲೋಕವಾಯಿತು. ಜನ ಗಾನದ ಕಡಲಿನಲ್ಲಿ ಆನಂದ ವಾರಧಿಯಲ್ಲಿ ಮುಳುಗಿ ಮುಳುಗಿ ಏಳುತ್ತಿದ್ದರು. ಆ ಸಂಗೀತ ಅಮೃತ ವರ್ಷವಾಗಿತ್ತು. ಗೋಪಾಲ "ಇಂತಹ ಸಂಗೀತ ಒಂದುಸಲ ಕೇಳಿದರೆ ಮನುಷ್ಯನಿಗೆ ಮೂವತ್ತು ವರ್ಷ ಆಯಸ್ಸು ಹೆಚ್ಚುತ್ತೆ. ಪುಣ್ಯಾತ್ಗಿತ್ತಿ ಸರಸ್ವತಿಯ ಅವತಾರ" ಎಂದುಕೊಂಡನು. ಜನ ಮಂತ್ರದಿಂದ ಮುಗ್ಧರಾದವರಂತೆ ಗಾನ ಲೋಲರಾಗಿದ್ದರು. ಒಂಬತ್ತು ಗಂಟೆಗೆ ಕಛೇರಿ ಮುಗಿಯುವ ವೇಳೆಗೆ ಎಲ್ಲೂ ಇಲ್ಲದ ಅಸಾಧ್ಯವಾದ ಮಳೆ ಪ್ರಾರಂಭವಾಯಿತು. ಯುದ್ಧದಲ್ಲಿ ಅತಿರಥ ಮಹಾರಥರು ಅವಿಚ್ಛಿನ್ನವಾಗಿ ಶರವರ್ಷವನ್ನು ಕರೆಯುವಂತೆ ಮಳೆಯ ಬಾಣಗಳು ಪಟಪಟನೆ ಬಾರಿಸತೊಡಗಿದವು. ಗುಡುಗು ಮಿಂಚು ಇವುಗಳ ಆರ್ಭಟದೊಂದಿಗೆ ಅಂತರಿಕ್ಷವು ಭೂಮಿಯ ಮೇಲೆ ದೊಡ್ಡ ವಿಮಾನ ಧಾಳಿಯನ್ನೇ ನಡೆಸಿಬಿಟ್ಟಿತು. ಸಂಗೀತ ಮುಗಿದು ಅರ್ಧಗಂಟೆಯಾಗುವದರೊಳಗಾಗಿ, ಮೋಟಾರುಗಳಿದ್ದವರೂ, ಛತ್ರಿಗಳನ್ನು ತಂದಿದ್ದವರೂ, ಉಡುಪುಗಳ ಇಸ್ತ್ರಿಗರಿಗಳು ನೆನೆದರೂ ಚಿಂತೆಯಿಲ್ಲ ಎಂದುಕೊಂಡವರೂ, ಶ್ರೀರಾಮ ಮಂದಿರದಿಂದ ಹೊರಕ್ಕೆ ನಡೆದರು. ಗೋಪಾಲನ ಕೈಲಿ ಛತ್ರಿ ಇರಲಿಲ್ಲ. ಅವನ ಹತ್ತಿರ ಆವತ್ತಿನ ಕಛೇರಿಗೆ ದುಡ್ಡು ಒದಗಿಸಿಕೊಳ್ಳುವುದೇ ಕಷ್ಟವಾಗಿತ್ತು. ಮಳೆಯಲ್ಲಿ ಹೋಗುವುದಕ್ಕೆ ಅವನಿಗೆ ಮನಸ್ಸಿರಲಿಲ್ಲ. ಧರಿಸಿದ್ದ ಷರಾಯಿ ಕೋಟಿನ ಇಸ್ತ್ರಿ ಮಾಸಿದರೆ ಮಾರನೆಯ ದಿವಸ ಹಾಕಿಕೊಳ್ಳಲು ಅವನಿಗೆ ಬೇರೆ ಸೂಟ್ ಇರಲಿಲ್ಲ. ಉದ್ಯೋಗಕ್ಕಾಗಿ ಅಲೆಯುತಿದ್ದುದರಿಂದ ಮರುದಿವಸ

ಆ ಸಂಬಂಧದಲ್ಲಿ ಒಬ್ಬರನ್ನು ನೋಡಬೇಕಾಗಿತ್ತು. ಮೊದಲ ದಿನ ಹೋಗು ವಾಗಲೇ ಕೊಳಕು ಬಟ್ಟೆ ಹಾಕಿಕೊಂಡು ಹೋಗುವುದು ಹೇಗೆ ? ಗೋಪಾಲ " ಇಂತಹ ದಿವ್ಯ ಸಂಗೀತದ ಸೊಬಗನ್ನು ಈ ಹಾಳು ಮಳೆಯ ಬೇಜಾರು ಹಾಳುಮಾಡಿತಲ್ಲ " ಎಂದು ಜಿಗುಪ್ಸೆಪಟ್ಟುಕೊಂಡ.

ಗೋಪಾಲನ ಹಿಂದೆ ಡೆಪ್ಯುಟಿಕಮಿಷನರ್ ಸುಂದರರಾಜ್ ನಿಂತಿದ್ದರು· ಅವರೂ ಮಳೆ ಸ್ವಲ್ಪ ನಿಲ್ಲಲಿ ಎಂದು ನಿರೀಕ್ಷಿಸುತ್ತಿದ್ದರು. ಗೋಪಾಲನಿಗೆ ಅವರ ಪರಿಚಯ ಚೆನ್ನಾಗಿತ್ತು. ಅವನಿಗೆ ಮೊದಲು ಅವರ ಪರಿಚಯ ಆದದ್ದು ಸಂಗೀತ ಕಛೇರಿಗಳಲ್ಲಿಯೇ ? ರಾಮಮಂದಿರದಲ್ಲಿ, ಮೆಜಸ್ಟಿಕ್ ಸಿನಿಮಾ ಮಂದಿರದಲ್ಲಿ, ಮಹಾಜನ ಹಾಲ್‌ನಲ್ಲಿ, ಥಿಯಸಾಫಿಕಲ್ ಹಾಲ್‌ನಲ್ಲಿ, ಎಲ್ಲಿ ಸಂಗೀತ ಕಛೇರಿ ನಡೆದರೂ ಸುಂದರರಾಜ್ ತಪ್ಪದೇ ಬರುತ್ತಿದ್ದರು. ಸಂಗೀತ ಕಛೇರಿ ಸಿನಿಮಾ ಹೊಟಿಲು ಇವುಗಳಲ್ಲಿ ಪರಿಚಯವಾಗುವದು ಬಹಳ ಬೇಗ. ಹೀಗೆ ಕೆಲವು ಕಛೇರಿಗಳಾಗುವದೊರಳಗಾಗಿ, ಸುಂದರರಾಜ್‌ರವರ ಜತೆಯಲ್ಲಿ ಪ್ರತಿ ಕಛೇರಿಗೂ ಅವರ ಮಗಳು ವತ್ಸಲಾ ಬರುತ್ತಿರುವುದು ಗೋಪಾಲನ ಗಮನಕ್ಕೆ ಬಂದಿತು. ಒಂದೊಂದು ದಿನ ಸುಂದರರಾಜ್ ಬರುತ್ತಿರಲಿಲ್ಲ. ಅವರು ಸರ್ಕೀಟ್ ಸಂಚಾರ ಹೋಗುತ್ತಿದ್ದರು ಅಂತ ಕಾಣುತೆ. ಆದರೆ ವತ್ಸಲೆ ಮಾತ್ರ ಯಾವ ಕಛೇರಿಗೂ ತಪ್ಪಿಕೊಳ್ಳುತ್ತಿರಲಿಲ್ಲ. ವತ್ಸಲೆ ಸುಂದರಿಯೇ ಅಲ್ಲವೇ ಎಂಬುದನ್ನು ಗೊಪಾಲ ಯಾವಾಗಲೂ ಗಮನಿಸಿರಲಿಲ್ಲ. ಆ ದೃಷ್ಟಿಯಿಂದ ಅವಳನ್ನು ನೋಡಬೇಕು ಎಂದು ಅವನಿಗೆ ಯಾವಾಗಲೂ ಎನ್ನಿಸಿರಲಿಲ್ಲ. ಆದರೆ ಅವಳ ಸಂಗೀತದ ಅಭಿಲಾಷೆ ಕಂಡು ಅವನಿಗೆ ಬಹಳ ತೃಪ್ತಿಯುಂಟಾಗಿತ್ತು. " ಹುಡುಗಿಯರು ಹೀಗಿರಬೇಕು. ಸಂಗೀತ ಸಾಹಿತ್ಯ ನರ್ತನಗಳಲ್ಲಿ ನುರಿತವರಾಗಿರಬೇಕು. ಅದು ಅವರಿಗೆ ಭೂಷಣ. ಉಳಿದ ಈ ಬೆಳ್ಳಿ ಚಿನ್ನ ಕಬ್ಬಿಣಗಳ ಭೂಷಣ ಯಾರು ಬೇಕಾದರೂ ಹಾಕಿ ಕೊಳ್ಳಬಹುದು. ಸಂಗೀತ ಅರಿತ ಗಂಡನಿಗೆ ಸಂಗೀತ ತಿಳಿದ ಹೆಂಡತಿ ಈ ಹಾಳು ಜಗತ್ತಿನಲ್ಲಿ ಎಲ್ಲಿ ದೊರಕುತ್ತಾಳೆ ? ಈ ಅನ್ಯಾಯದ ಜಗತ್ತಿನಲ್ಲಿ ಅಂತಹ ನ್ಯಾಯ ಎಲ್ಲಿದೆ ? ಇಂತಹ ಈ ರಸಿಕಳಿಗೆ ಅದಾವ ಮಡಿಯ ಗಂಟು ಬೀಳುತ್ತಾನೊ " ಎಂದುಕೊಳ್ಳುತ್ತಿದ್ದನು. " ಅಥವ ನನಗೆ ಈ ಯೋಚನೆ ತಾನೆ ಏಕೆ ? ಅವಳಿಗೆ ಮದುವೆಯಾಗಿದ್ದರೂ ಆಗಿದ್ದಿರಬಹುದು. ಆ ಮನ್ಮಥ

ಇನ್ನು ಹೇಗಿರ್ತಾನೋ" ಎಂದುಕೊಂಡು. ಆದರೆ ಪ್ರತಿಯೊಂದು ಕಛೇರಿಯಲ್ಲಿಯೂ ಗೋಪಾಲ ಸ್ತ್ರೀಯರು ಕುಳಿತುಕೊಳ್ಳುವ ಕಡೆ ನೋಡಿ ಅಲ್ಲಿಗೆ ವತ್ಸಲೆಯು ಬಂದಿರುವುದನ್ನು ಖಾತರಿಮಾಡಿಕೊಳ್ಳುತ್ತಿದ್ದನು.

ಇಶ್ವೈವಾಣಿಯ ಸಂಗೀತದ ದಿನ ಗೋಪಾಲ ತನ್ನ ಹಿಂದೆ ನಿಂತಿದ್ದ ಸುಂದರರಾಜ್ಜ ಅವರನ್ನು ನೋಡಿ "ಮಳೆ ಬಹಳ ಜೋರಾಗಿದೆ. ಮನೆ ಮುಟ್ಟೋದೆ ಕಷ್ಟ" ಎಂದನು. ಟಿಕೆಟ್ ಕೊಡುವ ಮೇಜಿನ ಮುಂದಲ ಕುರ್ಚಿಯ ಮೇಲೆ ವತ್ಸಲೆ, ತಂದೆ ಹೊರಡುವುದನ್ನು ನಿರೀಕ್ಷಿಸುತ್ತಾ ಕುಳಿತಿದ್ದಳು ಸುಂದರರಾಜ್ಜ ಅವಳ ಕಡೆ ನೋಡಿದರು. ಒಂದು ಕ್ಷಣ ಮಟ್ಟಿಗೆ ತಂದೆಗೂ ಮಗಳಿಗೂ ಏನೋ ಸಂಜ್ಞೆಯ ಸಂಭಾಷಣೆ ನಡೆಯಿತೊ ಎನ್ನುವಂತೆ ಗೋಪಾಲನಿಗೆ ತೋರಿತು. ಆದರೆ ಅವನಿಗೆ ಆದಕ್ಕೆ ಯಾವ ಅರ್ಥವನ್ನೂ ಕಲ್ಪಿಸುವುದು ಹೊಳೆಯುಲಿಲ್ಲ. ಸುಂದರರಾಜನ್‌ರು "ಮಿಸ್ಟರ್ ಗೋಪಾಲ್ ನನ್ನ ಕಾರಿನಲ್ಲಿ ನಿಮಗೆ ಒಂದು ಲಿಫ್ಟ್ ಕೊಡುತ್ತೇನೆ ಬನ್ನಿ. ಹೇಗೂ ನನ್ನ ಮನೆ ನಿಮ್ಮ ದಾರಿಯೇ" ಎಂದರು. ಗೋಪಾಲನು "ಬೇಡ ನಿಮಗೆ ಯಾಕೆ ಶ್ರಮ" ಎಂದನು. ಸಂದರರಾಜನ್‌ನು "ಶ್ರಮವೆಲ್ಲಿ ಬಂತು. ನಾನೇನು ನಿಮಗಾಗಿ ಹೆಚ್ಚಿಗೆ ಪೆಟ್ರೋಲ್ ಖರ್ಚು ಮಾಡಬೇಕೆ" ಎಂದರು. ಕೂಡಲೇ ಗಾಡಿಯು ಬಾಗಿಲಿಗೆ ಬಂತು. ವತ್ಸಲೆಯು ಹೊರಟಳು. ಸುಂದರರಾಜನ್ ಗೋಪಾಲನ ಕೈಹಿಡಿದುಕೊಂಡು ಗಾಡಿಯಲ್ಲಿ ಹೋಗಿ ಕುಳಿತರು. ಮೋಟಾರು ಒಂಟಿಕೊಪ್ಪಲು ಕಡೆ ಹೊರಟಿತು. ಸುಂದರರಾಜನ್‌ರವರು "ನೀವೇ ಹಿಂದಲ ಸೀಟಿನಲ್ಲಿ ಕುಳಿತುಕೊಳ್ಳಿ" ಎಂದು ಬಲಾತ್ಕರಿಸಿದರೂ ಕೇಳದೆ ಗೋಪಾಲ ಮುಂದುಗಡೆ ಡ್ರೈವರನ ಮಗ್ಗುಲಲ್ಲಿಯೇ ಕುಳಿತುಕೊಂಡನು.

ಅದು ಒಳ್ಳೆಯ ಸಿಡನ್ ಕಾರು. ಒಳಗೆ ಹಸಿರು ಬಣ್ಣದ ಒಂದು ಸಣ್ಣ ಬಲ್ಬು ಹಾಕಿತ್ತು. ಮಳೆಯ ದೆಸೆಯಿಂದ ಎಲ್ಲಾ ಬಾಗಿಲುಗಳನ್ನೂ ಮುಚ್ಚಿತ್ತು. ಒಳಗೆ ಬೆಚ್ಚಗೆ ಬಹಳ ಹಿತವಾಗಿತ್ತು. ಕಾರು, ಕಾರೇ ಆದರೂ ಗಂಧರ್ವಮಾರ್ಗದಲ್ಲಿ ಹೋಗುತ್ತಿರುವ ಪುಷ್ಪಕದಂತೆ ತೋರಿತು. ಹಿಂದಲ ಸೀಟ್‌ನಿಂದ ಅತಿ ಮನೋಹರವಾದ ಜಾಜಿಯ ಹೂವಿನ ವಾಸನೆಯೂ ಮತ್ತಾವುದೋ ಸೆಂಟಿನ ಗಮವೂ ತೇಲಿತೇಲಿ ಅಲೆಯ ಹಿಂದೆ ಅಲೆಯಾಗಿ ಬೀಸಿ, ಗೋಪಾಲನನ್ನು ಪ್ರಫುಲ್ಲಿತನನ್ನಾಗಿ ಮಾಡಿದುವು. ಪದೇಪದೆ ಸುಂದರ

ರಾಜನ್ ಅವನ ಹೆಗಲಿನ ಮೇಲೆ ಕೈಯಿಟ್ಟು ಅಂದಿನ ಇಶ್ಶೈವಾಣಿಯ ಸಂಗೀತ ವನ್ನೂ ಅವಳು ಹಾಡಿದ ಕೀರ್ತನೆಗಳ ಮಾಧುರ್ಯವನ್ನೂ, ಪಾಡಿದ ಆಲಾ ಪನೆಯ ಇಂಪನ್ನೂ ಕುರಿತು ಚರ್ಚಿಸುತ್ತಿದ್ದರು. ಗೋಪಾಲನೂ ಸರಿಯಾದ ಪ್ರತ್ಯುತ್ತರವನ್ನು ಕೊಡುತ್ತಿದ್ದನು. ನಡುನಡುವೆ ವತ್ಸಲೆಯೂ ಮಾತನಾಡು ತ್ತಿದ್ದಳು. ಗೋಪಾಲ ವತ್ಸಲೆಯನ್ನು ನೋಡಿ ನೋಡಿ ದಣಿಯಲಿಲ್ಲ. ಅದೇನು ಆದೀಪದ ಮಹಿಮೆಯೋ ಆ ಸಂಗೀತವನ್ನು ಕೇಳಿದ್ದ ಮತ್ತೋ, ಗೋಪಾಲನು ಪೂರ್ಣವಾಗಿ ವತ್ಸಲೆಯ ದಾಸನಾದನು. ಇವಳನ್ನು ಹೆಂಡತಿ ಯಾಗಿ ಹೊಂದಿದವನು ಅದಾವ ಭಾಗ್ಯವಂತನೋ ಎಂದು ಅವನು ಯೋಚಿಸು ತ್ತಿರುವಾಗ ಸುಂದರರಾಜನ್‌ರವರು "ಇಷ್ಟು ಹೊತ್ತಿನಲ್ಲಿ ಹೋಟಲಿನಲ್ಲಿ ಎಲ್ಲಿ ಹೋಗಿ ಊಟ ಮಾಡುತ್ತೀರಿ ನಮ್ಮ ಮನೆಗೇ ಬಂದುಬಿಡಿ" ಎಂದರು. ಅಂತರಿಕ್ಷದಲ್ಲಿ ಹಾರುತ್ತಿರುವ ಹಕ್ಕಿಯಂತೆ ಯಾವುದನ್ನೋ ಕುರಿತು ಯೋಚಿ ಸುತ್ತಿದ್ದ ಗೋಪಾಲನಿಗೆ ಥಢಿರನೆ ತಾನು ಎಲ್ಲಿರುವನೆಂಬ ಜ್ಞಾನವುಂಟಾ ಯಿತು. ಅವನು "ಬೇಡ ಕಾರು ಇಲ್ಲಿ ನಿಲ್ಲಿಸಿ. ಈ ಕ್ರಾಸ್‌ನಲ್ಲಿರುವ ನನ್ನ ಕೊಠಡಿಗೆ ಹೋಗುತ್ತೇನೆ" ಎಂದನು. ಸುಂದರರಾಜನ್‌ರವರು ಡ್ರೈವರನ್ನು ಕ್ರಾಸ್‌ನಲ್ಲಿ ಕಾರ್ ಬಿಡುವಂತೆ ಹೇಳಿದರು. ತನ್ನ ಕೊಠಡಿಯಿದ್ದ ಮನೆಯ ಹತ್ತಿರಕ್ಕೆ ಬಂದಕೂಡಲೇ ಗೋಪಾಲನು ಕಾರನ್ನು ನಿಲ್ಲಿಸಿ ಸುಂದರರಾಜನ್ ರವರಿಗೆ ವಂದಿಸಿ "ನಿಮ್ಮಿಂದ ಬಹಳ ಉಪಕಾರವಾಯಿತು" ಎಂದನು. ಸುಂದರ ರಾಜನ್‌ರವರು "ಇದೇನು ಮಹಾ. ಇನ್ನು ನಿಮ್ಮ ಕೊಠಡಿ ತಿಳಿಯಿತಲ್ಲ. ಪದೇಪದೇ ಸೇರೋಣ" ಎಂದರು. "ಯಾವಾಗ ಬೇಕಾದರೂ ದಯ ಮಾಡಿಸಿ. ನನಗಂತೂ ಯಾವ ಕೆಲಸವೂ ಇಲ್ಲ. ಹೋಟಲಿನಲ್ಲಿ ಊಟ ಮಾಡುವುದು. ಸಿನಿಮಾಗಳಿಗೆ ಹೋಗುವುದು. ಇಷ್ಟೆ" ಎಂದನು ಗೋಪಾಲ.

ಗೋಪಾಲ ಸುಂದರರಾಜನ್ ಅವರಿಗೆ ವಂದಿಸಿ ಕಾರಿನಿಂದ ಕೆಳಕ್ಕೆ ಇಳಿದು ವತ್ಸಲೆ ಕುಳಿತಿದ್ದ ಕಡೆ ಹೋಗಿ ಅವಳಿಗೂ ಕೈಮುಗಿದು "ಹೋಗಿ ಬರ್ತೀರಾ" ಎಂದ. ವತ್ಸಲೆ ಗೋಪಾಲನಿಗೆ ಕೈಮುಗಿದು ಹೂ ಎಂದಳು. ಗೋಪಾಲನಿಗೆ ಅವಳು ಕೈಮುಗಿದುದೂ ಕೂಡ ಅವನು ನೋಡಿದ್ದ ಅಜಂತ ಗುಹಾಂತರ್ಗತ ದೇವಾಲಯದ ಒಂದು ಬೊಂಬೆಯ ನಿಲುವಿನಂತೆ ತೋರು ತ್ತಿದ್ದಿತು. ಮುಖ್ಯ ಗೋಪಾಲನಿಗೆ ವಯಸ್ಸು ಇಪ್ಪತ್ತೈದು ಆಗಿತ್ತು,

ಮದುವೆಗೆ ಅವನು ಕಾತುರನಾಗಿದ್ದ. ಆ ರಾತ್ರಿ ಗೋಪಾಲನಿಗೆ ಬಹಳ ಹೊತ್ತು ನಿದ್ರೆ ಬರಲಿಲ್ಲ. ಅವನು ಕಣ್ಣುಮುಚ್ಚಿದ ಕೂಡಲೇ ಒಂದು ಕಡೆ ಇಶ್ವೈವಾಣಿಯೂ ಮತ್ತೊಂದು ಕಡೆ ವತ್ಸಲೆಯೂ ಅವನಿಗೆ ಕಾಣುತ್ತಿದ್ದರು. ವತ್ಸಲೆಗೆ ಬಹುಶಃ ಮದುವೆಯಾಗಿಲ್ಲದೆ ಇರಬಹುದು ಎಂಬುದು ಆ ಬಡ ಪ್ರಾಣಿಗೆ ಹೊಳೆಯಲಿಲ್ಲ. ಗಾಳದ ತಿಂಡಿಯನ್ನು ನುಂಗಲು ಬರುತ್ತಿರುವ ಮೀನು, ಆ ತಿಂಡಿಯಲ್ಲಿರುವ ಮುಳ್ಳನ್ನು ಅರಿತಿರುವುದೇ ?

## ೬. ಮೀನು ಬಲೆಗೆ ಬಿತ್ತು.

ಡೆಪ್ಯುಟಿ ಕಮಿಶನರ್ ಸುಂದರರಾಜನ್ ಬರಿಯ ' ಸರ್ವಿಸ್ ' ಬಲದಿಂದಲೇ ಡೆಪ್ಯುಟಿ ಕಮಿಶನರಾದವರು. ಈ ಕಥೆ ಬರೆಯುವ ಕಾಲಕ್ಕೆ ಅವರಿಗೆ ವಯಸ್ಸು ಅರವತ್ತು ಆಗಿತ್ತು. ಆದರೆ ಸರ್ಕಾರಿ ಹುದ್ದೆಗೆ ಸೇರುವಾಗ, ಮಹಾರಾಜರ ಮತ್ತು ಪ್ರಜೆಗಳ ಸೇವೆಯನ್ನು ಆದಷ್ಟು ಹೆಚ್ಚುಕಾಲ ಮಾಡಬೇಕೆಂದು ಅವರಿಗೆ ಆಸೆಯಿದ್ದುದರಿಂದ ಅವರು ತಮ್ಮ ವಯಸ್ಸನ್ನು ಸ್ವಲ್ಪ ಕಡಿಮೆ ಹಾಕಿದ್ದರು. ಅವರ ಈ ಮುಂದಾಲೋಚನೆ ಅವರಿಗೆ ಬಹಳ ಅನುಕೂಲವಾಯಿತು. ಯಾಕೆಂದರೆ ನಿವೃತ್ತರಾಗುವ ವಯಸ್ಸು ಬಂದವರಿಗೂ ಒಂದು ಎರಡು ಮೂರು ವರ್ಷ ಜೀವದಾನ ಮಾಡಿ ಆ ಪಿಂಜರಾಪೋಲು ಅರಳುಮರುಳರ ಕೈಯ್ಯಲ್ಲಿ ಅಧಿಕಾರವನ್ನು ಕೊಡುವ ಯಾವ ರಾಜ್ಯದಲ್ಲಿಯೂ, ಸುಂದರರಾಜನ್‌ರವರು ತಮ್ಮ ಸರಿಯಾದ ವಯಸ್ಸನ್ನು ಹಾಕಿದ್ದರೆ ನಿವೃತ್ತರಾಗಿ ಎಷ್ಟೋ ವರುಷಗಳಾಗಬೇಕಾಗಿತ್ತು.

ಸುಂದರರಾಜನ್ ಮೂವತ್ತು ರುಪಾಯಿ ಸಂಬಳದಿಂದ ೮೦೦ ರುಪಾಯಿ ಸಂಬಳಕ್ಕೆ ಬಂದವರು. ಆದುದರಿಂದ ಅವರಿಗೆ ತಾನು ಉದ್ಧಕ್ಕೂ ತನ್ನ ಕಾಲಿನಮೇಲೆ ನಿಂತುಕೊಂಡು ಬಂದೆ ಎಂಬ ಹೆಮ್ಮೆ ಬಹಳವಾಗಿತ್ತು. ಅವರು ಯಾವ ಮಾತಿಗೂ ಮುಂಚೆ " ನಾನು ಹೆಡ್‌ಕ್ಲಾರ್ಕಾಗಿ ನನ್ನ ಜೀವನ ಪ್ರಾರಂಭಿಸಿದಾಗ " ಎಂದೇ ಮಾತನ್ನು ಪ್ರಾರಂಭಿಸುತ್ತಿದ್ದರು. ಇದನ್ನು ಕೇಳಿ ಕೇಳಿ ಬೇಜಾರುಪಟ್ಟುಕೊಂಡಿದ್ದ ಅವರ ಕೆಲವು ಆಪ್ತಸ್ನೇಹಿತರು " ಸದ್ಯ ನಿನ್ನ ಆತ್ಮಕಥೆ ಸಾಕು ಬಿಡಪ್ಪ " ಎಂದು ಗದರಿಸಿಬಿಡುತ್ತಿದ್ದರು.

ಈ ರೀತಿ ಸುಂದರರಾಜನ್ ಹಳೆಯ ಕಾಲದ ಮನುಷ್ಯರಾದರೂ ಅವರ ನಡವಳಿಕೆಗಳೂ ಅಭ್ಯಾಸಗಳೂ ಬಹಳ ಆಧುನಿಕವಾಗಿ "ಟಿಪ್ ಟಾಪ್" ಆಗಿದ್ದವು. ಅವರ ಉಡುವು ಬೂಟ್ಸು ನೆಕ್‌ಟೈ ರುಮಾಲು, ಮಕ್ಕಳು ಹಾಕಿಕೊಳ್ಳುವಂತಹ ಬಣ್ಣ ಬಣ್ಣದ ಟೋಪಿ ಇವುಗಳಲ್ಲಿ ಅವರು ತೋರಿಸುತ್ತಿದ್ದ ಶಿಸ್ತು, ಅವರ ಹೆಂಡತಿಯವರಿಗೇ ಅಸಹ್ಯಕರವಾಗಿ ಕಾಣಿಸುತ್ತಿದ್ದಿತು. ಸುಂದರರಾಜರ್ ತಮಗೆ ದೇಹದಲ್ಲಿ ಸ್ವಾಭಾವಿಕವಾಗಿ ಇಲ್ಲದ ಯೌವನವನ್ನು ಈ ರೀತಿ ಉಡುಪು ಆಡಂಬರಗಳಿಂದ ತೋರಿಸಲು ಪ್ರಯತ್ನಿಸುತ್ತಿದ್ದರು.

ಸುಂದರರಾಜನ್ ಹಳ್ಳಿಯಲ್ಲಿ ಹುಟ್ಟಿದವರಾದರೂ ಅವರಿಗೆ ಹಳ್ಳಿಯನ್ನೂ ಹಳ್ಳಿಯ ಜನರನ್ನೂ ಕಂಡರೆ ಆಗುತ್ತಿರಲಿಲ್ಲ. ಹಳ್ಳಿಯವರು ಅಂದರೆ ಸಾಕು. ಅವರು ಉರಿದು ಉರಿದು ಬೀಳುತ್ತಿದ್ದರು. ಈ ಸೋಮಾರಿಗಳಾದ ಯಾವುದಕ್ಕೂ ಕೆಲಸಕ್ಕೆ ಬಾರದ ಅನಾಗರಿಕರು ಎಂದೇ ಅವರು ಹಳ್ಳಿಯವರನ್ನು ಸಂಭೋದಿಸುತ್ತಿದ್ದರು. ಹಳ್ಳಿಯಲ್ಲಿ ವಾಸವಾಗಿದ್ದ ಅವರ ಸ್ವಂತ ಅಣ್ಣತಮ್ಮಂದಿರನ್ನೂ ಬಂಧುಗಳನ್ನೂ ಕಂಡರೂ ಅವರಿಗೆ ಸರಿಹೋಗುತ್ತಿರಲಿಲ್ಲ. ಈ ಅಭ್ಯಾಸ ಅವರಿಗೆ ತಾವು ಅಮಲ್ದಾರರಾದಾಗಲೇ ಪ್ರಾರಂಭವಾಯಿತು. ಅಮಲ್ದಾರರಾದಾಗ ಮೊದಲು ಮೊದಲು ಅವರು ಹಳ್ಳಿಗಳಿಗೆ ಹೋಗಿ, ಹಳ್ಳಿಗಳಲ್ಲಿ ತಮ್ಮ ಜಮಾಬಂದಿ ದರ್ಬಾರನ್ನು ನಡೆಸುತ್ತಿದ್ದಾಗ ಅವರ ದರ್ಪ ಅವರಿಗೆ ಅನುಭವವಾಯಿತು. ಒಬ್ಬ ಅಮಲ್ದಾರನೇ ತಾಲ್ಲೂಕಿಗೆ ಎಷ್ಟು ಕಿರುಕುಳ ಕೊಡಬಹುದು ಎಂಬುದು ಅವರಿಗೆ ಚೆನ್ನಾಗಿ ಗೊತ್ತಾಯಿತು. ಸಂಬಂಧಪಟ್ಟವರ ಒಂದು ವ್ಯವಸ್ಥಿತವಾದ ಪಿತೂರಿಯ ಕಾರಣದಿಂದಲೇಯೋ ಎಂಬಂತೆ ಅಜ್ಞಾನಾಂಧಕಾರದಲ್ಲಿ ಮುಳುಗಿ ಪೂರ್ಣವಾಗಿ ನಿರಕ್ಷರಿಗಳಾಗಿರುವ ರೈತರ ಮೇಲೆ ಜಬರ್ ತೋರಿಸುತ್ತಾ ಬಂದೆಂತೆಲ್ಲಾ, ಅಮಲ್ದಾರರಿಗೆ ರೈತರಲ್ಲಿ ತಿರಸ್ಕಾರವುಂಟಾಗತೊಡಗಿತು. ತಾನು ಯಾರ ಧಣಿಯೋ ಅವನನ್ನು ತಿರಸ್ಕಾರದಿಂದ ಕಾಣುವುದು ಧಣಿಯಾದವನ ಹುಟ್ಟು ರಾಕ್ಷಸಪ್ರವೃತ್ತಿ. ತಮ್ಮ ಅಧಿಕಾರ ತಮ್ಮ ರೈತರ ಬಲದಿಂದ ಬಂದಿದೆ ಎಂಬುದನ್ನು ಸುಂದರರಾಜರ್ ಮರೆತರು. ಮೇಲಧಿಕಾರಿಗಳ ಬೂಟ್ಸುಗಳನ್ನು ಅವರು ಚನ್ನಾಗಿ ತಿಕ್ಕುತ್ತಿದ್ದುದರಿಂದ ಆ ಅಧಿಕಾರಿಗಳು ಸುಂದರರಾಜರ್‌ರಿಂದ ರೈತರಿಗೆ ಕಿರುಕುಳವಾಗಿದೆಯೇ ಇಲ್ಲವೇ ಎಂಬುದನ್ನು ಸ್ವಲ್ಪವೂ ವಿಚಾರಿಸದೆ, "ಅವರು ದಕ್ಷರೇ ?

ಜನರನ್ನು ಸರಿಯಾಗಿ ಲೂಟಿಮಾಡಿ ಸರ್ಕಾರದ ಬೊಕ್ಕಸವನ್ನು ತುಂಬಿಸುತ್ತಿದ್ದಾರೆಯೇ ?" ಇಷ್ಟು ಮಾತ್ರ ನೋಡಿಕೊಳ್ಳುತ್ತಿದ್ದರು.

ಸುಂದರರಾಜ್ ಅಮಲ್ದಾರರಾದ ಕೂಡಲೆ ಅವರ ಹೆಂಡತಿ ಸುಂದರಮ್ಮನವರೂ ಅಮಿಲ್ದಾರಿಣಿಯೇ ಆದರು. ಅವರಿಗೆ ಇಪ್ಪತ್ತುನಾಲ್ಕು ಗಂಟೆಯೂ ಅಮಿಲ್ದಾರಿಯನ್ನ ಕುರಿತೇ ಮಾತಾಯಿತು. ಸುಂದರರಾಜನ್ ಅಮಲ್ದಾರರಾಗಿದ್ದಾಗ, ಸಂದರಮ್ಮನವರೇ ಅವರಿಗೆ ಚೆನ್ನಾಗಿ ಬೋಧಿಸಿ ಅವರು ಇದ್ದ ತಾಲ್ಲೂಕಿನ ೨-೩ ಹಳ್ಳಿಗಳಲ್ಲಿ ಬೀಳಿಗೆ ಬಿದ್ದಿದ್ದ ಅನೇಕ ಜಮೀನುಗಳನ್ನೂ ಒಂದು ತಾಲ್ಲೂಕಿನ ಒಂದು ಜೋಡಿಗ್ರಾಮವನ್ನೂ ಹರಾಜಿನಲ್ಲಿ ತಮ್ಮ ಹೆಸರಿಗೆ ನಿಲ್ಲಿಸಿಕೊಂಡರು. ಒಂದು ಸಲ ಈ ವಿಚಾರದಲ್ಲಿ ಅಮಲ್ದಾರರ ಮೇಲೆ ಸರ್ಕಾರಕ್ಕೆ ಒಂದು ಮೂಗರ್ಜಿ ಹೋಯಿತು. ಆದರೆ ಏನು ಕಾರಣವೋ ಅದು ಮುಂದೆ ಏನಾಯಿತೆಂಬುದು ತಿಳಿಯಲಿಲ್ಲ. ಸುಂದರಮ್ಮನವರು ಈಗಲೂ "ಕೈನಡೆಯುತ್ತಿರುವಾಗ ಮಾಡುವ ಹೊತ್ತಿಗೆ ಇಂತಹ ದುರ್ಭಿಕ್ಷಕಾಲದಲ್ಲಿಯೂ ನೂರಾರು ಖಂಡುಗ ಭತ್ತ ಬರುವಂತಾಗಿದೆ" ಎಂದು ಹೇಳುತ್ತಿದ್ದಾರೆ.

ಸುಂದರರಾಜ್ ಹೀಗೆ ಸುದ್ಯಪಾನ ಮಾಡಿದ ಮರ್ಕಟದಂತೆ ಕುಣಿಯುತ್ತಿರುವಾಗ ಅವರ ಮನೆಗೆ ಅವರ ಅನೇಕ ಬಡವರಾದ ಬಂಧುಗಳೂ ಹಳ್ಳಿಯವರೂ ಒಂದೊಂದುಸಲ ಬರುತ್ತಿದ್ದರು. ಸುಂದರರಾಜರ ಸ್ವಪ್ರತಿಷ್ಠೆಯೂ ಬಂದ ಸುಂದರಮ್ಮನವರ ಪೆದ್ದುಪ್ರತಿಷ್ಠೆಯೂ ಅವರಿಗೂ ಅವರಲ್ಲಿ ತಿರಸ್ಕಾರವನ್ನು ಹುಟ್ಟಿಸುತ್ತಿದ್ದುವು. "ಅಯ್ಯೋ ಇವನ ಜಂಭವೇ ? ಯಾರೂ ಮಾಡದಿರುವ ಅಧಿಕಾರ ಇವ ಮಾಡ್ತಾನೆಯೇ. ಇವನು ಹಿಂದಲ ನಮ್ಮ ಊರಿನ ಸುಂದರರಾಜನಲ್ಲ. ಅಮಲ್ದಾರ್ ಸುಂದರರಾಜ. ಇನ್ನು ಇವನ ಹತ್ತಿರ ಬಂದು ಮಾತುಕತೆ ಆಡುವುದು ಕಷ್ಟ" ಎಂದುಕೊಂಡು ಅವರಲ್ಲಿಗೆ ಬರುವುದನ್ನೇ ಬಿಟ್ಟರು.

ಬರಿಯ ಸರ್ವಿಸ್ ಮೂಲಕವೇ "ಮೇಲಕ್ಕೆ ಬರಬಹುದಾದ ದೇಶದಲ್ಲಿ ಅಮಲ್ದಾರರಾದವರು, ಸಬ್‌ಡಿವಿಜನ್ ಸಾಹೇಬರು ಆಗಲೇಬೇಕಲ್ಲ. ಕಾಲಾನುಕಾಲಕ್ಕೆ ಸುಂದರಮ್ಮನವರು, ಸಬ್‌ಡಿವಿಜನ್ ಅಮ್ಮಾವರೂ, ಡೆಪ್ಯುಟಿ ಕಮಿಷನರ್ ಅಮ್ಮಾವರೂ ಆದರು. ಡೆಪ್ಯುಟಿಕಮಿಷನರಾಗಿ ಬರುವ ವೇಳೆಗೆ

ಸುಂದರರಾಜರವರ ಸಂಸಾರದಲ್ಲಿ ಐದು ಹೆಣ್ಣುಮಕ್ಕಳೂ ಐದು ಗಂಡ ಮಕ್ಕಳೂ ಆದರು. ಮದುವೆಯಾದನಂತರ ಕೆಲವು ಕಾಲದವರೆಗೆ ಮಕ್ಕಳಾಗದೆ ಇದ್ದು ಅನಂತರ ಹುಚ್ಚು ಬಿಡಿಸುವಂತೆ ಒಂದೇ ಸಮನೆ ಒಂದರ ಮೇಲೆ ಒಂದರಂತೆ ಮಕ್ಕಳಾಗುತ್ತಾ ಬಂತು. ಮನೆ ಮಕ್ಕಳಿಂದ ತುಂಬಿ ಕಿಕ್ಕಿರಿದು ಕಿರೋ ಎನ್ನುತ್ತಿದ್ದಿತು. ಹಿರಿಯ ಹುಡುಗಿ ಸೀತೆಗೆ ಮದುವೆಯಾದಾಗ ಹದಿನಾರು ವಯಸ್ಸು. ಅಷ್ಟು ಲಕ್ಷಣವಾದವಳಲ್ಲ. ಡೆಪ್ಯುಟಿಕಮಿಷನರ ಮಗಳಾದ ಮಾತ್ರಕ್ಕೆ ಕುರೂಪಿಯನ್ನು ಮದುವೆಯಾಗುವ ಕುರುಬ ಯಾರು? ಸಾಲುದುದಕ್ಕೆ ಸುಂದರಮ್ಮ "ಅಳಿಯ ಅಂತ ಆದರಾಯಿತು. ಅವನೇನು ದುಡಿದು ಹೆಂಡತಿಗೆ ತಂದುಹಾಕಬೇಕೆ ? ಮಗಳೂ ಅಳಿಯ ಇಬ್ಬರೂ ಮನೇಲಿ ಇರಲಿ. ಮೈಮೇಲೂ ಎರಡುಸಾವಿರ ರೂಪಾಯಿ ನಗ ಬೇರೆ ಹಾಕಿದ್ದೀನಿ" ಎನ್ನುತಿದ್ದರು. ಸುಂದರರಾಜರ ತಂಗಿ ಲಕ್ಷ್ಮಿಯ ಮಗ ಮಾಧು ಬಿ.ಎ. ಪ್ಯಾಸು ಮಾಡಿ ಒಳ್ಳೆಯ ಲಾಯಕ್ಕಾದ ವರನಾಗಿದ್ದನು. ಆದರೆ ಸುಂದರಮ್ಮ ಸಬ್‌ಡಿವಿಜನ್ ಅಮ್ಮಾ ಆಗಿದ್ದಾಗ ಅವರು ಬಂದು ಸುಂದರಮ್ಮನನ್ನು ನೋಡಿಕೊಂಡು "ಇವರ ಜಂಭಕ್ಕೆ ಬೆಂಕಿ ಹಾಕಿತು. ಇಂದು ಕಣ್ಣೇ ಬಿಡಲಾರದು" ಎಂದುಕೊಂಡು ಹೋಗಿದ್ದರು. ಅಲ್ಲಿಂದ ಈಚೆಗೆ ಒಂದೆರಡು ಸಲ ಲಕ್ಷ್ಮಿಯ ಗಂಡ ಮೈಸೂರಿಗೆ ಬಂದು ಬಾಂಧವ್ಯವನ್ನು ಬಲಪಡಿಸಿಕೊಳ್ಳಬೇಕೆಂದು ಸುಂದರರಾಜರ ಮನೆಗೆ ಹೋದಾಗ ಸುಂದರರಾಜ ಮನೆಯಲ್ಲಿ ಇರಲಿಲ್ಲ. ಸುಂದರಮ್ಮ ಭಾವ ಎಲ್ಲಿ ಎಂದರೆ ಇಲ್ಲ ಎಂದುಬಿಡುತ್ತಿದ್ದರು. ಅವಳಿಗೆ "ಈ ಬಡ ಬಂಧುಗಳು ಗಂಡನನ್ನ ಏನು ಕೇಳೋದಕ್ಕೆ ಬಂದಿದ್ದಾರೊ" ಎಂದು ಭಯ. ಹೀಗೆ ಒಂದೆರಡು ಸಲ ನಡೆದದ್ದು ತಿಳಿದಕೂಡಲೆ ಲಕ್ಷ್ಮಿಯು ಗಂಡನಿಗೆ "ಇನ್ನು ಅವರ ಮನೆಗೆ ಹೋಗಬೇಡಿ. ನಮ್ಮಂತಹ ಬಡ ಬಂಧುಗಳನ್ನು ಒಪ್ಪಿಕೊಳ್ಳುವುದರಿಂದ ಅವರಿಗೆ ಬಹಳ ಅವಮಾನವಾಗುತ್ತೆ" ಎಂದಳು. ಅನಂತರ ಅಣ್ಣನೂ ತಂಗಿಯೂ ಒಬ್ಬರನ್ನೊಬ್ಬರು ಹತ್ತು ವರುಷ ನೋಡಲಿಲ್ಲ.

ಆ ವೇಳೆಗೆ ಮಾಧು ಬಿ. ಎ. ಪ್ಯಾಸ್ ಮಾಡಿದ. ಸುಂದರರಾಜರಿಗೆ ಇದ್ದಕ್ಕಿದ್ದಂತೆ ತಂಗಿಯ ಜ್ಞಾಪಕ ಬಂತು. ಆದರೆ ಮೊದಲಿನಿಂದಲೂ ತಿರಸ್ಕೃತರೆಂದು ತಿಳಿದುಕೊಂಡ ಬಡಬಂಧುಗಳೊಡನೆ, ಮದುವೆಯಾಗುವ

ಹೆಣ್ಣಿದೆ ಎಂದುಕೊಂಡು ನಗುನಗುತ್ತಾ ಮಾತನಾಡಿಸಲು ಹೋದರೆ, ಬಡವ ರಾದರೂ ಮರುಳರಾಗುತ್ತಾರೆಯೇ ? ಆದರೂ ಲಕ್ಷ್ಮಿ, ಸೀತೆಯನ್ನು ಮದುವೆ ಮಾಡಿಕೊ ಎಂದು ಮಾಧುವಿಗೆ ಹೇಳಿದಳು. ಮಾಧು ಕೇಳಲಿಲ್ಲ. "ನಮಗೆ ಅವರಿಗೆ ಬಳಿಕೆ ತಪ್ಪಿ ಎಷ್ಟೋ ವರುಷಗಳಾದವು. ಯಾರಾದರೂ ಬಡವರ ಹೆಣ್ಣನ್ನು ಮದುವೆ ಆಗ್ತೇನೆ" ಎಂದುಬಿಟ್ಟ. ಸುಂದರಮ್ಮನವರು ಅವರ ಎದುರಿಗೆ ಐದಾರು ಸಲ ತಮ್ಮ ಕಾರಿನ ಡ್ರೈವರನ್ನು ಕುರಿತು "ಕೃಷ್ಣಯ್ಯ ಚೆಟ್ಟಿ ಸೀತೆಯ ಚೈನು ಇವತ್ತು ಕೊಡುತ್ತೇನೆ ಅಂತ ಹೇಳಿದ್ದ. ಜ್ಯೂಯಲರಿ ಹಾಲಿನಲ್ಲಿ ಸೀತೆಗೆ ವಜ್ರದ ಓಲೆ ಕಟ್ಟಲು ಹೇಳಿದ್ದದು ಇವತ್ತು ಸಿದ್ಧವಾಗಿರ ಬೇಕು. ಬರುವಾಗ ಸೀರೆ ಎಂಪೋರಿಯಮ್‌ನಲ್ಲಿ ಆರಿಸಿಟ್ಟಿರುವ ನಾಲ್ಕು ಸೀರೆ ಗಳನ್ನೂ ತೆಗೆದುಕೊಂಡು ಹೋಗಬೇಕು. ಬ್ಯಾಂಕ್ ಮಾರ್ಗವಾಗಿ ಈ ಅಂಗಡಿಗಳ ಮೇಲೆ ಮನೆಗೆ ಹೋಗೋಣ" ಎಂದು ಹೇಳಿದುದೆಲ್ಲ ವ್ಯರ್ಥ ವಾಯಿತು.

ಅದುವರೆಗೆ ಯಾವಾಗಲೂ ಡೆಪ್ಯುಟಿಕಮಿಶನರ್, ರೆವಿನ್ಯೂಕಮಿಶನರ್, ಮಂತ್ರಿ, ರಾವ್‌ಬಹದ್ದೂರು ಇಂತಿಂಥ ಕಾರ್ಯದಲ್ಲಿ ಆಸಕ್ತ ಇವರ ವಿಷಯವನ್ನೇ ಕುರಿತು ಮಾತನಾಡುತಿದ್ದ ಸುಂದರಮ್ಮನವರಿಗೆ ಎಲ್ಲರೂ ತಮ್ಮ ತಮ್ಮ ಕಾರ್ಯದಲ್ಲಿ ಮಾತ್ರ ಆಸಕ್ತರಾಗಿರುವುದು ಗೊತ್ತಾಯಿತು. ಅವರು ಯಾವ ದೊಡ್ಡ ಮನುಷ್ಯರ ಮಕ್ಕಳುಗಳಾದ ವರಗಳನ್ನು ಲಕ್ಷ್ಯದಲ್ಲಿಟ್ಟುಕೊಂಡಿ ದ್ದರೋ ಅವರಾರೂ ಈ "ಬಡ ಸಂಬಂಧವನ್ನು" ಬೆಳೆಸಲು ಇಷ್ಟಪಡಲಿಲ್ಲ. ಅಧಿಕಾರಿಗಳು ತಮ್ಮ ಮೇಲಧಿಕಾರಗಳ ಹೆಣ್ಣುಗಳನ್ನು ತಮ್ಮ ಮಕ್ಕಳಿಗೆ ಮದುವೆಮಾಡಲು ಹವಣಿಸುತ್ತಿದ್ದರು. ಡೆಪ್ಯುಟಿ ಕಮಿಶನರ್ ಸುಂದರರಾಜ ರಿಗೆ ಇನ್ನೇನು ರಿಟೈರ್ ಆಗುವ ಕಾಲವಾಗುತ್ತಿದ್ದುದರಿಂದ ಅವರ ಮಗಳನ್ನು ಮದುವೆಯಾಗಲು ಅಧಿಕಾರ ವರ್ಗದಲ್ಲಿ ಯಾರೂ ಮುಂದೆ ಬರಲಿಲ್ಲ. ಅಧಿಕಾರವಿರುವವರೆಗೆ ಎಂಜಲು ಕೈಯಲ್ಲಿ ಕಾಗೆಯನ್ನು ಸಹ ಓಡಿಸದವನು, ರಿಟೈರ್ ಆಗಿ ತಲೆ ಬೋಳಿಸಿಕೊಂಡು ವಿಭೂತಿನಾಮಗಳನ್ನು ಬಲಪಡಿಸಿ ಕೊಂಡು ಅನಾಮಧೇಯನಾಗಿ ಕುಳಿತಮೇಲೆ ಏನು ತಾನೆ ಮಾಡಿಯಾನು ? ಕೊನೆಯಲ್ಲಿ ರಿಟೈರ್ಡ್ ಸಬ್ ಓವರ್ಶಿಯ ಮಗ, ರಂಗನ್ ಇನ್ಶ್ಯುರೆನ್ಸ್ ಏಜೆಂಟಿಗೆ ಸೀತೆಯನ್ನು ಕೊಟ್ಟು ಮದುವೆಮಾಡಿದರು. ರಂಗನ್ ಮಾವಂದಿರ

ಮನೆಯಲ್ಲಿಯೇ ಇರುತ್ತಿದ್ದ. ಈ ಕತೆ ಹೇಳುತ್ತಿರುವ ಕಾಲಕ್ಕೆ ಸೀತೆಯ ಎರಡನೆಯ ಬಾಣಂತನ ತಂದೆಯ ಮನೆಯಲ್ಲಿ ನಡೆಯುತ್ತಿದ್ದಿತು.

ಸುಂದರರಾಜರ ಎರಡನೆಯ ಸಂತಾನ ಗಂಡು ೧೮ ವರುಷ ಕೃಷ್ಣ. ಎಸ್.ಎಸ್.ಎಲ್.ಸಿ. ಪ್ಯಾಸ್ ಮಾಡಿ ಇಂಟರ್‌ಮೀಡಿಯೇಟ್ ಸೇರಿದ್ದನು. ಅವನ ತಂಗಿ ವತ್ಸಲೆ ಸುಮಾರು ೧೬ ವರುಷ. ಅವಳ ತಂಗಿ ಶಾರದ ೧೪ ವರುಷ. ಅವಳ ತಂಗಿ ರಮಾ ೧೨ ವರುಷ. ಅವಳ ತಂಗಿ ರತ್ನ ೧೦ ವರುಷ. ಆಚೆಗೆ ೪ ಗಂಡುಮಕ್ಕಳು. ಕೊನೆಯ ಮಗುವಿಗೆ ಎರಡು ವರುಷವಾಗಿತ್ತು. ಮಕ್ಕಳುಗಳೆಲ್ಲಾ ಅತಿ ಮೊಂಡು. ಹೆಣ್ಣು ಹುಡುಗಿಯರನ್ನಂತೂ ಹೇಳ ಬೇಕಾದುದೇ ಇಲ್ಲ. ಸುಂದರಮ್ಮ ಸ್ವಲ್ಪ ಮನಸ್ಸುಮಾಡಿದ್ದರೆ ಅವರನ್ನು ಬಹು ಒಳ್ಳೆಯ ರತ್ನಗಳನ್ನಾಗಿ ಮಾಡಬಹುದಾಗಿತ್ತು. ಆದರೆ ಯಾವಾ ಗಲೂ ತನ್ನ ದೊಡ್ಡಸ್ತಿಕೆ ತನ್ನ ಒಡವೆ ಮಕ್ಕಳ ಒಡವೆ ಇವುಗಳನ್ನೇ ಕುರಿತು ಯೋಚಿಸುತ್ತಿರುವ ಹೆಂಗಸರಿಗೆ ಇಂತಹ ಕಷ್ಟವಾದ ಕೆಲಸಗಳ ಕಡೆ ಮನಸ್ಸು ಹೋಗುವುದಿಲ್ಲ. ಪರಿಚಾರಕ ಅಡಿಗೆ ಮಾಡಿ ಹಾಕುತ್ತಾನೆ. ಸಂಗಿತದ ಮೇಷ್ಟರು ಬಂದು ಹಾರ್ಮೋನಿಯಮನ್ನು ಭರೋ ಎನ್ನಿಸುತ್ತ ಒಂದು ಗಂಟೆ ಎಲ್ಲಾ ಹುಡುಗಿಯರನ್ನೂ ಒಟ್ಟಿಗೆ ಕೂರಿಸಿ ಕಿರಿಸುತ್ತಾನೆ. ಅನಂತರ ಇಂಗ್ಲಿಷು ಕನ್ನಡ ಪಾಠ ಹೇಳಿಕೊಡುವ ಮೇಷ್ಟರು ಬಂದು ಒಂದು ಗಂಟೆಕಾಲ ಹುಡುಗರ ಕೈಯಿಂದ ಕಚಕುಳಿ ಆಡಿಸಿಕೊಳ್ಳುತ್ತಾನೆ. ಮನೆಯಲ್ಲಿ ರುವಷ್ಟು ಹೊತ್ತು ಒಂದು ಹುಡುಗಿ ಅಥವಾ ಹುಡುಗ ಯಾವುದಾದರೂ ಒಂದು ಕಾರಣಕ್ಕಾಗಿ ಪರಿಚಾರಕನೊಂದಿಗೆ ಹೊಡೆದಾಡುತ್ತಿರುತ್ತದೆ. ಆಮೇಲೆ ಸ್ಕೂಲಿಗೆ ಹೋಗಿಬಿಟ್ಟರೆ ರಾತ್ರಿ ಬಂದು ಊಟಮಾಡಿ, ಆಳು ಹಾಸಿರುವ ಹಾಸಿಗೆಮೇಲೆ ಮಲಗುತ್ತವೆ.

ಈ ದೊಡ್ಡಿಯಲ್ಲಿ ಬೆಳೆದ ಮಕ್ಕಳ ಪೈಕಿ ವತ್ಸಲೆ ಸ್ವಲ್ಪ ಚುರುಕು ಬುದ್ಧಿಯವಳಾಗಿದ್ದಳು. ಅವಳಿಗೆ ಸಂಗೀತದಲ್ಲಿ ಸ್ವಾಭಾವಿಕವಾದ ಅಭಿರುಚಿ ಇತ್ತು. ಅವಳು ಇಂಗ್ಲಿಷ್ ಐದನೇ ಫಾರಂವರೆಗೆ ಓದಿದ್ದಳು. ಸುಂದರಮ್ಮ ನವರನ್ನೂ ಸಂದರರಾಜರನ್ನೂ ನೋಡಿದವರಿಗೆ ಅವರ ಹೊಟ್ಟೆಯಲ್ಲಿ ಹುಟ್ಟುವ ಮಕ್ಕಳು ಚೆನ್ನಾಗಿರುವುದಿಲ್ಲ ಎಂದ ತಪ್ಪುಭಾವ ಬರುತ್ತಿದ್ದಿತು. ವತ್ಸಲೆ ಸಾಧಾರಣವಾಗಿ ಚೆನ್ನಾಗಿದ್ದಳು. ಸುಂದರಿ ಎಂದು ಹೇಳುವುದು

ಕಷ್ಟ. ಆದರೆ ಅವಳ ವಯಸ್ಸು ಅವಳಿಗೆ ಒಳ್ಳೆಯ ಭೂಷಣವನ್ನು ಉಂಟು ಮಾಡಿತ್ತು. ಅವಳ ವಯಸ್ಸಿನಲ್ಲಿ ಯಾವ ಹುಡುಗಿಯೂ ದೇವತೆಯಾಗಿಯೇ ಕಾಣುತ್ತಾಳೆ. "ಇವಳ ಒಂದು ನಗುವಿಗೆ ಆಯಸ್ಸನ್ನೇ ಕೊಡಬಹುದು" ಎನ್ನಿಸುತ್ತೆ. ಗೋಪಾಲ ಇಂತಹ ಒಂದು ಬಲೆಯಲ್ಲಿ ಸಿಕ್ಕಿಕೊಂಡಿದ್ದ.

ಇಶ್ವೈವಾಣಿಯು ಸಂಗೀತವಾದ ಮರುದಿನ ಗೋಪಾಲ ಹಿಂದುಸ್ತಾನ್ ಬ್ಯಾಂಕಿಗೆ ಉದ್ಯೋಗ ಕೇಳುವುದಕ್ಕೆ ಹೋಗಿದ್ದಾಗ ಇವನಿಗೆ ೫೦ ರುಪಾಯಿನ ಕ್ಯಾಷ್ ಕ್ಲಾರ್ಕಿನ ಹುದ್ದೆ ದೊರೆಯಿತು. ಆದರೆ ಸೆಕ್ಯುರಿಟಿ ೪೦೦ ರುಪಾಯಿ ಕೊಡಬೇಕೆಂದು ಬ್ಯಾಂಕು ಮ್ಯಾನೇಜರು ಹೇಳಿದರು. ಗೋಪಾಲನಿಗೆ ಒಳ್ಳೆಯ ಪೀಕಲಾಟಕ್ಕೆ ಬಂತು. ಆದರೆ ಅವನಿಗೆ ಒಂದೇ ಒಂದು ಆಸೆ ಇತ್ತು. ಅವರ ತಾಯಿಯವರಿಗೆ ತಮ್ಮ ಅಜ್ಜ ಕೊಟ್ಟಿದ್ದ ಒಂದು ಜತೆ ಚಿನ್ನದ ಬಳೆ ಇನ್ನೂ ರಂಗಣ್ಣನವರ ವಶದಲ್ಲಿದ್ದಿತು. ಅವರು ಖರ್ಚಿನ ಅನೇಕ ಸಂದರ್ಭಗಳು ಬಂದರೂ, ಅದು ತಮ್ಮ ತಂದೆಯವರು ಪ್ರೀತಿಯಿಂದ ತಮ್ಮ ಸೊಸೆಗೆ ಕೊಟ್ಟಿದ್ದ ಬಳೆ ಎಂಬ ಕಾರಣದಿಂದ ಅದನ್ನು ಮಾರಿರಲಿಲ್ಲ. "ಗೋಪಾಲನ ಮದುವೆಯಲ್ಲಿ ಅದನ್ನು ಸೊಸೆಗೆ ಕೊಡೋಣ. ದೀರ್ಘ ಸುಮಂಗಲಿ ಭಾಗ್ಯಲಕ್ಷ್ಮಿಯು ಕೈಮುಟ್ಟಿದ್ದ ಒಡವೆ, ಸಂಸಾರದ ಮುಂದಲ ಪೀಳಿಗೆಯಾದ ಹಿರಿಯ ಸೊಸೆಯ ಕೈ ಅಲಂಕರಿಸುವುದು ನ್ಯಾಯವಾಗಿದೆ" ಎಂದು ಅವರು ಬಳೆಗಳನ್ನು ಬಹು ಕಷ್ಟದಿಂದ ಜೋಪಾನಪಡಿಸಿದ್ದರು. ಈ ಮಾತಿನ ಮೇಲೆ ಒಂದೆರಡು ಸಲ ತಂದೆಗೂ ಅವರ ನಾಲ್ಕು ಕಿರಿಯ ಹೆಣ್ಣುಮಕ್ಕಳಿಗೂ ಮುಖ ಕಪ್ಪಾಗಿತ್ತು. ಗೋಪಾಲ ಸಂಗತಿಯನ್ನೆಲ್ಲಾ ವಿವರಿಸಿ ರಂಗಣ್ಣನವರಿಗೆ ಕಾಗದ ಬರೆದ. "ಅವರು ನಿನ್ನ ಹೆಂಡತಿಗೆ ಕೊಡಬೇಕೆಂದು ಇಟ್ಟಿದ್ದ ನಿನ್ನ ತಾಯಿಯ ಒಡವೆ ಕಳುಹಿಸಿದ್ದೇನೆ. ನಿನಗೆ ಇಷ್ಟಬಂದಂತೆ ಮಾಡಿಕೊ" ಎಂದು ಕಳುಹಿಸಿದರು. ಗೋಪಾಲನಿಗೆ ಬಳೆಗಳು ಇನ್ನೂ ತಲಪಿರಲಿಲ್ಲ. ಆದರೆ ಅವನ ಮನಸ್ಸಿಗೆ ಧೈರ್ಯವಾಗಲಿ ಎಂದು ರಂಗಣ್ಣನವರು ಬಳೆ ಕಳುಹಿಸಿದೆ ಎಂದು ಒಂದು ಟೆಲಿಗ್ರಾಂ ಮಾಡಿದ್ದರು.

ಇಶ್ವೈವಾಣಿಯು ಸಂಗೀತವಾದ ಮರುದಿನ ರಾತ್ರಿ ಸುಮಾರು ೭ ಗಂಟೆ ವೇಳೆಗೆ ಒಂಟಿಕೊಪ್ಪಲಲ್ಲಿರುವ ಗೋಪಾಲನ ಕೊಠಡಿಯಿದ್ದ ಮನೆಯ ಮುಂದೆ

ಡೆಪ್ಯುಟಿಕಮಿಶನರ್ ಸುಂದರರಾಜರ ಸುಂದರವಾದ ಕಾರು ಬಂದು ನಿಂತಿತ್ತು. ಅದರೊಳಗಿನಿಂದ ಮೊದಲು ಸುಂದರರಾಜ ಅವರೂ ಅನಂತರ ವತ್ಸಲೆಯೂ ಕೆಳಗಿಳಿದರು. ಅನಂತರ ಸ್ವಲ್ಪ ಕಷ್ಟಪಟ್ಟು ಸ್ಥೂಲಕಾಯರಾದ ಸುಂದರಮ್ಮನವರು ಕೆಳಗಿಳಿದರು. ಇವೆಲ್ಲವನ್ನೂ ಕಿಟಕಿಯಿಂದ ನೋಡುತ್ತಿದ್ದ ಗೋಪಾಲ, ಮಂಚದ ಮೇಲೆ ಹಾಸಿಯೇ ಇದ್ದ ಹಾಸಿಗೆಯನ್ನು ಸುತ್ತಿ ಒಂದು ಕಡೆಗೆ ಉರುಳಿಸಿದ. ಅದರ ಮೇಲೆ ಹಾಸಿದ್ದ ಚಾಪೆಯನ್ನು ನೆಲದ ಮೇಲೆ ಹಾಸಿದ. ಕೊಠಡಿಯ ಬಾಗಿಲು ತೆಗೆದುಕೊಂಡು ಹೊರಕ್ಕೆ ಬಂದು "ಇದು ಅನಿರೀಕ್ಷಿತವಾದ ಭೇಟಿ" ಎಂದು ಹೇಳಿ ಕೈಮುಗಿದ. ಕೊಠಡಿಗೆ ಬಂದು ಸುಂದರರಾಜನ್ ಮಂಚದ ಮೇಲೂ ಸುಂದರಮ್ಮನವರೂ ವತ್ಸಲೆಯೂ ಚಾಪೆಯ ಮೇಲೂ ಕುಳಿತರು. ಗೋಪಾಲನಿಗೆ "ನನ್ನ ಊಹನೆಯೆ ನಿಜವೆಂದು ಕಾಣುತ್ತೆ" ಎನ್ನಿಸಿತು. ಅದೂ ಇದೂ ಮಾತು ಆದಮೇಲೆ ಸುಂದರಮ್ಮನವರು "ಕಾಲೇಜು ಮೇಷ್ಟ್ರು ಸೀತಾರಾಮು ನಮ್ಮ ನೆಂಟ ನಿಮ್ಮ ವಿಚಾರ ಎಲ್ಲಾ ಹೇಳಿದ. ಆವತ್ತಿನಿಂದ ನಿಮ್ಮನ್ನು ನೋಡ ಬೇಕು ಅಂತ ಆಸೆಪಟ್ಟುಕೊಂಡಿದ್ದೆ. ಎಲ್ಲಾ ಸಂಗೀತ ಕಛೇರಿಗಳಲ್ಲೂ ನಿಮ್ಮನ್ನು ನೋಡ್ತಾ ಇದ್ದೇನೆ ಅಂತ ವತ್ಸಲೆ ಹೇಳಿದಳು. ವತ್ಸಲೆಗಂತೂ ಸಂಗೀತ ಅಂದರೆ ಪ್ರಾಣ" ಎಂದರು. ಗೋಪಾಲ "ಅವರಿಗೆ ಸಂಗೀತ ಚೆನ್ನಾಗಿ ಗೊತ್ತು ಅಂತ ನಾನು ಅವರನ್ನು ಮೊದಲು ದಿನ ನೋಡಿದಾಗಲೇ ತಿಳಿದುಕೊಂಡೆ" ಎಂದ. ಸುಂದರಮ್ಮನವರು "ಇಂಗ್ಲಿಷಿನಲ್ಲಿ ಕ್ಲಾಸಿನಲ್ಲಿ ಇವಳೇ ಈ ಸಲ ಮೊದಲನೆಯವಳು. ಕನ್ನಡದಲ್ಲಿ ಒಂದು ನಾಟಕ ಬೇರೆ ಬರೆದಿದ್ದಾಳೆ" ಎಂದರು. ಅನಂತರ ಏನೇನೊ ಬೇಕಾದಷ್ಟು ತಮ್ಮ ದೊಡ್ಡ ಸ್ತಿಕೆಯನ್ನೆಲ್ಲಾ ಹೇಳಿಕೊಂಡರು. ಗೋಪಾಲನ ಕಿವಿಗೆ ಒಂದೊಂದು ಮಾತು ಗಳು ಮಾತ್ರ ಬೀಳುತ್ತಿದ್ದುವು. ಅವನು ಎಲೆಕ್ಟ್ರಿಕ್ ದೀಪದ ಹೊಳಪಿನಲ್ಲಿ ಮುತ್ತಿನಂತೆ ಹೊಳೆಯುತ್ತಿದ್ದ ವತ್ಸಲೆಯ ಮುಗುಳುನಗೆಯ ಹಿಂದಲ ಹಲ್ಲು ಗಳನ್ನೂ, ಅವಳ ಎಳೆದಾದ ಮುಖವನ್ನೂ ನೋಡುತ್ತಿದ್ದ. ಗೋಪಾಲನು ಮೇಲಿನ ಗೂಟಕ್ಕೆ ತೂಗುಹಾಕಿದ್ದ ಪಿಟೀಲು ಸುಂದರಮ್ಮನವರ ಕಣ್ಣಿಗೆ ಬಿದ್ದಿತು. ಅವರು ಅದನ್ನು ತೆಗೆದುಕೊಂಡು ವತ್ಸಲೆಯ ಮುಂದಿಟ್ಟು "ಎಲ್ಲಿ ಸ್ವಲ್ಪ ನುಡಿಸು" ಎಂದರು. ವತ್ಸಲೆ ಮುಖ ಗಂಟುಹಾಕಿಕೊಂಡಳು.

ಗೋಪಾಲನಿಗೆ ಆ ವಿಕಾರವನ್ನು ನೋಡುವುದೇ ಕಷ್ಟವಾಯಿತು. ವತ್ಸಲೆ ಪಿಟೀಲು ಪೆಟ್ಟಿಗೆಯನ್ನು ತನ್ನ ಸಮೀಪದಿಂದ ಆಚೆಗೆ ತಳ್ಳಿದಳು. ಸುಂದರಮ್ಮ ನವರು ಒಳ್ಳೆಯ ಮಾತಿನಲ್ಲಿ ಹೇಳಿದರು. ಗದರಿಸಿದರು. ಕೊನೆಯಲ್ಲಿ ಮೆತ್ತಗೆ ಗೋಗರೆದರು. ವತ್ಸಲೆ ಸುಮ್ಮನೇ ಕೂತಿದ್ದಳು. ಸುಂದರ ರಾಜನ್‌ರವರು "ಅಪ್ಪಾ ಗೋಪಾಲ್ ನಮ್ಮ ಮನೆಯ ಅಳಿಯನಾಗಿ ಬಿಡು. ದೇವರು ಒಳ್ಳೆಯದನ್ನು ಮಾಡ್ತಾನೆ. ನನಗೂ ಬಹಳ ಇನ್‌ಫ್ಲುಯೆನ್ಸ್ ಉಂಟು. ನಿನ್ನ ವಿದ್ಯೆಕ್ಕೆ ಅನುಸಾರವಾದ ಹುದ್ದೆ ನಿನಗೆ ಕೊಡಿಸುವುದಕ್ಕೆ ತರದೂದು ಮಾಡುತ್ತೇನೆ, ನಾಳೆಯೇ ನೀನು ಒಪ್ಪಿದರೆ ಲಗ್ನಪತ್ರಿಕೆ ಮಾಡಿ ಬಿಡೋಣ. ಕಣ್ಣುಮುಚ್ಚಿ ತೆಗೆಯುವುದರೊಳಗೆ ಎಲ್ಲಾ ಸಿದ್ಧಮಾಡಿ ಬಿಡ್ತೇನೆ" ಎಂದರು. ಗೋಪಾಲನು ಪ್ರತ್ಯುತ್ತರ ಕೊಡುವುದಕ್ಕೆ ಮುಂಚೆ ವತ್ಸಲೆ ಪಿಟೀಲನ್ನು ತೆಗೆದುಕೊಂಡು ಅದರ ಮೇಲೆ ಒಂದು ಸಲ ಕಮಾನು ಆಡಿಸಿದಳು. ಅಲ್ಲಿಂದ ಮುಂದೆ ಆ ಕೊಠಡಿಯಲ್ಲಿ ಗೋಪಾಲನಿಗೆ ಅವಳ ಹೊರತು ಮತ್ತೇನೂ ಕಾಣಲಿಲ್ಲ. ಪಿಟೀಲಿನ ಧ್ವನಿ ಹೊರತು ಮತ್ತೇನೂ ಕೇಳಲಿಲ್ಲ.

ವತ್ಸಲೆ ನಿಜವಾಗಿಯೂ ಪಿಟೀಲನ್ನು ಬಹಳ ಚೆನ್ನಾಗಿಯೇ ಬಾರಿಸಿ ದಳು. ರಾಜ ಮಾಣಿಕ್ಯಂ ಪಿಳ್ಳೆ ವೆಂಕಟರಾಮಯ್ಯರ್ ವೆಂಕಟಸಾಮಿ ನಾಯಿಡು ಚೌಡಯ್ಯ ಇವರೆಲ್ಲರ ಪಿಟೀಲುಗಳನ್ನು ಚೆನ್ನಾಗಿ ಅನುಭವಿಸಿದ್ದ ಗೋಪಾಲನಿಗೆ ವತ್ಸಲೆಯ ಕೈ ಬಹು ಚೆನ್ನಾಗಿ ಪಳಗಿರುವುದು ತಿಳಿಯಿತು. "ಆಹಾ ಏನು ದೇವಲೋಕದ ಸಂಗೀತ. ಇದನ್ನು ಹಣ ಕೊಟ್ಟು, ಕೊಂಡು ಕೋಳೋಕೆ ಆಗುತ್ತದೆಯೆ? ಪರಮಾತ್ಮನ ಕರುಣೆ ಯಾರಲ್ಲಿ ಉಂಟೋ ಅವರಿಗೆ ಮಾತ್ರ ಈ ವಿದ್ಯೆ ದೊರೆಯುತ್ತೆ. ಪರಮಾತ್ಮನ ಕರುಣೆಯುಳ್ಳ ವರಿಗೆ ಮಾತ್ರ ಇದರ ಆನಂದ ಅರಿವಾಗುತ್ತೆ ಎಂದುಕೊಂಡ ಗೋಪಾಲ. ಬೇಟೆಗಾರನಿಗೆ ಮೃಗ ಬಲೆಗೆ ಬಿದ್ದದ್ದು ಗೊತ್ತಾಯಿತು. ಸುಂದರಮ್ಮನವರು ಎದ್ದು ನಿಂತು "ನಾಳೆ ಮನೆಕಡೆ ಬನ್ನಿ ಕಾರು ಕಳುಹಿಸುತ್ತೇನೆ" ಎಂದರು. ಮರುದಿವಸ ಬೆಳಿಗ್ಗೆ ೬ ಗಂಟೆ ವೇಳೆಗೆ ಗೋಪಾಲನ ಕೊಠಡಿ ಹತ್ತಿರಕ್ಕೆ ಗಾಡಿ ಬಂತು. ಅವನು ಸುಂದರರಾಜನ್‌ರವರ ಮನೆಗೆ ಹೋದ. ಅಲ್ಲಿ ಪುರೋಹಿತರೂ ಸುಂದರರಾಜನ್‌ರವರ ಕೆಲವು ಮಿತ್ರರೂ ಸೇರಿದ್ದರು.

ಪುರೋಹಿತರು ಲಗ್ನ ಪತ್ರಿಕೆ ಬರೆದರು. ಸುಂದರರಾಜನ್, ಗೋಪಾಲನ ತಂದೆಯ ಹೆಸರು ಇನಿಷಿಯಲ್ ಎಲ್ಲವನ್ನೂ ಗೋಪಾಲನನ್ನೇ ಕೇಳಿ ತಿಳಿದು ಕೊಂಡರು. ಮುಂದೆ ಅನೇಕ ದಿವಸಗಳ ಮೇಲೆ ಇದು ಜ್ಞಾಪಕಕ್ಕೆ ಬಂದಾಗಲೆಲ್ಲಾ ಗೋಪಾಲನಿಗೆ "ಆ ದಿನ ತಾನು ತನಗೆ ಸ್ವಲ್ಪವೂ ಗುರುತು ಪರಿಚಯವಿಲ್ಲದ ಸ್ಥಳದಲ್ಲಿ" ಇದ್ದಂತೆಯೇ ತೋರಿದ್ದುದು ಜ್ಞಾಪಕಕ್ಕೆ ಬಂದು ನಗುಬರುತ್ತಿದ್ದಿತು. ಆ ದಿವಸ ಮಧ್ಯಾಹ್ನ ೩ ಗಂಟೆ ಒಳಗೆ, ಗೋಪಾಲ ಸುಂದರರಾಜನ್‌ರವರ ಮನೆಯಲ್ಲಿ ಊಟಮಾಡಿ ವಿಶ್ರಾಂತಿ ಹೊಂದಿದನಂತರ ಟೀ ಕುಡಿಯುತ್ತಿರುವಾಗಲೇ ಅಚ್ಚಾದ ಲಗ್ನ ಪತ್ರಿಕೆ ಬಂದುಬಿಟ್ಟಿತು. ಲಗ್ನ ಪತ್ರಿಕೆಯ ಜರ್ಬು, ಕವರು ಅದರ ಠೀವಿ ಕವರಿನ ಮೇಲೆ ಅಚ್ಚು ಹಾಕಿದ್ದ ಚಿನ್ನದ ಮುಲಾಮಿನ ಗೊಂಬೆ ಇವುಗಳನ್ನು ನೋಡಿದರೆ ದೇಶಿಯ ರಾಜರ ಜರ್ಬಿನ ಜ್ಞಾಪಕ ಬರುತ್ತಿತ್ತು. ಲಗ್ನ ಪತ್ರಿಕೆಯ ಮೇಲೆ, ಸುಂದರರಾಜನ್‌ರವರಿಗೆ ತನ್ನ ತಂದೆಯ ಹೆಸರು ವಿಳಾಸ ಸ್ಪಷ್ಟವಾಗಿ ತಿಳಿಯದಿದ್ದುದರಿಂದ ಗೋಪಾಲನೇ ಬರೆದು, ತನ್ನ ಸ್ವಂತ ಕಾಗದದೊಡನೆ ಆ ಸಾಯಂಕಾಲವೇ ಟಪಾಲಿಗೆ ಹಾಕಿದನು. ಸುಂದರ ರಾಜನ್‌ರವರ ಡ್ರೈವರ್ ಗೋಪಾಲನ ಕೊಠಡಿಗೆ ಹೋಗಿ ಅವನ ಹಾಸಿಗೆ ಪುಸ್ತಕಗಳು ಪೆಟ್ಟಿಗೆ ಎಲ್ಲವನ್ನೂ ಸುಂದರರಾಜರ ಮನೆಯಲ್ಲಿ ಒಂದು ಸುಸಜ್ಜಿತವಾದ, ಕೊಠಡಿಗೆ ತಂದುಹಾಕಿದನು. ಅಲ್ಲಿಗೆ ಗೋಪಾಲನ ಅಸ್ತಿತ್ವ ಪೂರ್ಣವಾಗಿ ನಾಶವಾಯಿತು. ಅಲ್ಲಿಂದ ಮುಂದೆ ಮಲ್ಲಿಗೆಹಳ್ಳಿ ರಂಗಣ್ಣ ನವರ ಮಗ ಗೋಪಾಲ್ ಬಿ. ಎ. ಆಗಿದ್ದವನು ಅವತ್ತು ಸತ್ತನು. "ಸುಂದರರಾಜನ್‌ರ ಅಳಿಯ" "ನಮ್ಮ ವತ್ಸಲೆಯ ಗಂಡ" ಉಳಿದು ಕೊಂಡನು. ರಂಗಪ್ಪನವರ "ಮಗನಿಗೆ ಮದುವೆಯಾದರೆ ಮನೆಗೆ ಸೊಸೆ ಬರುತ್ತಾಳೆ ಅಂತ ಮಾಡಿದ್ದೆ. ಆದರೆ ಈಗ ನೋಡುವುದರಲ್ಲಿ ಮಗನನ್ನು ಮಾವನಿಗೆ ದತ್ತುಕೊಟ್ಟಂತೆ ಆಯಿತು" ಎಂಬ ಮಾತಿನ ಅರ್ಥ ಗೋಪಾಲ ನಿಗೆ ಮದುವೆಯ ದಿನಗಳಲ್ಲಿ ತಿಳಿಯದಿದ್ದರೂ ಅನಂತರ ಚೆನ್ನಾಗಿ ಗೊತ್ತಾ ಯಿತು.

ಮರುದಿನ ರಂಗಪ್ಪನವರು ಗೋಪಾಲನಿಗೆ ಕಳುಹಿಸಿದ್ದ, ಅವನ ತಾಯಿಯ ಬಳೆಗಳು ಬಂದವು. ಅಲ್ಲಿಂದ ಮುಂದೆ ಗೋಪಾಲನ ವಿಚಾರ

ಸುಂದರಮ್ಮನವರಿಗೆ ತಿಳಿಯದೆ ಯಾವುದೂ ನಡೆಯುವಂತೆಯೇ ಇರಲಿಲ್ಲ. ಬ್ಯಾಂಕಿಗೆ ಸೆಕ್ಯುರಿಟಿ ಕಟ್ಟಬೇಕೆಂಬುದು ಗೊತ್ತಾದಕೂಡಲೆ ಸುಂದರಮ್ಮನವರು "ಇಂತಪಕಾಲದಲ್ಲಿ ಚಿನ್ನ ಖಂಡಿತ ಮಾರಬಾರದು. ಬಳೆ ವತ್ಸಲೆ ಕೈಗೆ ಹಾಕಿಬಿಡಿ. ನಾನೂರು ರುಪಾಯಿ ನಾನೇ ಕೊಡುತ್ತೇನೆ. ಇದೊಂದು ಮಹಾಯೋಚನೆ ಮಾಡೋ ವಿಷಯವೇ" ಎಂದರು. ಗೋಪಾಲ ಬಳೆಗಳನ್ನು ಸುಂದರಮ್ಮನವರ ಕೈಯಲ್ಲಿ ಕೊಟ್ಟ. ಆಗ ಏನೋ ಗೋಪಾಲನಿಗೆ ಸುಂದರಮ್ಮನವರ ಧಾರಾಳ ಕಂಡು ಸಂತೋಷವಾಯಿತು. ಆದರೆ ಅಲ್ಲಿಂದ ಮುಂದೆ ಮಾತನಾಡುವಾಗಲೆಲ್ಲಾ ಸುಂದರಮ್ಮನವರು ಬಳೆಯ ವಿಷಯ ಬಿಟ್ಟು ಗೋಪಾಲನಿಗೆ ಬ್ಯಾಂಕು ಡಿಪಾಜಿಟ್ಟಿಗೆ ನಾನೂರು ರೂಪಾಯಿ ಕೊಟ್ಟೆ ಎಂದು ಮಾತ್ರ ಹೇಳುತ್ತಿದ್ದುದನ್ನು ಕೇಳಿ ಅವನಿಗೆ ಒಂದೊಂದು ಸಲ ಬೇಜಾರಾಗುತ್ತಿದ್ದಿತು.

## ೭. ವಿವಾಹ ಮಹೋತ್ಸವ

ಗೋಪಾಲನ ಲಗ್ನ ಪತ್ರಿಕೆ ಮಲ್ಲಿಗೆಪಳ್ಳಿಗೆ ಬಂದ ಕೂಡಲೇ ಆ ಸಣ್ಣ ಪಳ್ಳಿಯಲ್ಲಿ ಒಂದು ಗದ್ದಲವೇ ಉಂಟಾಯಿತು. ಮೊದಲಿನ ಸಂಭ್ರಮಗಳು ಮುಗಿದನಂತರ ರಾಮಣ್ಣನವರು "ಅಯ್ಯೋ ಮುಂಡೇದೆ. ಕೋಣನ್ನ ಹೊತ್ತು ಕುದುರೆ ಬಡವಾಯಿತು. ಅನ್ನೋಹಾಗೆ, ನಿನ್ನ ಈ ಸ್ಥಿತಿಗೆ ತರೋಕೆ ಪಾಪ, ಆ ಭಾಗ್ಯ ತಾಲಿನ ಪುರದ ತಾಲಿ ಮಾಡ್ಕೊಂಡ್ತು ಈ ಮುದಿ ರಂಗಪ್ಪ ಪಾಪ ನಿನ್ನ ಮೇಲೆ ಸಂಸಾರದ ಭಾರಹಾಕಬೇಕು. ನಿನಗೆ ಒಂದು ಮದುವೆ ಆಗಿಬಿಟ್ಟರೆ ಸಾಕು ಅಂತ ಕಾಯ್ಕೊಂಡಿತ್ತು. ಚೆನ್ನಾಗಿ ಬೆಳೆಸಿಟ್ಟೆ ಪಾರಿವಾಳಾನ ಗೀಡಗ ಬಂದು ಹಾರಿಸಿಕೊಂಡು ಹೋಗೊ ಹಾಗೆ ಅದಾವುದೋ ರಕ್ಕಸಿ ಬಂದು ಹಾರಿಸಿಕೊಂಡು ಹೋಗಿ ಬಿಟ್ಟಳಲ್ಲ. ಹೂ ; ಎಲ್ಲಾದರೂ ಚೆನ್ನಾಗಿ ಬದುಕ್ಕೊ. ಜಯನ್ನ ಮದುವೆ ಆಗಿದ್ದರೆ ಈ ಬಡ ಸಂಸಾರಕ್ಕೆ ಆಧಾರವಾಗಿ ಹತ್ತು ಜನಕ್ಕೆ ಉಪಕಾರಿ ಆಗ್ತ ಇದ್ದೆ. ನಿನ್ನ ನೆರಳನ್ನು ಅನೇಕರು ಆಶ್ರಯಿಸುತ್ತಿದ್ದರು. ಆದರೆ ಈಗ ನೀನೆ ಇನ್ನೊಬ್ಬರ ನೆರಳನ್ನು ಆಶ್ರಯಿಸಿದೆ" ಎಂದುಕೊಂಡರು. ರಂಗಪ್ಪನವರ ಎಲ್ಲ ಹಿತೈಷಿಗಳ ಅಭಿಪ್ರಾಯವೂ ಇದೇ ಆಗಿತ್ತು. ಮಣಿ

"ನಾವು ಮದುವೆಗೆ ಹೋಗುವುದೇ ಬೇಡ" ಎಂದು ಕುಳಿತಳು. ವಿವೇಕಿಗಳಾದ ರಂಗಪ್ಪನವರು "ನಾವು ಹೀಗೆಲ್ಲಾ ಮಾಡಬಾರದು. ಗೋಪಾಲ ನಮ್ಮ ಮಗ ಅಲ್ಲವೇ" ಎಂದು ಹೇಳಿ ತಮ್ಮ ಉಳಿದ ಅಳಿಯಂದಿರಿಗೆಲ್ಲಾ ಕಾಗದ ಬರೆದು ಮದುವೆಗೆ ಒಂದು ದಿನ ಮುಂಚಿತವಾಗಿ ಮೈಸೂರಿಗೆ ಹೋಗಿ ತಲಪಿದರು. ಡೆಪ್ಯುಟಿ ಕಮಿಶನರ್ ಸುಂದರರಾಜನ್‌ರವರ ಕಾರಿನಲ್ಲಿ ಗೋಪಾಲ ಸ್ಟೇಶನ್ನಿಗೆ ಬಂದಿದ್ದ. ರಂಗಪ್ಪನವರ ಪರಿವಾರ ಸುಮಾರು ಐವತ್ತು ಜನಕ್ಕೆ ಮೇಲ್ಪಟ್ಟು ಎಲ್ಲರೂ ಅದೇ ರೈಲಿನಲ್ಲಿ ಮೈಸೂರಿಗೆ ಬಂದು ಸ್ಟೇಶನ್ನಿನಲ್ಲಿ ಇಳಿದರು. ಸಾಧ್ಯವಾದಷ್ಟು ಜನ ಗೋಪಾಲನೊಂದಿಗೆ ಕಾರಿನಲ್ಲಿ ಕುಳಿತರು. ಅವನ ಅಕ್ಕಂದಿರು ಭಾವಗಳು, ಅವರ ಮಕ್ಕಳು ತಮ್ಮಂದಿರು, ಮಲ್ಲಿಗೆಹಳ್ಳಿಯಿಂದ ರಂಗಪ್ಪನವರ ಬಲತ್ಕಾರದ ಮೇಲೆ ಬಂದಿದ್ದ ರಾಮಣ್ಣ ಇವರೆಲ್ಲರೂ ತನುತಮಗೆ ತೋರಿದ ರೀತಿಯಲ್ಲಿ ಜಟಕಾಗಳಲ್ಲಿಯೋ ನಡೆದುಕೊಂಡೋ ಬಸ್ಸುಗಳಲ್ಲಿಯೋ ಅಂತೂ ಸುಂದರರಾಜನ್‌ರನರ ಮನೆಯನ್ನು ತಲಪಿದರು. ಅಲ್ಲಿಯ ಏರ್ಪಾಡುಗಳೆಲ್ಲಾ ದೊಡ್ಡ ಮನುಷ್ಯರು ಬಡವರಿಗೆ ಮಾಡುವ ಏರ್ಪಾಡುಗಳಿಗೆ ಅನುಸಾರವಾಗಿದ್ದುವು. ಬೀಗರಿಗೆ ಇಳಿದುಕೊಳ್ಳಲು ಬೇರೆ ಮನೆ ಮಾಡುವ ಬದಲು ಮನೆಯ ಹಿಂದಿಲ ಔಟ ಹೌಸನ್ನೇ ಸರಿಮಾಡಿದ್ದರು. ಸುಂದರರಾಜನ್‌ರವರ ಲಕ್ಷ್ಯವೆಲ್ಲ ಅಂದಿನ ರಾತ್ರಿಯ ವರಪೂಜೆಯ ಕೋಲ; ಮಾರನೆಯ ಸಾಯಂಕಾಲದ ರಿಸೆಪ್ಶನ್ ಸಂಗೀತ ಸ್ವಾಗತ ಇವುಗಳಲ್ಲಿ ಇತ್ತು. ಅವರನ್ನು ನೋಡಿದರೆ ಅವರ ಮಟ್ಟಿಗೆ ಮದುವೆಯೆಲ್ಲಾ ಅಷ್ಟೆ ಎಂಬಂತೆ ಕಾಣುತ್ತಿತ್ತು. ಸುಂದರಮ್ಮನವರಿಗೆ ಪರಿಚಾರಕರಿಗೆ ಉಪದೇಶಗಳನ್ನು ಹೇಳುವುದರಲ್ಲಿಯೇ ಕಾಲ ಕಳೆದು ಹೋಗುತ್ತಿತ್ತು. ಅವರ ಯೋಚನೆಗಳೆಲ್ಲ ಅಧಿಕಾರಿಗಳ ಹೆಂಡತಿಯರು ಬಂದಾಗ ಅವರನ್ನು ಹೇಗೆ ಹೇಗೆ ಸ್ವಾಗತಿಸಬೇಕು. ಅವರಿಗೆ ಕೊಡುವುದಕ್ಕೆ ಯಾವ ಯಾವ ತಿಂಡಿಮಾಡಿಸಬೇಕು. ತಿಂಡಿ ಹಾಕಿ ಕೊಡುವ ಕವರಿನ ಅಳತೆ ಅಂದ ಹೇಗಿರಬೇಕು. ತಾನು ಉಟ್ಟುಕೊಳ್ಳುವ ಸೀರೆ ಬಣ್ಣ ಯಾವುದಿರಬೇಕು. ಒಡವೆ ಯಾವುದಾವುದು ಧರಿಸಲಿ ಇವೇ ಆಗಿತ್ತು. ರಂಗಪ್ಪನವರೂ ಅವರ ಬಂಧುಗಳೂ, ಸುಂದರರಾಜರ ಕೇವಲ ಒಂದು ಪರಿವಾರವಾಯಿತು. ಊಟಕ್ಕೆ ಕರೆದಾಗ ಹೋಗಿ ಊಟಮಾಡುವ

ದರ ಹೊರತು ಮತ್ತಾವುದೂ ಅವರಿಗೆ ಜವಾಬ್ದಾರಿಯಿದ್ದಂತೆ ತೋರಲಿಲ್ಲ. ಅವರು ಯಾರು ಯಾರು? ಎಷ್ಟು ಜನ ಬಂದಿದ್ದಾರೆ? ಒಂದನ್ನೂ ಸಂಬಂಧಿ ಅಮ್ಮನಾಗಲಿ ಸಂಬಂಧಿ ಅಯ್ಯನಾಗಲಿ ವಿಚಾರಿಸಲು ಅವರಿಗೆ ಹೊತ್ತೇ ಇರಲಿಲ್ಲ. ಅವರ ದೃಷ್ಟಿಯೆಲ್ಲಾ 'ರಿಸೆಪ್ಶನ್' ಕಡೆಗೇ ಇದ್ದಿತು. ಹೇಗೆ ನಾಟಕದಲ್ಲಿ ಸ್ಟೇಜ್ ಮ್ಯಾನೇಜರು ಒಂದು ಮುಖ್ಯ ದೃಶ್ಯದ ಜರ್ಬಿಗಾಗಿ ಉಳಿದ ಎಲ್ಲಾ ಏರ್ಪಾಡುಗಳನ್ನೂ ಮಾಡುತ್ತಾ, ಆ ದೃಶ್ಯವನ್ನು ಜನರಿಗೆ ತೋರಿಸಬೇಕಾದ ಕಾಲಕ್ಕಾಗಿ ಹೊಂಚುಹಾಕುತ್ತಿರುತ್ತಾನೋ, ಹಾಗೆ ಸುಂದರರಾಜನ್‌ರವರು ತಮ್ಮ ಪೂರ್ಣದೃಷ್ಟಿಯನ್ನು ರಿಸೆಪ್ಶನ್ ಕಡೆಗೆ ತಿರುಗಿಸಿ ಆ ವೇಳೆಯನ್ನೇ ಕಾಯುತ್ತಿದ್ದರು. ಯಾರು ಏನು ಹೇಳಿದರೂ ಅವರು "ಸ್ವಲ್ಪ ತಡೆಯಿರಿ. ನಾಳೆ ಸಾಯಂಕಾಲ ರಿಸೆಪ್ಶನ್ ಒಂದು ಕಳೆದುಹೋಗಲಿ. ಆಗ ನೋಡಿ ನನ್ನ ಯೋಗ್ಯತೆ ನಿಮಗೆ ಗೊತ್ತಾಗುತ್ತೆ" ಎನ್ನುತ್ತಿದ್ದರು. ಒಂದು ಸಲ ಮಣಿ ಕೋಪದಿಂದ ಸಂಭಂಧಿ ಅಮ್ಮನೊಂದಿಗೆ "ಏನು ಹಾಳು ರಿಸೆಪ್ಶನ್ ಅಂತ ಹೊಡ್ಕೋತೀರಿ. ನಿಮ್ಮ ಡಬಡ್ಡಾಳಿಕೆ ಜಂಭ ತೋರಿಸೋಕೆ ತಾನೆ. ರಿಸೆಪ್ಶನ್ ಮದುವೆಯ ಒಂದು ಭಾಗ; ನೀವು ಮೆರೇತಾ ಇರೋದ್ನ ನೋಡಿದರೆ ಮದುವೆ ಇಲ್ಲದಿದ್ದರೂ ಬೇಡ. ರಿಸೆಪ್ಶನ್ ಆದರೆ ಸಾಕು ಅನ್ನೋಹಾಗೆ ಕಾಣುತ್ತೆ" ಎಂದಳು. ಮಾತು ಬಿರುಸಾಗಿ ಬೆಳೆಯುವುದರಲ್ಲಿದ್ದಿತು. ಮಣಿ "ಇನ್ನೂ ಇವರಿಗೆ ಬಾರಿಸಬೇಕು. ಆದರೆ ಗೋಪಾಲನ್ನ ನೋಡಿಕೊಂಡು ಸುಮ್ಮನಾಗಬೇಕಾಗಿದೆ ಎಂದುಕೊಂಡಳು." ಸುಂದರಮ್ಮನವರೂ ಹಾಗೇ ಎಂದುಕೊಂಡರು.

ಮದುವೆಯಲ್ಲಿ ಸುಂದರಮ್ಮನವರೂ ಸುಂದರರಾಜನ್‌ರವರೂ ತೋರಿಸಿದ ನಡವಳಿಕೆಯಿಂದ ಸಂಬಂಧಿಗಳ ಬಾಂಧವ್ಯ ಮಧುರವಾಗಲಿಲ್ಲ. ಗೋಪಾಲನನ್ನು ನೋಡಬೇಕೆಂದರೆ ರಂಗಪ್ಪನವರಿಗೂ ಗೋಪಾಲನ ಅಕ್ಕ ಭಾವಂದಿರಿಗೂ ಕಷ್ಟವಾಗಿಹೋಯಿತು. ಅವನೂ ಹೆಂಡವನ್ನು ಕುಡಿದ ಕಪಿಯಂತೆ ಮಾವನ ಜರ್ಬು ತನ್ನ ಜರ್ಬೆ ಎಂದುಕೊಂಡನು. ಅವನ ಅತ್ತೆಮಾವಂದಿರಿಗೆ ಅವನೊಂದು ಮೆರೆಯಿಸುವ ವಸ್ತುವಾದನು. ತಮ್ಮ ಜರ್ಬನ್ನು ತೋರಿಸಲು ಅವನು ಅವರಿಗೆ ಒಂದು ನೆಪಮಾತ್ರವಾದನು. ವರಪೂಜೆಯ ನೂರಾರು ದೀಪ

ಗಳ ಕೋಲ—ಮೆರವಣಿಗೆ, ರಿಸೆಪ್ಶನ್ ಓಲಗ ಇವುಗಳನ್ನೆಲ್ಲಾ ಅವರು ತಮ್ಮ ದೊಡ್ಡಸ್ತಿಕೆಯ ದೃಷ್ಟಿಯಿಂದ ಮಾತ್ರವೇ ಏರ್ಪಡಿಸಿದ್ದರು. ಗೋಪಾಲನು ಅವರು ತಮ್ಮ ಘನತೆಯನ್ನು ಏರಿಸಿಕೊಳ್ಳಲು ಮೆರೆಯಿಸುವ ದೇವರಾದ. ಆ ಗೊಂಬೆ ದೇವರಿಗೆ, ಮಾನ ಪ್ರಾಣ ಎರಡೂ ಇರುವುದಿಲ್ಲ. ಗೋಪಾಲ ತನಗೆ ಎರಡೂ ಇವೆ ಎಂಬುದನ್ನು ಮರೆತ. ಯಾವ ರಿಸೆಪ್ಶನ್‌ಗಾಗಿ ಸುಂದರ ರಾಜರು ಅಷ್ಟು ತರದೂದು ಮಾಡಿದ್ದರೋ ಅದೂ ಬಂತು. ಒಂದಷ್ಟು ತೆಂಗಿನ ಕಾಯಿ ಹೂವಿನ ಹಾರಗಳು ಖರ್ಚಾದುವು. ಕೊನೆಯಲ್ಲಿ ರಾಜ್ಯದ ಅತ್ಯಂತ ದೊಡ್ಡ ಅಧಿಕಾರಿಗಳೂ ಬಂದರು. ಅವರ ಕೈಯ್ಯಲ್ಲಿ ಅಳಿಯನಿಗೆ ಹಸ್ತಲಾಘವ ಕೊಡಿಸಿ ತಮ್ಮ ದೊಡ್ಡಸ್ತಿಕೆ ಎಷ್ಟೆಂಬುದನ್ನು ತೋರಿಸಿಕೊಳ್ಳಬೇಕೆಂಬುದೇ ಸುಂದರರಾಜನ್‌ರವರ ಈ ಇಲ್ಲಾ ಏರ್ಪಾಡಿನ ಮೂಲವೂ ಆಗಿತ್ತು. "ಪ್ರಾಣಿಯನ್ನು ದೇವತೆಗೆ ಬಲಿಕೊಟ್ಟದ್ದಾಯಿತು. ಇನ್ನು ನಿಮ್ಮ ಅಪ್ಪನಿಗೂ ಹೆದರುವುದಿಲ್ಲ" ಎಂಬ ಮುಖಭಾವವನ್ನು ಮಾಡಿಕೊಂಡು ರಂಗಪ್ಪನವರನ್ನು ನೋಡುತ್ತಾ ಸುಂದರರಾಜ್ ಒಳಗೆ ಹೋಗಿ ವಿಶ್ರಾಂತಿಗಾಗಿ ಮಂಚದಮೇಲೆ ಬಿದ್ದುಕೊಂಡರು. ರಾಮಣ್ಣನವರು "೧೫೦ ತೆಂಗಿನಕಾಯಿ ಎರಡು ಚೊಂಬು ಪಾಸನೆ ನೀರು ಎರಚೋಕೆ ಇಷ್ಟು ಸವರಣೆಯೇ" ಎಂದುಕೊಂಡರು.

ಮರುದಿವಸ ಬೆಳ್ಳಿಗ್ಗೆ ರಾಮಣ್ಣನವರು, ರಂಗಪ್ಪನವರ ಹೆಣ್ಣುಗಳು ಐದು ಮಂದಿ, ಅವರ ಪತಿಗಳು ಅವರ ಮಕ್ಕಳು ಎಲ್ಲರೂ ಅನಾಮತ್ತಾಗಿ ರಂಗಪ್ಪನವರ ಭೂತ ಬಿಡಿಸಲು ಪ್ರಾರಂಭಿಸಿದರು. "ನಾವು ಬೇಡ ಎಂದರೂ ನೀವು ಬಂದಿರಿ. ಈಗಲೇ ಹೊರಟುಹೋಗೋಣ ಹೊರಡಿ, ಇನ್ನು ಈ ಅವಮಾನ ತಡೆಯುವುದಕ್ಕಾಗುವುದಿಲ್ಲ" ಎಂದು ದೊಂಬಿ ಎಬ್ಬಿಸಿದರು. ರಂಗಪ್ಪನವರು "ನೀವೇ ಗೋಪಾಲನಿಗೆ ಹೇಳಿ, ಅವನು ಸ್ವಲ್ಪ ಬಿಗಿಯಾದರೆ ಎಲ್ಲಾ ಸರಿಹೋಗುತ್ತೆ" ಎಂದರು. ಮಣಿಯು ಕೋಪದಿಂದ "ಆ ಅಮ್ಮಣ್ಣನನ್ನು ನೋಡುವುದೆಲ್ಲಿ? ಯಾವಾಗಲೂ ಸೆರಗಿನ ಮರೆಯಲ್ಲಿಯೇ ಅವಿತುಕೊಂಡಿರುತ್ತಾನೆ. ಅವನ ಸುತ್ತಾ ಯಾವಾಗಲೂ ಇಪ್ಪತ್ತು ಹೆಣ್ಣುಗಳು ಇರುತ್ತವೆ. ನಾದಿನಿಗಳೇ ಹತ್ತು ಇವೆ. ಶುದ್ಧ ಹೆಣ್ಣಿಗ" ಎಂದಳು. ರಂಗಪ್ಪನವರು "ನಮ್ಮ ವಂಶದಲ್ಲಿ ಇಂತಹ ಅವಿವೇಕ ಯಾವಾಗಲೂ ನಡೆಯಲಿಲ್ಲ. ಹೀಗೆ ಮಾನ ಕೆಟ್ಟವರೂ ಹುಟ್ಟಲಿಲ್ಲ. ಇನ್ನೇನು ಧಾರೆ ಆಯಿತು ನಡೆಯಿರಿ ನಮ್ಮ

ನಮ್ಮ ಊರಿಗೆ ಹೋಗೋಣ" ಎಂದರು. ರಾಮಣ್ಣನವರು ಇದ್ಯಾಕೊ ವಿಪರೀತಕ್ಕೆ ಇಟ್ಟುಕೊಂಡಿತೆಂದುಕೊಂಡು "ಸಮ್ಮಂಧಿ ಅಮ್ಮನಿಗೆ ನಡತೆ ಇಲ್ಲವೆಂದು ಗೋಪಾಲನ ಮೇಲೆ ಯಾಕೆ ರೇಗುತ್ತೀರಿ. ದುಡ್ಡು ಇರುವವರಿಗೆ ನಡತೆ ಇರಬೇಕಾದುದಿಲ್ಲವೆಂದು ಪೂರ್ವದ ಕವಿ ಹೇಳಲಿಲ್ಲವೆ? ಹೌದು, ಗೋಪಾಲ ಸ್ವಲ್ಪ ಬಿಗಿಯಾಗಿದ್ದರೆ ಸರಿಹೋಗುತ್ತೆ. ಆದರೆ ಏನುಮಾಡುವುದು? ನಮ್ಮೊಂದಿಗೆ ಬಿಗಿಯಾಗಿ ಅವರೊಂದಿಗೆ ಹೀಗಿರುವುದು ಈಗ ಅವನ ಸ್ವಭಾವವಾಯಿತು. ಮುಖ್ಯ ಅವನಿಗೆ ಬೇಕಾದ ಹೆಣ್ಣನ್ನು ಒಪ್ಪಿ ಅವ ಮದುವೆಯಾಗಿದ್ದಾನೆ. ಹುಡುಗಿ ತಕ್ಕಮಟ್ಟಿಗೆ ಇದೆ. ಒಳ್ಳೆಯ ವಯಸ್ಸಾಗಿದೆ. ಗೋಪಾಲನಿಗೂ ವಯಸ್ಸಾಗಿದೆ ಸಂಗೀತ ಚೆನ್ನಾಗಿ ಬರುತ್ತಂತೆ. ಗೋಪಾಲ ಅವಳು ನಡೆಕೊಂಡು ಹೋಗೋ ಜಾಗಕ್ಕೇ ಮುತ್ತು ಕೊಡೋಕೆ ಹೋಗ್ತಾನೆ. ಇದು ಅವಳಿಗೂ ಗೊತ್ತಿದೆ. ಮುಖ್ಯ ಇಷ್ಟು ವರುಷ ಗೋಪಾಲನಿಗೆ ಮದುವೆ ಮಾಡದೆ ಬಿಟ್ಟದ್ದು ನಮ್ಮ ತಪ್ಪು. ರಂಗಪ್ಪ ಈ ಹುಡುಗಿಯರ ಮಾತು ಕೇಳಬೇಡ. ಗೋಪಾಲ ಹೆಂಡತಿಗೆ ಆಗಲೇ ಸೇವಕನಾದ ಅಂತ ಇವರು ಹೇಳೋದು ಹೊಟ್ಟೆಕಿಚ್ಚಿನ ಮಾತು ತಮ್ಮ ಗಂಡಂದಿರು ಹೇಗಿರಬೇಕು ಅಂತ ಇವರು ಬಯಸ್ತಾರೋ, ಗೋಪಾಲನ ಹೆಂಡತಿಯೂ ತನ್ನ ಗಂಡ ಹಾಗೇ ಇರಬೇಕು ಅಂತ ಬಯಸ್ತಾಳೆ. ಮುಖ್ಯ ಎಲ್ಲಾದರೂ ಸುಖವಾಗಿರಲಿ. ನಮಗೆ ಬೇಕಾದ್ದು ಗಂಡಹೆಂಡರು ಸುಖವಾಗಿರಬೇಕು. ಸೇವಕನಾಗದಿದ್ದರೆ ಗುಲಾಮನಾಗಲಿ. ಅವನುಂಟು ಅವಳುಂಟು. ಇನ್ನು ಈ ಡೆಪುಟಿಕಮಿಶನರ್ ಅಮ್ಮ; ೩೦ ರೂಪಾಯಿನಿಂದ ಈ ಜಾಗಕ್ಕೆ ಬಂದವರ ಅವಸ್ಥೆಯೆಲ್ಲಾ ಹೀಗೆಯೆ? ಸಣ್ಣತನ ಅವರನ್ನು ಬಿಡುವುದೇ ಇಲ್ಲ. ಇನ್ನೂ ಮುಂದೆ ನಾಲ್ಕು ಹೆಣ್ಣು ಇವೆ. ಒಂದೊಂದೂ ಒಂದೊಂದು ಹೆಗ್ಗಣದ ಮರಿ; ಜಗವೊಂಡು; ಇದ್ದದ್ದರಲ್ಲಿ ಗೋಪಾಲನ ಹೆಂಡತಿಯೇ ವಾಸಿ, ಅವುಗಳಿಗೆಲ್ಲಾ ಮದುವೆ ಮಾಡುವ ಹೊತ್ತಿಗೆ ಸೊರಗಿ ನಾಯಮರಿ ಆಗ್ತಾಳೆ. ಎಲ್ಲಾ ವರಗಳೂ ನಮ್ಮ ಗೋಪಾಲನಂತೆ ತಾವಾಗಿಯೇ ಹೋಗಿ ಬಲೆಗೆ ಬೀಳುವುದಿಲ್ಲ" ಎಂದರು. ಯಾವಾಗಲೂ ರಾಮಣ್ಣನವರ ಮಾತು ಸಮಂಜಸವಾಗಿಯೇ ಇರುತ್ತಿದ್ದಿತು. ಅದನ್ನು ಕೇಳಿದವರಿಗೆ ಅವರ ಮಾತಿನಲ್ಲಿ ನಂಬಿಕೆ ಬರುತ್ತಿದ್ದಿತು. ಆದರೆ

ಈಗಿನ ಅವರ ವಾದದಿಂದ ಅವರಿಗೇ ಸಮಾಧಾನವಾಗಲಿಲ್ಲ. "ಗೋಪಾಲ ಇನ್ನೂ ಸ್ವಲ್ಪ ಬೇರೆ ತರಹವಾಗಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು" ಎಂದುಕೊಂಡರು ಅವರು.

ಅಲ್ಲಿಯ ವರೆಗೆ ಬೀಗರ ಮನೆಯವರು ಯಾರೂ ವತ್ಸಲೆಯ ಸಂಗೀತವನ್ನು ಕೇಳಿರಲಿಲ್ಲ. ಆವತ್ತು ಉಂಜಲು ಉರಟಣೆಯಲ್ಲಿ ವತ್ಸಲೆ ಪಿಟೀಲು ನುಡಿಸಿ ಹಾಡುತ್ತಾಳೆ ಎಂದು, ಉಂಜಲು ಉರುಟಣೆಯ ಕಾರ್ಯಕ್ರಮವನ್ನು ಅರಿತವರು ಸ್ವಾಭಾವಿಕವಾಗಿ ನಿರೀಕ್ಷಿಸುತ್ತಿದ್ದರು. ಗಂಡಹೆಂಡರು ಸ್ವಲ್ಪ ವಯಸ್ಸಾದವರಾದುದರಿಂದ ಉಂಜಲು ಉರಟಣೆಯ ಅತಿ ಹುಡುಗಾಟದ ಹಾಸ್ಯಕ್ಕೆ ಅವಕಾಶವಿರಲಿಲ್ಲ ಹುಡುಗಿಗೆ ೧೦ ವರುಷ, ಹುಡುಗನಿಗೆ ೧೮ ವರ್ಷ ಆಗಿದ್ದರೆ ಸುತ್ತ ನೆರೆದಿರುವ ಸ್ತ್ರೀಪುರುಷರು ಎಷ್ಟು ಹಾಸ್ಯ ಹುಡುಗಾಟದಲ್ಲಿ ಲೀನರಾಗುತ್ತಾರೊ ಅಷ್ಟು ಹುಡುಗಾಟವನ್ನು ೧೬ ವರುಷದ ವಧು ಮತ್ತು ಇಪ್ಪತ್ತೈದು ವರುಷದ ವರನ ಎದುರಿಗೆ ಮಾಡುವುದಕ್ಕಾಗುತ್ತದೆಯೇ? ಇಂತಹ ವಯಸ್ಸಾದ ವಧೂವರರಿಗೆ ಈ ಹಾಸ್ಯ ಬೇಕೆಂದು ನೆರೆದವರಿಗೂ ಎನಿಸುವುದಿಲ್ಲ. ಯಾವುದೂ ಆಯಾಯಾ ವಯಸ್ಸಿನಲ್ಲಿ ಮಾತ್ರ ಶೋಭಿಸುತ್ತದೆ. ವತ್ಸಲೆಯ ಅಕ್ಕ, ಅವಳ ಮುಂದೆ ಪಿಟೀಲು ತಂದು ಇಟ್ಟಳು. ಎದುರಿಗೆ ಗೋಪಾಲ ಕುಳಿತಿದ್ದ. ಸುತ್ತಾ ಸ್ತ್ರೀಪುರುಷರು ಎಲೆ ಅಡಿಕೆ ಅಗಿಯುತ್ತಾ ಕುಳಿತಿದ್ದರು. ಸುಂದರಮ್ಮನವರು "ವತ್ಸಲಾ ಒಂದು ಹಾಡು ನುಡಿಸಿ ಹಾಡಮ್ಮ" ಎಂದರು. ವತ್ಸಲೆ ಸುಮ್ಮನೆ ಕುಳಿತಿದ್ದಳು. ಗಂಡಿನ ಕಡೆಯವರು ಒಬ್ಬರಾದ ಮೇಲೆ ಒಬ್ಬರು ಹೇಳಲು ಪ್ರಾರಂಭಿಸಿದರು. ಯಾರು ಎಷ್ಟು ಹೇಳಿದರೂ ವತ್ಸಲೆ ಬೇರೆ ಪಿಟೀಲ ಕಡೆ ಕಣ್ಣೆತ್ತಿ ನೋಡಲಿಲ್ಲ. ಹೇಳಿಹೇಳಿ ಎಲ್ಲರಿಗೂ ಬೇಜಾರಾಯಿತು. ಸುಂದರಮ್ಮನವರು ಸಿಡುಕಿದರು. ವತ್ಸಲೆಯ ತಂಗಿ ಶಾರದ ಕೋಪದಿಂದ "ಇವತ್ತೂ ನಿನ್ನ ಜಂಭ ತೋರಿಸಬೇಡ ಒಂದು ಹಾಡು ಎಂದಳು. ವತ್ಸಲೆ ಅವಳನ್ನು ನುಂಗುವಂತೆ ನೋಡಿದಳು. "ಎಲಾ ಪೋರೀ ಉರುಟಣೆ ಮುಗಿಯಲಿ ನಿನಗೆ ಇದೆ ಹಬ್ಬ" ಎಂದುಕೊಂಡಳು. ಜನರಿಗೆಲ್ಲಾ ಬೇಸರಿಕೆಯಾಯಿತು. ಸುಂದರಮ್ಮನವರ ಹಿರಿಯ ಮಗಳು ಸೀತೆಯು ಅಳಿಯ ಹೇಳಿದರೆ ಹಾಡ್ತಾಳೆ ಎಂದಳು. ಇಷ್ಟುದಿನಕ್ಕೆ ಅದೇ ಮೊದಲನೆಯ ಸಲವಾಗಿ ಗೋಪಾಲನಿಗೆ ಸ್ವಲ್ಪ ಬೇಜಾರಾಯಿತು. "ಹೆಂಡತಿ

ಹಾಡ್ತಾಳೆ. ಆಗ ನನ್ನ ನಿಜವಾದ ಅಭಿರುಚಿಯು ಈ ಹುಡುಗಿ ಆರಿಸಿದುದಕ್ಕೆ ನನ್ನನ್ನ ತಿರಸ್ಕರಿಸುತ್ತಿರುವ ಈ ನನ್ನ ಅಕ್ಕಂದಿರಿಗೆ ತಿಳಿಯುತ್ತೆ" ಎಂದು ಎದಿರುನೋಡುತ್ತಿದ್ದ ಗೋಪಾಲನಿಗೆ ವತ್ಸಲೆಯ ಈ ಮೊಂಡನ್ನು ಕಂಡು ಬೇಜಾರೇ ಆಯಿತು. ಅವನು ನಮ್ರವಾದ ಮುಖಭಾವದಿಂದ ಸ್ವಲ್ಪ ದೈನ್ಯ ದಿಂದಲೇ "ಒಂದು ಹಾಡು ಹಾಡು" ಎಂದ. ವತ್ಸಲೆಯು ಗೋಪಾಲನನ್ನು ನುಂಗುವಂತೆ ನೋಡಿದಳು. ಆಗ ಅವಳು ಕಂಡಷ್ಟು ಕುರೂಪಿಯಾಗಿ ಗೋಪಾಲನಿಗೆ ಮತ್ತಾವಾಗಲೂ ಕಾಣಲಿಲ್ಲ. ಅಲ್ಲಿಂದ ಮುಂದೆ ಬಹಳ ಕಾಲದ ವರೆಗೆ ಅವನು ಅವಳ ಆ ಮುಖಭಾವವನ್ನು ಮರೆಯಲಿಲ್ಲ. ದೇವಿ ಪ್ರಸನ್ನ ಳಾಗಲಿಲ್ಲ. ನೆರೆದಿದ್ದವರಿಗೆ ಬೇಜಾರಾಯಿತು. ಮೊಂಡು ಜಗಮೊಂಡು ಎಂಬ ಮಾತುಗಳು ಹೆಂಗಸರ ಪಕ್ಕದಿಂದ ಗುಸಗುಸನೆ ಸುಂದರಮ್ಮನವರಿಗೆ ಕೇಳಿ ಸಿದುವು. ಅವರು ಬೇಗಬೇಗ ನೆರಿದಿದ್ದವರಿಗೆ ಅರಸಿನ ಕುಂಕುಮ ಎಲೆ ಅಡಿಕೆ ಕೊಟ್ಟು ಕಳುಹಿಸಿದರು. ಗೋಪಾಲನು ಮುಖದಲ್ಲಿ ಕೆಂಡವನ್ನು ಕಾರುತ್ತಾ ಸರ್ಪದಂತೆ ಭುಸುಗುಟ್ಟುತ್ತಾ ತನ್ನ ಕೊಠಡಿಯಲ್ಲಿ ಹೋಗಿ ಬಿದ್ದುಕೊಂಡನು.

ಮದುವೆ ಪ್ರಾರಂಭವಾದಂತೆಯೇ ಕೊನೆಯಾಯಿತು. ಆವರವರಿಗೆ ಇಷ್ಟಬಂದಾಗ ಆವರವರು ಹೊರಟುಹೋದರು. ಸುಂದರಮ್ಮನವರ ಮನೆ ಮತ್ತೆ ಮೊದಲಿನಂತೆ ಕಿರೋ ಎಂದು ಹಂದಿ ಲಾಯವಾಗಿಹೋಯಿತು. ಆ ದೊಂಬಿಯಲ್ಲಿ ಗೋಪಾಲನೂ ಲೀನವಾಗಿಹೋದನು. ಮದುವೆಯಾದ ತಿಂಗಳೇ ಅವನಿಗೆ ಪ್ರಸ್ತವೂ ಆಯಿತು.

## ೮. ಅನಾಥ

ಒಂದು ವರುಷ ಕಳೆಯಿತು. ಗೋಪಾಲ ಹಿಂದುಸ್ಥಾನ್ ಬ್ಯಾಂಕಿನಲ್ಲಿ ೫೦ ರೂಪಾಯಿ ದುಡಿಯುತ್ತಿದ್ದ. ಆದರೆ ಅವನು ಬೇರೆ ಮನೆ ಮಾಡಿರಲಿಲ್ಲ, ಅವನ ಅತ್ತೆ ಮಾತ್ರ ಮಾತುಬಂದಾಗ "ಪಾಪ ಐವತ್ತು ರೂಪಾಯಿ ಬರುತ್ತೆ. ಅದು ಸಂಸಾರಕ್ಕೆ ಎಲ್ಲಿಸಾಕು ? ನಮಗೆ ಇದೊಂದು ಲೆಕ್ಕವೆ. ಇಲ್ಲೇ ಇದಾರೆ" ಎನ್ನುತ್ತಿದ್ದರು. ಗೋಪಾಲನಿಗೆ ಆಗಲೇ ಮಂಕು ಕಡಿಮೆಯಾಗಿ "ನಾನು ಈ ಸಂಸಾರಕ್ಕೆ ಹೇಗೆ ಗಂಟುಬಿದ್ದೆ. ನನಗೆ ಈ ಹುಚ್ಚು ಹೇಗೆ ಹಿಡಿಯಿತು.

ಇವರು ಹಿಂದೆ ಗೊತ್ತಿರಲಿಲ್ಲ, ಮುಂದೆ ಗೊತ್ತಿಲ್ಲ" ಎಂದು ಕೊರಗುತ್ತಿದ್ದ. ಯಾವ ಸಂಗೀತಕ್ಕೆ ಆಸೆಪಟ್ಟು ಗೋಪಾಲ ವತ್ಸಲೆಯನ್ನು ಮದುವೆ ಯಾದನೋ ಆ ಸಂಗೀತದ ಮೇಲೆ ವತ್ಸಲೆಯ ಆಸೆ ಇದ್ದಕ್ಕಿದಂತೆ ಕಡಿಮೆ ಯಾಯಿತು. ಗೋಪಾಲನ ಪಿಟೀಲೂ, ಅವಳ ಪಿಟೀಲೂ ಜೋಪಾನವಾಗಿ ಗೋಡೆ ಮೇಲೆ, ಏಣಿಯ ಸಹಾಯವಿಲ್ಲದೆ ತೆಗೆಯುವುದಕ್ಕೆ ಆಗದ ಸ್ಥಳದಲ್ಲಿ ಗೂಟದಲ್ಲಿ ನೇತುಬಿದ್ದು ಧೂಳು ಮೇಯುತ್ತಿದ್ದವು. ಮದುವೆಯಾದ ಎರಡು ಮೂರು ತಿಂಗಳು ಮೊದಲಿನ ಕೋಪದಲ್ಲಿ ಗೋಪಾಲ "ಪಿಟೀಲು ನುಡಿಸು" ಎಂದು ವತ್ಸಲೆಗೆ ಹೇಳಲಿಲ್ಲ. ಅನಂತರ ಒಂದು ಎರಡು ಸಲ ಈ ಸೂಚನೆ ಅವನು ಕೊಟ್ಟಾಗ ಅವಳು ಅದನ್ನು ಗಮನಿಸಲಿಲ್ಲ. ಅತ್ತೆ ಮಾವ ತನ್ನನ್ನು ಮರೆತಂತೆ ಹೆಂಡತಿಯೂ ತನ್ನನ್ನು ಮರೆತಳು ಎಂದು ಗೋಪಾಲನಿಗೆ ತೋರ ತೊಡಗಿತು. ಅವಳ ಪಾಡಿಗೆ ಅವಳು ತನ್ನ ಊಟ ಉಡಿಗೆತೊಡಿಗೆ ಇವು ಗಳಲ್ಲಿ ನಿರತಳಾಗಿದ್ದಳು. ಮನೆಯಲ್ಲಿ ಅಡಿಗೆಯವನು ಅಡಿಗೆ ಮಾಡುತ್ತಿದ್ದ. ಗೋಪಾಲ ಒಂದೊಂದು ದಿನ ಸಿನಿಮಾ ಮುಂತಾದುವುಗಳಿಗೆ ಹೋಗಿಬರು ವುದು ಹೊತ್ತಾದಾಗ ಅಡಿಗೆಯವನ ಹೊರತು ಉಳಿದವರೆಲ್ಲಾ ಮಲಗಿರು ತ್ತಿದ್ದರು. ಗೋಪಾಲ ಊಟ ಮಾಡಿ ಮಲಗಿಕೊಳ್ಳುತ್ತಿದ್ದ. ಒಂದು ದಿನ ಗೋಪಾಲ ಹೆಂಡತಿಯೊಡನೆ "ಒಬ್ಬ ಪಿಟೀಲು ಮೇಷ್ಟರನ್ನು ಗೊತ್ತುಮಾಡು ತ್ತೇನೆ. ತಿಂಗಳಿಗೆ ೨೫ ರೂಪಾಯಿ ಕೊಟ್ಟರೆ ಇಬ್ಬರಿಗೂ ಪಾಠ ಹೇಳಿಕೊಡು ತ್ತಾನೆ. ಒಂದು ವರುಷ ಕಲಿತುಬಿಡೋಣ. ಮುಂದೆ ಇಂತಹ ಅವಕಾಶ ಸಿಕ್ಕು ವುದು ಕಷ್ಟ. ಇಗ ನಿರ್ಯೋಚನೆಯಾಗಿದೆ" ಎಂದ. ಆದರೆ ವತ್ಸಲೆ ಸ್ವಲ್ಪವೂ ಉತ್ಸಾಹ ತೋರಿಸಲಿಲ್ಲ.

ಹೀಗೆ ಒಂದು ವರುಷ ಅನುಭವಿಸುವುದರಲ್ಲಿ ಗೋಪಾಲನಿಗೆ ಪತ್ತು ವರುಷ ವಯಸ್ಸಾದಂತೆ ತೋರಿತು. ಅವನ ಆಯುಸ್ಸು ಅಲ್ಲಿಗೇ ಪೂರ್ತಿ ಯಾದಂತೆಯೂ ಅವನಿಗೆ ತೋರಿತು. ಬೆಳಿಗ್ಗೆ ಎದ್ದು ಸ್ನಾನಮಾಡಿ ಕಾಫಿ ಕುಡಿದು ಪರಿಚಾರಕನ ಕೈಲಿ ಊಟಮಾಡಿ ಬ್ಯಾಂಕಿಗೆ ಹೋಗುವುದು; ಅಲ್ಲಿ ಕ್ಯಾಷಿಯರ್ ಕೈನಲ್ಲಿ ಸಂದರ್ಭಾನುಸಾರ ಬೈಗಳ ತಿನ್ನುವುದು, ಸಾಯಂ ಕಾಲದಮೇಲೆ ಸುಸ್ತು ಮುಖ ಹಾಕಿಕೊಂಡು ಮನೆಗೆ ಹೊರಡುವುದು. ಗೋಪಾಲ ಮನಸ್ಸು ಬಂದ ದಿನ ಸಿನಿಮಾಗಳಿಗೆ ಹೋಗುತ್ತಿದ್ದ. ಒಳ್ಳೆಯ

ಘನ ವಿದ್ವಾಂಸರ ಸಂಗೀತಕಛೇರಿ ನಡೆಯುವ ದಿನ, ಗೋಪಾಲ ವತ್ಸಲೆಯನ್ನು ಬಲಾತ್ಕಾರವಾಗಿ ಎಳೆದುಕೊಂಡು ಹೋಗುತ್ತಿದ್ದ. ವತ್ಸಲೆಗೆ ಸಂಗೀತದ ಸ್ವಾರಸ್ಯ ಅನುಭವಿಸುವ ಶಕ್ತಿ ಕಡಿಮೆಯಾಯಿತೆಂದಲ್ಲ. ಆದರೆ ಅವಳಿಗೆ ಅದು ಜೀವನದಲ್ಲಿ ಮೊದಲಿನಷ್ಟು ಪ್ರಾಮುಖ್ಯವಾಗಲಿಲ್ಲ. ಈ ಒಂದು ವರುಷದಲ್ಲಿ ಗೋಪಾಲನಿಗೆ ಪ್ರತಿತಿಂಗಳೂ ಐವತ್ತು ರೂಪಾಯಿ ಸಂಬಳವೇನೋ ಬರುತ್ತಿದ್ದಿತು. ಆದರೆ ಅವನು ನಿರೀಕ್ಷಿಸಿದ್ದಂತೆ ಅವನ ಕೈಯಲ್ಲಿ ಮೂರು ಕಾಸೂ ಉಳಿಯಲಿಲ್ಲ. ಗೋಪಾಲ ಮನಸ್ಸು ಮಾಡಿದ್ದರೆ ಉಳಿಸಬಹುದಾಗಿತ್ತು. ಆದರೆ ಅವನಿಗೆ ಜೀವನದಲ್ಲಿ ಒಂದು ವರುಷಕ್ಕೆ ಮುಂಚೆ ಇದ್ದ ಉತ್ಸಾಹ ಈಗ ಇರಲಿಲ್ಲ. ಪ್ರತಿತಿಂಗಳೂ ೮-೧೦ ರೂಪಾಯಿ ಸಿನಿಮಾ ಸಂಗೀತಗಳಿಗೆ; ಅಷ್ಟೇ ಹಣ ಕಾಫಿ ತಿಂಡಿಗೆ, ಡ್ರೆಸ್ ವಗೈರೆಗಳಿಗೆ. ಆಗಾಗ್ಗೆ ಗೋಪಾಲ ಹೆಂಡತಿಗೆ ೧೫-೨೦ ರೂಪಾಯಿ ಕೈಯ್ಯಲ್ಲಿದ್ದಷ್ಟು ಕೊಡುತ್ತಿದ್ದ. ಅವಳು ಯಾವ ಮಾತನ್ನೂ ಆಡದೆ " ಇದೇನು ಮಹಾ " ಎಂಬ ಮನೋಭಾವದಿಂದ ಅದನ್ನು ತೆಗೆದು ಪೆಟ್ಟಿಗೆಗೆ ಹಾಕುತ್ತಿದ್ದಳು. ರೂಪಾಯಿ ಕೊಟ್ಟಾಗ ಅವಳು ಸಂತೋಷವನ್ನು ವ್ಯಕ್ತಪಡಿಸುತ್ತಿರಲಿಲ್ಲ. ಕೊಡದಿದ್ದರೆ ಆಕ್ಷೇಪಿಸುತ್ತಲೂ ಇರಲಿಲ್ಲ. ಗೋಪಾಲ ಅದೊಂದು ಮಾಸಾಸನವೆಂದುಕೊಂಡು " ಹೇಗಿದ್ದರೂ ಈ ಮನೆಯಲ್ಲಿ ಊಟ ಮಾಡುತ್ತಿದ್ದೇನೆ. ನನ್ನ ಭಾಗದ ಖರ್ಚನ್ನಾದರೂ ಕೊಟ್ಟು ಇವರ ಅನ್ನದ ಋಣದಿಂದಲಾದರೂ ಪಾರಾಗೋಣ. ಅನ್ನದ ದಾಕ್ಷಿಣ್ಯದಷ್ಟು ಮನುಷ್ಯನನ್ನು ಕೆಡಿಸುವುದೂ ಯಾವುದೂ ಇಲ್ಲ " ಎಂದುಕೊಂಡ.

ಸುಂದರಮ್ಮನವರೂ ಸುಂದರರಾಜನ್‌ರವರೂ, ಗೋಪಾಲ ವತ್ಸಲೆಯರ ವಿಷಯದಲ್ಲಿ ತಮ್ಮ ಕರ್ತವ್ಯ ನೆರವೇರಿದಂತೆ ಭಾವಿಸಿಕೊಂಡು, ವತ್ಸಲೆಯ ತಂಗಿ ಶಾರದೆಯ ಗಂಡನಾಗಬೇಕಾದವನ ಬೇಟೆಯಲ್ಲಿ ತೊಡಗಿದ್ದರು. ಅದು ಯಾವಾಗಲೂ ಅವರ ಸ್ವಭಾವವೇ ಆಗಿತ್ತು. ಅವರ ಹಿರಿಯ ಮಗಳು ಸೀತೆಗೆ ಆರು ವರುಷಗಳ ಕೆಳಗೆ ಮದುವೆ ಮಾಡಿದ ಮೇಲೆ ಅವಳ ಗಂಡನನ್ನೂ ಮಗನನ್ನೂ ಮನೆಯಲ್ಲಿಯೇ ಇಟ್ಟುಕೊಂಡು ಅಲ್ಲಿಂದ ಮುಂದೆ ಆ ವಿಚಾರ ಮರೆತರು. ಈಗ ಒಂದು ವರುಷದ ಕೆಳಗೆ ವತ್ಸಲೆಗೆ ಮದುವೆಯಾದ ಮೇಲೆ ಅವಳ ಗಂಡನನ್ನೂ ಮಗಳನ್ನೂ ಮನೆಯಲ್ಲಿಟ್ಟುಕೊಂಡು ಅನಂತರ ಅವರ

ವಿಚಾರ ಮರೆತರು. ಸುಂದರಮ್ಮನವರು "ನಮ್ಮ ಅಳಿಯನಾಗುವವನು ಏನು ದುಡಿದು ತಿನ್ನಬೇಕೇ. ದುಡಿದರೆ ಉಂಟು ಇಲ್ಲದಿದ್ದರೆ ಇಲ್ಲ ಅಂತ ದೇವರು ಇಡಲಿಲ್ಲ. ಅಳಿಯ ಅಂತ ಒಬ್ಬ ದೊರೆತರೆಸಾಕು. ದೇವರುಕೊಟ್ಟಿದ್ದನ್ನು ತಿಂದು ಕೊಂಡು ಮನೆಯಲ್ಲಿಯೇ ಇರಲಿ. ದೇವರು ನಮಗೇನೂ ಕಡಮೆ ಮಾಡಿಲ್ಲ" ಎನ್ನುತ್ತಿದ್ದರು. ಮದುವೆಯಾದ ಒಂದೆರಡು ತಿಂಗಳು ಕಾಲ ಗೋಪಾಲ ತನ್ನ ಹಿರಿಯ ಶಡ್ಡಕನನ್ನು ನೋಡಿ "ಎಲಾ ಪ್ರಾಣಿ. ಇದು ಇಲ್ಲಿ ಐದಾರು ವರುಷ ದಿಂದ ಇದೆಯಲ್ಲ ಎರಡು ಮಕ್ಕಳು ಬೇರೆ ಆಯಿತು. ಇದು ಹೀಗೆಯೇ ನಿರ್ಯೋಚನೆಯಿಂದ ತನ್ನ ಆಯುಸ್ಸನ್ನೆಲ್ಲಾ ಇಲ್ಲೇ ಕಳೆಯುವುದರಲ್ಲಿ ಸಂಶಯವಿಲ್ಲ" ಎನ್ನುತ್ತಿದ್ದ. ಆದರೆ ಈಚೆಗೆ ಬಗಬರುತ್ತಾ ತನ್ನ ಶಡ್ಡಕನ ಅವಸ್ಥೆ ತನಗೂ ಬರುವಂತೆಯೇ ತೋರಿತು. ಸುಂದರಮ್ಮನವರು "ನಾವು ಇಲ್ಲಿ ಇರುವವರೆಗೆ ನಮ್ಮ ಹೆಣ್ಣು ಮಕ್ಕಳನ್ನು ತಿಂಡಾಡಲು ಅಲ್ಲಿ ಇಲ್ಲಿ ಕಳುಹಿಸುವುದಿಲ್ಲ. ಅಳಿಯ ದುಡಿದು ತಂದು ಇದಕ್ಕಿಂತ ಚೆನ್ನಾಗಿ ಮಗಳನ್ನು ಸಾಕುವುದು ನಮಗೆ ತಿಳಿಯದ ಸಂಗತಿಯಲ್ಲ. ಹೀಗೆ ಸಂಸಾರ ನಡೆಸಬೇಕಾದರೆ ಗಂಡಹೆಂಡರಿಗೆ ತಿಂಗಳಿಗೆ ನೂರೈವತ್ತು ರೂಪಾಯಿ ಬೇಕಾಗುತ್ತೆ. ದೇವರು ಕೈತುಂಬ ಎಂಟುನೂರು ರೂಪಾಯಿ ಕೊಟ್ಟರೂ ಸಾಕು ಸಾಲದು ಅನ್ನೋ ಹಾಗೆ ಆಗ್ತಾ ಇದೆ. ಈಗ ಮನೆ ಬಿಟ್ಟು ಹೋಗೇಕೆ ಯಾರಿಗೆ ಆಗಿರೋದು ಏನು? ನಾನು ಯಾರಿಗೆ ಏನು ಕಡಿಮೆ ಮಾಡಿದೇನೆ. ಉಣ್ಣೋಕೆ ಇಲ್ಲವೆ? ಉಡೋಕೆ ಇಲ್ಲವೇ? ಒಡವೆ ವಸ್ತುಗಳಿಗೆ ಕೊರತೆಯೇ. ಸೀತೆಯ ಮೈ ಮೇಲೆ ಮೂರು ಸಾವಿರ ರುಪಾಯಿ ನಗ ಹಾಕಿದೇನೆ. ವತ್ಸಲೆ ಮೈ ಮೇಲೆ ಮೂರು ಸಾವಿರದ್ದು ಹಾಕಿದ್ದೇನೆ. ಈ ಮನೆ ಬಿಟ್ಟು ಇವರು ಹೋದರೆ ಹೊಟ್ಟೆಗೆ ತಿನ್ನೋಕೆ ಒಂದೊಂದಾಗಿ ಈ ಒಡವೆಯಲ್ಲಾ ಮಾರ್ಕೊತ್ತಾರೆ" ಎಂದು ಹೇಳುತ್ತಿರುವಾಗ ಸಂಗತಿಗಳು ಯಾವ ದಿಕ್ಕನ್ನು ಹಿಡಿದು ಹೋಗುತ್ತಿವೆ ಎಂಬುದು ಗೋಪಾಲನಿಗೆ ತಿಳಿಯದಿರಲಿಲ್ಲ. ಆ ಮನೆಯ ಹೆಣ್ಣು ಮಕ್ಕಳು ಸಾಮಾನ್ಯವಾಗಿ ತಂದೆತಾಯಿಗಳ ಆಶ್ರಯವನ್ನು ಬಿಟ್ಟು ಹೊರಗೆ ಹೋಗಲು ಒಪ್ಪುತ್ತಿರಲಿಲ್ಲವೆಂಬುದನ್ನು ತಿಳಿಯಲು ಅವನಿಗೆ ಕಷ್ಟವಾಗಲಿಲ್ಲ. ವತ್ಸಲೆ ಸ್ವಾಭಾವಿಕವಾಗಿ ಇಂತಹ ಸಂದರ್ಭಗಳಲ್ಲಿ ಆಡುತ್ತಿದ್ದ ಮಾತುಗಳಿಂದ ಗೋಪಾಲನಿಗೆ ಅವಳು ಅವಳ ಅಕ್ಕ ಸೀತೆಗಿಂತ ಬೇರೆ ತರವಾಗಿ ಇರುವುದು ಸಾಧ್ಯವೆಂದು

ತೋರಲಿಲ್ಲ. ಆದರೆ "ಹೆಂಗಸಾದವಳಿಗೆ ಗಂಡನಲ್ಲವೇ ಮಾರ್ಗದರ್ಶಕ. ಸೀತೆ ಎಲ್ಲಿ ವತ್ಸಲೆ ಎಲ್ಲಿ" ಎಂದುಕೊಂಡ ಗೋಪಾಲ.

ಹೀಗೆ ಒಂದು ವರುಷ ಕಳೆದನಂತರ ಒಂದು ದಿನ ಗೋಪಾಲ ರಾತ್ರಿ ಎರಡನೆಯ ಆಟ ಒಂದು ಸಿನಿಮಾಕ್ಕೆ ಹೋಗಿದ್ದ. ಮದುವೆಯಾದ ಮೇಲೆ ಅವನು ಕಳೆದುಕೊಂಡ ಅನೇಕ ಸ್ವಾತಂತ್ರ್ಯಗಳ ಪೈಕಿ ಈ ರಾತ್ರಿ ಎರಡನೆಯ ಸಿನಿಮಾಕ್ಕೆ ಹೋಗುವುದೂ ಒಂದಾಗಿತ್ತು. ತನ್ನ ಹೆಂಡತಿಗಾಗಿ ಆ ಸ್ವಾತಂತ್ರ್ಯವನ್ನು ಅವನು ಕಳೆದುಕೊಂಡಿದ್ದರೆ ಅವನಿಗೆ ಅದರಿಂದ ಬೇಜಾರಾಗುತ್ತಿರಲಿಲ್ಲ. ಸಂತೋಷವೇ ಉಂಟಾಗುತ್ತಿದ್ದಿತು. ಯಾವ ತ್ಯಾಗದಿಂದ ಹೆಂಡತಿಗೆ ನನ್ನ ನಿಜವಾದ ಯೋಗ್ಯತೆಯನ್ನು ತೋರಿಸಲಿ ಎಂಬುದಾಗಿ ಅವನು ಅನೇಕ ಸಲ ಯೋಚಿಸಿದ್ದನು. ಆದರೆ ಎರಡನೆಯ ಸಿನಿಮಾಕ್ಕೆ ಹೋಗುವ ಸ್ವಾತಂತ್ರ್ಯ ಕಳೆದುಕೊಂಡಿದ್ದುದು ಹೆಂಡತಿಗಾಗಿ ಅಲ್ಲ. ಅವನ ಅತ್ತೆ ಮಾವಂದಿರಿಗಾಗಿ; ಬ್ಯಾಂಕಿನಲ್ಲಿ ಕೆಲಸ ಅನೇಕ ದಿನ ರಾತ್ರಿ ಎಂಟು ಗಂಟೆಗೆ ಮುಗಿಯುತ್ತಿತ್ತು. ಆದುದರಿಂದ ಗೋಪಾಲನಿಗೆ ಮೊದಲ ಸಿನಿಮಾ ಆಟಕ್ಕೆ ಹೋಗಲು ಅವಕಾಶವಾಗುತ್ತಿರಲಿಲ್ಲ. ಒಂದೆರಡುಸಲ ಅವನು ಹೆಂಡತಿಯನ್ನು ಎರಡನೆಯ ಆಟಕ್ಕೆ ಜತೆಯಲ್ಲಿ ಕರೆದುಕೊಂಡು ಹೋಗಬೇಕೆಂದು ಪ್ರಯತ್ನಿಸಿದ. ಅವಳು "ನನಗೆ ನಿದ್ರೆ ಬರುತ್ತೆ. ಎಲ್ಲರ ಜತೆಯಲ್ಲಿ ನಾನು ಸಾಯಂಕಾಲದ ಆಟಕ್ಕೇ ಹೋಗುತ್ತೇನೆ" ಎಂದಳು. ಅಲ್ಲಿಂದ ಆಚೆಗೆ ಗೋಪಾಲ ತನಗೆ ಸಿನಿಮಾಕ್ಕೆ ಹೋಗಬೇಕೆಂದು ತೋರಿದಾಗ "ಈ ಬಲಾತ್ಕಾರ ಹೆಂಡತಿಯ ಮೇಲೆ ಹೊರಿಸಬಾರದು. ಅವಳಿಗೆ ಇಷ್ಟವಿಲ್ಲದಿದ್ದರೆ ಬೇಡ." ಎಂದುಕೊಂಡು ತಾನೊಬ್ಬನೇ ಹೋಗುತ್ತಿದ್ದ. ಆದರೆ ಪ್ರತಿಯೊಂದು ಸಲ ಸಿನಿಮಾಕ್ಕೆ ಹೋಗಿ ಬಂದಾಗಲೂ ಅವನಿಗೆ ತನ್ನಲ್ಲಿಯೇ ತಿರಸ್ಕಾರವುಂಟಾಗುತ್ತಿದ್ದಿತು. ಸುಂದರರಾಜನ್‌ರವರ ಬಾಗಿಲಿನಲ್ಲಿ ಅವರ ಒಂದು ನಾಯಿಯನ್ನು ಯಾವಾಗಲೂ ಕಟ್ಟಿದ್ದರು. ಅದು ಗೋಪಾಲನು ರಾತ್ರಿ ಒಂದು ಗಂಟೆಗೆ ಮನೆಯ ಬಾಗಿಲಿಗೆ ಬಂದ ಕೂಡಲೇ ಗಟ್ಟಿಯಾಗಿ ಬಗುಳಿ ಬಿಡುತ್ತಿತ್ತು. ಸಂದರರಾಜನ್‌ರವರಿಗೆ ವಯಸ್ಸಾಗುತ್ತಾ ಬಂದುದರಿಂದ ಅವರಿಗೆ ರಾತ್ರಿ ಹಾಸಿಗೆ ಮೇಲೆ ಮಲಗಿದ ಬಹಳ ಹೊತ್ತಿನವರೆಗೆ ನಿದ್ರೆ ಬರುತ್ತಿರಲಿಲ್ಲ. ಹನ್ನೆರಡುಗಂಟೆಮೇಲೆ ಒಂದುಸಲ ನಿದ್ರೆ ಬಂದರೆ ಮತ್ತೆ ಬೆಳಗಿನ ಜಾವ ಮೂರು ಗಂಟೆಗೇ ಎಚ್ಚರವಾಗಿ ಬಿಡುತ್ತಿದ್ದಿತು. ಮಲಗಿದ

ಕೂಡಲೆ ಅವರಿಗೆ ಯಾವುದಾದರೂ ಕಾರಣದಿಂದ ಎಚ್ಚರವಾಗಿ ಬಿಟ್ಟರೆ ಮುಂದೆ ಆ ರಾತ್ರಿಯಲ್ಲಾ ಅವರಿಗೆ ನಿದ್ರೆ ಬರುತ್ತಿರಲಿಲ್ಲ. ಮರುದಿವಸವೆಲ್ಲಾ ಅವರಿಗೆ ಎಲ್ಲರ ಮೇಲೂ ಬೇಜಾರೂ ಸಿಟ್ಟೂ ಉಂಟಾಗುತ್ತಿದ್ದಿತು. ಆಫೀಸಿನಲ್ಲಿ ಗುಮಾಸ್ತರ ಮೇಲೆಲ್ಲಾ ರೇಗುತ್ತಿದ್ದರು. ಕೋರ್ಟಿನಲ್ಲಿ ಆಪಾದಿತರಿಗೆ "ಮಾಗ್ಸಿಮಮ್ ಶಿಕ್ಷೆ" ವಿಧಿಸುತ್ತಿದ್ದರು. ಮನೆಯಲ್ಲಿ ಒಂದೇ ಸಮನೆ ಸಿಡಿ ಸಿಡಿಗುಟ್ಟುತ್ತಿದ್ದರು. ಈ ಪ್ರಸಂಗ ಯಾವಾಗಲೂ ಗೋಪಾಲ ಎರಡನೆ ಆಟ ಸಿನಿಮಾಕ್ಕೆ ಹೋದಾಗಲೇ ಸಂಭವಿಸುತ್ತಿದ್ದಿತು.

ಈ ಕಾರಣದಿಂದ ಗೋಪಾಲ ಸಾಮಾನ್ಯವಾಗಿ ಸಿನಿಮಾ ಎರಡನೆಯ ಆಟಕ್ಕೆ ಹೋಗುತ್ತಿರಲಿಲ್ಲ. ಅದನ್ನು ನೆನೆಸಿಕೊಂಡಾಗಲೆಲ್ಲಾ ಅವನಿಗೆ ಸಿಟ್ಟೂ ತನ್ನಲ್ಲಿಯೇ ತಿರಸ್ಕಾರವೂ ಉಂಟಾಗುತ್ತಿದ್ದಿತು. ನಾಯಿ ಬಗುಳಿದ ಕೂಡಲೆ ಮನೆಯವರಿಗೆಲ್ಲಾ ಎಚ್ಚರವಾಗುತ್ತಿದ್ದಿತು. ಬಾಗಿಲಿನ ಎಡಗಡೆ ರೂಮಿನಲ್ಲಿ ಸುಂದರರಾಜನ್‌ರವರು ಧೂಥರಿಕೆ ಎಂದುಕೊಂಡು ಮಂಚದ ಒಂದು ಮಗ್ಗಲಿ ನಿಂದ ಇನ್ನೊಂದು ಕಡೆಗೆ ಮಗ್ಗಲಾಗುತ್ತಿದ್ದರು. ಕೀಲುಗಳು ಸಡಿಲವಾಗಿದ್ದ ಮಂಚ ಭಾರವನ್ನು ತಡೆಯಲಾರದೆ ಕನಿಕರವನ್ನು ಬೇಡುವ ಧ್ವನಿಯಲ್ಲಿ ಕಿರೋ ಎನ್ನುತ್ತಿದ್ದಿತು. ಸಂದರಮ್ಮನವರು ಒಂದೇ ಸಲಕ್ಕೆ ಹನ್ನೆರಡು ಪಟಾಸು ಸದ್ದಾದಂತೆ ಕೆಮ್ಮುತಿದ್ದರು. ಸುಂದರರಾಜರ್‌ರವರ ಮನೆಯ ಹೊರಬಾಗಿಲು ಸ್ವಲ್ಪ ಬಿಗಿಯಾಗಿದ್ದಿತು. ಅದು ಏನುಮಾಡಿದರೂ ಹಾಕಿದರೆ ತೆಗೆಯುವುದಕ್ಕೆ ಬರುತ್ತಿರಲಿಲ್ಲ. ಬಾಗಿಲಿನ ಒಂದು ತುದಿಯನ್ನು ಬೆಂಚಿಕಡ್ಡಿಯಷ್ಟು ಪತ್ತರಿ ಹಿಡಿದು ತೆಗೆದು ಹಾಕಿದ್ದರೆ ಅದನ್ನು ಹಾಕುವುದು ತೆಗೆಯುವುದು ಸುಲಭ ವಾಗುತ್ತಿತ್ತು. ಆದರೆ ಸುಂದರರಾಜನ್‌ರವರು ಪ್ರಾಣ ಹೋದರೂ ಬಡಗಿ ಬಾಗಿಲು ಮುಟ್ಟಲು ಅವಕಾಶ ಕೊಡುತ್ತಿರಲಿಲ್ಲ. "ಈಗ ಹತ್ತರಿ ಹಿಡಿದರೆ ಬೇಸಿಗೆಯಲ್ಲಿ ಸಡಿಲವಾಗತ್ತೆ. ಮಧ್ಯೆ ಜಾಗ ಬಿಡುತ್ತೆ" ಎನ್ನುತ್ತಿದ್ದರು. ಆ ಬಾಗಿಲು ಎಡಗಡೆಯದನ್ನು ಅಮುಕಿ ಕಾಲಿನಿಂದ ಘರ್‌ಎಂದು ಒದೆದಹೊರತು ಬಲಗಡೆಯದು ಸಡಿಲ ಬಿಡುತ್ತಿರಲಿಲ್ಲ. ನಾಯಿ ಬಗುಳಿದನಂತರ ಬಾಗಿಲಬಳಿ ಮಲಗಿದ್ದ ಆಳು ಎದ್ದು, ಬಾಗಿಲನ್ನು ಒದೆದು "ಬೋಲ್ಟುಗಳನ್ನು" ತೆರೆ ಯುವ ವೇಳೆಗೆ ಕೋಟೆ ಬಾಗಿಲನ್ನು ತೆರೆದ ಶಬ್ದವಾಗುತ್ತಿತ್ತು. ಬಾಗಿಲು ತೆರೆದಮೇಲೆ, ಇಷ್ಟೆಲ್ಲಾ ಗದ್ದಲವಾದರೂ ನಿರ್ಜನವಾದ ಮನೆಯಂತಿದ್ದ ಆ ಮನೆ

ಯನ್ನು ಗೋಪಾಲನು ಪ್ರವೇಶಿಸುತ್ತಿದ್ದನು. ಆಗ ಅಡಿಗೆಯವನು, ಹಾಸಿಗೆಯಿಂದ ಎದ್ದು ಕಣ್ಣು ಒರಸಿಕೊಳ್ಳುವುದು ಅವನ ಕಣ್ಣಿಗೆ ಬೀಳುತ್ತಿದ್ದಿತು. ಗೋಪಾಲನು ಊಟ ಮಾಡುವುದಿಲ್ಲವೆಂದರೂ ಅಡಿಗೆಯವನು ಕೇಳುತ್ತಿರಲಿಲ್ಲ. "ನೀವು ಊಟ ಮಾಡದಿದ್ದರೆ, ಅಮ್ಮಾವರು (ಸುಂದರಮ್ಮನವರು) ತಮ್ಮನ್ನು ಎಬ್ಬಿಸಬೇಕೆಂದು ಹೇಳಿದ್ದಾರೆ." ಎನ್ನುತ್ತಿದ್ದನು. ಮೊದಮೊದಲು "ಅವರನ್ನು ಯಾಕೆ ಏಳಿಸಬೇಕು' ಎಂದು ಗೋಪಾಲ ಸುಮ್ಮನೆ ಎಲೆಯ ಮುಂದೆ ಕೂಡುತ್ತಿದ್ದನು. ಹೀಗಾಗಿ ಕ್ರಮೇಣ ಅವನು ಬಂದಾಗ ಸುಂದರಮ್ಮನವರು ಏಳದೆ ಇರುವುದು ಸಾಮಾನ್ಯವಾಗಿ ಸ್ವಾಭಾವಿಕವೇ ಆಯಿತು.

ಮೊದಲು ಮೊದಲು ತಾನು ಹೊತ್ತಾಗಿ ಬಂದಾಗ ವತ್ಸಲೆ ತನಗಾಗಿ ಕಾಯ್ದುಕೊಂಡು ಇರದುದನ್ನೂ, ತಾನು ಬಂದಾಗ ಅವಳು ಏಳದೇ ಇದ್ದದ್ದನ್ನೂ ಕುರಿತು ಗೋಪಾಲ ಗಮನಿಸಲಿಲ್ಲ. ದಾರಿಯಲ್ಲಿ ಬರುತ್ತಾ "ಪಾಪ ಎಲ್ಲಿ ಎಚ್ಚರವಾಗಿಯೇ ಕಾಯ್ದುಕೊಂಡಿರುತ್ತಾಳೋ ? ಎಂಬ ಅಪರಾಧಿ ಭಾವದಿಂದಲೇ ಗೋಪಾಲ ಮನೆಗೆ ಬರುತ್ತಿದ್ದ. ಮನೆಗೆ ಬಂದನಂತರ ವತ್ಸಲೆ ತನ್ನನ್ನು ಕಾಯ್ದುಕೊಂಡು ಎಚ್ಚರವಾಗಿ ಕುಳಿತಿಲ್ಲದೆ ಇದ್ದುದನ್ನೂ, ತಾನು ಬಂದು ಕೋಟೆ ಬಾಗಿಲು ಒಡೆದಂತೆ ಇಷ್ಟು ಗದ್ದಲವಾದರೂ ಅವಳು ಒಂದು ಸಲವಾಗಲಿ ಏಳದೆ ಇದ್ದುದನ್ನು ಕಂಡು ಅವನಿಗೆ "ಪಾಪ ನಿದ್ರೆ ಮಲಗಿಕೊಳ್ಳಲಿ" ಎಂದು ಸಮಾಧಾನವಾದರೂ ಸಂತೋಷವಾಗುತ್ತಿರಲಿಲ್ಲ. ಬರಬರುತ್ತಾ ಗೋಪಾಲನಿಗೆ ಆ ದೊಡ್ಡ ಮನೆಯಲ್ಲಿ ತಾನೊಬ್ಬನೇ ಅನಾಥನೆಂದು ತೋರಿತು. ಅವನಿಗೆ ಮುಖ್ಯವಾಗಿ ಹೆಂಡತಿಯ ಮೇಲೆ ಅಸಮಾಧಾನವುಂಟಾಯಿತು. "ನನ್ನ ಕೆಲಸದಿಂದ ನನಗೆ ಸಾಯಂಕಾಲ ಸಿನಿಮಾಕ್ಕೆ ಹೋಗಲು ವಿರಾಮ ಸಿಕ್ಕುವುದಿಲ್ಲ. ಆದುದರಿಂದ ನಾನು ಈ ಹೊತ್ತಿಗೇ ಮನೆಗೆ ಹಿಂದಿರುಗಬೇಕು. ಇವಳು ನನ್ನ ಕಾರ್ಯಕ್ರಮಕ್ಕೆ ಹೊಂದಿಕೊಳ್ಳಬೇಡವೆ ? ನಾನು ಬರುವವರೆಗೆ ಎಚ್ಚರವಾಗಿಲ್ಲದಿದ್ದರೂ ನಾನು ಬಂದಾಗಲಾದರೂ ಎದ್ದು ಓಡಾಡಬೇಡವೆ ? ಇರಲಿ. ಇವತ್ತಲ್ಲ. ನಾಳೆ ಸರಿ ಹೋಗುತ್ತೆ" ಎಂದು ಕೊಂಡು ಸುಮ್ಮನಾಗುತ್ತಿದ್ದ. ಕೆಲವು ದಿನ ಗೋಪಾಲ ಪರಿಚಾರಕನಿಗೆ "ನಾನು ಊಟ ಮಾಡುವುದಿಲ್ಲ. ನೀನು ಮಲಗಿಕೊ" ಎಂದು ಹೇಳಿಬಿಡುತ್ತಿದ್ದ. ಸುಂದರಮ್ಮ "ನನ್ನನ್ನು ಎಬ್ಬಿಸು" ಎಂದು ಹೇಳಿದ್ದ ಕಾಲದ ಅಭ್ಯಾಸ ಕಳೆದು ಹೋಗಿದ್ದುದ

ರಿಂದ ಅಡಿಗೆಯವನು ತೆಪ್ಪಗೆ ಹೋಗಿ ಮಲಗಿಕೊಳ್ಳುತ್ತಿದ್ದ. ಗೋಪಾಲ ಕೆ ಕಾಲು ತೋಳೆದುಕೊಂಡು ನಲ್ಲಿಯಲ್ಲಿ ನೀರು ಕುಡಿದು ಹೋಗಿ ಹಾಸಿಗೆ ಮೇಲೈ ಬಿದ್ದುಕೊಳ್ಳತ್ತಿದ್ದ. ಸಾಧಾರಣವಾಗಿ ಎಚ್ಚರವಾಗಿರುತ್ತಿದ್ದ ಅವನ ಹೆಂಡತಿ ಆಚೆ ಈಚೆ ತಿರುಗಿ ಹೊರಳುತ್ತಿದ್ದಳು. ಗೋಪಾಲನ ಮನಸ್ಸಿನಲ್ಲಿ "ನಾನು ಇವತ್ತು ಊಟ ಮಾಡಲಿಲ್ಲ. ಸ್ವಲ್ಪ ಯಾರಾದರೂ ಬಲಾತ್ಕರಿಸಿದರೆ ಮಾಡು ತ್ತಿದ್ದೆ. ದೆವ್ವದ ಹಾಗೆ ಒಬ್ಬನೇ ಕುಳಿತುಕೊಂಡು ತಿನ್ನಲು ಬೇಜಾರಾಯಿತು. ವತ್ಸಲೆ ಎದ್ದು ಊಟ ಮಾಡಿ ಅಂತ ಬಲಾತ್ಕರಿಸಿದ್ದರೆ ಮಾಡಬಹುದಾಗಿತ್ತು. ಸ್ವಲ್ಪ ಹಸಿವೂ ಆಗಿತ್ತು. ಆದರೆ ನಾನು ಮದುವೆಯಾಗಿರುವುದು, ಆಡಿಗೆ ಯವನನ್ನು ತಾನೇ" ಎಂದು ನಿಟ್ಟುಸಿರುಬಿಟ್ಟುಕೊಂಡು ಮಲಗುತ್ತಿದ್ದ.

## ೯. ಎರಡು ಜತೆ-ಎರಡು ಮಾದರಿ

ಆ ದಿವಸ ಗೋಪಾಲನಿಗೆ ಆಫೀಸಿನಲ್ಲಿ ಬೇಜಾರು ಅತಿಯಾಗಿತ್ತು. ಕ್ಯಾಷಿಯರ್, ಲೆಕ್ಕಪೂರ್ತಾಮಾಡಿ ಹೊರಡುವ ವೇಳೆಗೆ ರಾತ್ರಿ ಒಂಬತ್ತುಕಾಲು ಘಂಟೆ ಆಯಿತು. ಕ್ಯಾಷಿಯರ್ ಗಣಪತಿ "ನಡಿಯಿರಿ ಸಾಗರ್‌ಗೆ ಹೋಗೋಣ ಪಂಕಜಮಲ್ಲಿಕ್. ಈ ಹಾಳು ಲೆಕ್ಕತಲೆ ಕೆಡಿಸಿತು. ಹತ್ತು ವರುಷ ಈ ಆಫೀಸಿ ನಲ್ಲಿ ಕೆಲಸ ಮಾಡಿದರೆ ಹುಚ್ಚು ಹತ್ತೋದೆಯೋ" ಎಂದರು. ಮೊದಲ ದಿನ ಗೋಪಾಲ ಎರಡನೆಯ ಸಿನಿಮಾಕ್ಕೆ ಹೋಗಿ ಮನೆಗೆಹೋದಾಗ ಕ್ರಮಗಳೆಲ್ಲಾ ಯಥಾವಿಧಿಯಾಗಿ ನಡೆದಿದ್ದುವು. ಅವನು ಇನ್ನು ಎಂಟು ದಿನ ಸಿನಿಮಾಕ್ಕೆ ಹೋಗಬಾರದು ಎಂದುಕೊಂಡಿದ್ದ. ಗಣಪತಿ ಕರೆದಾಗ ಗೋಪಾಲನು ಬೇಡ ಗಣಪತಿ. ಸುಸ್ತಾಗಿದೆ. ಮನೆಗೆ ಹೋಗಿ ಮಲಗಿಕೊಳ್ಳೋಣ" ಎಂದ. ಗಣಪತಿಯು "ನಾನ್‌ಸೆನ್ಸ್. ಇದುವರೆಗೆ ಆ ಕಾಗದದ ಧೂಳು ಕುಡಿದು ಈಗ ಮನೆಗೆ ಹೋಗಿ ಮಲಗಿದರೆ ನಿದ್ರೆ ಬರುತ್ತದೆಯೋ? ಏನು ಮನೆ? ಜಾಕೆಟ್ ದರ್ಬಾರಿನ ಭಯವೇನೋ." ಎಂದ. ಗೋಪಾಲನು "ಅದೆಲ್ಲಾ ಇಲ್ಲ. ಒಳ್ಳೆ ಯದು ನಡಿಯಿರಿ. ನೆನ್ನೆಯೂ ಹೋಗಿದ್ದೆ. ನಿದ್ರೆ ಜಡರು" ಎಂದ. ಗಣಪತಿ "ನೆನ್ನೆ ಹೋಗಿದ್ದರೆ. ನಾನು ನಿತ್ಯ ಎರಡನೆಯ ಆಟಕ್ಕೇ ಹೋಗ್ತೀನೆ. ನಾವು ನಿಶಾಚರರೇ ಅಲ್ಲವೆ. ಸಿನಿಮಾಗಳವರು ಎರಡನೆಯ ಆಟ ಇಟ್ಟಿರೋದು ನಮ್ಮಂಥಾವರಿಗಾಗಿ. ಅವರಿಗೆ ಸರಿಯಾದ ಪ್ರೋತ್ಸಾಹಕೊಡ

ದಿದ್ದರೆ ಎರಡನೆಯ ಆಟವನ್ನೇ ವಜ ಮಾಡಿಯಾರು, ಆಮೇಲೆ ಕಷ್ಟಪಡೋರು ನಾವೇ ತಾನೆ. ಇತರರಿಗೆ ರಾತ್ರಿಯಾದಾಗ ನಮಗೆ ಹಗಲು. ಅವರಿಗೆ ಹಗಲಾದಾಗ ನಮಗೆ ರಾತ್ರಿ. ಭಗವದ್ಗೀತೆಯಲ್ಲಿ ಹೇಳಿರುವುದು ನಮ್ಮಂತಾವರನ್ನ ಕುರಿತೇ" ಎಂದ. ಗೋಪಾಲನಿಗೆ "ಇನ್ನು ಹೆಚ್ಚಾಗಿ ಪ್ರತಿಭಟಿಸಲು ಮನಸ್ಸು ಬರಲಿಲ್ಲ. ಗಣಪತಿಯು "ಬೇಗ ಬೇಗ ಮಾರ್ಕೆಟ್ಟಿಗೆ ನಡೆಯಿರಿ. ಸ್ವಲ್ಪ ತರ್ಕಾರಿ ಚೀಲಕ್ಕೆ ತುಂಬಿಕೊಂಡು, ಹೊಟ್ಟೆಗೆ ನಾಲ್ಕು ಉದ್ದಿನವಡೆ ಎಸ್ಕೊಂಡು ಹೋಗೋಣ" ಎಂದ. ಗೋಪಾಲನೂ ಗಣಪತಿಯೂ ಮಾರ್ಕೆಟಿಗೆ ನಡೆದರು. ಗಣಪತಿ ಸೌತೆಕಾಯಿ ಮೂಲಂಗಿ ಆದು ಇದು ಚೀಲಕ್ಕೆ ಭರ್ತಿಮಾಡಿಕೊಂಡು ನಾಲ್ಕು ಸೇಬಿನಹಣ್ಣುಗಳನ್ನು ತೆಗೆದುಕೊಂಡ. ಎರಡನ್ನು ಗೋಪಾಲನಿಗೆ ಕೊಡುವುದಕ್ಕೆ ಬಂದಾಗ ಗೋಪಾಲ "ಬೇಡ ಬೇಡ" ಎಂದ. ಗಣಪತಿಯು "ಸುಮ್ಮನೆ ಚೀಲಕ್ಕೆ ಹಾಕಿ" ಎಂದು ಬಲಾತ್ಕರಿಸಿ ಅವನ ಚೀಲಕ್ಕೆ ಹಾಕಿದ. ತಾನು ತೆಗೆದು ಕೊಂಡ ವೀಳೆದೆಲೆಯಿಂದ ಒಂದು ಇಪ್ಪತ್ತನ್ನು ತೆಗೆದು ಗೋಪಾಲನ ಚೀಲಕ್ಕೆ ಹಾಕಿದ. ಮುಂದೆ ಅತ್ಯಂತ ಶ್ಲಾಘ್ಯವಾದ ಸುರಗಿಯ ದಂಡೆಗಳು ತೂಗ ಹಾಕಿದ್ದುವು. ಹೂವಾಡಿಗನು "ಅಂಗಡಿ ಮುಚ್ಚೊಹೊತ್ತು ಅಗ್ಗವಾಗಿ ಕೊಟ್ಟುಬಿಡತೀನಿ ; ತೆಗೆದುಕೊಂಡು ಹೋಗಿ ಸ್ವಾಮಿ" ಎಂದ. ಗಣಪತಿಯು "ಸುರಗಿ ಹೂವು ಭೇಷ್ ಭೇಷ್ ಇದೀಗ ನಮ್ಮ ಬ್ರಹ್ಮಾಸ್ತ್ರ. ಇದರ ಮೋಪ ಜಯಿಸಿದ ಹೆಂಡತಿ ಇನ್ನೂ ಹುಟ್ಟಲಿಲ್ಲ. ಇನ್ನು ಧೈರ್ಯವಾಗಿ ಮನೆಗೆ ಹೋಗಬಹುದು" ಎಂದು ಮೂರು ಕುಚ್ಚು ಹೂವುಗಳನ್ನು ತೆಗೆದು ಕೊಂಡ. ಗೋಪಾಲನ ಚೀಲಕ್ಕೆ ಒಂದು ಕುಚ್ಚನ್ನು ಹಾಕಿ "ಈ ಲಂಚಗಳೆಲ್ಲ ಇರಬೇಕಪ್ಪ, ಇಲ್ಲದಿದ್ದರೆ ಕೇಳುವವರಾರು ತಪ್ಪುಮಾಡಿದವನು ತಪ್ಪು ಕಾಣಿಕೆ ತೆಗೆದುಕೊಂಡು ಹೋಗಲೇ ಬೇಕು. ಸಮಯದಲ್ಲಿ ಇದಕ್ಕೆ ನೀನು ನನ್ನನ್ನು ಖಂಡಿತ ವಂದಿಸುವೆ" ಎಂದ. ಗೋಪಾಲ ಮೌನವಾಗಿ ಚೀಲವನ್ನು ಕೈಯಲ್ಲಿ ಹಿಡುದುಕೊಂಡ.

ಸಿನಿಮಾದಲ್ಲಿ ಪಂಕಜಮಲ್ಲಿಕ್ ಸಂಗೀತ ಅದ್ಭುತವಾಗಿತ್ತು ಆಟ ಮುಗಿಯುವ ವೇಳೆಗೆ ಹನ್ನೆರಡುವರೆ ಗಂಟೆ ಆಯಿತು. ಗೋಪಾಲನ ಮಾವನವರ ಮನೆ ದಾರಿಯಲ್ಲಿಯೇ ಗಣಪತಿಯ ಮನೆ. ಅದೊಂದು ಭಾರಿ

ಮನೆಯ ಔಟ್‌ಹೌಸ್. ಸುಂದರರಾಜರ ಮನೆಗೆ ಹೋಲಿಸಿದರೆ ಅದೊಂದು ಮುರುಕು ಗುಡಿಸಲಾಗಿ ತೋರುತ್ತಿತ್ತು. ಮನೆಬಾಗಿಲಿನಲ್ಲಿ ನಿಂತುಕೊಂಡು ಗಣಪತಿಯು "ಗೋಪಾಲ್ ಒಳಕ್ಕೆ ಬನ್ನಿ. ಇರೋ ಒಂದು ತುತ್ತು ಅನ್ನ ಇಬ್ಬರೂ ಹಂಚಿಕೊಂಡು ಊಟಮಾಡೋಣ. ಆಮೇಲೆ ನಿಮ್ಮ ಮನೆಗೆ ಹೋಗಬಹುದು. ಬೇಕಾದರೆ ಬೈಸಿಕಲ್ ಕೊಡುತ್ತೇನೆ" ಎಂದ. ಗೋಪಾಲನು "ಬೇಡಿ ಬೇಡಿ ಈಗಲೇ ಹೊತ್ತಾಯಿತು. ನನಗೆ ಹಸಿವೇ ಇಲ್ಲ" ಎಂದ. ಗಣಪತಿಯು "ಹಸಿವಿಲ್ಲದ ಮೇಲೆ ಊಟಮಾಡುವುದೇನಿದೆ? ಹಾಗಾದರೆ ಹೊತ್ತು ಆಗುವುದೇ ಇಲ್ಲ. ಒಳಕ್ಕೆ ಬಂದು ಹೋಗಿ. ನಮ್ಮ ಮನೆಗೆ ನೀವು ಯಾವಾಗಲೂ ಬಂದೇ ಇಲ್ಲ. ನೀವು ಬಂದರೆ ನನಗೆ ಒಂದು ಉಪಕಾರವೇ ಆಗುತ್ತೆ" ಎಂದ. ಗೋಪಾಲನಿಗೆ ಅಂದು ಗಣಪತಿಯ ಸಹವಾಸದಿಂದ ಬಹಳ ಮನಶ್ಶಾಂತಿಯೂ ಸಂತೋಷವೂ ಉಂಟಾಗಿತ್ತು. ಅವನು ಗಣಪತಿಗೆ ಯಾವ ಉಪಕಾರವನ್ನೂ ಮಾಡಲು ಸಿದ್ಧನಾಗಿದ್ದ. ಉತ್ಸಾಹದಿಂದ "ನನ್ನಿಂದ ನಿಮಗೆ ಆಗಬಹುದಾದ ಉಪಕಾರವೇನು ಗಣಪತಿ? ಹೇಳಿ ಖಂಡಿತ ಶಕ್ತಿಮೀರಿ ಪ್ರಯತ್ನಿಸಿ ಮಾಡಿಕೊಡುತ್ತೇನೆ" ಎಂದ. ಗಣಪತಿಗೆ ಗೋಪಾಲನ ಗಂಭೀರಭಾವವನ್ನು ನೋಡಿ ನಗುಬಂತು. ಅವನು "ಅಂತಹುದೇನೂ ಇಲ್ಲ ಗೋಪಾಲ್, ನಾನು ಒಬ್ಬನೇ ಒಳಕ್ಕೆ ಹೋದರೆ ಮನೆಯಲ್ಲಿ ಮಹರಾಣಿ ತರಾಟೆಗೆ ತೆಗೆದುಕೊಳ್ಳುತ್ತಾಳೆ. ನೀವು ಜತೆಯಲ್ಲಿದ್ದರೆ ಸ್ವಲ್ಪ ವಾಸಿ. ಪ್ರಾರಂಭದ ಬೈಗಳು ಕಡಿಮೆಯಾಗುತ್ತೆ. ಆಮೇಲೆ ಎಂದಿದ್ದರೂ ಇದ್ದೇ ಇದೆ. ಶರಣಾಗತನಾಗಿಯೇ ಬಚಾವಾಗಬೇಕು" ಎಂದ. ಗಣಪತಿ ಹೇಳುತ್ತಿರುವುದು ಬರಿಯ ಹಾಸ್ಯವೆಂಬುದು ಗೋಪಾಲನಿಗೆ ತಿಳಿಯದಿರಲಿಲ್ಲ. ಆದರೆ ಆ ಹಾಸ್ಯ ಅವನಿಗೆ ಬಹಳ ಸುಖವನ್ನೇ ಉಂಟುಮಾಡಿತು. ಯಾವುದಕ್ಕೂ ಹೆಚ್ಚಾಗಿ ಚರ್ಚೆಮಾಡುವ ಸ್ವಭಾವದವನಲ್ಲವಾದುದರಿಂದ ಗೋಪಾಲ ಗಣಪತಿಯೊಂದಿಗೆ ಅವನ ಮನೆಬಾಗಲಿಗೇ ನಡೆದ.

ಗಣಪತಿಯು ಬಾಗಿಲನ್ನು ಒಂದುಸಲ ತಟ್ಟಿ ಬಾಗಿಲು ಎಂದ. ಮತ್ತೊಂದು ಸಲ ತಟ್ಟಿದ. ಹಾ ಎಂದು ಒಳಗಿನಿಂದ ಧ್ವನಿ ಬಂದಿತು. ಕೂಡಲೆ ಒಳಗೆ ವಿದ್ಯುತ್‌ದೀಪದ ಸ್ವಿಚ್ ಹಾಕಿದುದರಿಂದ ಬೀದಿ ಬಾಗಿಲು ಮೇಲಿನ ದೀಪ

ಪ್ರಕಾಶವಾಗಿ ಉರಿಯಲು ಪ್ರಾರಂಭಿಸಿತು. ಒಳಗಿನಿಂದ ಬಾಗಿಲು ತೆರೆಯಿತು. ಗಣಪತಿ ಒಳಕ್ಕೆ ಕಾಲಿಟ್ಟು "ಆಗಲೇ ಮಲಗಿಬಿಟ್ಟಿದ್ದೆಯ" ಎಂದ. ಅವನ ಹೆಂಡತಿ "ಮಲಗದೆ ಕೂತಿದ್ದೇನೆ. ಇನ್ನೂ ಸಾಯಂಕಾಲ ಅಲ್ಲವೇ" ಎಂದಳು. ಗಣಪತಿಯು "ಈಗ ಇನ್ನೂ ಹತ್ತೂವರೆ ಗಂಟೆ" ಎಂದ. ಅವನ ಹೆಂಡತಿಯು "ಹತ್ತೂವರೆ. ಇಲ್ಲ ಇಲ್ಲ ಎಂಟುವರೆ. ಬನ್ನಿ ಒಳಕ್ಕೆ, ಕೈಕಾಲು ತೊಳೆದುಕೊಳ್ಳಿ. ಊಟಮಾಡಿ ಮಲಗಿಕೊಳ್ಳೋಣ" ಎಂದಳು. ಗಣಪತಿಯು "ನೆಂಟರೊಬ್ಬರು ಬಂದಿದ್ದಾರೆ" ಎಂದ. ಅವನ ಹೆಂಡತಿ "ಚೆನ್ನಾಯಿತು. ಬಾಗಿಲಿನಲ್ಲಿಯೇ ನಿಂತು ಪಂಚಾಯ್ತಿಯೇ; ಕರೆದುಕೊಂಡು ಒಳಕ್ಕೆ ಬನ್ನಿ" ಎಂದಳು. ಗಣಪತಿಯು ಎರಡು ಬಾಗಿಲನ್ನೂ ತೆರೆದು "ನಾನು ಮೊದಲು ಒಳಗೆ ಹೋಗುತ್ತೇನೆ. ಎರಡು ನಿಮಿಷ ಬೆನ್ನಿನ ಮೂಳೆಮುರಿಯುವ ಸದ್ದು ದಬದಬ ಅಂತ ಕೇಳಿಸಿದರೂ ಒಳಕ್ಕೆ ಬರಬೇಡಿ. ಆಮೇಲೆ ಏನೂ ತಿಳಿಯದವರಂತೆ ಒಳಕ್ಕೆ ಬನ್ನಿ. ಅಷ್ಟು ಹೊತ್ತಿಗೆ ರಾಣಿ ಸಾಹೇಬರ ಕೋಪ ಇಳಿದಿರುತ್ತೆ" ಅಂತ ಹೇಳಿದ್ದೆ ಎಂದು "ಬನ್ನಿ ಗೋಪಾಲ್ ಒಳಕ್ಕೆ" ಎಂದ. ಅವನ ಹೆಂಡತಿಯು "ನನ್ನ ಹತ್ತಿರ ನೀವು ಏಟು ತಿಂದು ಇರುವುದು ಬಹಳ ಹೆಚ್ಚು" ಎಂದುಕೊಂಡು ಒಳಕ್ಕೆ ಹೋದಳು. ಗೋಪಾಲನೂ ಗಣಪತಿಯೂ ಚಾಪೆಯ ಮೇಲೆ ಕುಳಿತರು. ಗಣಪತಿ "ಶಾಮ ವಿಶಾಲಿ ಇಬ್ಬರಿಗೂ ಆಗಲೇ ಗೊರಕೆಯೇನೋ" ಎಂದ. ಅವರ ಹೆಂಡತಿ ಹೌದು ಎಂತ ಸುಮ್ಮನೆ ತಲೆ ಅಲ್ಲಾಡಿಸಿದರು. ಗಣಪತಿ ಚೀಲದಿಂದ ಸೇಬಿನಹಣ್ಣು ಹೂವು ವಿಳ್ಳೆದೆಲೆ ತೆಗೆದು ಹೆಂಡತಿ ಕೈಗೆ ಕೊಟ್ಟು ತರಕಾರಿಯನ್ನು ನೆಲದ ಮೇಲೆ ಸುರಿದ. ಗೋಪಾಲ ಏನುಮಾಡಿದರೂ ನಾನು ಊಟಮಾಡೋದಿಲ್ಲ ಎಂದು ಮೊಂಡು ಹಿಡಿದ. ಗಣಪತಿ ಹೆಂಡತಿಯೊಂದಿಗೆ "ನಮಗೆ ಅನ್ನ ಸಾಲೋದಿಲ್ಲ ಅಂತ ಇವರು ಊಟಮಾಡೊಲ್ಲ; ಮೊಂಡು ಬಿದ್ದಿದ್ದಾರೆ" ಎಂದ. ಅವರ ಹೆಂಡತಿ "ಎಲ್ಲಾದರೂ ಉಂಟೇ, ಇನ್ನೂ ನನಗೆ ಊಟ ಆಗಿಲ್ಲ. ತಪ್ಪಲೆ ತಂದು ತೋರಿಸಲೇ. ಇನ್ನು ಇಬ್ಬರು ಬಂದರೂ ಊಟಕ್ಕೆ ಆಗುತ್ತೆ" ಎಂದಳು. ಗೋಪಾಲನು "ಅವೇಳೆಯಾಯಿತು" ಎಂದ. ಗಣಪತಿಯ ಹೆಂಡತಿ "ಇದೇನು ಅವೇಳೆಯೆ. ಮಕ್ಕಳು ಈಗ ತಾನೆ ಮಲಗಿವೆ. ಇವರು ನಿತ್ಯಾ ಊಟಮಾಡೋದು ಇದೇ ಹೊತ್ತು"

ಎಂದರು. ಗೋಪಾಲನಿಗೆ ಇನ್ನು ಹೆಚ್ಚಾಗಿ ಕೊನಿಸ್ಟೈ ತೋರಿಸಿಕೊಳ್ಳುವುದಕ್ಕೆ ಇಷ್ಟವಿರಲಿಲ್ಲ. ಆ ದಂಪತಿಗಳ ಪ್ರೇಮವೂ ಅವನ ಮನಸ್ಸನ್ನು ಮೃದು ಮಾಡಿತ್ತು. ಅವನು ಅಂಗಿಬಿಚ್ಚಿ ಕೈಕಾಲು ತೊಳೆದುಕೊಂಡ. ಗಣಪತಿಯ ಹೆಂಡತಿ ಮುಡಿದುಕೊಂಡ ಸುರಗಿಹೂವಿನ ಪರಿಮಳ ಮನೆ ತುಂಬ ತುಂಬಿಕೊಂಡಿತು. ಒಂದೇ ನಿಮಿಷದಲ್ಲಿ ಸೌತೆಕಾಯಿ ಹಚ್ಚುವ, ತೆಂಗಿನಕಾಯಿ ತುರಿಯುವ, ಒಗ್ಗರಣೆಹಾಕುವ, ಸದ್ದುಗಳೆಲ್ಲಾ ಜೇನುಗೂಡಿನ ಚಟುವಟಿಕೆಯಂತೆ ಪ್ರಾರಂಭವಾದುವು. ಎಲೆಯ ಮುಂದೆ ಹೋಗಿ ಕುಳಿತಕೂಡಲೇ ಬಿಸಿಬಿಸಿಯಾದ ಊಟ; ಕೋಸಂಬರಿ ಆಗತಾನೆ ಮಾಡಿದ್ದು ಬಂತು. ಅನ್ನ ಸಾರು ಆಗತಾನೆ ಮಾಡಿದಷ್ಟು ಬಿಸಿಬಿಸಿಯಾಗಿತ್ತು. ಗೋಪಾಲನಿಗೆ ಆಶ್ಚರ್ಯವಾಯಿತು. ಇವರು ಎಷ್ಟು ಬಿಸಿಯಾಗಿ ಅನ್ನ ಸಾರು ಇಟ್ಟಿದ್ದಾರೆ ಹೀಗಿರಬೇಕು, ಹೆಂಗಸರು ಎಂದರೆ ಎಂದುಕೊಂಡ. ಅವನ ಮನಸ್ಸು ಆಗ ಅಂತಹ ಮೃದುವಾದ ಹದದಲ್ಲಿದ್ದಿತು. ಗೋಪಾಲ ಹಸಿವಿಲ್ಲ ಎಂದು ಕುಳಿತರೂ ಎಲೆಗೆ ಬಿಸಿಬಿಸಿಯಾಗಿ ಬಿದ್ದಾಗ ಅವನಿಗೆ ನಿಜವಾಗಿಯೂ ಹಸಿವೇ ಆದಂತೆ ತೋರಿತು. ಅವನೂ ಗಣಪತಿಯೂ ಸರಿಯಾಗಿಯೇ ಊಟಮಾಡಿದರು. ಊಟವಾದ ಕೂಡಲೆ ಗಣಪತಿಯ ಹೆಂಡತಿ ವಿಳ್ಳೆದೆಲೆ ಅಡಿಕೆಯನ್ನೂ ಒಂದು ಸೇಬಿನಹಣ್ಣನ್ನೂ ತಂದು ಇಟ್ಟು "ಚಾಕು ನಿಮ್ಮ ಜೇಬಿನಲ್ಲಿಯೇ ಇದೆ" ಎಂದಳು. ಗೋಪಾಲ ಸೇಬಿನ ಚೂರುಗಳನ್ನು ತಿಂದು ಏನೋ ಯೋಚಿಸುತ್ತಾ ಕುಳಿತ. ಗಣಪತಿ ಎಲೆ ಅಡಿಕೆ ಅಗಿಯಲು ಪ್ರಾರಂಭಿಸಿದ. ಗೋಪಾಲನಿಗೆ ಎಲೆ ಅಡಿಕೆ ಬೇಕಾಗಿಲ್ಲ. ಗಣಪತಿಯ ಹೆಂಡತಿ "ಎಲ್ಲಾ ಎಲೇನೂ ನೀವೇ ಅಗಿದುಬಿಡಬೇಡಿ. ಅವರಿಗೆ ನಾಲ್ಕು ಕೊಡಿ" ಎಂದಳು. ಗಣಪತಿ ಗೋಪಾಲನಿಗೆ "ಎಲೆ ಅಡಿಕೆ ಹಾಕಿಕೊಳ್ಳಿ" ಎಂದ. ಗೋಪಾಲ "ಬೇಡ ಬೇಡ" ಎಂದ. ಗಣಪತಿಯು ಹೆಂಡತಿ ಕಡೆ ನೋಡುತ್ತಾ "ನಾವೆಲ್ಲಾ ಹೇಳಿದರೆ ಎಲ್ಲಿ ಹಾಕ್ಕೊತಾರೆ. ಹೇಳೋರು ಹೇಳಿದರೆ ಹಾಕ್ಕೊತಾರೆ" ಎಂದ. ಗೋಪಾಲ ಏನೂ ಪ್ರತ್ಯುತ್ತರವನ್ನೇ ಕೊಡಲಿಲ್ಲ.

ಗೋಪಾಲ ಮನೆಯಕಡೆ ಹೊರಟ. ಅವನಿಗೆ ಆ ಅರ್ಧ ರಾತ್ರಿ ಅರ್ಧ ರಾತ್ರಿಯಂತೆ ತೋರಲೇ ಇಲ್ಲ. ಪ್ರಕಾಶಮಾನವಾದ ಚೈತನ್ಯದಾಯಕವಾದ

ಪ್ರಭಾತದಂತೆ ತೋರಿತು. ಅವನಿಗೆ "ಜೀವನ ಸುಖವಾಗಿರಬೇಕಾದರೆ ಬೇಕಾದುದು ಅಷ್ಟು ಹೆಚ್ಚು ಧನವಲ್ಲ, ಅದೃಷ್ಟ" ಎಂದು ತೋರಿತು. ಗಣಪತಿಯ ಹೆಂಡತಿ, ವತ್ಸಲೆಯಷ್ಟು ಚೆನ್ನಾಗಿಲ್ಲ. ವತ್ಸಲೆಗಿರುವ ಧನದ ಅನುಕೂಲವೂ ಅವಳಿಗೆ ಇಲ್ಲ. ಆದರೂ ಗಣಪತಿ ಎಷ್ಟು ಸುಖಿಯಾಗಿದ್ದಾನೆ. ಕನ್ನಡ ಕಥೆಗಾರ ಶ್ರೀನಿವಾಸ ಹೇಳಿರುವಂತೆ "ಮನುಷ್ಯನಿಗೆ ಸುಖವಾಗಿರಲು ಅವಶ್ಯಕವಾದುದು ಸುಂದರಿಯಾದ ಹೆಂಡತಿಯೇ ಅಲ್ಲ. ಇರುವ ಹೆಂಡತಿಯಲ್ಲಿಯೇ ಸೌಂದರ್ಯವನ್ನು ಕಾಣುವ ಕಣ್ಣು. ಎಲ್ಲರ ಹೆಂಡತಿಯೂ ರತಿಯೇ ಆಗಿರುವುದು ಸಾಧ್ಯವಿಲ್ಲ. ಹೆಂಡತಿಯಲ್ಲಿ ರತಿಯನ್ನು ಕಾಣುವುದು ಎಲ್ಲರಿಗೂ ಸಾಧ್ಯ." ಗೋಪಾಲನಿಗೆ ಚೀಲದಲ್ಲಿದ್ದ ಹಣ್ಣು ಹೂವು ವಿಳ್ಯೆದೆಲೆ ಜ್ಞಾಪಕ ಬಂತು. ಈ ನಾಲ್ಕಾಣೆ ಪದಾರ್ಥ. ಇದು ಮಾತ್ರ ಸರಿಯಾಗಿ ಉಪಯೋಗವಾದರೆ ಎಷ್ಟು ಸುಖ ಕೊಡಬಲ್ಲದು. ಅಲ್ಲದೆ ಅದಕ್ಕೆ ಅದೃಷ್ಟಬೇಕಲ್ಲ ಎಂದುಕೊಂಡ.

ಗಣಪತಿಯ ಮನೆಗೂ ಗೋಪಾಲನಿದ್ದ ಮನೆಗೂ ಪತ್ತಿರವಾಗಿದ್ದುದರಿಂದ ಗೋಪಾಲ ಗಣಪತಿಯ ಬೈಸಿಕಲನ್ನು ತೆಗೆದುಕೊಳ್ಳಲಿಲ್ಲ. ನಡೆದುಕೊಂಡು ನಿಧಾನವಾಗಿ ಯೋಚಿಸುತ್ತಾ ಪೂರ್ಣ ಚಂದ್ರನ ಬೆಳದಿಂಗಳಲ್ಲಿ ವೈಯನ್ನು ನೆನೆಯಿಸಿಕೊಂಡು ಹೋಗುವವರಲ್ಲಿಯೇ ಅವನಿಗೆ ಸಮಾಧಾನ ತೋರಿತು. ಮನೆ ಹತ್ತಿರ ಹತ್ತಿರವಾದಂತೆ ಗೋಪಾಲನ ಆಸೆ, ಅವನ ನಿರೀಕ್ಷಣೆಗೆ ವಿರೋಧವಾಗಿಯೆ ಬೆಳೆಯ ತೊಡಗಿತು. ಒಂದು ವೇಳೆ ನಾನು ಬಾಗಿಲು ತಟ್ಟಿದಾಗ ಬಾಗಿಲು ತೆಗೆಯಲು ವತ್ಸಲೆಯೇ ಬಂದುಬಿಟ್ಟರೆ! ಒಳಕ್ಕೆ ಹೋದಕೂಡಲೆ ಅವಳು ಊಟಮಾಡಿ ಎಂದು ಬಲಾತ್ಕರಿಸಿದರೆ! ಪಸಿವಿಲ್ಲ ಅಂತ ಕೈಚೀಲ ಅವಳಿಗೆ ಕೊಟ್ಟಾಗ ಅವಳು ಸುರಗಿಹೂವನ್ನು ಸಂತೋಷದಿಂದ ಮುಡಿದುಕೊಂಡು ಹಣ್ಣನ್ನು ಹೆಚ್ಚಿ ನನಗೂ ಕೊಟ್ಟು, ಯಾಕೆ ಊಟಮಾಡೋಲ್ಲ ಅಂತ ಕೇಳಿ ಊಟಮಾಡದಿದ್ದರೆ ಎಲೆ ಅಡಿಕೆಯನ್ನಾದರೂ ಹಾಕಿಕೊಳ್ಳಿ ಎಂದು ಬಲಾತ್ಕರಿಸಿದರೆ ಅದಕ್ಕಿಂತ ಸ್ವರ್ಗ ಇನ್ನೇನು ಬೇಕು. ಇಂತಹ ಒಂದು ನಡವಳಿಕೆಯಿಂದ ವತ್ಸಲೆ ನನ್ನ ಜಗತ್ತನ್ನೇ ಬದಲಾಯಿಸಿಬಿಡಬಹುದಲ್ಲ! ಹೀಗೇನಾದರು ವತ್ಸಲೆ ಇವತ್ತು ನನಗೆ ಪ್ರಸನ್ನಳಾಗಿಬಿಟ್ಟರೆ ಅವಳ ಹೆಜ್ಜೆ

ಗಳಿಗೆ ಸಾವಿರ ಸಾವಿರ ಸಲ ಬೇಕಾದರೂ ಮುತ್ತು-ಕೊಡುತ್ತೇನೆ. ಆದರೆ ಅಂತಹ ಅದೃಷ್ಟ ನನಗೆ ಎಲ್ಲಿಯದು? ಅವಳಿಗೆ ಏನುಬೇಕಾಗಿದೆ! ಎಂದುಕೊಂಡ. ಆದರೆ ಮನೆಯ ಕಾಂಪೌಂಡಿಗೆ ಬಂದಾಗ "ಯಾರು ಬಲ್ಲರು. ಪ್ರೇಮದ ಸ್ವಭಾವ ವಿಚಿತ್ರ. ಸ್ವರ್ಗದ ಬಾಗಿಲು ನನಗೆ ಈವತ್ತು ತೆರೆದರೂ ತೆರೆಯಬಹುದು. ದೇವಿ ಅನಿರೀಕ್ಷಿತವಾದ ಕಾಲದಲ್ಲಿಯೇ ವರವನ್ನು ಕೊಡುತ್ತಾಳೆ" ಎಂದು ಯೋಚಿಸಿದ.

ಮನೆ ಸಿಕ್ಕಿತು. ಗೋಪಾಲನನ್ನು ನೋಡಿದ ಕೂಡಲೆ ನಾಯಿಯು ನಿತ್ಯಕ್ಕಿಂತಲೂ ದಪ್ಪನಾದ ಧ್ವನಿಯಲ್ಲಿಯೇ ಅವನಿಗೆ ನಮಸ್ಕರಿಸಿತು. ಆಳು ಎದ್ದು ಬಾಗಿಲಿಗೆ ಪಟಾಸ್ ಹಾಕಿದ. ಸುಂದರರಾಜನ್ ಮಂಚಕ್ಕೆ ಚಿತ್ರಹಿಂಸೆ ಮಾಡಿದ. ಸುಂದರಮ್ಮ ಹನ್ನೆರಡು ಪಟಾಸಿನಂತೆ ಕೆಮ್ಮಿದಳು. ಅನಂತರ ಎಲ್ಲಾ ಶಾಂತವಾಯಿತು. ಗೋಪಾಲ ಆ ಹಾಳು ದೇವಾಲಯಕ್ಕೆ ಅನಾಥನಂತೆ ಪ್ರವೇಶಿಸಿದ. ಅಡಿಗೆಯವನು ಮಣೆಯ ಮುಂದೆ ತಟ್ಟೆ ಹಾಕಿದ. ಗೋಪಾಲನು ಊಟಮಾಡುವುದಿಲ್ಲ ಎಂದ. ಅಡಿಗೆಯವನು "ಯಾರೋ ಊಟಕ್ಕೆ ಬಂದಿದ್ದರು. ಚಿತ್ರಾನ್ನ ಪಾಯಸ ಪೂರಿ ಮಾಡಿದ್ದೆ. ಎಲ್ಲಾ ಮುಚ್ಚಿಟ್ಟಿದ್ದೇನೆ ಸ್ವಲ್ಪವಾದರೂ ರುಚಿನೋಡಿ" ಎಂದ. ಇಲ್ಲ ಎಂದುಕೊಂಡು ಗೋಪಾಲ ನೀರುಕುಡಿಯಲು ನಲ್ಲಿಯ ಬಳಿಗೆ ಹೋದ. ಪಾಪ, ಅಡಿಗೆಯವನಿಗೆ ಗೋಪಾಲ ಸ್ವಲ್ಪವಾದರೂ ತಿನ್ನಲಿ ಎಂಬ ಆಸೆ. ಅವನು ಒಳಗಿನಿಂದ ಚಿತ್ರಾನ್ನ ತಂದು ಒಂದು ಬಟ್ಟಲಿನಲ್ಲಿ ತಟ್ಟೆಯ ಮಗ್ಗಲಲ್ಲಿ ಇಟ್ಟ. ತುಪ್ಪದ ಪಾತ್ರೆ ನೋಡಿದಾದ ಅದರಲ್ಲಿ ತುಪ್ಪ ಇರಲಿಲ್ಲ. ತುಪ್ಪ ಉಗ್ರಾಣದಲ್ಲಿತ್ತು. ಅದರ ಬೀಗದಕೈ ಪದ್ಧತಿಯಂತೆ ಸುಂದರಮ್ಮನವರ ಕತ್ತಿನ ಸರದಲ್ಲಿತ್ತು. ಅನೇಕ ದಿನಗಳಿಂದ ಆ ಮನೆಯ ಹಳೆಯ ಸ್ನೇಹಿತನಂತೆ ಪರಿಚಿತನಾಗಿದ್ದ ಅಡಿಗೆಯವನು ಹೋಗಿ ಸುಂದರಮ್ಮನವರ ಕೊಠಡಿ ಬಾಗಿಲು ತಟ್ಟಿದ. ಅವರು ಎಚ್ಚರವಾಗಿ ಕೆಮ್ಮಿದುದು ಅವನಿಗೆ ಕೇಳಿಸಿತ್ತು. ಅವನು ಒಂದು ಸಲ ಮೆತ್ತಗೆ ತಟ್ಟಿದ ಕೂಡಲೆ ಸುಂದರಮ್ಮನವರು ತಿಳಿದುಕೊಂಡು ಏನು ಎಂದು ಒಳಗಿನಿಂದಲೇ ಕೇಳಿದರು. ಅಡಿಗೆಯವನು "ಅಳಿಯಂದಿರು ಈಗ ಬಂದರು. ಹೊರಗೆ ತುಪ್ಪ ಇಲ್ಲ" ಎಂದ. ಆ ವೇಳೆಗೆ ನಲ್ಲಿಯಿಂದ ನೀರುಕುಡಿದು ಮುಖತೊಳೆದುಕೊಂಡು ಗೋಪಾಲ

ಹಜಾರಕೆ ಬಂದ. ಅಡಿಗೆಯವನು ಹೇಳಿದ ಮಾತು ಅವನಿಗೆ ಕೇಳಿಸಲಿಲ್ಲ. ಆದರೆ ಒಳಗೆ ಮಂಚ ಮತ್ತೆ ನರಳಲು ಪ್ರಾರಂಭಿಸಿತು. ಸುಂದರರಾಜನ್ ರವರ ಧ್ವನಿ "ನಿತ್ಯಾ ಈ ಗೋಳು ನಮಗೆ ತಪ್ಪಲಿಲ್ಲ. ಇವನ ರಾಜ ಕಾರ್ಯ. ಇವನ ಈ ಖುಷಿಗೆ ಮನೆಯವರೆಲ್ಲ ನಿದ್ರೆ ಕೆಡಬೇಕು" ಎಂದು ಕೇಳಿಸಿತು. ಸುಂದರಮ್ಮನವರು "ನಿಮ್ಮ ಪುರಾಣ ಇದ್ದೇ ಇದೆ. ಬಿದ್ದುಕೊಳ್ಳಿ" ಎಂದು ಹೇಳಿ ಬಾಗಿಲು ತೆಗೆದುಕೊಂಡು ಹೊರಕ್ಕೆ ಬಂದರು. ಗೋಪಾಲನಿಗೆ ತುಪ್ಪದ ಕಾರಣ ಗೊತ್ತಾಗಲಿಲ್ಲ. ಅಡಿಗೆಯವನು ಅಂತು ಏನೋ ಹೇಳಿದ್ದಾನೆ ಎಂಬುದು ಅವನಿಗೆ ಹೊಳೆಯಿತು. ಅವನು ಸುಂದರಮ್ಮನವರು ಹೊರಕ್ಕೆ ಬರುವುದರೊಳಗೆ ತನ್ನ ಕೊಠಡಿಗೆ ನುಸುಳಿ ಹೋದನು. ಸುಂದರಮ್ಮನವರು ಅಡಿಗೆ ಮನೆಗೆ ಹೋಗಿ, ಅದರ ಒಳಗಿನ ಕೊಠಡಿಯಾದ ಉಗ್ರಾಣ ಬಾಗಿಲು ತೆರೆದು ತುಪ್ಪವನ್ನು ತೆಗೆದುಕೊಟ್ಟು, "ರಾತ್ರಿಯೇ ತುಪ್ಪ ಇದೆಯೋ ಇಲ್ಲವೋ ಅಂತ ನೋಡ್ಕೊಬೇಡವೇ" ಎಂದು ಹೇಳಿ ಬಂದು ಮಲಗಿದರು.

ಗೋಪಾಲ ತನ್ನ ಕೊಠಡಿಗೆ ಹೋದಾಗ ವತ್ಸಲೆಗೆ ಎಚ್ಚರವಾಯಿತು. ಹೂಂ ಎಂದುಕೊಂಡು ಮತ್ತೊಂದು ಕಡೆ ತಿರುಗಿ ಮುಸುಕು ಎಳೆದುಕೊಂಡು ಮಲಗಿದಳು. ಗೋಪಾಲ ಈ ಮಂಜಿನ ಗೆಡ್ಡೆಯನ್ನು ಹೇಗೆ ಕರಗಿಸಲಿ ಎಂದು ಮಂಚದಮೇಲೆ ಯೋಚಿಸುತ್ತಾ ಕುಳಿತ. ಸುಮಾರು ಹತ್ತು ನಿಮಿಷ ಅವನು ಬೇರೆ ಜ್ಞಾನದಲ್ಲಿ ಕುಳಿತಿರುವಾಗ ವತ್ಸಲೆಯು ಮುಸಿಕಿ ನೊಳಗಿಂದಲೇ "ಇನ್ನೂ ಬೆಳಗಾಗಲಿಲ್ಲವೆ ? ದೀಪ ಆಳಿಸಿ ಮಲಗಿಕೊಳ್ಳಿ. ಯಾವ ಸಿನಿಮಾದಲ್ಲಿಯೂ ಮೂರನೆ ಆಟ ಇಲ್ಲವೇನೋ" ಎಂದಳು. ಗೋಪಾಲನಿಗೆ ಅವಳನ್ನು ಚೂರುಚೂರಾಗಿ ಕತ್ತರಿಸುವಷ್ಟು ಕೋಪವುಂಟಾ ಯಿತು. ಅವನ ದೇಹ ಆಪಾದಮಸ್ತಕವೂ ನಡುಗುತ್ತಿತ್ತು. ಅವನ ಕೋಪದಲ್ಲಿ ಅವನ ಕೈಯಲ್ಲಿದ್ದ ಚೀಲದ ಹೂವು ಹಣ್ಣು ವಿಳ್ಳೆದೆಲೆ ಎಲ್ಲಾ ಅಮುಕಿ ಹಿಸುಕಿ ಒಂದೇ ಒಂದು ಮುದ್ದೆಯಾಯಿತು. ಗೋಪಾಲ ದೀಪವನ್ನು ಆಳಿಸಿ ಹಾಸಿಗೆಯ ಮೇಲೆ ಬಿದ್ದುಕೊಂಡ.

ಗೋಪಾಲನಿಗೆ ಬಹಳ ಹೊತ್ತು ನಿದ್ರೆ ಬರಲಿಲ್ಲ. "ಎಲ್ಲಾದರೂ ದೇಶಾಂತರ ಹೋಗಿ ಈ ನರಕದಿಂದ ಪಾರಾಗುತ್ತೇನೆ" ಎಂದುಕೊಂಡ. ಆದರೆ

ಕರ್ತವ್ಯ ಮುಂದೆ ನಿಂತಿತು. ವತ್ಸಲೆ ಗರ್ಭಿಣಿಯಾಗಿದ್ದಳು. "ಅಗ್ನಿ ಸಾಕ್ಷಿಕ ವಾಗಿ ಕಟ್ಟಿಕೊಂಡ ಹೆಂಡತಿಯನ್ನು ಹೇಗೆ ಬಿಟ್ಟುಹೋಗಲಿ. ಭಗವಂತ ನನ್ನ ಹೆಂಡತಿ ನನಗೆ ಪ್ರಸನ್ನಳಾಗುವಂತೆ ಮಾಡು" ಎಂದು ಪ್ರಾರ್ಥಿಸಿದ. ಅವನ ಪ್ರಾರ್ಥನೆ ಅವನಿಗೇ ವಿಚಿತ್ರವಾಗಿ ತೋರಿತು. "ಹೆಂಡತಿಯನ್ನು ಪ್ರಸನ್ನಳಾಗೆಂದು ಬೇಡಿಕೊಳ್ಳುವ ಪುರುಷರು ಅನೇಕರಿರಬಹುದೆಂದು ಅವನಿಗೆ ತೋರಲಿಲ್ಲ. "ಇದಕ್ಕೆ ಇರುವ ದಾರಿ ಒಂದೇ; ನಾಳೆಯೋ ಈ ಮನೆಯನ್ನು ಹೆಂಡತಿಯೊಂದಿಗೆ ಬಿಡಬೇಕು. ಹೌದು." ಆದರೆ ಅದು ಹೇಳುವಷ್ಟು ಸುಲಭವಾಗಿರಲಿಲ್ಲ. ಸುಂದರಮ್ಮನವರ ಹೆಣ್ಣುಮಕ್ಕಳು ಗಂಡನ ಮನೆಯಲ್ಲಿ ಹೋಗಿ ಇರಬೇಕು ಬಾಳಬೇಕು ಎಂಬ ಆಸೆಯಿಂದ ಬೆಳೆಯುತ್ತಲೇ ಇರಲಿಲ್ಲ. ಗಂಡ ತಮ್ಮ ಮನೆಯಲ್ಲಿ ಬಾಳಬೇಕು ಎಂಬುದೇ ಅವರಿಗೆ ಆ ತಂದೆ ತಾಯಿಗಳು ಹಾಕಿಕೊಟ್ಟ ಮೇಲುಪಂಕ್ತಿಯಾಗಿತ್ತು. ವತ್ಸಲೆಯ ಅಕ್ಕ ಸೀತೆಗೆ ಮದುವೆಯಾದ ಎರಡು ವರ್ಷಗಳ ನಂತರ, ಅದೇ ಮನೆಯಲ್ಲಿ ಅಷ್ಟು ದಿವಸ ಇದ್ದು ಸ್ವಲ್ಪ ಬೇಸರಗೊಂಡ ಅವಳ ಗಂಡ ರಂಗನ್, "ಬೇರೆ ಮನೆಗೆ ಹೋಗೋಣ. ಎಷ್ಟು ಕಷ್ಟವಾದರೂ ಸರಿಯೆ. ಒಂದು ಹೊತ್ತು ಗಂಜಿಕುಡಿದರೂ ಚಿಂತೆಯಿಲ್ಲ. ಸ್ವತಂತ್ರವಾಗಿರೋಣ ಇವರ ಹಂಗು ಸಾಕು" ಎಂದು ಹೇಳಿದ. ಆದರೆ ಸುಂದರರಾಜನ್ ಸುಂದರಮ್ಮ ಹುಲಿಗಳಂತೆ ಅವನ ಮೇಲೆ ಬಿದ್ದರು. "ನಮ್ಮ ಮಗಳನ್ನ ಹೊಟ್ಟೆಗಿಲ್ಲದೆ ಸಾಯಿಸೋದಕ್ಕೇ ನೀನು ಇಲ್ಲಿಂದ ಅವಳನ್ನ ಸಾಗಿಸೋದು. ಇಲ್ಲಿ ನಿನಗೆ ಏನು ಅನ್ನಕ್ಕೆ ಕಡಿಮೆಯೇ. ಹೆಂಡತಿಯ ಮೈಮೇಲಿರುವ ಒಡವೆ ಮಾರ್ಕೋಳೋಕೆ ನೀನು ಕರಕೊಂಡು ಹೋಗೋದು; ಈ ಆಟವೆಲ್ಲ ನನ್ನ ಹತ್ತಿರ ನಡೆಯೋದಿಲ್ಲ" ಎಂದರು. ರಂಗನ್ ಹೆಂಡತಿಗೆ ಎಷ್ಟೋ ಹೇಳಿಕೊಂಡ; ಅವಳೂ ಅವನೊಂದಿಗೆ ಹೋಗಿ ಸಂಸಾರಮಾಡಲು ಒಪ್ಪಲಿಲ್ಲ. ರಂಗನ್‌ಗೆ ಬಹಳ ಕೋಪ ಬಂತು. ಮನೆಬಿಟ್ಟು ಹೋಗಿಬಿಟ್ಟ. ಸುಂದರಮ್ಮನವರು ಸೀತೆಗೆ "ಹೋದರೆ ಹೋದ. ಇವತ್ತಲ್ಲ ನಾಳೆ ಅವನೇ ಬರ್ತಾನೆ. ನಿನ್ನ ಪಾಡಿಗೆ ಸುಮ್ಮನಿರು" ಎಂದರು. ಸುಂದರರಾಜರು "ಈ ಹುಡುಗರ ಜಂಬನೆಲ್ಲ ಮಟ್ಟ ಹಾಕ್ತೆನೆ. ಇನ್ನು ಮೇಲೆ ಬಂದರೂ ಮನೆಗೆ ಸೇರಿಸೋದಿಲ್ಲ. ಗಂಡನ ಆಸೆಯೇ ಉಂಟಾಗದಂತೆ ಸೀತೆಗೆ ಇಂಜಕ್ಷನ್ ಮಾಡಿಸಿ ಮನೆ

ಯಲ್ಲಿ ಇಟ್ಟುಕೊಳ್ಳುತ್ತೇನೆ ಕೈಯಲ್ಲಿ ಮೂರುಸಾವಿರ ರೂಪಾಯಿಯ ನಗ ಇದೆ. ನಾನು ಇರುವವರೆಗೆ ಮನೆಯಲ್ಲಿಯೇ ಇರಲಿ. ಅನಂತರವೂ ಒಂದು ಪಾಲು ಆಸ್ತಿ ಅವಳಿಗೆ ಬಿಟ್ಟುಹೋಗುತ್ತೇನೆ" ಎಂದು ಗರ್ಜಿಸಿದರು. ಸುಂದರರಾಜನು ಮುಟ್ಠಾಳ ಎಂಬುದಾಗಿ ಯಾವಾಗಲೂ ಗಂಟಾಘೋಷವಾಗಿ ಹೇಳುತ್ತಿದ್ದ ಅವರ ಸ್ನೇಹಿತ ಸಂಪದ್ಗಿರಿ "ನಿನ್ನ ಯೋಗ್ಯತೆಗೆ ಬೆಂಕಿಹಾಕಿತು. ಲೋಕದಲ್ಲಿ ನೀನು ಒಬ್ಬನೇ ಹೆಣ್ಣು ಹೆತ್ತಿರುವವನು. ನಿನ್ನ ಅಹಂಕಾರದ ಮದ್ಯದ ಭಾಂಡ ಒಡೆದು ಅದರ ದುರ್ವಾಸನೆ ಸುತ್ತ ಪಸರಿಸದೆ ಇರಲಿ. ನೀನು ಹೆಣ್ಣಾಗಿ ಹುಟ್ಟಿದ್ದರೆ ನಿನಗೆ ಬೇಕಾದುದ್ದೇನು ಎಂಬುದು ಆಗ ಗೊತ್ತಾಗುತ್ತಿದ್ದಿತು. ಮೂರುಸಾವಿರ ನಗ ಕೊಟ್ಟೆ ಅಲ್ಲವೆ? ಆಸ್ತಿ ಕೊಡ್ತೀಯ! ಎಲೊ ಮಡೆಯ, ಬಾಯಾರಿಕೆಯಾದವನಿಗೆ ತುಪ್ಪ ಕೊಡ್ತೀಯ! ಗಂಡನಿಗಾಗಿ ಕೊರಗೊ ಹೆಂಡತೀಗೆ ಆಸ್ತಿ ಕೊಡ್ತಿಯಾ. ಹೋದ ಗಂಡ ಬರದೆ ಹೋದರೆ ನಿನ್ನ ಎಷ್ಟು ಆಸ್ತಿ ತಾನೆ ನಿನ್ನ ಮಗಳಿಗೆ ತೃಪ್ತಿಪಡಿಸೀತು" ಎಂದು ಗದರಿಸಿದ. ಸುಂದರರಾಜರು ಗಂಡನ ಆಸೆ ತಪ್ಪಿಸುವ ಇಂಜಕ್ಷನ್ ಕುರಿತು ಯೋಚಿಸುತ್ತಾ ಮನೆಗೆ ಹೋದರು. ರಂಗನ್ ಹೋಗಿ ಎರಡು ವರ್ಷ ಆಗಿಹೋಯಿತು. ಅವನ ಸುದ್ದಿಯೇ ತಿಳಿಯಲಿಲ್ಲ. ಕೊನೆಗೆ ಸೀತಿಗೆ ನಿಜವಾಗಿಯೂ ಯೋಚನೆಯೇ ಪ್ರಾರಂಭವಾಯಿತು.

ಸುಂದರಾಜ ತನ್ನ ಮನುಷ್ಯ ಸ್ವಭಾವ ನಾಶಕ್ಕೆ ಇಂಜಕ್ಷನ್ ಪೂರ್ತ ತೆಗೆದುಕೊಂಡು, ಸೀತೆಗೆ ಗಂಡನ ಆಸೆ ತಪ್ಪಿಸುವ ಇಂಜಕ್ಷನ್ ಯಾವುದೆಂದು ಯೋಚಿಸುತ್ತಿದರೂ, ರಂಗನ್ ಅಂತಹ ದನವಾಗಿರಲಿಲ್ಲ. ಅವನಿಗೆ ತನ್ನ ವರ್ತನೆಯನ್ನು ಕುರಿತು ತನಗೇ ಪಶ್ಚಾತ್ತಾಪವಾಯಿತು. "ಕೈಹಿಡಿದ ಹೆಂಡತಿಯನ್ನು ನಾನು ಹೀಗೆ ಬಿಟ್ಟು ಊರು ಊರು ಅಲೆಯುತ್ತಿರುವುದು ನನ್ನ ಧರ್ಮವಲ್ಲ. ನನ್ನೊಂದಿಗೆ ಬರಬೇಕಾದ್ದುದು ಅವಳ ಧರ್ಮ. ಆದರೆ ಅವಳಿಗೆ ದುರ್ಭೋದನೆಗಳಿಂದ ತನ್ನ ಧರ್ಮ ಹೊಳೆಯಲಿಲ್ಲ. ಆದರೆ ನನ್ನ ಧರ್ಮ ನನಗೆ ಹೊಳೆಯಬೇಡವೆ? ಅವಳ ತಪ್ಪನ್ನು ನಾನು ಮನ್ನಿಸದಿದ್ದರೆ ಇನ್ನಾರು ಮನ್ನಿಸುವವರು? ಇದರಲ್ಲಿ ಮಾನವೇನು ಅವಮಾನವೇನು? ಅವಳ್ಯಾರು ನಾನು ಯಾರು? ಅವಳು ಬಂದು ನನ್ನ ಜತೆ

ಯಲ್ಲಿ ಇರದೆ ಇದ್ದರೆ ನಾನೇ ಹೋಗಿ ಅವಳ ಜತೆಯಲ್ಲಿದ್ದು ಬಿಡುತ್ತೇನೆ" ರಂಗನ್ ಹೀಗೆ ಹೇಳಿಕೊಂಡು ಎರಡು ವರುಷಗಳ ನಂತರ ಮತ್ತೆ ಮೈಸೂರಿಗೆ ಹಿಂದಿರುಗಿದ. ಸುಂದರರಾಜನ್‌ರು "ನಾನು ನಿರೀಕ್ಷಿಸಿದಂತೆಯೇ ಆಯಿತು. ತನ್ನ ಹೊಟ್ಟೆಹೊರೆದುಕೊಳ್ಳುವುದಕ್ಕೇ ಅವನಿಗೆ ಆಗಲಿಲ್ಲ" ಎಂದುಕೊಂಡು ಸೀತೆಗೆ ಕೊಡಿಸಬೇಕೆಂದಿದ್ದ ಇಂಜಕ್ಷನ್ ಯೋಚನೆ ಬಿಟ್ಟರು. ಅಲ್ಲಿಂದ ಈಚೆಗೆ ರಂಗನ್ ಮತ್ತೆ ಹೋಗುತ್ತೇನೆ ಎಂಬ ಮಾತನ್ನೇ ಬಿಟ್ಟು ಸೀತೆ ತನಗೆ ಅನುಕೂಲಳಾಗಿ ನಡೆಯಬೇಕು ಎಂಬುದನ್ನು ನಿರೀಕ್ಷಿಸದೆ ತಾನೇ ಸೀತೆಗೆ ಅನುಕೂಲನಾಗಿ ನಡೆಯುತ್ತಿದ್ದ.

ಇದನ್ನು ಚೆನ್ನಾಗಿ ಅರಿತಿದ್ದ ಗೋಪಾಲನಿಗೆ ವತ್ಸಲೆ ತನ್ನೊಡನೆ ಜೇರಿ ಇರಲು ಬರುವಳೆ ಎಂಬ ಯೋಚನೆ ಬಂದಿತು. ಅದುವರೆಗೆ ಮನೆಯಲ್ಲಿ ನಡೆದ ಮಾತುಕತೆಗಳಿಂದ ಗೋಪಾಲನಿಗೆ ಆ ಭಾವ ಬಂದಿತ್ತು. ಈ ವಿಷಯ ಪರೀಕ್ಷೆಮಾಡಲು ಅವನಿಗೆ ಇಷ್ಟವಿರಲಿಲ್ಲ. "ವತ್ಸಲೆಯ ಸ್ವಭಾವ ವೊಂಡು. ಅವಳನ್ನು ಈ ಮನೆ ಬಿಟ್ಟು ಹೊರಡು ಎಂದರೆ ಅವಳು ಹೊರಟು ಬಿಟ್ಟರೇನೋ ಬದುಕಿದೆ. ಇಲ್ಲವಾದರೆ, ಅವಳು ಒಂದು ಸಲ ಒಲ್ಲೆ ಎಂದು ಮೊಂಡು ಬಿದ್ದರೆ ತೀರಿತು. ಅವಳ ಮುಂದೆ ಹೆಜ್ಜೆನಮಸ್ಕಾರ ಹಾಕಿದರೂ ಅವಳು ತನ್ನ ಹಟ ಬಿಡುವುದಿಲ್ಲ. ಆದುದರಿಂದ ಈ ವಿಷಯದಲ್ಲಿ ದುಡುಕಬಾರದು." ಗೋಪಾಲ ಹೀಗೆ ಯೋಚಿಸಿ ಮಾಡಬೇಕಾದ ಕಾರ್ಯಕ್ರಮವನ್ನು ನಿರ್ಣಯಿಸಿಕೊಂಡು ಮಲಗಿಕೊಂಡ.

## ೧೦. ಹಳ್ಳಿಯಲ್ಲಿ ಬಣ್ಣದ ಬೀಸಣಿಗೆ

ಮರುದಿವಸ ಗೋಪಾಲ ತನ್ನ ಅಕ್ಕ ಮಣಿಗೆ ಒಂದು ಕಾಗದ ಬರೆದ. ಇದ್ದ ವಿಚಾರಗಳನ್ನು ತಿಳಿಸಿದ "ವತ್ಸಲೆಯನ್ನು ಈ ಮನೆ ಬಿಡಿಸುವುದು ಹೇಗೆ? ಈ ವೇಳೆಯಲ್ಲಿ ನನಗೆ ಸರಿಯಾದ ಬುದ್ಧಿವಾದ ಹೇಳು. ನೀನು ಅಮ್ಮನ ಸ್ಥಳದಲ್ಲಿದ್ದೀಯೆ" ಎಂದು ಬರೆದ. ಮಣಿ ಅವನಿಗೆ ಸರಿಯಾದ ಪ್ರತ್ಯುತ್ತರವನ್ನು ಕೊಟ್ಟಳು. ನಾನು ಮಲ್ಲಿಗೆಹಳ್ಳಿಗೆ ಹೋಗುತ್ತೇನೆ. ಅಣ್ಣನಿಂದ ಕಾಗದ ಬರೆಸುತ್ತೇನೆ. ಅಲ್ಲಿಗೆ ನಿನ್ನ ಹೆಂಡತಿಯನ್ನು ಕರೆದುಕೊಂಡು ಬಾ. ಚೆನ್ನಾಗಿ ಕಿವಿ ಹಿಂಡಿ ಬುದ್ಧಿಕಲಿಸುತ್ತೇನೆ" ಎಂದು ಬರೆದಳು. ೩-೪

ದಿಸಗಳಲ್ಲಿ ರಂಗಪ್ಪನವರಿಂದ ಗೋಪಾಲನಿಗೆ ' ಊರ ಕಡೆ ನಾಲ್ಕು ದಿನ ಬಾ. ವತ್ಸಲೆಯನ್ನೂ ಕರೆದುಕೊಂಡು ಬಾ. ತನ್ನ ಅತ್ತೆಯ ಊರನ್ನು ನೋಡಲಿ. ಮಣಿಯೂ ಬಂದಿದ್ದಾಳೆ ' ಎಂದು ಕಾಗದ ಬಂತು. ಗೋಪಾಲ " ಇದು ಸರಿಯಾದ ಮಾರ್ಗ. ಮೆಲ್ಲಗೆ ಇವಳನ್ನು ಇಲ್ಲಿಂದ ಹಾರಿಸಿಕೊಂಡು ಮಲ್ಲಿಗೆ ಹಳ್ಳಿಗೆ ಹೋಗಿಬಿಡೋಣ. ಅನಂತರ ಬೇಕಾದರೆ ಮೈಸೂರಿಗೆ ಬರೋಣ ಇಲ್ಲದಿದ್ದರೆ ಬೇಡ, ಎಲ್ಲಿಗಾದರೂ ಕಣ್ಮರೆಯಾಗಿ ಹೋಗೋಣ " ಎಂದು ಖುಷಿಪಟ್ಟುಕೊಂಡ. ಈ ನಿರೀಕ್ಷಣೆಯೇ ಅವನಿಗೆ ಒಂದು ಹೊಸ ಆನಂದವನ್ನುಂಟುಮಾಡಿತು. ಮದುವೆಯಾದ ತನ್ನ ಹೆಂಡತಿಯನ್ನು ಹಾರಿಸಿಕೊಂಡು ಹೋಗುವ ಯೋಚನೆ, ಅವನಿಗೆ ಮತ್ತೊಬ್ಬನ ಹೆಂಡತಿಯನ್ನು ಹಾರಿಸಿಕೊಂಡು ಹೋದಷ್ಟೇ ರೋಮಾಂಚವನ್ನುಂಟುಮಾಡಿತು. ಗೋಪಾಲನಿಗೆ ನಿಜವಾಗಿಯೂ ಪುನರ್ಜನ್ಮವಾದಂತೆ ತೋರಿತು. ಇದ್ದಕ್ಕಿದ್ದಂತೆ ವತ್ಸಲೆ ಅವನಿಗೆ ಮತ್ತೆ ಹೊಸ ಹೊಸ ರೂಪದಿಂದ ಕಂಡು ಅವನ ಮನಸ್ಸು ನಿರೀಕ್ಷಣೆಯಲ್ಲಿ ನಲ್ಲಿದಾಡತೊಡಗಿತು. ಅವನು ಆಗಿನಿಂದ, ಆವತ್ತೇ ಮನೆಗೆ ಹೊಸದಾಗಿ ಬಂದ ಹೆಂಡತಿಯೊಡನೆ ಪ್ರೇಮಜೀವನವನ್ನು ಪ್ರಾರಂಭಿಸುವ ನಲ್ಲನ ಉತ್ಸಾಹವುಳ್ಳವನಾದನು.

ಆ ಸಾಯಂಕಾಲ ಗೋಪಾಲ ಆಫೀಸಿನಿಂದ ಹಿಂದಿರುಗಿ ಮನೆಗೆ ನಿತ್ಯಕ್ಕಿಂತ ಬೇಗನೇ ಬಂದ. ತಂದೆಯಿಂದ ಬಂದಿದ್ದ ಕಾಗದವನ್ನು ಹೆಂಡತಿಗೆ ಕೊಟ್ಟ. ಮೊದಲು ಮೊದಲು ಅವಳು " ಈಗ ಹಳ್ಳಿಗೆ ಹೋಗುವುದು ಬೇಡ. ನನಗೆ ಹಳ್ಳಿ ಅಂದರೆ ಆಗುವುದಿಲ್ಲ. ಮುಂದಲ ವರ್ಷ ಹೋಗೋಣ " ಎಂದಳು. ಗೋಪಾಲ ಈ ಆಕ್ಷೇಪಣೆಗೆ ಸರಿಯಾದ ಉತ್ತರವನ್ನು ಇಟ್ಟುಕೊಂಡಿದ್ದ. ಸುಂದರರಾಜರು ಮಾತ್ರ " ನಿಮ್ಮ ಅಕ್ಕ ತಂದೆ ಅವರಿಗೆ ವತ್ಸಲೆಯನ್ನು ನೋಡಬೇಕೆಂದು ಇಷ್ಟವಿದ್ದರೆ ಇಲ್ಲಿಗೇ ಬರಲಿ" ಎಂದರು. ಕೊನೆಯಲ್ಲಿ "ಇರಲಿ, ಒಂದುಸಲ ಹೋಗಿಬಂದರೆ ವತ್ಸಲೆಗೆ ಅಲ್ಲಿಗೂ ಇಲ್ಲಿಗೂ ಇರುವ ವ್ಯತ್ಯಾಸ ಗೊತ್ತಾಗುತ್ತೆ ; ಹೋಗಿಬರಲಿ ; ಅಲ್ಲದೆ ವತ್ಸಲೆಗೆ ತನ್ನ ಕಷ್ಟಸುಖಗಳನ್ನು ತಿಳಿದುಕೊಳ್ಳುವ ವಯಸ್ಸು ಆಗಿದೆ. ಅವಳ ಇಷ್ಟ" ಎಂದುಕೊಂಡು ಸುಮ್ಮನಾದರು.

ಗೋಪಾಲ ಬ್ಯಾಂಕಿನಿಂದ ಒಂದು ತಿಂಗಳು ಸಂಬಳವಿಲ್ಲದ ಬಿಡುವನ್ನು ಹೊಂದಿ ಹೆಂಡತಿಯೊಡನೆ, ದಿಗ್ವಿಜಯಕ್ಕೆ ಹೊರಟವನಂತೆ ಹೊರಟ. ಮೈಸೂರಿನಿಂದ ಮಲ್ಲಿಗೆಹಳ್ಳಿಗೆ ರೈಲಿನಲ್ಲಿ ಹೋಗಬೇಕಾದರೆ, ಮಲ್ಲಿಗೆಹಳ್ಳಿಯಿಂದ ೮ ಮೈಲಿ ದೂರದಲ್ಲಿದ್ದ ಮಲ್ಲಿಗೆಹಳ್ಳಿ ರೋಡು ಎಂಬ ಸ್ಟೇಷನ್ನಿನಲ್ಲಿ ಇಳಿದು ಅಲ್ಲಿಂದ ನಡೆದುಕೊಂಡೋ ಗಾಡಿಯಲ್ಲಿಯೋ ಹಳ್ಳಿಯನ್ನು ತಲಪಬೇಕಾಗಿತ್ತು. ಗೋಪಾಲ ಈ ಪ್ರಯಾಣವನ್ನೂ ಅದರಲ್ಲಿಯೂ ಆ ಎಂಟುಮೈಲಿಯ ಗಾಡಿಯ ಪ್ರಯಾಣವನ್ನು ಬಹಳ ಸುಖದ ಆತುರತೆಯಿಂದ ಎದುರು ನೋಡುತ್ತಿದ್ದ. ಹೀಗೆ ಹೆಂಡತಿಯೊಂದಿಗೆ ಜತೆಯಾಗಿ ತಾವಿಬ್ಬರೇ ಪ್ರಯಾಣಮಾಡುತ್ತಿರುವುದು ಅವನಿಗೆ ಮೊದಲನೆಯ ಅನುಭವವಾಗಿತ್ತು. ಅವನು ಒಂದು ಗಾಡಿಯನ್ನು ಸ್ಟೇಶನ್ನಿಗೆ ಕಳುಹಿಸುವಂತೆ ಅವರ ತಂದೆಗೆ ಬರೆದಿದ್ದ.

ಮೈಸೂರಿನಿಂದ ಬೆಳಗಿನ ೭ ಗಂಟೆ ರೈಲಿನಲ್ಲಿ ಹೊರಟು ಹನ್ನೊಂದು ಗಂಟೆ ವೇಳೆಗೆ ಮಲ್ಲಿಗೆಹಳ್ಳಿ ಸ್ಟೇಶನ್ನಿಗೆ ತಲಪಬಹುದಾಗಿತ್ತು. ಮೊದಲ ದಿವಸ ರಾತ್ರಿ ಬೆಳಿಗ್ಗೆ ಹೊತ್ತಿಗೆ ಮುಂಚೆ ಎದ್ದು ಸಿದ್ಧವಾಗಬೇಕು ಎಂದು ಗೋಪಾಲ ಹೇಳಿದಾಗ ಸುಂದರಮ್ಮನವರು "ಹೊತ್ತಿಗೆ ಮುಂಚೆ ಯಾಕೆ. ಮೋಟಾರಿನಲ್ಲಿ ಹೋಗಿಬಿಟ್ಟರೆ ಒಂದು ಗಂಟೆ ಪ್ರಯಾಣ. ಯಾವಾಗ ಅಂದರೆ ಆಗ ಹೊರಡಬಹುದು. ಅದಕ್ಕೆ ಯಾಕೆ ಇಷ್ಟು ಸವರಣೆ. ಯಾರೂ ಯಾವತ್ತೂ ಪ್ರಯಾಣಾನೆ ಮಾಡಿಲ್ಲವೆ ?" ಎಂದರು. ವತ್ಸಲೆಗಂತೂ ಕಾರ್‌ನಲ್ಲಿಯೇ ಹೋಗಬೇಕು ಎಂದು ಮನಸ್ಸಿತ್ತು. ಅವಳು "ಇಲ್ಲಿಂದ ಸ್ಟೇಶನ್ನು, ಅಲ್ಲಿಂದ ರೈಲು, ಆಮೇಲೆ ಆ ಬಿಸಿಲಿನಲ್ಲಿ ಎಂಟು ಮೈಲಿ ಗಾಡಿ, ಕೇಳಿದರೆ ಭಯವಾಗುತ್ತೆ. ಒಂದು ಗಳಿಗೆ ಕಾರಿನಲ್ಲಿ ಜರ್ ಅಂತ ಹೋಗಿಬಿಡೋಣ" ಎಂದಳು. ಗೋಪಾಲನಿಗೆ ಕಾರಿನಲ್ಲಿ ಹೋಗಲು ಇಷ್ಟವಿರಲಿಲ್ಲ. ವತ್ಸಲೆ ತನ್ನ ತಂದೆಯ ಕಾರಿನಲ್ಲಿ, ಸರ್ಕಸ್ಸಿನ ಪ್ರಾಣಿಯನ್ನು ಮೆರವಣಿಗೆ ಮಾಡುವಂತೆ ತನ್ನನ್ನು ತನ್ನ ಸ್ವಂತ ಹಳ್ಳಿಯಲ್ಲಿ ಮೆರವಣಿಗೆ ಮಾಡುವುದು ಅವನಿಗೆ ಅಸಹ್ಯವಾಗಿತ್ತು. ಹಾಗೇನಾದರೂ ಆದರೆ ಮತ್ತೆ ತಾನು ಅವಳ ಸ್ವತ್ತು ಎಂಬ ಭಾವ ಅವಳಿಗೆ ಬರುತ್ತೆ. ಈ ಭಾವ ನಮ್ಮ ಹಳ್ಳಿಯವರಿಗೂ ಬರಬಾರದು ಎಂಬುದು ಅವನ ಆಸೆಯಾಗಿತ್ತು. ಅಲ್ಲದೆ "ಗಾಡಿಯಲ್ಲಿ ಪ್ರಯಾಣ ೩-೪ ಗಂಟೆ ತೆಗೆದುಕೊಳ್ಳುತ್ತೆ. ನಿಧಾನವಾಗಿ

ಮಾತುಕತೆ ಆಡುತ್ತಾ ಹೋಗಬಹುದು. ಹೃದಯವನ್ನು ಬಿಚ್ಚಿ ವತ್ಸಲೆಯ ಎದುರಿಗೆ ಇಡಬಹುದು. ಎಷ್ಟು ಗಟ್ಟಿಯಾಗಿ ಬೇಕಾದರೂ ಮಾತನಾಡ ಬಹುದು. ಎಷ್ಟು ಮೆತ್ತಗೆ ಬೇಕಾದರೂ ಮಾತನಾಡಬಹುದು. ನನ್ನ ಆಸೆ ಆಕಾಂಕ್ಷೆಗಳನ್ನೆಲ್ಲಾ ಇವಳ ಎದುರಿಗೆ ಇಟ್ಟು ಅವಳನ್ನು ಒಪ್ಪಿಸಬಹುದು." ಎಂದು ಗೋಪಾಲ ನಾಲ್ಕು ದಿನಗಳಿಂದ ಬೆಳಸಿಕೊಂಡಿದ್ದ ಆಸೆ ನಿರಾಸೆ ಯಾಯಿತು. ಆ ಹಾಳು ಸಂದರರಾಜರ ಮನೆಯಲ್ಲಿ ಒಂದು ಬಿಡುವಾದ ಸ್ಥಳವಾಗಲಿ ಒಂದು ಬಿಡುವಾದ ಗಳಿಗೆಯಾಗಲಿ ಗೋಪಾಲನಿಗೆ ದೊರೆ ತಿರಲಿಲ್ಲ. ಅವನು ಮನೆಯಲ್ಲಿರುತ್ತಿದ್ದ ೩-೪ ಗಂಟೆ ಕಾಲದಲ್ಲಿ, ಯಾವಾ ಗಲೂ ವತ್ಸಲೆಯ ಸುತ್ತ ಅವನ ನಾದನಿಯರೂ ಭಾವ ಮೈದುನರೂ ಗೇರಾಯಿಸಿಕೊಂಡಿರುತ್ತಿದ್ದರು. ಮದುವೆಯಾದಂದಿನಿಂದ ಇಂದಿನವರೆಗೆ ಅವನಿಗೆ ಹೆಂಡತಿಯೊಡನೆ ಮಾತನಾಡುವುದಕ್ಕೆ ಕೂಡ ಒಂದು ನಿಮಿಷ ಅವಕಾಶ ದೊರೆತಿರಲಿಲ್ಲ. "ಭಗನಂತ, ಈ ನಾದಿನಿ ಭಾವಮೈದಿನರು ಇಲ್ಲದ ಒಂದು ಹೆಂಡತಿ ನನಗೆ ಸಿಕ್ಕಬಾರದಾಗಿತ್ತೆ? ಇಷ್ಟೊಂದು ನಾದಿನಿ ಭಾವಮೈದಂದಿರು ಇರುವ ಹೆಣ್ಣು ಯಾರಿಗೂ ಹೆಂಡತಿಯಾಗದಿರಲಿ" ಎಂದು ಕೊಳ್ಳುತ್ತಿದ್ದ. ಈ ಎಲ್ಲಾ ಕಾರಣಗಳಿಂದ ಈ ಪ್ರಯಾಣದಲ್ಲಿ ಗೋಪಾಲ ನಿಗೆ ಬಹಳ ಸುಖದ ನಿರೀಕ್ಷಣೆ ಇತ್ತು.

ವತ್ಸಲೆ, ಗೋಪಾಲನ ಮಾತಿಗೆ ಒಪ್ಪಲಿಲ್ಲ. ಹಳ್ಳಿಯ ಮಾವನ ಮನೆಗೆ ಮೊದಲನೆಯ ಸಲ ಮೋಟಾರಿನಲ್ಲಿ ಹೋಗುವ ಆಸೆಯನ್ನು ಜಯಿ ಸಿದ ಸೊಸೆ ಎಲ್ಲಿಯಾದರೂ ಉಂಟೆ? ಅದು ಸ್ತ್ರೀಯರ ಸ್ವಭಾವಕ್ಕೆ ವಿರುದ್ಧ ವಾದುದು. ಗೋಪಾಲ "ಈ ಸಲ ಸೋಲಬೇಕು" ಎಂದುಕೊಂಡ. "ಇದು ಸೋಲಲ್ಲ. ಇದು ಗೆಲುವಿಗೆ ಒಂದು ಮೆಟ್ಟಲು. ಈ ಬಗ್ಗುವುದು ಆಮೇಲೆ ಏಳುವುದಕ್ಕಾಗಿ" ಎಂದು ಸಮಾಧಾನ ಮಾಡಿಕೊಂಡ. ಗಂಡನಾದವನು ತಿಳಿಯುವುದು ಹೀಗೆಯೇ. "ತಾನು ಪ್ರತಿಯೊಂದು ಸಲವೂ ಹೆಂಡತಿಗೆ ಸೋಲುವುದು, ಗೆಲ್ಲುವುದಕ್ಕಾಗಿ" ಎಂದೇ. ಬರಬರುತ್ತಾ ಅನುಭವದಿಂದ ತಾನು ಪ್ರತಿಯೊಂದು ಸಲವೂ ಸೋಲಲೇ ಬೇಕಾಗುವುದೆಂದು ಅವನಿಗೆ ಗೊತ್ತಾಗುತ್ತದೆ. ಹೆಂಡತಿಯ ಇಚ್ಛೆಗೆ ವಿರೋಧವಾಗಿ ನಡೆಯುವ ಪ್ರಯತ್ನ ಕೂಡ ಬರಿಯ ವ್ಯರ್ಥವೆಂದು ಗಂಡನಿಗೆ ಗೊತ್ತಾಗಬೇಕಾದರೆ ಅವನಿಗೆ

ಕೊನೆಯ ಪಕ್ಷ ನಾಲ್ಕು ಮಕ್ಕಳಾದರೂ ಆಗಬೇಕು. ಅಲ್ಲಿಯವರಿಗೆ ಅವನಿಗೆ ಒಂದಿಲ್ಲ ಒಂದು ದಿನ ತನ್ನ ಅಧಿಕಾರ, ವಿಧಿಯ ಎದುರಿಗೆ ನಡೆದರೂ ನಡೆಯಬಹು ದೆಂಬ ನಂಬಿಕೆ ಇದ್ದೇ ಇರುತ್ತದೆ. ಆದರೆ ಗೋಪಾಲನಿಗೆ ಇನ್ನೂ ಆ ವಯಸ್ಸಾ ಗಿರಲಿಲ್ಲ. ಆದುದರಿಂದ ಅವನು "ಇವತ್ತು ಸೋಲುತ್ತೇನೆ. ನಾಳೆ ನಾನು ಗೆಲ್ಲಲೇ ಬೇಕು" ಎಂದುಕೊಂಡ. ಇದು, ಪ್ರಾಣಿ "ಇವತ್ತು ಮೂಗು ದಾರ ಹಾಕಿಸಿಕೊಳ್ಳೋಣ. ಬೇಕಾದರೆ ನಾಳೆ ಕಿತ್ತು ಒಗೆಯುತ್ತೇನೆ" ಎಂದು ಹೇಳಿ ಕೊಳ್ಳುವಂತೆ ಆಯಿತು ಗೋಪಾಲ ಕೊನೆಯಲ್ಲಿ ಮೋಟಾರಿನಲ್ಲಿ ಹೋಗಲು ಒಪ್ಪಿದುದರಿಂದ ವತ್ಸಲೆಗೆ ಏನೂ ಆಶ್ಚರ್ಯವಾಗಲಿಲ್ಲ, ಈ ಪ್ರಶ್ನೆಯು ಇತ್ಯರ್ಥ ಹೀಗೆಯೇ ಆಗಬೇಕೆಂದು ಅವಳು ಮೊದಲೇ ತೀರ್ಮಾನಿಸಿದ್ದಳು.

ಹೊರಡಬೇಕಾದ ಬೆಳಿಗ್ಗೆ, ಸುಮಾರು ಏಳು ಗಂಟೆಯಿಂದಲೇ ಗೋಪಾಲ ಸಿದ್ಧನಾಗಿದ್ದರೂ ವತ್ಸಲೆಯ ಹೊರಡಬೇಕಾದ ಸಿದ್ಧತೆ ಕಾಣಬೇ ಇಲ್ಲ. ಎಂಟು ಗಂಟೆಗೆ ಸುಂದರರಾಜನ್ ಕಾರಿನಲ್ಲಿ ಎಲ್ಲಿಗೋ ಹೋದರು. ಹತ್ತು ಗಂಟೆಗೆ ಬಂದು ಊಟಮಾಡಿಕೊಂಡು ಆಫೀಸಿಗೆ ಹೋದರು. ಗೋಪಾಲ ಏಟು ತಿಂದ ಸರ್ಪದಂತೆ ಬುಸುಗುಟ್ಟುತ್ತಿದ್ದ. ಅವನ ಮುಖವನ್ನು ನೋಡಿ ವತ್ಸಲೆ ಮನಸ್ಸಿನಲ್ಲಿ ನಗುತ್ತಿದ್ದಳು. ಗೋಪಾಲನಿಗೆ ಅದು ತಿಳಿಯದೆ ಇರ ಲಿಲ್ಲ. ತನ್ನ ಅಶಕ್ತಿ ಅರಿತು ಅವನಿಗೂ ನಗು ಬಂತು. "ಹೇಗಾದರೂ ಆಗಲಿ. ತನ್ನ ಸ್ಥಿತಿ ಇವಳಿಗೆ ತಿಳಿಯಿತಲ್ಲ. ನನ್ನ ಮನಸ್ಸಿನಲ್ಲಿ ಏನು ನಡೆಯುತ್ತಿದೆ ಎಂಬುದು ಇವಳಿಗೆ ಗೊತ್ತಾಯಿತಲ್ಲ. ನಕ್ಕರೆ ನಗಲಿ" ಎಂದುಕೊಂಡ. "ನನ್ನ ರಾಣಿಸಾಹೇಬ, ನನ್ನ ಚಿನ್ನ, ಸ್ವಲ್ಪ ತಾಳು. ಬಹಳ ಎತ್ತರದ ಕುದುರೆಯ ಮೇಲೆ ಹೋಗಬೇಡ. ಹೇಗಿದ್ದರೂ ಕೈ ಮುಗಿದುಕೊಂಡು ನನ್ನಲ್ಲಿಗೆ ಬರಲೇಬೇಕಲ್ಲ" ಎಂದು ಯೋಚಿಸಿದ. ಹೀಗೆ ಅವನು ಯೋಚಿಸುತ್ತಿರುವಾಗ ವತ್ಸಲೆ ಸರ್ರೆಂದು ತಲೆಎತ್ತಿ ಅವನ ಕಡೆ ನೋಡಿದಳು. ಗೋಪಾಲನಿಗೆ ತಾನು ಕದಿಯುವಾಗ ಪತ್ತೆ ಯಾಗಿಬಿಟ್ಟರೆ ಹೇಗೋ ಹಾಗೆ ಆಯಿತು. ವತ್ಸಲೆಯ ನೋಟ ಅವನ ಮನಸ್ಸನ್ನು ಕೊರೆದುಕೊಂಡು ಒಳಗಿನ ಗುಟ್ಟನ್ನು ಈಚೆಗೆ ಎಳೆಯುವಂತೆ ತೋರಿತು. ಆ ನೋಟದಲ್ಲಿ "ನನ್ನಲ್ಲಿ ಅದೆಲ್ಲಾ ನಡೆಯುವುದಿಲ್ಲ. ಚಾವಟಿ ಇರುವುದು ನನ್ನ ಕೈಯಲ್ಲಿ, ತಿರುಗಿಸಿದ ಕಡೆ ಹೋಗಬೇಕು"

ಎಂದು ಹೇಳುವಂತೆ ತೋರಿತ್ತಿದ್ದಿತು. ಗೋಪಾಲ ತಲೆತಗ್ಗಿಸಿಕೊಂಡು ಸುಮ್ಮನಾದ. "ಸದ್ಯ ಹೇಗಾದರೂ ಆಗಲಿ ಇವಳು ನನ್ನ ಮೇಲೆ ಕೋಪಿಸಿ ಕೊಂಡು ಸಿಡಿಗುಟ್ಟಿದರೂ ಚಿಂತೆಯಿಲ್ಲ. ನನ್ನ ಕಣ್ಣು ಕುಕ್ಕಿದರೂ ಚಿಂತೆಯಿಲ್ಲ. ಬಂದಾಗ ಬರ್‍ತಾನೆ ಹೋದಾಗ ಹೋಗ್ತಾನೆ ಅನ್ನೊ ಔದಾಸೀನ್ಯ ಬಿಟ್ಟರೆ ಸಾಕು" ಎಂದುಕೊಂಡ. "ನನ್ನ ಹೆಂಡತಿ ನನ್ನನ್ನು ಬಯ್ಯಲಿ" ಎಂದು ದೇವರನ್ನು ಪ್ರಾರ್ಥಿಸಿಕೊಳ್ಳುತ್ತಿದ್ದ ಅವನ ದೃಶ್ಯ ಅವನಿಗೇ ನಗುವನ್ನುಂಟುಮಾಡಿತು. "ಎಲೋ ಮಡೆಯ ಒಂದುಸಲ ಅವಳು ಬಯ್ಯಲು ಬಾಯಿ ತೆಗೆದರೆ ಆಮೇಲೆ ಬ್ರಹ್ಮನೂ ಅದನ್ನು ನಿಲ್ಲಿಸಲಾರ."

ಒಂದು ಗಂಟೆಯ ನಂತರ ಮೋಟಾರು ಆಫೀಸಿನಿಂದ ಹಿಂದಿರುಗಿತು. ವತ್ಸಲೆಯ ತಂಗಿ ರಮಾ ಸುಮಾರು ಹದಿಮೂರು ವರ್ಷದ ಹುಡುಗಿ "ನಾನೂ ಮೋಟಾರಿನಲ್ಲಿ ಹೋಗುತ್ತೇನೆ" ಎಂದು ಹಠ ಹಿಡಿದಳು. ಆ ಮನೆಯ ಹುಡುಗಿಯರು ಸ್ವಲ್ಪ ಹಠ ಹಿಡಿದರೆ ಸಾಕು. ಆ ಮೇಲೆ ಅದನ್ನು ಬದಲಾಯಿಸಲು ಬ್ರಹ್ಮನಿಗೂ ಆಗುತ್ತಿರಲಿಲ್ಲವೆಂಬುದು ಗೋಪಾಲ ನಿಗೆ ಚೆನ್ನಾಗಿ ಗೊತ್ತಾಗಿದ್ದಿತು. ರಮಾ "ನಾನು ಬರುತ್ತೇನೆ" ಎಂದ ಕೂಡಲೇ ಗೋಪಾಲನಿಗೆ "ಈ ಪ್ರಾರಬ್ಧ ಗಂಟು ಬಿತ್ತು." ಎಂದು ತಿಳಿಯಿತು. ಗೋಪಾಲನು ಯಾವಾಗಲೂ ಇತರರನ್ನು ದ್ವೇಷಿಸುವ ಸ್ವಭಾವವಾಗಿರಲಿಲ್ಲ. ಆದರೆ "ಈಗ ನನ್ನ ಹೆಂಡತಿಯೊಡನೆ ನಾನು ನನ್ನ ಊರಿಗೆ ಹೋಗಬೇಕಾದರೂ ಈ ಇನ್ನೊಂದು ಪ್ರಾರಬ್ಧದ ಕಾಟ ತಪ್ಪಲಿಲ್ಲವಲ್ಲ" ಎಂದು ಅವನಿಗೆ ಲೋಕದಲ್ಲಿರುವ ಎಲ್ಲಾ ನಾದಿನಿಯರ ಮೇಲೂ ಒಂದೇ ಬಾರಿಗೆ ಸಿಟ್ಟುಂಟಾಯಿತು. ಸುಂದರಮ್ಮನವರು "ಅದಕ್ಕೇನು ಮಹಾ ಒಂದು ಗಂಟೆ ಪ್ರಯಾಣ. ಡ್ರೈವರ್ ಪುಟ್ಟಯ್ಯ ಜೋಪಾನ. ಮೋಟಾರಿನಲ್ಲಿ ಬರುವಾಗಲೇ ರಮಾನನ್ನು ಹಿಂದಕ್ಕೆ ಕರೆದುಕೊಂಡು ಬಂದು ಬಿಡು" ಎಂದರು. ಆ ಸಾಯಂಕಾಲ ಮೂರು ಗಂಟೆ ವೇಳೆಗೆ ಗೋಪಾಲ ಮಲ್ಲಿಗೆವಾಳು ತಲಪಿದ. ಸ್ಟೇಶನ್ನಿಗೆ ಹೋಗಿದ್ದ ಗಾಡಿ ಇವನು ಬರಲಿಲ್ಲ ವೆಂದು ಹಿಂದಿರುಗಿ ಅರ್ಧ ಗಂಟೆಯಾಗಿತ್ತು. ಮಣಿಯು "ಗೋಪಾಲ ಬರ ಲಿಲ್ಲ. ಪಟ್ಟಣದ ಬಣ್ಣದ ಬೀಸಣಿಗೆ, ಆ ರಾಣಿ ಹೊರಡಲಿಲ್ಲ ಅಂತ ಕಾಣುತ್ತೆ. ಇವ ಹೇಳಿದಾಗ ಅವಳೆಲ್ಲಿ ಹೊರಡ್ತಾಳೆ. ಅವಳು ಹೊರ

ಟಾಗ ಇವನೂ ಹೊರಡಬೇಕು" ಎಂದಳು. ರಂಗಪ್ಪನವರು "ಮೋಟಾರಿನಲ್ಲಿ ಬರಬಹುದು." ಎಂದು ಹೇಳುತ್ತಿದ್ದರು. ಮಲ್ಲಿಗೆವಾಳಿಗೆ ಅಪರೂಪವಾಗಿ ಮೋಟಾರು ಬಂದಕೂಡಲೆ ಹಳ್ಳಿಯಲ್ಲಿ ಬಹಳ ಸಂಭ್ರಮವಾಯಿತು. ಅದೇ ಗಾಡಿಯಲ್ಲಿ ರಮಾ ಮೈಸೂರಿಗೆ ಹಿಂದಿರುಗಿದಳು.

ಹಳ್ಳಿಯ ಹೆಂಗಸರು ನಿಧಾನವಾಗಿ ಒಬ್ಬೊಬ್ಬರಾಗಿ ಹೊಸದಾಗಿ ಬಂದ ಸೊಸೆಯನ್ನು ನೋಡಲು ಬರತೊಡಗಿದರು. ವಯಸ್ಸಾದ ಸುಮಂಗಲಿಯರು ಬಂದು "ಎಲ್ಲಿ ಈಚೆಗೆ ಬಾ ಹೇಗಿದ್ದೀಯೊ ನೋಡೋಣ" ಎಂದರು. ಒಬ್ಬ ವೃದ್ಧೆ ಅವಳನ್ನು ಅಪಾದಮಸ್ತಕವೂ ಚೆನ್ನಾಗಿ ನೋಡಿ "ಚೆನ್ನಾಗಿದ್ದೀಯೆ. ಜಾಣೆ ಜಾಣೆ. ಗೋಪಾಲ ನೀನು ಹೇಳಿದ ಹಾಗೆ ಕೇಳ್ತಾನೆ ತಾನೆ" ಎಂದಳು. ಮದುವೆ ಮೈಸೂರಿನಲ್ಲಿ ಆಗಿದ್ದುದರಿಂದಲೂ, ಸೊಸೆ ಮನೆಗೆ ಬಂದದು ಅದೇ ಮೊದಲನೆಯ ಸಲವಾದುದರಿಂದಲೂ ಅವಳನ್ನು ನೋಡುವ ಉತ್ಸಾಹ ರಂಗಪ್ಪನವರನ್ನೂ ಗೋಪಾಲನನ್ನೂ ಬಲ್ಲ ಊರಿನವರಿಗೆಲ್ಲಾ ಹೆಚ್ಚಾಗಿತ್ತು. ಒಬ್ಬಿಬ್ಬರು "ಊರಿಗೆ ಬಂದವಳು ನೀರಿಗೆ ಬರದೆ ಹೋಗ್ತಾಳೈ. ಹೇಗಿದ್ದರೂ ಹೊಳೆಗೆ ಬಂದೇ ಬರ್ತಾಳೆ" ಎಂದುಕೊಂಡು ಸುಮ್ಮನಾದರು. ಅಂತೂ ಆದಿವಸ ಮಲ್ಲಿಗೆವಾಳಿಗ ಬಹು ಸಂಭ್ರಮವಾಯಿತು. ಹೆಂಡತಿಯ ನಿಲುವು, ಅವಳ ಮುಖದ ಗಾಂಭೀರ್ಯ, ಅವಳ ಸಹಜವಾದ ಸೌಂದರ್ಯ. ಅವಳನ್ನು ನೋಡಿ ಉಳಿದ ಸ್ತ್ರೀಯರಿಗೆ ಉಂಟಾಗುತ್ತಿದ್ದ ಹೊಟ್ಟೆಕಿಚ್ಚು ಇವುಗಳನ್ನೆಲ್ಲಾ ನೋಡಿ ಗೋಪಾಲನಿಗೆ ನಿಜವಾಗಿಯೂ ತನ್ನ ಹೆಂಡತಿ ಎಂಬ ಹೆಮ್ಮೆಯೇ ಉಂಟಾಯಿತು.

ಆದರೆ ವತ್ಸಲೆ ಹಳ್ಳಿಯ ಬಾಳಿಗೆ ಹೊಂದಿಕೊಳ್ಳಲಾರದೆ ಹೋದಳು. ಬೆಳಗಿನ ಜಾವ ಎದ್ದು ಬಾಗಿಲನ್ನು ಗುಡಿಸಿ ನೀರು ಹಾಕಿ ರಂಗೋಲೆ ಇಕ್ಕುವುದು; ಸ್ನಾನದ ಮನೆಯ ಒಲೆ ಹತ್ತಿಸಿ ನೀರು ಕಾಯಿಸಿ ಸ್ನಾನ ಮಾಡಿ ಕಾಫಿ ಕಾಸಿ, ಮನೆಯವರು ಎದ್ದು ಬಂದಂತೆ ಒಬ್ಬೊಬ್ಬರಿಗಾಗಿ ಅವರಿಗೆಲ್ಲಾ ಕಾಫಿ ಕೊಟ್ಟು ಮತ್ತೆ ಆ ಪಾತ್ರೆಗಳನ್ನು ತೊಳೆದಿಡುವುದು. ದನದ ಕೊಟ್ಟಗೆಯಲ್ಲಿ ಹಸುವಿನ ಮುಂದೆ ಹುಲ್ಲು ಹಾಕಿ ತಿಂಡಿ ಇಟ್ಟು ಹಾಲು ಕರೆದುಕೊಳ್ಳುವುದು; ನದಿಗೆ ಹೋಗಿ ಪಾತ್ರೆಗಳನ್ನೆಲ್ಲಾ ಬೆಳಗಿಕೊಂಡು, ಗಂಡ, ಮಾವ, ಮಕ್ಕಳ ಪಂಚೆಗಳನ್ನೆಲ್ಲಾ ಒಗೆದುಕೊಂಡು ಕುಕ್ಕೆ

ಯಲ್ಲಿ ಇಟ್ಟುಕೊಂಡು ನಡುಬೀದಿಯಲ್ಲಿ ಮನೆಗೆ ಬರುವುದು. ಒಲೆಯ ಮುಂದೆ ಕೈ ಬಾಯಿ ಮಸಿಮಾಡಿಕೊಂಡು ಅಡಿಗೆ ಮಾಡಿ ಎಲ್ಲರಿಗೂ ಬಡಿಸಿ, ಊಟಮಾಡಿದ ಎಲೆಗಳನ್ನೆಲ್ಲಾ ಎತ್ತಿಹಾಕಿ ಗೋಮಯ ಹಾಕುವುದು. ಹೀಗೆಲ್ಲಾ ಆದಮೇಲೆ ತನ್ನ ಊಟ ಸುಮಾರು ಎರಡು ಗಂಟೆ ಮುಂದೆ ಮಧ್ಯಾಹ್ನದ ಕಾಫಿ ರಾತ್ರಿ ಊಟ. ಹೀಗೆ ಒಂದೇ ಸಮನೆ ಗಾಣದ ಎತ್ತಿನಂತೆ ದುಡಿಯುವುದು ಹೇಗೆ ಸಾಧ್ಯ? ಮಣಿ ಮಾಡುತ್ತಿದ್ದುದು ಅದೇಯೆ. ವತ್ಸಲೆ ಮಲ್ಲಿಗೆವಾಳಿಗೆ ಬಂದ ದಿನವೇ "ಇದು ನನ್ನಿಂದ ಸಾಧ್ಯವಿಲ್ಲ" ಎಂದುಕೊಂಡಳು.

ಯಾವ ಉದ್ದೇಶಕ್ಕಾಗಿ ಗೋಪಾಲ ವತ್ಸಲೆಯನ್ನು ಮಲ್ಲಿಗೆವಾಳಿಗೆ ಕರೆದುಕೊಂಡು ಬಂದಿದ್ದನೋ ಆ ಉದ್ದೇಶ ಸಾರ್ಥಕವಾಗಲಿಲ್ಲ. ವತ್ಸಲೆಗೆ ಈ ಜನರನ್ನು ಕಂಡರೆ ಮೊದಲಿನಿಂದ ಇದ್ದ ತಿರಸ್ಕಾರ ಮತ್ತಷ್ಟು ಹೆಚ್ಚಾಯಿತು. ಈ ಕಾಡುಜನರನ್ನು ಕುರಿತು ಏನೇನು ಸುಳ್ಳು ಭಾವನೆಗಳನ್ನು ಸುಂದರಮ್ಮ ಸುಂದರರಾಜ ಅವಳ ಮನಸ್ಸಿನಲ್ಲಿ ಬೆಳೆಸಿದ್ದರೋ ಅವೆಲ್ಲಾ ಒಂದಕ್ಕೆ ಎರಡಾಗಿ ಬಲಿತು, ತನ್ನ ಸ್ವಂತ ಪ್ರತಿಷ್ಠೆ ದೊಡ್ಡಸ್ತಿಕೆ ಅಹಂಕಾರ ದುಡ್ಡಿನ ಮದ ಇವುಗಳನ್ನು ಅವಳಿಗೆ ಎತ್ತಿ ತೋರಿಸಿದವು. ಅವಳು ಯಾವ ರೀತಿಯಲ್ಲಿಯೂ ರಂಗಪ್ಪನವರ ಮನೆಯ ಬಾಳಿನಲ್ಲಿ ಒಂದಾಗಲು ಬಯಸಲಿಲ್ಲ. ಅವಳ ಮನಸ್ಸನ್ನು ತಿದ್ದಬೇಕೆಂದು ಮಣಿ ಎಷ್ಟು ಸಾಹಸಪಡುತ್ತಿದ್ದರೂ ವತ್ಸಲೆ ಅವಳಿಗೆ ಮಾತನಾಡುವುದಕ್ಕೇ ಅವಕಾಶ ಕೊಡುತ್ತಿರಲಿಲ್ಲ. ಮಣಿಯು "ಕೆಲಸ ಬರದಿದ್ದರೆ ಚಿಂತೆಯಿಲ್ಲ. ಹೇಗೂ ಜತೆಯಲ್ಲಿಯಾದರೂ ಕುಳಿತುಕೊಳ್ಳುತ್ತಾಳೆ ಆಗ ಮುಖದ ನೀರು ಇಳಿಸುತ್ತೇನೆ" ಎಂದು ಮಾಡಿಕೊಂಡ ಏರ್ಪಾಡು ನಡೆಯಲಿಲ್ಲ. ವತ್ಸಲೆ ರೂಮಿನಿಂದ ಹೊರಕ್ಕೇ ಬರುತ್ತಿರಲಿಲ್ಲ. ಗೋಪಾಲ ತಾನೆ ಅವಳಿಗೆ ಕಾಫಿ ತೆಗೆದುಕೊಂಡು ಹೋಗಿ ಕೊಡುತ್ತಿದ್ದ. ಅವಳು ಅದನ್ನು ಸ್ವಾಭಾವಿಕವಾಗಿ ತೆಗೆದುಕೊಂಡು ಕುಡಿಯುತ್ತಿದ್ದಳು. ಮಣಿ ನದಿಗೆ ಹೋಗೋಣ ಎಂದು ಕರೆದಾಗ ಅದೆಲ್ಲಾ ನನಗೆ ಅಭ್ಯಾಸವಿಲ್ಲ ಎಂದುಬಿಡುತ್ತಿದ್ದಳು. ಮಣಿಯೇ ಅವಳ ಸೀರೆ ರವಕೆಗಳನ್ನು ನದಿಯಲ್ಲಿ ಒಗೆದುಕೊಂಡು ಒಣಗಿಹಾಕುತ್ತಿದ್ದಳು. ಭಾವಿಯಿಂದ ನೀರು ಸೇದುವುದು ಅವಳಿಗೆ ಅಭ್ಯಾಸವಿದ್ದಿತೋ ಇಲ್ಲವೋ ತಿಳಿ

ಯದು. ಆದರೆ ಅವಳು ನೀರು ಸಿದ್ಧವಾಗಿದೆ ಎಂದು ಗೋಪಾಲ ಹೋಗಿ ಕರೆಯುವವರೆಗೆ ಸ್ನಾನಕ್ಕೆ ಹೋಗುತ್ತಿರಲಿಲ್ಲ. ಗೋಪಾಲ ನೀರನ್ನು ಹದ ಮಾಡಿದ ನಂತರ, ಮನೆಯಲ್ಲಿ ಅಡಿಗೆಯವನು ಮಾಡಿದ ಕೆಲಸವನ್ನು ಹೇಗೆ ಸ್ವೀಕರಿಸುತ್ತಿದ್ದಳೋ ಹಾಗೆಯೇ ಸ್ವೀಕರಿಸುತ್ತಿದ್ದಳು. ಮಣಿ ಒಬ್ಬಳೇ ಮನೆಯ ಒಳಗಿನ ಹೊರಗಿನ ಕೆಲಸಗಳನ್ನೆಲ್ಲಾ ಮಾಡಬೇಕಾಗಿತ್ತು. ಆದರೆ ಅವಳು ಅದಕ್ಕೆ ಹೆದರುತ್ತಿರಲಿಲ್ಲ. ಹಳ್ಳಿಯ ದೊಡ್ಡ ಸಂಸಾರಗಳಲ್ಲಿಯ ಹೆಣ್ಣು ಮಕ್ಕಳು ನಾಲ್ಕು ಮನೆಯ ಕೆಲಸಗಳನ್ನೂ ಸುಲಭವಾಗಿ ಮಾಡುತ್ತಾರೆ. ಆದರೆ ಅವಳು ವತ್ಸಲೆ ಬಂದು ಇಲ್ಲಿ ಕುಳಿತುಕೊಳ್ಳಬಾರದೆ? ಮಾತನಾಡ ಬಾರದೆ? ಜತೆಯಾಗಿ ಓಡ್ಯಾಡಿಕೊಂಡು ಇರಬಾರದೆ?" ಎಂದು ಬಯಸು ತ್ತಿದ್ದಳು. ಆದರೆ ವತ್ಸಲೆ ಮನೆಯಲ್ಲಿ ಇದ್ದರೂ ಇಲ್ಲದಂತೆಯೇ ಇದ್ದಳು. ಒಂದು ದಿನ ಮಣಿ ಅವಳಿಗೆ "ನಿನ್ನ ಗಂಡನ ಎಲೆ ಎತ್ತಿ ಹಾಕಿ ಗೋಮಯ ಹಾಕು" ಎಂದಳು. ವತ್ಸಲೆ "ಎಲೆಯನ್ನು ಎತ್ತಿ ಹಾಕಿ ಗೋಮಯ ಹಾಕುವುದು ನನಗೆ ಅಭ್ಯಾಸವಿಲ್ಲ" ಎಂದಳು. ಮಣಿ ಏನೋ ಒಂದು ಮಾತು ಸಿಡಿಕಿದುದಕ್ಕೆ ಊಟಮಾಡದೆ ಮಲಗಿಬಿಟ್ಟಳು. ಗೋಪಾಲ ಅವಳಿಗೆ ಸಮಾಧಾನ ಹೇಳಿ ಅವಳ ಕೊಠಡಿಗೆ ತಾನೆ ಊಟವನ್ನು ತೆಗೆದುಕೊಂಡು ಹೋಗಿ ಬಡಿಸಿದನು.

ಮಲ್ಲಿಗೆವಾಳಿನಲ್ಲಿ ಎಂಟು-ದಿನ ಇರುವುದರೊಳಗಾಗಿ ವತ್ಸಲೆಗೆ ಆ ಊರನ್ನೂ ಆ ಜನರನ್ನೂ ಕಂಡರೆ ಪೂರ್ಣವಾಗಿ ದ್ವೇಷವುಂಟಾಯಿತು. ಯಾವ ಆಸೆಯಿಂದ ಮಣಿ ಅವಳನ್ನು ಕರಿಸಿದ್ದಳೋ ಆ ಆಸೆ ಸ್ವಲ್ಪವೂ ನೆರವೇರಲಿಲ್ಲ. ಇಂತಹ ವಿಚಾರಗಳು ಹಳ್ಳಿಯಲ್ಲಿ ಹರಡುವುದಕ್ಕೆ ಹೆಚ್ಚು ಹೊತ್ತು ಬೇಕಾಗುವುದಿಲ್ಲ. "ಗೋಪಾಲನಿಗೂ ವತ್ಸಲೆಯ ಮನೆಯ ಪರಿಚಾರಕನಿಗೂ ಹೆಚ್ಚು ವ್ಯತ್ಯಾಸವಿಲ್ಲ. ಮನೆ ಪರಿಚಾರಕ ಮಾಡೊ ಕೆಲಸಾನೆ ಇಲ್ಲಿ ಅವ ಅವಳಿಗೆ ಮಾಡೋದು" ಎಂದು ಹುಡುಗಿಯರು ನದಿಯ ಸ್ನಾನಘಟ್ಟದಲ್ಲಿ ಮಾತನಾಡಿಕೊಳ್ಳುತ್ತಿದ್ದರು. "ಇನ್ನು ಅವ ಅವಳನ್ನು ಹೆಗಲ ಮೇಲೆ ಕೂರಿಸಿಕೊಂಡು ಮೆರವಣಿಗೆ ಮಾಡೋದೊಂದೇ ಬಾಕಿ ಅದನ್ನೂ ಇವತ್ತೂ ನಾಳೆ ಒಳಗೆ ನೋಡ್ತೀವಿ" ಎಂದು ಹುಡುಗರು ಆಡಿಕೊಳ್ಳುತ್ತಿದ್ದರು. ಈ ಎಲ್ಲಾ ಮಾತುಗಳೂ ಗೋಪಾಲನ ಕಿವಿಗೂ

ಬೀಳುತ್ತಿದ್ದವು. " ಹೆಂಡತಿಯ ಮಾತು ಕೇಳ್ತಾನೆ " ಎಂದರೆ ಯಾವ ಗಂಡನಿಗೂ ಸಿಟ್ಟು ಬರುವುದಿಲ್ಲ. ಯಾಕೆ ಅಂದರೆ ಹೆಂಡತಿಯ ಮಾತು ಕೇಳದ ಗಂಡ ಯಾರು ? ಆದರೆ ಅಂಥ ಗಂಡನಿಗೆ ಯಾವಾಗಲೂ ಒಂದು ನಂಬಿಕೆ ಇರುತ್ತೆ. ನಿಜವಾದ ಅಧಿಕಾರ ನನ್ನದು ಎಂಬುದೇ ಆ ನಂಬಿಕೆ. ಆ ನಂಬಿಕೆ ವಾಸ್ತವಾಂಶಕ್ಕೆ ವಿರೋಧವಾದುದು ಎಂಬುದು ಎಲ್ಲಾ ಗಂಡಂದಿರಿಗೂ ಗೊತ್ತು. ಆದರೆ ಅದನ್ನು ಒಪ್ಪಿಕೊಳ್ಳುವುದು ಆತ್ಮಗೌರವಕ್ಕೆ ಕುಂದು. ಇಂತಹ ಮಾತನ್ನು ಕೇಳಿದಾಗ ಸಿಟ್ಟು ಬರದೇ ಇರುವುದು ಗಂಡನಿಗೂ ಹೆಂಡತಿಗೂ ಇರುವ ಪೂರ್ಣ ಪ್ರೇಮದ ಮೇಲೆ ಅವಲಂಬಿಸಿರುತ್ತದೆ. ಗೋಪಾಲನಿಗೆ ಈಗ ತನ್ನ ವಿಷಯದ ಮಾತುಕೇಳಿ ಸಿಟ್ಟುಬಂತು. ಅವನು ನದಿಯಿಂದ ಮನೆಗೆ ಬರುವ ವೇಳೆಗೆ ಮನೆಯ ಬೀದಿಯ ಬಾಗಿಲು ಹಾಕಿತ್ತು. ವತ್ಸಲೆ ಇದ್ದ ಕೊಠಡಿ ನಡವೆಯಲ್ಲಿದ್ದು ಆದರ ಒಂದು ಭಾಗ ಬೀದಿ ಜಗಲಿ ವರೆಗೆ ಬಂದಿತ್ತು. ಗೋಪಾಲ ಬಂದು ಆ ಜಗಲಿಯ ಮೇಲೆ ಕುಳಿತ. ಒಳಗೆ ವತ್ಸಲೆಗೂ ಜಯಾವಿಗೂ ಮಾತು ನಡೆಯುತ್ತಿತ್ತು. ಹಳೆಯಕಾಲದ ದಪ್ಪ ಗೋಡೆಯಾದುದರಿಂದ ಧ್ವನಿ ಅಸ್ಪಷ್ಟವಾಗಿ ಕೇಳಿಸುತ್ತಿದ್ದರೂ ಮಾತು ಏನು ಎಂಬುದು ಗೋಪಾಲನಿಗೆ ತಿಳಿಯಲಿಲ್ಲ. ವತ್ಸಲೆಯ ಹೊರತು ಮತ್ತೊಂದು ಧ್ವನಿಯಾವದು ಎಂಬುದೂ ಅವನಿಗೆ ತಿಳಿಯಲಿಲ್ಲ. ಜಯಾ ಸ್ವಲ್ಪ ಗಟ್ಟಿಯಾಗಿ ನೀನೇನ್ಮಾಡ್ತೀಯ. ಅವ ನಿನ್ನ ಗಂಡನಾಗಿದ್ದರೆ ನಿನಗೆ ಸರಿಯಾಗಿ ಬುದ್ಧಿ ಕಲಿಸ್ತಿದ್ದ. ಅದಿಲ್ಲ. ನಿಮ್ಮಪ್ಪ, ಸಾಯುವವರೆಗೆ ನಿನ್ನ ಸೇವೆ ಮಾಡೋವಕ್ಕೆ ಕೊಂಡುಕೊಟ್ಟಿರುವ ಗುಲಾಮ ಇದು. ಬಲವಾದ ಮೂಗ್ದಾರ ಪೋಣಿಸಿ ಕುಣಿಸ್ತ ಇದೀಯ ನೀನು ಕೂತ್ಕೊ ಅಂದ್ರೆ ಕೂತ್ಕೊತಾನೆ. ನಿಂತ್ಕೊ ಅಂದ್ರೆ ನಿಂತ್ಕೊತ್ತಾನೆ. ಆದರೆ ಯಾವಾಗಲೂ ಹೀಗೆಯೆ ನಿನ್ನ ದೆಶೆ ನಡೆಯುತ್ತೆ ಅಂತ ತಿಳಿಕೋಬೇಡ. ತುಳಿದಷ್ಟು ತುಳಿಸಿಕೊಳ್ಳತಾನೆ ಎದೆಯ ಮೇಲೆ ನಡೆದಷ್ಟೂ ನಡೆಸ್ಕೊಳ್ತಾನೆ. ಗಂಡನ್ನ ಕುಣಿಸೋದ್ನ ಕಲಿತರೋಳು ನೀನೊಬ್ಬಳೇ ಅಂತ ತಿಳ್ಕೊಬೇಡ. ಇದು ಸ್ತ್ರೀಯರಾದ ನಮ್ಮ ಜಾತಿಯ ಹಕ್ಕು. ಇದರಲ್ಲಿ ಯಾರು ಹೆಚ್ಚು ಇಲ್ಲ. ಯಾರೂ ಕಡಿಮೆ ಇಲ್ಲ. ಭಗವಂತ ನಮ್ಮ ಕೈಗೆ ಈ ಬೊಂಬೆ ಕೊಟ್ಟಿದ್ದಾನೆ ಎಷ್ಟು ಬೇಕೋ ಅಷ್ಟು ಆಡಿಸೋಣ. ಆದರೆ ಹೇಗಾದರೂ ಗಂಡಸಲ್ಲವೆ ? ಒಂದು ಸಲ ಅಲ್ಲ ಒಂದು ಸಲ ತಿರುಗಿಬಿದ್ದರೆ

ನಿನ್ನಗತಿ ಏನು ?" ಎಂದಳು. ವತ್ಸಲೆ ಅಷ್ಟೇ ಕೋಪದಿಂದ " ಗತಿ ಏನು ಗತಿ. ನನಗೆ ನಾನೇ ಗತಿ. ಈ ಒಡವೆಗಳೇ ಗತಿ. ನಮ್ಮ ಅಪ್ಪ ಅಮ್ಮನೇ ಗತಿ. ನನಗೆ ಗತಿ ತೋರಿಸಿ ಅಂತ ನಿಮ್ಮ ಕಾಲು ಹಿಡ್ಕೊಳೋಕೆ ನಾನು ಬರೋದಿಲ್ಲ" ಎಂದಳು. ಜಯಾವು " ವತ್ಸಲೆ, ಈ ದೊಡ್ಡ ಕುದುರೆ ಚೇಷ್ಟೆ ನನ್ನ ಹತ್ತಿರ ತೋರಿಸಬೇಡ. ಇದೆಲ್ಲಾ ಗಂಡಸು ಜಾತಿಗೆ ಮಾತ್ರ. ಇರಲಿ. ನಿನಗೆ ಅಷ್ಟು ದಿವಸದಿಂದ ಹೇಳಬೇಕು ಅಂತ ಮಾಡಿದ್ದೆ. ಗಂಡನ ಎದುರಿಗೆ ಅಪ್ಪ ಅಮ್ಮನ ದೊಡ್ಡಸ್ತಿಕೆ ನಡೆಸಬೇಡ. ನಿನ್ನ ತಲೆ ತಿರುಗಿಸಿ ರೋದು ನಿಮ್ಮಪ್ಪ ಕೊಟ್ಟಿರುವ ಈ ೩-೪ ಸಾವಿರ ರೂಪಾಯಿನ ಚಿನ್ನ. ಮೊದಲು ಇದನ್ನು ಪುಟ್ಟಿಕಲ್ಲು—ಮಡುವಿಗೆ ಹಾಕು. ಇಲ್ಲದಿದ್ದರೆ ಇದರ ಜತೆಯಲ್ಲಿ ನಿನ್ನ ಪುರುಷನನ್ನೂ ಕಳೆದುಕೊಳ್ಳುವೆ" ಎಂದಳು. ವತ್ಸಲೆಯು ಕೋಪದಿಂದ " ನೀನು ಎಷ್ಟು ಓದಿದ್ದೀಯೆ, ನನಗೆ ಇಷ್ಟು ದೊಡ್ಡಗಂಟಲಿನಲ್ಲಿ ಬುದ್ಧಿ ಹೇಳೋಕೆ" ಎಂದಳು. ಜಯಾವು " ನಿನ್ನ ಓದಿಗೆ ಬೆಂಕಿಹಾಕಿತು. ಆ ಜಂಬನೆಲ್ಲ ಬಿಟ್ಟು ಬಿಡು. ಗಂಡಸರ ಓದಿಗೇ ಬೆಲೆ ಇಲ್ಲ. ನಿನ್ನ ಗಂಡ ಬಿ. ಎ. ಫಸ್ಟ್‌ಕ್ಲಾಸ್ ; ಏನು ಪ್ರಯೋಜನ? ಮಾಡ್ತಾ ಇರೋ ಕೆಲಸ ನಿನ್ನ ಶಿಶ್ರೂಷೆ. ಇಷ್ಟು ವಿದ್ಯೆ ಇದ್ದರು ನಿನ್ನನ್ನೂ ಹೇಗೆ ಆಳ ಬೇಕು ಎನ್ನೋದು ಅವನಿಗೆ ತಿಳಿದಿಲ್ಲ"..........ಸ್ವಲ್ಪ ಮೃದುವಾದ ಧ್ವನಿಯಿಂದ " ಇನ್ನು ಸಾಕು. ನಿನಗೆ ಕೈ ಮುಗೀತೇನೆ. ಅವನ ಮುಖ ನೋಡಿದರೆ ನಿನಗೆ ದಯ ಬರೋಲ್ಲವೆ? ಯಾವ ಗಂಡಸು ತಾನೆ ಮಾನ ಇರೋನು, ಮಾವನ ಮನೆಯಲ್ಲಿ ಇರೋಕೆ ಒಪ್ಪತಾನೆ? ನಿನಗೂ ಮಾನ ಬೇಡವೇ. ನಿಮ್ಮ ತಂದೆ ಮನೆಬಿಟ್ಟು ಬೇರೆ ಇದ್ದುಬಿಡಿ ; ಎಲ್ಲಾ ಸರಿ ಹೋಗುತ್ತೆ. ನನ್ನ ಮಾತಿನ ಫಲ ನಿನಗೆ ಮುಂದೆ ಗೊತ್ತಾಗುತ್ತೆ" ಎಂದಳು. ವತ್ಸಲೆ ಕೋಪದಿಂದ " ಇನ್ನು ನಿನ್ನ ಬುದ್ಧಿವಂತಿಕೆ ಸಾಕು. ನನ್ನ ಹೆಣೆ ಪಾಡು ; ನನ್ನ ಗಂಡ ನನ್ನ ವಸ್ತು ; ನನಗೆ ಶಕ್ತಿ ಇರುವವರೆಗೆ ನನ್ನಮಾತು ನಡೆಯುವವರೆಗೆ ನನ್ನ ಇಷ್ಟ ಬಂದಂತೆ ಆಡಿಸುತ್ತೇನೆ. ಇದು ನಿನ್ನ 'ಟ್ರೇನಿಂಗ್' ಅದು ನನ್ನ " ಟ್ರೇನಿಂಗ್ " ನಮ್ಮ ತಂದೆ ತಾಯಿ ಬದುಕಿರುವ ವರೆಗೆ ನಾನು, ಬೇರೆ ಮನೆಗೆ ಹೋಗುವುದಿಲ್ಲ. ಆ ಮೇಲೆ ಇದ್ದೇ ಇದೆ." ಎಂದಳು. ಜಯಾವು " ಆದರೆ ಅದರಿಂದ ನಿನ್ನ ಗಂಡನ ಮಾನ ಹೋಗುವು

ದಲ್ಲ" ಎಂದಳು. ವತ್ಸಲೆಯು "ಮಾನ ಹೋದರೂ ನನಗಾಗಿ ಸಹಿಸಿಕೊಳ್ಳ ಬೇಕು. ಅವರ ಮಾನ ಹೋದರೂ ಅವರಿಗಾಗಿ ನಾವು ಸಹಿಸುವುದಿಲ್ಲವೇ" ಎಂದಳು. ಜಯಾವು "ಅವನಿಗಾಗಿ ನೀನು ಸಹಿಸಿರುವ ಅವಮಾನ ಯಾವುದು ?" ಎಂದಳು. ವತ್ಸಲೆಯು "ಈಗ ಇಲ್ಲ, ಯಾವಾಗ ಬಂದರೂ ಸಹಿಸುತ್ತೇನೆ" ಎಂದಳು. ಜಯಾವು "ನಿನ್ನ ಇಷ್ಟ, ಆದರೆ ಪರೀಕ್ಷೆಯಕಾಲ ಬೇಗನೆ ಬರಬಹುದು ದೇವರು ನಿನಗೆ ಒಳ್ಳೆಯ ಬುದ್ಧಿಕೊಡಲಿ" ಎಂದುಹೇಳಿ ಮನೆಗೆ ಹೊರಟಳು.

ಜಯಾ ಅಡಿಗೆ ಮನೆಗೆ ಹೋಗಿ ಮಣಿಯೊಡನೆ ಮಾತನಾಡುತ್ತಾ ಕುಳಿತಳು. ಗೋಪಾಲನ ತಮ್ಮಂದಿರು ಆಟಕ್ಕೆ ಹೋಗಿದ್ದವರು ಹೋ ಎಂದು ಕೂಗುತ್ತಾ ಬಂದು ಒಂದೇ ಸಮನೆ ಧಡಧಡನೆ ಬಾಗಿಲು ಬಡಿದರು. ಜಯಾ ಬಂದೆ ಎಂದು ಒಳಗಿನಿಂದ ಬಂದು ಬಾಗಿಲು ತೆರೆದಳು. ಗೋಪಾ ಲನು ತಮ್ಮಂದಿರ ಜತೆಯಲ್ಲಿ ಒಳಕ್ಕೆ ಹೋದನು.

ಗೋಪಾಲನಿಗೆ ಜಯುವನ್ನು ನೋಡಿ ಕಣ್ಣಿಗೆ ಡಂಗು ಬಡಿಯಿತು. ಮೈಸೂರಿನಲ್ಲಿ ತನ್ನ ಕೊಠಡಿಗೆ ಅವಳು ತನ್ನನ್ನು ಮದುವೆಯಾಗ ಬೇಕೆಂದು ಬಂದನಂತರ ಅವನು ಅವಳನ್ನು ನೋಡಿರಲಿಲ್ಲ. ಅನಂತರ ಅವ ಳನ್ನು ಸಾಹುಕಾರ್ ಕಸ್ತೂರಿಯ ಮಗ ರಘುರಾಮನಿಗೆ ಕೊಟ್ಟು ಮದುವೆ ಯಾದುದೂ, ರಘುರಾಮ ಅವಳನ್ನು ತಲೆಯಮೇಲೆ ಕೂರಿಸಿಕೊಂಡು ಮೆರವ ಣಿಗೆ ಮಾಡುತ್ತಿದ್ದುದೂ ಗೊತ್ತಾಗಿದ್ದಿತು. ಆದರೆ ಮೊದಲೇ ಸುಂದರಿಯಾ ಗಿದ್ದ ಅವಳು ಮದುವೆಯಾದ ಈ ಒಂದುವರುಷ ಕಾಲದಲ್ಲಿ ಹೀಗೆ ಪೂರ್ಣ ಚಂದ್ರನಂತೆ ಬೆಳೆದು ಮಿಂಚಿನ ಬಳ್ಳಿಯಾಗಿ ಸುವರ್ಣ ಲತೆಯಾಗಿ ಹೊಳೆಯು ತ್ತಿದ್ದುದು ಅವನ ಕಣ್ಣಿಗೆ ಬಿದ್ದಿರಲಿಲ್ಲ. ಮದುವೆಯ ಮಾತು ಬಂದಾಗ ತಿರಸ್ಕರಿಸಿದ ನಂತರ ಊರಿಗೆ ಬಂದ ಮೇಲೂ ಜಯುವನ್ನು ನೋಡುವ ಧೈರ್ಯವೂ ಇಚ್ಛೆಯೂ ಗೋಪಾಲನಿಗೆ ಉಂಟಾಗಲಿಲ್ಲ. ಅವಳ ಗಂಡ ಲಕ್ಷಾಧಿ ಪತಿಯಾದುದರಿಂದಲೂ, ಸ್ವಾಭಾವಿಕವಾಗಿ ಧನಿಕರನ್ನು ಕಂಡರೆ ಗೋಪಾಲ ನಿಗೆ ತಿರಸ್ಕಾರವಿದ್ದುದರಿಂದಲೂ ಅವನು ರಘುರಾಮನ ಮನೆಗೆ, ಮಲ್ಲಿಗೆ ಹಳ್ಳಿಗೆ ಬಂದಮೇಲೆ ಹೋಗಿರಲಿಲ್ಲ. ಆದರೆ ಜಯಾ ನಿತ್ಯ ಒಂದು ಸಲವಾ ದರೂ ರಂಗಪ್ಪನವರ ಮನೆಗೆ ಬರುತ್ತಿದ್ದಳು. ಗೋಪಾಲ ಬರುವುದಕ್ಕೆ

ಮುಂಚೆಯೂ ಬರುತ್ತಿದ್ದಳು. ಗೋಪಾಲ ಬಂದ ಮೇಲೆಯೂ ಬರುತ್ತಿದ್ದಳು. ಅವಳಿಗೆ ಗೋಪಾಲನಿಗಿದ್ದಂತೆ ಸಂಕೋಚವಿರಲಿಲ್ಲ. ಆದರೆ ಅವಳು ಸಾಧಾರಣವಾಗಿ ಗೋಪಾಲನು ಮನೆಯಲ್ಲಿ ಇಲ್ಲದ ವೇಳೆಯಲ್ಲಿಯೇ ಬರುತ್ತಿದ್ದಳು. ಜಯಾವನ್ನು ನೋಡಿದ ಕೂಡಲೆ ಮಿಂಚನ್ನು ನೋಡಿದ ಕ್ಷಣ ಅದರ ಪ್ರಕಾಶಕ್ಕೆ ಒಂದುಗಳಿಗೆ ಕಣ್ಣುಮುಚ್ಚಿಕೊಳ್ಳುವಂತೆ ಗೋಪಾಲ ಒಂದುಗಳಿಗೆ ಆಶ್ಚರ್ಯಚಕಿತನಾಗಿದ್ದು "ಜಯಮ್ಮನೇ ? ಇದೇನು ಬಹಳ ಅಪರೂಪ. ಚೆನ್ನಾಗಿದ್ದೀರಾ" ಎಂದನು. ಸ್ತ್ರೀ ಎಷ್ಟೇ ಚಿಕ್ಕವಳಾದರೂ ಅವಳನ್ನು ಬಹುವಚನದಲ್ಲಿ ಮಾನಾಡಿಸುವುದು ಗೋಪಾಲನ ಪದ್ಧತಿಯಾಗಿತ್ತು. ಜಯಾ "ಅಪರೂಪವೇನು. ನಿತ್ಯಾ ಬರುತ್ತಿದೇನೆ. ಬರದೆ ಬೇರೆಯವರ ಮನೆಯೇ. ನನ್ನನ್ನು ಇದ್ದೀರಾ ಪದ್ದೀರಾ ಎಂದು ಕರೆಯಬೇಡಿ. ನಾನೇನು ದೊಡ್ಡವಳಾಗಿಬಿಟ್ಟೆನೆ? ಹಿಂದಲಂತೆ ಜಯ ಎಂದೇ ಕರೆಯಿರಿ" ಎಂದಳು. ಗೋಪಾಲ ಸ್ವಲ್ಪ ಮುಗುಳುನಗೆ ನಗುತ್ತಾ "ನನಗೆ ಹೆಂಗಸರು ಅಂದರೆ ಭಯ. ಇಷ್ಟರ ಮೇಲೆ ನೀನು ಈಗ ಗುರುತೇ ಸಿಕ್ಕದಂತೆ ಬೆಳೆದುಬಿಟ್ಟೆ. ಮೇಲಾಗಿ ಸಾಹುಕಾರನ ಹೆಂಡತಿ........ನಿಮ್ಮ ಯಜಮಾನರು ಚೆನ್ನಾಗಿದ್ದಾರೆಯೆ ? ಎಂದ. ಜಯಾ ಹೂ ಎಂದು ಹೇಳಿ ಒಳಗೆ ಹೋದಳು. ಮಣಿ ಒಂದು ಮಣೆಯ ಮೇಲೆ ತೊಗರಿ ಬೇಳೆ ಆರಿಸುತ್ತಿದ್ದಳು. ಜಯಾವು ಅವಳ ಸಹಾಯಕ್ಕೆ ಕುಳಿತಳು; ಸ್ವಲ್ಪ ಹೊತ್ತು ಮಾತನಾಡುತ್ತಿದ್ದು ಮನೆಗೆ ಹೋದಳು. ಅವಳನ್ನು ನೋಡುತ್ತಾ ಗೋಪಾಲನು ಒಂದು ಸಲ ನಿಟ್ಟುಸಿರು ಬಿಟ್ಟ.

ಮರುದಿನ ಬೆಳಿಗ್ಗೆ ರಘುರಾಮನೂ ಜಯವೂ ಬಂದು ರಂಗಪ್ಪನವರ ಮನೆಯವರನೆಲ್ಲಾ ತಮ್ಮ ಮನೆಗೆ ಊಟಕ್ಕೆ ಕರೆದರು. ಇದು ಹಳ್ಳಿಯ ಪದ್ಧತಿ. ಊರಿಗೆ ಹೊಸದಾಗಿ ಬಂದವರನ್ನು ಊಟಕ್ಕೆ ಕರೆಯುವುದು. ರಘುರಾಮ ಹಿಂದಿನಿಂದಲೂ ಗೋಪಾಲನಿಗೆ ಗೊತ್ತು. ಅವನು ಸಾಹುಕಾರ ಎಂಬುದರ ಹೊರತು ಅವನ ಮೇಲೆ ಗೋಪಾಲನಿಗೆ ಇನ್ನಾವ ಆಕ್ಷೇಪಣೆಯೂ ಇರಲಿಲ್ಲ. ಅವತ್ತು ರಘುರಾಮ ಊಟಕ್ಕೆ ಕರೆಯುವುದಕ್ಕೆ ಬಂದಾಗ ಒಂದು ಹತ್ತು ನಿಮಿಷ ಗೋಪಾಲನೊಂದಿಗೆ ಮಾತನಾಡುತ್ತಿದ್ದ. ಅವನ ಸೌಜನ್ಯ ಲೋಕಾನುಭವಪೂರ್ಣವಾದ ಮಾತುಗಳು; ಉತ್ಸಾಹ ಪೂರಿತವಾದ ಮುಖ ಇವುಗಳನ್ನು ಕಂಡು ಗೋಪಾಲನ ಮನಸ್ಸು ಅವನ ಕಡೆಗೆ ತೆರೆಯಿತು.

ಯಾವಾಗಲೂ ಉತ್ಸಾಹದಿಂದಿರುವುದು ದೇವದತ್ತವಾದ ಗುಣ. ಅದು ಜನರನ್ನು ತನ್ನಲ್ಲಿಗೆ ಆಕರ್ಷಿಸುತ್ತದೆ. ಗೋಪಾಲನಿಗೆ ರಘುರಾಮುನನ್ನು ನೋಡಿ ಸ್ವಲ್ಪ ಹೊಟ್ಟೆಕಿಚ್ಚು ಉಂಟಾಯಿತು. ಆದರೆ ಅದು ಒಂದೇ ಕ್ಷಣಮಾತ್ರ. "ನಾನು ಸುಖವಾಗಿರುವುದು ನನ್ನ ಕೈಯಲ್ಲಿಯೇ ಇದೆ. ಪಾಪ ಇವನನ್ನು ನೋಡಿ ನಾನು ಯಾಕೆ ಹೊಟ್ಟೆಕಿಚ್ಚು ಪಡಲಿ" ಎಂದುಕೊಂಡ ಗೋಪಾಲ.

ಮದುವೆಯಾದಮೇಲೆ ಗೋಪಾಲ ಹೆಂಡತಿಯೊಂದಿಗೆ ಅದೇ ಮೊದಲನೆಯ ಸಲವಾಗಿ ಮಲ್ಲಿಗೆಹಳ್ಳಿಗೆ ಬಂದಿದ್ದುದರಿಂದಲೂ, ಜಯಮ್ಮ ಗೋಪಾಲನಿಗೆ ಹತ್ತಿರದ ಸಂಬಂಧಿಯಾದುದರಿಂದಲೂ, ಔತಣದ ಏರ್ಪಾಡು ಬಹಳ ಜರ್ಬಾಗಿ ನಡೆಯುತ್ತಿದ್ದಿತು. ರಘುರಾಮು ಸ್ವಲ್ಪ ಹೆಚ್ಚು ಕಡಿಮೆ ಊರಿನಲ್ಲಿ ಎಲ್ಲರಿಗೂ ಊಟಕ್ಕೆ ಹೇಳಿದ್ದ. ಮಣಿಯೂ ಸಹಾಯಕ್ಕೆ ಹೋಗಿದ್ದಳು. ಗೋಪಾಲ ಕಾಫಿ ಕುಡಿದು ಹೊಳೆಗೆ ಹಳ್ಳಿಯ ಸ್ನೇಹಿತರೊಂದಿಗೆ ಈಜುವುದಕ್ಕೆ ಹೋಗಿದ್ದ. ಬೆಳಿಗ್ಗೆ ಸುಮಾರು ಹತ್ತು ಗಂಟೆ ಆಗಿತ್ತು. ಇದ್ದಕ್ಕಿದಂತೆ ಒಂದು ಕಾರು ಬಂದು ರಂಗಪ್ಪನವರ ಮನೆಯ ಬಾಗಿಲಿನಲ್ಲಿ ನಿಂತಿತು. ಅದು ಹಿಂದೆ ಬಂದಿದ್ದ ಸುಂದರರಾಜನ್‌ರವರ ಕಾರೇ. ಡ್ರೈವರು, ರಮಾ ಅವಳ ತಮ್ಮ ಸುಮಾರು ಒಂಭತ್ತು ವರುಷದ ಒಬ್ಬ ಹುಡುಗ ಬಂದಿದ್ದರು. ಕಾರು ಬಾಗಿಲಿಗೆ ಬಂದಕೂಡಲೆ ವತ್ಸಲೆ ಗಾಬರಿಯಿಂದ ಬಂದು ರಮಾವನ್ನು ನೋಡಿ "ಏನು ಸಮಾಚಾರ. ಕಾರು ಯಾಕೆಬಂತು" ಎಂದಳು. ಡ್ರೈವರನು "ನಿಮ್ಮನ್ನೂ ಗೋಪಾಲ ಅವರನ್ನೂ ಕರೆದುಕೊಂಡು ಬರುವಂತೆ ಅಮ್ಮಾವರು ಹೇಳಿದರು. ನಿಲ್ಲುವುದಕ್ಕೆ ಹೊತ್ತಿಲ್ಲ. ಎಲ್ಲಿ ಬೇಗ ಹೊರಡಿ" ಎಂದನು. ರಮಾವು "ಶಾರದೇನ ನೋಡೋಕೆ ಇವತ್ತು ಯಾರೋ ಹನ್ನೆರಡು ಗಂಟೆಗೆ ಬರ್ತಾರಂತೆ. ಅವರಿಗೆ ನಮ್ಮ ಮನೇಲೆ ಊಟ. ಬಹಳ ದೊಡ್ಡ ಮನುಷ್ಯರಂತೆ. ವರನ ತಂಗಿ ನಿನ್ನ ಕ್ಲಾಸ್‌ನಲ್ಲಿ ಓದಿದ ನಿನ್ನ ಗೆಳತಿಯಂತೆ. ಅವಳ ಎದುರಿಗೆ ಶಾರದೆ ಹಾಡಬೇಕಂತೆ. ನಿನ್ನ ಸಹಾಯವಿಲ್ಲದೆ ಶಾರದೆ ಹಾಡೋದು ನಿನಗೇ ಗೊತ್ತಿದೆ. ಒಂದುಗಳಿಗೆಯೂ ನಿಲ್ಲಬೇಡಿ. ಹೋದ ಕ್ಷಣ ವತ್ಸಲೆಯೊಂದಿಗೆ ಬಂದು ಬಿಡು ಅಂತ ಅಮ್ಮಾ ಹೇಳಿದಳು. ಎಲ್ಲಿ ಹೊರಡು. ಭಾವನ್ನೂ ಕರೆಕೊ" ಎಂದಳು. ವತ್ಸಲೆಗೆ ಒಳ್ಳೆಯ ಪೇಚಾಟಕ್ಕೆ ಬಂತು. ಅವಳು "ಜಯಮ್ಮನ ಮನೆಯಲ್ಲಿ ಊಟಕ್ಕೆ ಹೇಳಿದಾರೆ.

ಹೋಗದೆ ಹೋದರೆ, ಇವಳಿಗೆ ಅಪ್ಪನ ಜಂಭ ಎನ್ನುತ್ತಾಳೆ. ಅವರಂತೂ ಊಟ ಮಾಡದೆ ಹೊರಡುವುದೇ ಇಲ್ಲ. ನಮಗಾಗಿಯೇ ಈವತ್ತು ಔತಣ ; ಊರವರೆಲ್ಲಾ ಊಟಕ್ಕೆ ಬರುತ್ತಾರೆ" ಎಂದಳು. ರಮಾವು "ವತ್ಸಲೆ, ಅಮ್ಮಾ ಹೇಳಿದಳು. ಭಾವ ಬಂದರೆ ಬರಲಿ. ಇಲ್ಲದಿದ್ದರೆ ನಿಧಾನವಾಗಿ ರೈಲಿನಲ್ಲಿ ಬರಲಿ. ನಿನೊಬ್ಬಳು ಬರಲೇಬೇಕು. ಇಲ್ಲದಿದ್ದರೆ ಶಾರದೆಗೆ ಬಂದಿರುವ ವರ ಕೈ ಬಿಟ್ಟು ಹೋಗುತ್ತೆ. ಈಗಲೇ ಅವಳಿಗೆ ವಯಸ್ಸು ಹದಿನೈದು ಆಯಿತು" ಎಂದು, ಬೇಗ ಹೊರಡು ಎಂದಳು. ವತ್ಸಲೆ "ಊಟ ಮಾಡಿಕೊಂಡು ಮೂರು ಗಂಟೆಗೆ ಹೊರಡೋಣ" ಎಂದಳು. ಡ್ರೈವರನು "ಶಾರದಮ್ಮನೋರ್ನ ನೋಡೋಕೆ ಬರೋರ್ಗೆ ಊಟಕ್ಕೆ ಹೇಳಿದಾರೆ. ಮೋಟಾರಿನಲ್ಲಿ ಹೋಗಿ ಅವರನ್ನ ಕರಕೊಂಡು ಬರಬೇಕು. ಒಬ್ಬೊಬ್ಬರು ಒಂದೊಂದು ಕಡೆ ಇದಾರೆ. ಆ ಮೇಲೆ ಆಫೀಸಿಗೆ ಹೋಗಿ ಸಾಹೇಬರ್ನ ಕರ್ಕೊಂಡು ಬರಬೇಕು. ದಾರೀಲಿ ಮಾರ್ಕೆಟ್ಟಿಗೆ ಹೋಗಿ ವಿಳ್ಳೆದೆಲೆ ಹಣ್ಣು ಹೂವು ಎಲ್ಲಾ ತೆಗೆದುಕೊಂಡು ಹೋಗಬೇಕು. ಶಾರದಮ್ಮನವರ ಜಾಕೆಟ್ ಬೇರೆ ದರ್ಜಿಯಿಂದ ತೆಗೆದುಕೊಂಡು ಹೋಗಬೇಕು. ಈಗಲೇ ಹೊತ್ತಾಯಿತು. ಹೊರಟು ಬಿಡಮ್ಮಾ" ಎಂದ. ವತ್ಸಲೆ ಡ್ರೈವರನಿಗೆ "ಹೊಳೆಗೆ ಸ್ನಾನಕ್ಕೆ ಹೋಗಿದ್ದಾರೆ. ಕರೆದುಕೊಂಡು ಬಾ" ಎಂದಳು. ಡ್ರೈವರನು ಮೋಟಾರು ಬಿಟ್ಟುಕೊಂಡೇ ನದಿಯ ತೀರಕ್ಕೆ ಹೋಗಿ ನದಿಯ ಮಧ್ಯದಲ್ಲಿ ಸ್ನೇಹಿತರೊಂದಿಗೆ ಈಜಾಡುತ್ತಿದ್ದ ಗೋಪಾಲನನ್ನು ಕರೆದು ಅವನು ಕೇಳಿದ ಯೋಗಕ್ಷೇಮ ತಿಳಿಸಿ, ಅಮ್ಮಾವರು ಮನೆಗೆ ಬರಹೇಳಿದರು ಎಂದ ಗೋಪಾಲನು ಸರಿ ಇದೇನೋ ಬಂತು ಎಂದುಕೊಂಡು ಮೈ ಒರಸಿಕೊಂಡು ಅದೇ ಮೋಟಾರಿನಲ್ಲಿಯೇ ಕುಳಿತು ಮನೆಗೆ ಬಂದ.

ವತ್ಸಲೆ ವಿಷಯಗಳನ್ನೆಲ್ಲಾ ಹೇಳಿ, ಹೊರಡಿ ಎಂದಳು. ಗೋಪಾಲನು "ನಿನಗೆ ಬುದ್ಧಿ ನೆಟ್ಟಗಿಲ್ಲ. ಪಾಪ ನಮಗೆ ಔತಣಕ್ಕಾಗಿ ಊರೋರ್ನೆಲ್ಲ ಕರೆದಿದ್ದಾರೆ" ಎಂದ. ವತ್ಸಲೆ ಸ್ವಲ್ಪ ನಮ್ರಳಾಗಿಯೇ "ಶಾರದೆ ನೋಡೋಕೆ ಬರ್ತಾರಂತೆ, ಬರೋ ವರನ ತಂಗಿ ನನಗೆ ಗೊತ್ತು. ಹೋಗಿ ಹಿಂದಲ ಸ್ನೇಹ ಬೆಳಸಿಕೊಂಡರೆ ಪ್ರಯೋಜನವಾಗುತ್ತೆ. ಅಣ್ಣನು ತಂಗಿಯ ಮಾತು ಮೀರೋದಿಲ್ಲವಂತೆ" ಎಂದಳು. ಗೋಪಾಲನಿಗೆ ಕೋಪ ಬಂತು. ಅವನು "ಅವರ ಪಾಡು ಅವರಿಗೆ. ಶಾರದೆಗೆ ನೀನೇನೂ ಜವಾಬ್ದಾರಳಲ್ಲ. ಗಂಡು

ಗಳನ್ನು ಹಿಡಿದು ಮೂಗುದಾರ ಪೋಣಿಸುವ ವಿದ್ಯೆ ನಿಮ್ಮ ಮನೆಯ ಹುಡುಗೀರಿಗೂ ನಿಮ್ಮ ತಂದೆತಾಯಿಯರಿಗೂ ಯಾರೂ ಹೇಳಿಕೊಡಬೇಕಾ ಗಿಲ್ಲ. ಅವರ ಇಷ್ಟಬಂದಂತೆ ಮಾಡಿಕೊಳ್ಳಲಿ; ಇದನ್ನ ಕಟ್ಟಿಕೊಂಡು ನಿನ ಗೇನು" ಎಂದ. ವತ್ಸಲೆ "ನೀವು ಹೇಳುವುದು ಬಹಳ ಚೆನ್ನಾಗಿದೆ. ಶಾರದಗೆ ಒಳ್ಳೆ ವರ ಸಿಕ್ಕೊ ಸಮಯದಲ್ಲಿ ನನ್ನ ಕೈಲಾಗೋದನ್ನ ಮಾಡ ಬೇಡವೆ? ಈಗ ಇಲ್ಲಿ ನಮಗೆ ಇರುವ ಕೆಲಸವೇನು? ಮನೆ ಬಾಗಿಲಿಗೆ ಮೋಟಾರು ಬಂದು ನಿಂತಿದೆ. ಅದರಲ್ಲಿ ಕೂತರೆ ಕಣ್ಣು ಮುಚ್ಚಿ ತೆರೆಯುವದ ರೊಳಗೆ ಮೈಸೂರು. ನನಗೂ ಈ ಊರು ಬೇಜಾರಾಯಿತು" ಎಂದಳು. ಗೋಪಾಲನಿಗೆ ಮಾವನ ಮೋಟಾರು ಎಂದರೆ ಮೈ ಉರಿಯುತ್ತಿತ್ತು. ಮಾವನ ಮನೆಯಲ್ಲಿ ಆ ಕಾರಿನ ಜಂಬ ಕೇಳಿ ಕೇಳಿ ಅವನಿಗೆ ಸುಸ್ತು ಆಗಿತ್ತು. ಅವನು "ಒಳ್ಳೆ ಕೆಲಸ. ಮಧ್ಯಾಹ್ನದ ಮೇಲೆ ಹೊರಡೋಣ. ಯಾವುದೂ ಮೀರಿ ಹೋಗಲ್ಲ. ನಿನ್ನನ್ನ ಯಾರೂ ಅಲ್ಲಿ ಕರಿಯೊಲ್ಲ" ಎಂದ. ವತ್ಸಲೆ "ಕಾರು ಅಲ್ಲಿ ಬೇಕಂತೆ. ಈಗಲೇ ವಾಪಸು ಹೋಗ ಬೇಕು" ಎಂದಳು. ಗೋಪಾಲನಿಗೆ ಕಾಲಿನಿಂದ ಉರಿ ಪ್ರಾರಂಭವಾಯಿತು. "ನಿಮ್ಮ ಕಾರಿಗೆ ಬೆಂಕಿಬಿತ್ತು. ಕಾರಿನಲ್ಲಿ ಹೋಗಬೇಕು ಅಂತ ನಾನು ಹೇಳಿದೆನೆ? ರೈಲುಮಾರ್ಗ ಸತ್ತಿದೆಯೆ? ಕಾರು ಇಲ್ಲದವರು ಲೋಕದಲ್ಲಿ ಪ್ರಯಾಣಾನೆ ಮಾಡೋದಿಲ್ಲ ಅಂತ ನೀನು ತಿಳಿದಂತೆ ಕಾಣುತ್ತೆ" ಎಂದ. ವತ್ಸಲೆಗೆ ಬೇಜಾರಾಯಿತು "ಅವಳು ಹಾಗಲ್ಲ ಅಂದರೆ ಶಾರದೆ ನೋಡೋರ್ನ ಕರಕೊಂಡು ಬರೋಕೆ ಕಾರು ಈಗ ಹೋಗಬೇಕಂತೆ" ಎಂದಳು. ಗೋಪಾಲನು "ಹೋಗಲಿ ನಮ್ಮ ಪಾಡಿಗೆ ನಾವು ರೈಲಿನಲ್ಲಿ ಹೋಗೋಣ" ಎಂದ. ವತ್ಸಲೆ ಯಾವುದನ್ನೂ ತೀರ್ಮಾನಿಸುವುದಕ್ಕೆ ಮುಂಚೆ ಗೋಪಾಲ ಮೃದುವಾದ ಬೇಡಿಕೆಯ ಧ್ವನಿಯಲ್ಲಿ "ವತ್ಸಲೆ ಇನ್ನು ನಮಗೆ ಈ ಕಾರು ಈ ಚಪಲಗಳೆಲ್ಲಾ ಯಾಕೆ. ಯಾವತ್ತೂ ನಾವು ಬಡವರೆ. ನೀನೆ ನನ್ನ ಐಶ್ವರ್ಯ. ನಾನೇ ನಿನ್ನ ಆಸ್ತಿ. ನಮ್ಮ ಪಾಡಿಗೆ ನಾವು ಇಬ್ಬರೇ ರೈಲಿನಲ್ಲಿ ನಿಧಾನವಾಗಿ ಹೋಗೋಣ. ಮದುವೆಯಾದ ಇಷ್ಟು ದಿನಕ್ಕೆ ನಿನ್ನನ್ನ ನಾನೇ ನಾದರೂ ಕೇಳಿಕೊಂಡನೆ? ಇದೊಂದು ಮಾತು ನಡೆಸಿಕೊಡು. ಈವತ್ತು ಅವರು ಊಟಕ್ಕೆ ಕರೆದಿರುವಾಗ ಸರಿಯಾದ ಕಾರಣವಿಲ್ಲದೆ ನಾವಿಬ್ಬರೂ

ಒಂದು ಕಾರು ಬಂತಲ್ಲ ಅಂತ ಓಡಿಬಿಟ್ಟರೆ ಅವರು ನಗೋಲ್ಲವೆ ? ಇದೊಂದು ಸಲ ನನ್ನ ಮಾತು ನಡೆಸಿಕೊಡೋ ಮನಸ್ಸುಮಾಡು" ಎಂದ. ಗೋಪಾಲನ ಧ್ವನಿಯು ಪೂರ್ಣವಾಗಿ ದೇವತೆಯ ಎದುರಿಗೆ ವರವನ್ನು ಬೇಡುವ ಭಕ್ತನ ಧೀನ ಧ್ವನಿಯಾಗಿತ್ತು. ಮಣಿ ಏನಾದರೂ ಗೋಪಾಲನನ್ನು ಆಗ ನೋಡಿದ್ದರೆ "ಸರಿ ಅವಳ ಕಾಲಿನಲ್ಲಿ ಬಿದ್ದು ನಾಯಿಯ ಮರಿಯಂತೆ ಬಾಲ ಬಡಿಯುತ್ತಿದ್ದಾನೆ. ಇನ್ನೇನು ಒದ್ದು ತಳ್ಳುತ್ತಾಳೆ. ಸ್ವಲ್ಪ ಗಂಡಸಾಗೊ" ಎನ್ನುತ್ತಿದ್ದಳು. ಗೋಪಾಲನ ದೈನ್ಯ ವತ್ಸಲೆಯನ್ನು ಕರಗಿಸಲಿಲ್ಲ. ಅವಳು "ನಿಮ್ಮ ಪುರಾಣ ಇದ್ದೇ ಇದೆ. ಈವತ್ತು ಹೋಗದಿದ್ದರೆ ಆಗುವುದಿಲ್ಲ. ಏಳಿ. ಜಯಾವಿಗೆ ಹೇಳಿ ಹೊರಡೋಣ" ಎಂದಳು. ಗೋಪಾಲನ ಸಹನೆ ಪೂರ್ಣವಾಗಿ ನಾಶವಾಯಿತು. ಅವನು ಹುಚ್ಚನಂತೆ "ನಿಮ್ಮಪ್ಪನ ಮನೇಲಿ ನಿನ್ನ ಅವಶ್ಯಕತೆಯಿಲ್ಲ. ನೀನು ಇರಬೇಕಾದದ್ದು ನಿನ್ನ ಗಂಡನ ಹತ್ತಿರ. ಹೋಗಬೇಡ ; ಆಮೇಲೆ ಪರಿಣಾಮ........"

ಮುಂದಲ ಗಳಿಗೆಯಲ್ಲಿ ಗೋಪಾಲನಿಗೆ ಆ ಮಾತನ್ನು ತಾನು ಆಡದಿದ್ದರೆ ಚೆನ್ನಾಗಿತ್ತು ಎನ್ನಿಸಿತು. ವತ್ಸಲೆ ಹಠಮಾರಿ. ಒಲಿದರೆ ನಾರಿ. ಮುನಿದರೆ ಮಾರಿ ಎಂಬುದು ಅವಳಿಗೆ ಚೆನ್ನಾಗಿ ಅನ್ವಯಿಸುತ್ತಿತ್ತು. ಅವಳು ಕೋಪಿಸಿಕೊಂಡರೆ ಸುಂದರರಾಜ ಸಹ ಹೆದರಿ ಸುಮ್ಮನಾಗುತ್ತಿದ್ದರು. ಅವಳು ಗಾಯಗೊಂಡ ಸರ್ಪದಂತೆ "ಏನು ಹೆದರಿಸುತ್ತೀರಿ. ಪರಿಣಾಮ ಗಿರಿಣಾಮ ಅಂತ. ಹೀಗೆ ಹೆದರಿಸಿದ್ದು ಇದೂ ಸೇರಿ ಎಷ್ಟು ಸಲ ಅಂತ ಜ್ಞಾಪಿಸಿಕೊಳ್ಳಿ. ಆಮೇಲೆ ಹೇಗೆ ಬಂದಿರಿ ಎಂಬುದನ್ನೂ ಜ್ಞಾಪಿಸಿಕೊಳ್ಳಿ. ನಾನು ಹೊಗುತ್ತೇನೆ. ನೀವು ನಿಧಾನವಾಗಿ ಬನ್ನಿ ಎಂದು ಹೇಳಿ ಡ್ರೈವರನನ್ನು ಕರೆದು "ನನ್ನ ಸೂಟ್‌ಕೇಸು ಗಾಡಿಯಲ್ಲಿ ಇಡು" ಎಂದಳು. ಡ್ರೈವರನು ಅವಳ ಸೂಟ್‌ಕೇಸನ್ನು ಗಾಡಿಯಲ್ಲಿ ಹಾಕಿದನಂತರ ವತ್ಸಲೆ ಸ್ವಲ್ಪ ಗಡಸು ಧನಿಯಲ್ಲಿ "ಹೊ ನಿಮ್ಮ ಹಾಸಿಗೇನೋ ಹಾಕಿಸಲೋ" ಎಂದಳು. ಗೋಪಾಲನು "ಬೇಡ" ಎಂದ. ವತ್ಸಲೆ ಗಾಡಿಯಲ್ಲಿ ಕುಳಿತುಕೊಂಡು "ಭೊಂ ಭೊಂ" ಎಂದು ಸದ್ದು ಮಾಡುತ್ತಾ ಹೊರಟು ಹೋದಳು. ಗೋಪಾಲ ನಿಂತಜಾಗದಲ್ಲಿಯೇ ಹತ್ತುನಿಮಿಷ ನಿಂತಿದ್ದ.

## ೧೧. ಶತ್ರು ಯಾರು ಮಿತ್ರ ಯಾರು

ಒಂದು ಗಳಿಗೆಯಲ್ಲಿ ಸುದ್ದಿ ಹಳ್ಳಿಯಲ್ಲಿ ಹರಡಿತು. ಆವತ್ತೆಲ್ಲ ಗೋಪಾಲ ಹುಚ್ಚನಂತೆಯೇ ಇದ್ದ. ರಘುರಾಮುನ ಮನೆಗೆ ಊಟಕ್ಕೆ ಹೋಗಿ ಶಾಸ್ತ್ರ ಮಾಡಿದ. ಹೆಂಡತಿ ಗಂಡನ ಮಾತು ಕೇಳದೆ ಹೋಗಿಬಿಟ್ಟಳು. ಆ ದೊಡ್ಡ ಕುದುರೆ ಬಗ್ಗಿಸೋಕೆ ಇವನಿಂದ ಆಗುತ್ತದೆಯೇ" ಎಂದುದೆಲ್ಲಾ ಗೋಪಾಲನ ಕಿವಿಗೆ ಬಿತ್ತು. ಅವನು ಹಲ್ಲು ಕಡಿದುಕೊಂಡ. ವತ್ಸಲೆಯಲ್ಲಿ ಅವನಿಗೆ ಕೋಪವುಂಟಾಯಿತು. ಅವಳನ್ನು ಕಡಿಯಲೇ ಎನ್ನಿಸಿತು. ತಾನು ಅವಳ ಮಾಯೆಯಲ್ಲಿ ಬಿದ್ದಿರುವುದು ಅವನಿಗೆ ಚೆನ್ನಾಗಿ ಗೊತ್ತಾಯಿತು. ಅವಳ ಕೈಯಿಂದ ತಪ್ಪಿಸಿಕೊಳ್ಳುವುದಕ್ಕೆ ತನಗೆ ಖಂಡಿತ ಸಾಧ್ಯವಾಗುವುದಿಲ್ಲವೆಂಬುದು ಅವನಿಗೆ ಗೊತ್ತಿತ್ತು. ವತ್ಸಲೆ ಅವನನ್ನು ಒಂದು ಮಾಟದಲ್ಲಿ ಸಿಕ್ಕಿಹಾಕಿರುವಂತೆ ಅವನಿಗೆ ತಿಳಿಯಿತು. ಬೇಟೆಗಾರ ಪ್ರಾಣಿಯನ್ನು ಒಂದು ಆವರಣದೊಳಗೆ ಸಿಕ್ಕಿಹಾಕಿ ಅದಕ್ಕೆ ಬೇಕಾಗುವಷ್ಟು ಆಡಲು ಅವಕಾಶ ಕೊಟ್ಟು ಕೊನೆಯಲ್ಲಿ ಅದನ್ನು ಕೊಲ್ಲುವಂತೆ ತಾನು ಬೇಟೆಗಾರನ ಕೈಯಲ್ಲಿ ಸಿಕ್ಕಿರುವುದು ಅವನಿಗೆ ಗೊತ್ತಿತ್ತು. "ಏನು ಮಾಡಲಿ ಹಾಳು ಮನುಸ್ಸು ಕಠಿಣವಾಗದೆಲ್ಲ"? ಸ್ವತಂತ್ರವಾಗಲೊಲ್ಲದೆಲ್ಲ ? ಅವಳನ್ನು ದ್ವೇಷಿಸಬೇಕು. ಅವಳ ಮುಖ ನೋಡಬಾರದು ಅಂತ ಪ್ರತಿಜ್ಞೆ ಎಷ್ಟು ಸಲಮಾಡಿದೆ. ಆದರೆ ಅವಳ ಆಶೆ ಬಿಡಲಾರದೆಲ್ಲಾ. ನನ್ನ ಮನಸ್ಸು ಅವಳ ವಿಷಯದಲ್ಲಿ ಹೀಗೆ ಅಳ್ಳು ಮನಸ್ಸಾಗಿರುವುದು ಅವಳಿಗೆ ಗೊತ್ತು. ಮಾನಹೋದರೆ ಹೋಗಲಿ ಪ್ರಾಣಹೋದರೆ ಹೋಗಲಿ ಬುದ್ಧಿ ಮಂಕಾದರೆ ಮಂಕಾಗಲಿ. ಅವಳಿದ್ದರೆ ಸಾಕು. ಅವಳ ಆಶೆಗಾಗಿ ಯಾವ ಮಾನ ಹಾನೀನೂ ಸಹಿಸುತ್ತೇನೆ ಎಂಬ ಈ ಮನೋದೌರ್ಬಲ್ಯ ಜಯಿಸುವುದು ಕಷ್ಟ. ಅವಳು ಸೂಜಿಗಲ್ಲು ನನ್ನನ್ನು ಎಳೆಯುತ್ತಾಳೆ, ಅರೆಯುತ್ತಾಳೆ, ತುಳಿಯುತ್ತಾಳೆ. ನನ್ನ ಹೃದಯವನ್ನು ಕಿತ್ತು ಒಗೆದರೆ ಬಹುಶಃ ಅವಳ ಆಸೆ ತಪ್ಪಬಹುದು. ಊಃ ಅದು ಸಾಧ್ಯವಿಲ್ಲ. ದೇಹ ಸುಟ್ಟಮೇಲೆ ಉಳಿದ ಮೂಳೆಗೆ ಸಹ ಇವಳ ಆಸೆ ಇರುತ್ತೆ" ಎಂದು ತಲೆ ಕೂದಲನ್ನು ಕೈ ಬೆರಳುಗಳಿಂದ ಕಿತ್ತುಕೊಂಡನು.

ಹೆಂಗಸರು "ಮಣೇನ ಗೋಪಾಲ ಬಿಟ್ಟೀ ಬಿಡ್ತಾನೆ" ಎಂದರು. ಗಂಡಸರು "ಒಂದು ಸಲವಾದರೂ ಇವ ಸ್ವಲ್ಪ ಗಂಡಸ್ತನ ತೋರಿಸಬೇಕು.

ಇಲ್ಲದಿದ್ದರೆ ಇವನ್ನ ಕೇಳ್ತಾರ್ರೈ" ಎಂದುಕೊಂಡರು. ಹುಡುಗಿಯರು ತಲೆ ಅಲ್ಲಾಡಿಸಿದರು. ಗೋಪಾಲನಿಗೆ ಹೆಂಡತಿಯನ್ನು ಆಳುವುದಕ್ಕೆ ಬರುವ್ರದಿಲ್ಲ ಎಂಬುದು ಎಲ್ಲರ ಅಭಿಪ್ರಾಯವೂ ಆಗಿತ್ತು. ಗೋಪಾಲ ಸುಮ್ಮನೆ ಆದ. ೧೫ ದಿನ ಕಳೆದು ಹೋಯಿತು ೨೦ ದಿನ ಕಳೆದು ಹೋಯಿತು. ದಿವಸ ದಿವಸಕ್ಕೆ ಅವನಿಗೆ ವತ್ಸಲೆಯ ಆಶೆಯನ್ನು ಜಯಿಸಬೇಕೆಂಬ ಶಕ್ತಿ ಕಡಿಮೆ ಯಾಗುತ್ತಾ ಬಂತು. ಅವಳ ಜತೆಯಲ್ಲಿ ಚಿತ್ರಹಿಂಸೆ ಬೇಕಾದರೂ ಸಹಿಸು ತ್ತೇನೆ. ಅವಳನ್ನು ಬಿಟ್ಟಿರಲಾರೆ ಎಂದುಕೊಳ್ಳುವನು. ಅವಳಲ್ಲಿ ಅವನಿಗೆ ಏಕಕಾಲದಲ್ಲಿ ತಿರಸ್ಕಾರ ಪ್ರೇಮ ಎರಡೂ ಒಟ್ಟಿಗೆ ಉಂಟಾದುವು. ಆದರೂ ಅವನು ವತ್ಸಲೆಗೆ ಕಾಗದ ಬರೆಯಲಿಲ್ಲ. ಅವಳು ಮೈಸೂರಿಗೆ ಹೋದ ಎಂಟು ದಿವಸಗಳ ನಂತರ ಒಂದು ಕಾಗದ ಬರೆದಳು. ಗೋಪಾಲ ಅದನ್ನು ಓದಿ ಕೋಪದಿಂದ ಹರಿದು ಹಾಕಿದ. ಕಾಗದದ ಬದಲು ಅವಳೇ ಬಂದಿದ್ದರೆ ಚೆನ್ನಾಗಿತ್ತು ಎಂಬುದು ಗೋಪಾಲನ ಅಭಿಪ್ರಾಯ. ಕಾಗದಕ್ಕೆ ಜವಾಬ್ ಬಂದ ಮೇಲೆ ಮತ್ತೆ ಮಲ್ಲಿಗೆಹಳ್ಳಿಗೆ ಹೋಗಿ ಒಂದು ಎರಡು ದಿನ ಇದ್ದು ಗೋಪಾಲನ ಜತೆಯಲ್ಲಿ, ಅವನ ಇಷ್ಟದಂತೆ ಗಾಡಿಯಲ್ಲಿ ರೈಲಿನಲ್ಲಿ ಹಿಂದಿರುಗಬೇಕೆಂದು ಅವಳಿಗೆ ಉದ್ದೇಶವಿತ್ತು. ಅದು ಮಾತ್ರ ಗೋಪಾಲನಿಗೆ ಗೊತ್ತಿದ್ದರೆ ಅವನು ಅವಳಿಗಾಗಿ ನೂರು ಮೈಲಿ ಉರಿ ಬಿಸಿಲಿನಲ್ಲಿ ನಡೆದುಕೊಂಡು ಹೋಗುತ್ತಿದ್ದ. ಆದರೆ ಅವನಿಗೆ ಕಾಗದಕ್ಕೆ ಪ್ರತ್ಯುತ್ತರ ಬರೆಯುವುದು ಬೇಕಾಗಲಿಲ್ಲ. ಅವ ನಿಂದ ತನ್ನ ಕಾಗದಕ್ಕೆ ಜವಾಬು ಬರದುದರಿಂದ ವತ್ಸಲೆ ಸಿಟ್ಟುಗೊಂಡು ಸುಮ್ಮನಾದಳು.

ಗೋಪಾಲನ ರಜ ಮುಗಿಯಿತು. ಇನ್ನು ಒಂದು ದಿವಸ ಇದೆ ಎನ್ನು ವಾಗ ಗೋಪಾಲ ಮತ್ತೆ ೧೫ ದಿನ ರಜಾಕ್ಕೆ ಬರೆದ. ಗೋಪಾಲ ಮುರುತು ಕೊಂಡಿರುವುದು ಸುಂದರರಾಜನಿಗೂ ಸುಂದರಮ್ಮನವರಿಗೂ ತಿಳಿದಿತ್ತು. ಸುಂದರರಾಜ ವತ್ಸಲೆಗೆ "ನೀನು ಅವನನ್ನು ಬಿಟ್ಟು ಯಾಕೆ ಬಂದೆ. ಹೋಗಲಿ ನಾಳೆ ಮತ್ತೆ ಹೊರಟುಹೋಗು" ಎಂದರು. ಆದರೆ ವತ್ಸಲೆಗೆ ನಾಳೆ ಗೋಪಾಲ ಬರಲೇಬಹುದು ಎಂದು ಒಂದು ಆಸೆಇತ್ತು. ಗೋಪಾಲನ ಮೇಲಿನ ತನ್ನ ಪ್ರಭಾವ ಅವಳಿಗೆ ಚೆನ್ನಾಗಿ ಗೊತ್ತಿತ್ತು. ಅವಳು ಆ ಆಸೆಯಿಂದ ಪ್ರತಿದಿನವೂ ರೈಲು ಬರುವ ವೇಳೆಯನ್ನು ಕಾಯುತ್ತಿದ್ದಳು. ಒಂದು ದಿನ

ಮಲ್ಲಿಗೆಹಳ್ಳಿಗೆ ಹೋಗಿಬಿಡೋಣವೇ ಎಂದು ತೋರಿತು. ಗೋಪಾಲ ಅಲ್ಲಿ ಇದ್ದಾನೆಯೋ ಇಲ್ಲವೋ ಎಂಬ ಅನುಮಾನವೂ ಬಂತು. ಗೋಪಾಲನಿಗೆ ಕಾಗದ ಬರೆದಳು; ಅವನು ಪ್ರತ್ಯುತ್ತರ ಬರೆಯಲಿಲ್ಲ. ರಜಾ ಮುಗಿಯುತ್ತ ಬಂತು. ಬರುತ್ತಾರೆ ಎಂದುಕೊಂಡು ಸುಮ್ಮನಾದಳು. ಬರದೆ ಎಲ್ಲಿಗೆ ಹೋಗುತ್ತಾರೆ ಎಂಬ ಗರ್ವವೂ ಅವಳಿಗೆ ಇತ್ತು.

ಗೋಪಾಲ ಬ್ಯಾಂಕಿಗೆ ಡ್ಯೂಟಿಗೆ ಹಾಜರಾಗುವ ದಿನವೂ ಬಂತು. ಮೊದಲ ರಾತ್ರಿಯೇ ಅವನು ಬರಬಹುದೆಂದು ವತ್ಸಲೆ ಊಹಿಸಿದಳು. ಬರದಿರಲು ಮಾರನೆಯ ಬೆಳಿಗ್ಗೆ ಬರಬಹುದೆಂದು ಊಹಿಸಿದಳು. ಹನ್ನೆರಡು ಗಂಟೆ ಆಗಿಹೋಯಿತು. ಗೋಪಾಲ ಬರಲಿಲ್ಲ. ಸುಂದರರಾಜನ್ ತಮ್ಮ ಆಫೀಸಿಗೆ ಹೋಗಿ "ಗೋಪಾಲ ಬಂದಿದ್ದಾನೆಯೆ" ಎಂದು ಹಿಂದುಸ್ತಾನ್ ಬ್ಯಾಂಕಿಗೆ ಟೆಲಿಫೋನ್ ಮಾಡಿದರು. ಅಲ್ಲಿ ಮ್ಯಾನೇಜರು ಇರಲಿಲ್ಲ. ಹೆಡ್ ಕ್ಲಾರ್ಕ್ "ಬಂದಿಲ್ಲ. ಮತ್ತೆ ೧೫ ದಿನ ರಜಾಕ್ಕೆ ಬರೆದಿದ್ದಾರೆ" ಎಂದನು. ಸುಂದರರಾಜ್ರ ಮ್ಯಾನೇಜರ್ ಬರುವ ಕಾಲವನ್ನು ತಿಳಿದುಕೊಂಡು ಬ್ಯಾಂಕಿಗೆ ಹೋದರು. ಸುಂದರರಾಜನ್ ಮ್ಯಾನೇಜರಿಗೆ ಚೆನ್ನಾಗಿ ಗೊತ್ತು. ಸುಂದರ ರಾಜನ್ ಕರೆಂಟ್ ಅಕೌಂಟ್ ಆ ಬ್ಯಾಂಕಿನಲ್ಲಿತ್ತು. ಸುಂದರರಾಜನ್‌ರು "ನನ್ನ ಅಳಿಯ ಗೋಪಾಲ್ ಇನ್ನೂ ೧೫ ದಿನ ರಜಾಕ್ಕೆ ಬರೆದಿದ್ದಾನಂತೆ" ಎಂದರು. ಮ್ಯಾನೇಜರು "ಆಗಲಿ. ಸ್ಯಾಂಕ್ಷನ್ ಮಾಡುತ್ತೇನೆ. ಅದಕ್ಕೆ ನೀವ್ಯಾಕೆ ಇಷ್ಟುದೂರ ಬಂದಿರಿ" ಎಂದರು. ಸುಂದರರಾಜನರು "ರಜಾ ಸ್ಯಾಂಕ್ಷನ್ ಮಾಡೋದು ಬೇಡ. ತತ್‌ಕ್ಷಣ ಡ್ಯೂಟಿಗೆ ಹಾಜರಾಗುವಂತೆ ಬರೆಯಿರಿ" ಎಂದರು. ಮ್ಯಾನೇಜರು ಸ್ವಲ್ಪ ಯೋಚಿಸಿ "ಅದು ಹೇಗೆ ಸಾಧ್ಯ. ರಜ ಬೇಕಾದರೆ ಕೂಡಲೇ ಬೇಕು. ಆಮೇಲೆ ಕಮಿಟಿ ಮುಂದೆ ನನ್ನ ಮೇಲೆ ಆಕ್ಷೇಪಣೆ ಬರುತ್ತೆ. ಅಲ್ಲದೆ ರಜ ಕೇಳಿದರೆ ಕೊಡುವುದಿಲ್ಲ ಎಂದು ಆಫೀಸ್ ಕೆಲಸಗಾರರೆಲ್ಲ ಶಪಿಸುತ್ತಾರೆ. ಪಾಪ ಯಾಕೆ ರಜಾ ಕೇಳಿದ್ದಾರೋ. ಇಲ್ಲ ಅಂದರೆ ತೊಂದರೆ ಆಗೋದಿಲ್ವೆ" ಎಂದರು. ಸುಂದರರಾಜನಾರು "ನನ್ನ ಅಳಿಯನ ಹಿತಕ್ಕೆ ವಿರೋಧವಾಗಿ ನಾನು ಹೇಳುತ್ತೇನೆಯೇ? ಅವನಿಗೆ ಊರಿನಲ್ಲಿ ಏನೂ ಕೆಲಸವಿಲ್ಲ. ಯುವಕರು ಏನೋ ಗಂಡ ಹೆಂಡರಿಗೆ ಸ್ವಲ್ಪ ಬಿರುಸು ಮಾತು ನಡೆದಿದೆ ಅದಕ್ಕಾಗಿ ಬರದೆ ಊರಿನಲ್ಲಿ ಕುಳಿತಿದ್ದಾನೆ"

ಎಂದರು. ಮ್ಯಾನೇಜರು " ಅವನಿಗೆ ಇದರಿಂದ ತೊಂದರೆಯಾಗುವುದಿಲ್ಲ ಎಂದು ನೀವು ಹೇಳಿದ ಮೇಲೆ, ರಜ ಮುಂದುವರಿಸುವುದು ಬೇಡ ಎಂದು ಬರೆದುಬಿಡುತ್ತೇನೆ" ಎಂದರು. ಸುಂದರರಾಜನ್‌ರು ಇವತ್ತು ನೀವು ಬರೆದರೆ ನಾಳೆ ಟಪಾಲಿನಲ್ಲಿ ಹೋಗುತ್ತೆ. ಬರುವುದು ನಾಡಿದ್ದು ಆಗುತ್ತೆ. ಅಷ್ಟು ಸಾವಕಾಶ ಬೇಡ. ಅವನು ಇರುವುದು ನನ್ನ ಮನೆ ಅಡ್ರೆಸ್ಸೆ. ನಿಮಗೆ ಗೊತ್ತೇ ಇದೆ. ಅದೇ ಅಡ್ರಸ್ಸಿಗೆ ನಿಮ್ಮ ಜವಾಬ್ ಕೊಡಿ. ಈಗಲೇ ಕಾರು ಕಳುಹಿಸಿ ಕರೆಸಿಬಿಡುತ್ತೇನೆ. ನಾಳೆ ಆಫೀಸಿಗೆ ಬರಬಹುದು" ಎಂದರು. ಮ್ಯಾನೇಜರು " ನಿಮ್ಮ ಇಷ್ಟ" ಎಂದು ಹೇಳಿ ಹೆಡ್ ಕ್ಲಾರ್ಕನ್ನು ಕರೆದು "ಗೋಪಾಲನಿಗೆ ರಜ ಮುಂದುವರಿಸಲು ಸಾಧ್ಯವಿಲ್ಲದುದರಿಂದಲೂ ಬ್ಯಾಂಕಿನಲ್ಲಿ ಕೆಲಸ ಹೆಚ್ಚಾಗಿರುವುದರಿಂದಲೂ ಕೂಡಲೇ ಹಾಜರಾಗಬೇಕೆಂದು ಇಂಡಾರ್ಸು ಕೊಟ್ಟು ಇವರ ಅಡ್ರೆಸ್ಸಿಗೆ ಇಲ್ಲಿಯೇ ಡಿಲಿವರಿ ಮಾಡಿ" ಎಂದರು. ಸುಂದರ ರಾಜರ್ ಕುಳಿತಿರುವಂತೆಯೇ ಇಂಡಾರ್ಸು ಅವರ ಕೈಗೆ ಬಂದಿತು. ಸುಂದರ ರಾಜರ್ ತೆಗೆದುಕೊಂಡು ನಗುತ್ತಾ " ಹೆಣ್ಣು ಹೆತ್ತ ನಿಮಗೆ ಈ ವಿಚಾರ ಹೇಳ ಬೇಕಾದುದಿಲ್ಲ. ಸುಖವಾಗಿ ಗಂಡನ ಮನೆ ಸೇರುವವರೆಗೆ ಎಷ್ಟು ಯೋಚನೆ ಎಂಬುದನ್ನು. ನಿಮ್ಮ ಉಪಕಾರ ವಂದಿಸುತ್ತೇನೆ" ಎಂದರು. ಮ್ಯಾನೇಜರು " ನಾವೆಲ್ಲಾ ಕನ್ಯಾಪಿತೃಗಳು. ಒಬ್ಬರಿಗೊಬ್ಬರು ಮಾಡಬೇಕಾದದ್ದೇ" ಎಂದು ಸುಂದರರಾಜರಿಂದ ಬೀಳುಕೊಂಡರು. ಸುಂದರರಾಜನರು ಅಲ್ಲಿಯೇ ಡ್ರೈವರನ ಕೈಲಿ ಆ ಇಂಡಾರ್ಸು ಕೊಟ್ಟು " ಹೋಗಿ ಮಲ್ಲಿಗೆಹಳ್ಳಿಗೆ ಈ ಕಾಗದ ಅಳಿಯಂದಿರಿಗೆ ಕೊಟ್ಟು ತತ್‌ಕ್ಷಣ ಕರೆದುಕೊಂಡು ಮನೆಯಲ್ಲಿ ಬಿಟ್ಟು ಸಾಯಂಕಾಲ ಕ್ಲಬ್ಬಿಗೆ ಕಾರು ತೆಗೆದುಕೊಂಡು ಬಾ" ಎಂದು ಹೇಳಿ ಕಳುಹಿಸಿ ದರು. ಆಫೀಸಿಗೆ ಹೋಗಿ ಮನೆ ಟೆಲಿಫೋನ್‌ನಲ್ಲಿ ವತ್ಸಲೆಯನ್ನು ಕರೆದು " ಅಪರಾಧಿಯನ್ನು ಹಿಂಗಟ್ಟು ಮುರಿಕಟ್ಟಿ ನಿನ್ನ ಮುಂದೆ ತಂದು ಡ್ರೈವರ್ ಕೆಡವುತ್ತಾನೆ. ನಿನಗೆ ಇಷ್ಟಬಂದಂತೆ ಮಾಡಬಹುದು," ಎಂದು ನಕ್ಕರು. ತಮ್ಮಲ್ಲಿ ತಾವು " ಈಗ್ಗ ಅಳಿಯಮಹಾರಾಜರ, ಮುಂದೆ ಬಂದ ಹಲ್ಲನ್ನು ಸ್ವಲ್ಪ ಒಳಕ್ಕೆ ತಳ್ಳಿದೆ" ಎಂದುಕೊಂಡು ತಮ್ಮ ಕೆಲಸದಲ್ಲಿ ತೊಡಗಿದರು.

ಹಳ್ಳಿಯಲ್ಲಿ ನನ್ನ ಕೊಠಡಿಯಲ್ಲಿ ಓದುತ್ತಾ ಕುಳಿತಿದ್ದ ಗೋಪಾಲನಿಗೆ ದೂರದ ಮೋಟಾರಿನ ಭಂ ಭಂ ಸುದ್ದು ಕೇಳಿಸಿತು. ಏನೋ ನಮ್ಮ ಮಾವನ

ವರ ಕಾರೊ ಎಂದು ಅವನು ಒಂದು ಕ್ಷಣ ಯೋಚಿಸಿದನು. ಏನಾದರೂ ವತ್ಸಲೆ ನನ್ನಲ್ಲಿಗೆ ಬಂದಳೋ ಎಂದು ಮತ್ತೆ ಯೋಚಿಸಿದನು. ಆ ಬರಿಯ ಯೋಚನೆಯೇ ಅವನ ದೇಹವನ್ನು ಸುಮ್ಮನೆ ಉಬ್ಬಿಸಿತು. ಇರಲಾರದು ಎಂದುಕೊಂಡನು. ಬರಬರುತ್ತಾ ಕಾರು ತನ್ನ ಊರಿನೊಳಕ್ಕೆ ತನ್ನ ಬೀದಿಯಲ್ಲಿಯೇ ಬಂದುದು ಕೇಳಿಸಿ ಬಾಗಿಲಿಗೆ ಬಂದನು. ಗಾಡಿ ಮನೆಯ ಬಾಗಿಲಿನಲ್ಲಿ ನಿಂತಿತು. ಡ್ರೈವರು ಒಬ್ಬನೇ ಗಾಡಿಯಲ್ಲಿ ಕುಳಿತಿದ್ದುದನ್ನು ನೋಡಿ ಗೋಪಾಲನ ಉತ್ಸಾಹ ಕಮ್ಮಿಯಾಯಿತು. ಡ್ರೈವರು ಗಾಡಿಯಿಂದ ಇಳಿದು ನಮಸ್ಕರಿಸಿ ಬ್ಯಾಂಕಿನ ಕಾಗದವನ್ನು ಕೊಟ್ಟನು. ಗೋಪಾಲನಿಗೆ ಅದರಲ್ಲಿ ತಮ್ಮ ಮಾವನವರ ಕೈವಾಡ ಏನಾದರೂ ಇರಬಹುದು ಎಂಬುದು ಗೊತ್ತಾಗಲಿಲ್ಲ. ಅವನು ಸ್ವಾಭಾವಿಕವಾಗಿ "ಒಂದು ತಿಂಗಳು ರಜಾ ಅನುಭವಿಸಿ ಡ್ಯೂಟಿಗೆ ಹಾಜರಾಗುವುದಕ್ಕೆ ಮುಂಚೆ ಮತ್ತೆ ರಜಾಕೇಳಿದರೆ ಕೊಡುತ್ತಾರೆಯೇ. ಎನೋ ಒಂದು ಏಟು ಹಾಕಿ ನೋಡಿದೆನು ಸಿಕ್ಕಲಿಲ್ಲ. ಸರಿ ನಾಳೆ ಹೋಗುವುದು" ಎಂದುಕೊಂಡನು. ಡ್ರೈವರು "ಸಾಹೇಬರು ನಿಮ್ಮನ್ನು ಕರೆದುಕೊಂಡು ಬರಹೇಳಿದ್ದಾರೆ" ಎಂದು. "ವತ್ಸಲೆ ಕರೆದುಕೊಂಡು ಬರಹೇಳಿದ್ದಾಳೆ" ಎಂದಿದ್ದರೆ ಗೋಪಾಲ ಸ್ವಲ್ಪ ಯೋಚಿಸುತ್ತಿದ್ದ. ಆದರೆ ಸಾಹೇಬರು ಎಂದುದರಿಂದ ಅವನಿಗೆ ತತ್‌ಕ್ಷಣವೇ ಕೋಪವುಂಟಾಯಿತು. ಅವನು "ನೀನು ಈಗ ಹೊರಡು, ತಡಿ ಸ್ವಲ್ಪ ಕಾಫಿ ಇದ್ದರೆ ತಂದುಕೊಡುತ್ತೇನೆ" ಎಂದು ಹೇಳಿ ಒಳಕ್ಕೆ ಹೋಗಿ ಒಂದು ಲೋಟ ಕಾಫಿ ತಂದುಕೊಟ್ಟನು. ಡ್ರೈವರು ಮತ್ತೆ "ಖಂಡಿತ ಬರಬೇಕೆಂದು ಹೇಳು ಎಂದು ಸಾಹೇಬರು ಅಪ್ಪಣೆಮಾಡಿದ್ದರು" ಎಂದನು. ಗೋಪಾಲನು "ನಿನ್ನ ಕೆಲಸ ನೀನು ಮಾಡಿಯಾಯಿತು. ಕೊಟ್ಟ ಚೀಟಿ ತಂದುಕೊಟ್ಟೆ. ಇನ್ನು ಹೊರಡು" ಎಂದು ಹೇಳಿದನು. ಡ್ರೈವರನು ಮೈಸೂರಿಗೆ ಹೋಗಿ ಮೊದಲು ಮನೆಗೆ ಹೋಗಿ ನಡೆದ ವಿಚಾರ ತಿಳಿಸಿದನು. ಸುಂದರಮ್ಮನವರು ಅಳಿಯನನ್ನು ಚೆನ್ನಾಗಿ ಬೈದರು. ವತ್ಸಲೆ ಏನೂ ಮಾತನಾಡಲಿಲ್ಲ. ಡ್ರೈವರು ಆಫೀಸಿಗೆ ಹೋಗಿ ಸುಂದರರಾಜನ್‌ರವರಿಗೆ ತಿಳಿಸಿದಾಗ ಅವರು ಈ ಕಾಲದ ಹುಡುಗರೇ ಹೀಗೆ. ಕೃತಘ್ನರು ಎಂದುಕೊಂಡರು.

ಗೋಪಾಲ ಮರುದಿನ ಬೆಳಗಿನ ಜಾವ ಮಲ್ಲಿಗೆಹಳ್ಳಿಯಿಂದ ಹೊರಟು ಸ್ಟೇಶನ್ನಿಗೆ ಬಂದು ಮೈಸೂರನ್ನು ಸೇರಿ ಹೋಟಲಿನಲ್ಲಿ ಊಟಮಾಡಿ ನೆಟ್ಟಗೆ

ಬ್ಯಾಂಕಿಗೆ ಹೋಗಿ ಡ್ಯೂಟಿಗೆ ಹಾಜರಾದ. ಅವನು ಹೊರಡುವುದಕ್ಕೆ ಮುಂಚೆ ತಂದೆಯವರು ಗೋಪಾಲನನ್ನು ಕರೆದು "ಅಪ್ಪಾ ವತ್ಸಲೆ ನಮಗೆ ಸೇರಿದ ವಸ್ತು. ಗರ್ಭಿಣಿ ಬೇರೆ ; ಏನೋ ಸಣ್ಣ ವಯಸ್ಸು. ತಂದೆತಾಯಿಗಳ ಧನದ ಮದ ಆದರೆ ನಮ್ಮ ಪದಾರ್ಥ ನಾವು ರಕ್ಷಣೆ ಮಾಡಿಕೊಬೇಕು. ಆ ಹುಡುಗಿಗೆ ಏನು ವಿವೇಕವಿದೆ. ನಾವೇ ಸೋತುಹೋಗಬೇಕು. ನಾಲ್ಕು ದಿವಸಕ್ಕೆ ಅವಳಿಗೇ ಬುದ್ಧಿ ಬರುತ್ತೆ, ಎಲ್ಲಾ ಸರಿ ಹೋಗುತ್ತೆ, ಸುಮ್ಮನೆ ದುಡುಕಬೇಡ. ಎಂದು ಬುದ್ಧಿವಾದಹೇಳಿದ್ದರು. ಗೋಪಾಲನು ಸರಿ ಎಂದು ತಲೆಯಲ್ಲಾಡಿಸಿದ. ಮೈಸೂರಿನಲ್ಲಿ ಬ್ಯಾಂಕಿನಲ್ಲಿ ಸುಮಾರು ಎಂಡು ಗಂಟೆ ಕೆಲಸ ಮಾಡಿದ ನಂತರ ಬ್ಯಾಂಕ್ ಜವಾನನು ಬಂದು "ಟೆಲಿಫೋನಿನಲ್ಲಿ ಯಾರೊ ನಿಮ್ಮನ್ನು ಕರೆಯುತ್ತಿದ್ದಾರೆ" ಎಂದ. ಗೋಪಾಲನನ್ನು ಟೆಲಿಫೋನಿನಲ್ಲಿ ಯಾರೂ ಹೆಚ್ಚಾಗಿ ಮಾತನಾಡಿಸುತ್ತಿರಲಿಲ್ಲ. ಆದರೆ ಈಗ ಅವನನ್ನು ಕರೆದಿರುವವರು ಯಾರು ಎಂಬುದು ಅವನಿಗೆ ಸುಮಾರಾಗಿ ತಿಳಿಯಿತು. ಗೋಪಾಲ ಟೆಲಿ ಫೋನ್ ಹಿಡಿದುಕೊಂಡು ಯಾರು ಎಂದ. ಸುಂದರರಾಜನ್‌ರ ಧ್ವನಿ ಕೊಡಲೆ ಗೊತ್ತಾಯಿತು. ಸುಂದರರಾಜನ್‌ರವರು "ಯಾಕೆ ಊಟಕ್ಕೆ ಬರಲಿಲ್ಲ ಮನೆಯಲ್ಲಿ ನಾನು ಆಫೀಸಿಗೆ ಬರುವವರೆಗೆ ನಿಮ್ಮನ್ನು ನಿರೀಕ್ಷಿಸಿದೆ" ಎಂದರು. ಗೋಪಾಲನು ಮುಖದಲ್ಲಿ ಗಂಭೀರಭಾವದಿಂದ "ಹೋಟಲಿನಲ್ಲಿ ಊಟ ಮಾಡಿದೆ" ಎಂದ. ಸುಂದರರಾಜನ್‌ರು "ಅಯ್ಯೋ ಯಾಕೆ ಹೋಟಲಿಗೆ ಹೋದಿರಿ. ಹಾಸಿಗೆ ಎಲ್ಲಿ ಹಾಕಿದ್ದೀರಿ. ಕಾರು ಕಳುಹಿಸಲೇ ?" ಎಂದರು. ಗೋಪಾಲನ್ನು "ಬೇಡಿ. ಒಂದು ಕೊಠಡಿ ತೆಗೆದುಕೊಂಡಿದ್ದೇನೆ. ಅಲ್ಲೇ ಇರುತ್ತೇನೆ" ಎಂದ. ಸುಂದರರಾಜನರು "ಚೆನ್ನಾಯಿತು. ಹೋಟಲಿಗೆ ಯಾಕೆ ದುಡ್ಡು ದಂಡ ಹಾಕ್ತೀರಿ. ಹುಡುಗರ ಹಾಗೆ ಆಡ್ತಿರಲ್ಲ" ಎಂದರು. ಗೋಪಾಲನು "ಇನ್ನು ಹೋಟಲಿನಲ್ಲಿಯೇ ಇರುತ್ತೇನೆ, ದಯವಿಟ್ಟು ಕ್ಷಮಿಸಿ" ಎಂದು ಹೇಳಿದ. ಸುಂದರರಾಜನ್ ಓ ಎಂದುಕೊಂಡು ಟೆಲಿಫೋನ್ ಕೆಳ ಗಿಟ್ಟರು. ಗೋಪಾಲನಿಗೆ "ನನ್ನ ಮಾನ ನಾನು ಉಳಿಸಿಕೊಂಡೆ" ಎಂಬ ಹೆಮ್ಮೆಯುಂಟಾಯಿತು.

ಅವತ್ತು ಗೋಪಾಲ ಬ್ಯಾಂಕ್ ಬಿಡುವುದು ಸಾಯಂಕಾಲ ೬ ಗಂಟೆ ಆಯಿತು. ಗೋಪಾಲನು ಸುಸ್ತಿನಿಂದ ಕಣ್ಣು ಒರಸಿಕೊಳ್ಳುತ್ತಾ ಹೊರಗೆ

ಬಂದನು. ತತ್‌ಕ್ಷಣ ಹೋಟಲಿನಲ್ಲಿ ಹಾಕಿದ್ದ ಹಾಸಿಗೆಯನ್ನು ಒಂದು ರೂಮಿಗೆ ತೆಗೆದುಃಕೊಂಡು ಹೋಗಿ ಹಾಕಬೇಕೆಂಬುದು ಅವನ ಯೋಚನೆಯಾಗಿತ್ತು. ಬ್ಯಾಂಕಿನ ಬಾಗಿಲಿಗೆ ಅವನು ಬಂದಕೂಡಲೇ ವತ್ಸಲೆ ಮೋಟಾರು ಗಾಡಿಯಲ್ಲಿ ಕುಳಿತಿರುವುದು ಅವನ ಕಣ್ಣಿಗೆ ಬಿತ್ತು. ಅವನ ಮುಖ ಕೂಡಲೆ ಪ್ರಫುಲ್ಲವಾಯಿತು. ಅವಳನ್ನು ಕಂಡಾಗ ಕೋಪದಿಂದ ಶಿಡುಕಬೇಕೆಂದಿದ್ದ ಅವನ ಯೋಚನೆಗಳೆಲ್ಲಾ ಅವನಿಗೆ ಮರೆತೇಹೋದುವು.

ಬೆಳಕಿನ ಕಡೆಗೆ ಅರಳುವ ಗಿಡದಂತೆ ಅವನು ಕಾರಿನ ಬಳಿಗೆ ಹೋದನು. ತಾನು ಮಾಡಬೇಕಾದದ್ದು ಇದಲ್ಲ. ಇವಳ ಮೇಲೆ ರೇಗಬೇಕು ಎಂದು ಅವನಿಗೆ ಗೊತ್ತು. ಆದರೆ ಏನು ಮಾಡುತ್ತಾನೆ. ವತ್ಸಲೆಯ ಕಣ್ಣು ಅವನನ್ನು ಹಗ್ಗದಿಂದ ಹಿಡಿದು ಎಳೆಯುವಂತೆ ಎಳೆಯುತ್ತಿತ್ತು. ಆ ಶಕ್ತಿಯ ಎದುರಿಗೆ ಅವನ ಮನೋದಾರ್ಢ್ಯ ನೀರಾಯಿತು. ಅವನು ಹೋಟಲಿಗೆ ಹೋಗಿ ಹಾಸಿಗೆ ತೆಗೆದುಕೊಂಡು ಸುಮ್ಮನೆ ಸುಂದರರಾಜನ ಮನೆಗೆ ಹೋದನು. ತಪ್ಪಿಸಿಕೊಂಡು ಹೋಗಿದ್ದ ಪ್ರಾಣಿಯನ್ನು ಹಿಂದಕ್ಕೆ ಹಿಡಿದುಕೊಂಡು ಬಂದು ದೊಡ್ಡಿಗೆ ಕೂಡಿ ವತ್ಸಲೆ ನಿರ್ಯೋಚನೆಯಾದಳು. ಸುಂದರರಾಜ ವತ್ಸಲೆಯನ್ನು ನೋಡಿ ಒಂದು ವಿಧವಾಗಿ ನಕ್ಕರು.

ಒಂದು ವರುಷ ಕಳೆದುಹೋಯಿತು. ಗೋಪಾಲನಿಗೆ ನಾಲ್ಕು ತಿಂಗಳ ಒಂದು ಗಂಡು ಮಗುವಿತ್ತು. ಗೋಪಾಲ ಬೇರೆ ಇರೋಣ ಎಂದು ಹೇಳಿದಾಗಲೆಲ್ಲ ವತ್ಸಲೆ ಬಾಣಂತನ ಒಂದು ಆಗಿ ಹೋಗಲಿ ಎಂದು ಸಬೂಬು ಹೇಳಿದಳು. ಸು ಂ ದ ರ ರಾ ಜ ನ್ ರ ವ ರು ಸಾಹಸಪಟ್ಟು ಇನ್ನೊಂದು ವರುಷ ಜೀವದಾನ ಪಡೆದರು–ಅವರು ಹೇಳಿಕೊಂಡ ರಾಜಕಾರಣಗಳು ಮಕ್ಕಳ ವಿದ್ಯಾಭ್ಯಾಸ, ಉಳಿದ ಹೆಣ್ಣುಗಳ ಮದುವೆ.

ರಘುರಾಮ ಕೆಲವು ವರುಷ ಮೈಸೂರಿನಲ್ಲಿ ವಾಸಮಾಡಬೇಕೆಂದು ಒಂದು ಮನೆಯನ್ನೇ ಅಲ್ಲಿ ಕೊಂಡುಕೊಂಡು ಬ್ಯಾಂಕಿನಲ್ಲಿ ದೊಡ್ಡದಾಗಿ ಕರೆಂಟ್ ಅಕೌಂಟ್ ಪ್ರಾರಂಭಿಸಿದ. ಅವನು ಬ್ಯಾಂಕಿಗೆ ಬಂದ ದಿನ ಜಯವೂ ಬಂದಿದ್ದಳು. ಜಯ ಹಳ್ಳಿಯ ಹುಡುಗಿಯಾದರೂ ಸ್ವಾಭಾವಿಕವಾದ ರುಚಿಯಿಂದ ಒಳ್ಳೆಯ ರಾಣಿಯಾಗಿ ಅಲಂಕಾರ ಮಾಡಿಕೊಂಡಿದ್ದಳು. ಯಾವಾಗಲೂ ಜಯಾ ಅಂದರೇ ತನ್ನ ಅದೃಷ್ಟವನ್ನು ಹಳಿದುಕೊಳ್ಳುತ್ತಿದ್ದ

ಗೋಪಾಲ ಅವಳ ಆ "ನಾಗರಿಕ" ವನ್ನು ನೋಡಿ ಮುಗ್ಧನಾದನು. ಅವಳು ರಘುರಾಮನೊಂದಿಗೆ, ಸಮಾನಳಾಗಿ ಅವನ ಎಲ್ಲಾ ಆಡಳಿತಗಳಲ್ಲಿಯೂ ಉತ್ಸಾಹವನ್ನು ತೋರಿಸುತ್ತಾ ನಿಜವಾಗಿಯೂ ಅವನಿಗೆ ಅರ್ಧಾಂಗಿಯೇ ಆಗಿದ್ದಳು. ಗೋಪಾಲನ ಅಕ್ಕ ಮಣಿಯ ಗಂಡನಿಗೆ ಮೈಸೂರು ಕೋರ್ಟಿಗೆ ವರ್ಗವಾದುದರಿಂದ ಮಣಿಯೂ ಮೈಸೂರಿಗೆ ಬಂದಳು. ರಘುರಾಮನ ಮನೆಯ ಔಟ್ ಹೌಸಿನಲ್ಲಿ ಮಣಿಯ ಸಂಸಾರ ಉಳಿಯಿತು. ಗೋಪಾಲನ ಒಬ್ಬ ತಮ್ಮ ಮಣಿಯ ಮನೆಯಲ್ಲಿ ಒಂದು ಹೈಸ್ಕೂಲಿನಲ್ಲಿ ಓದುವುದಕ್ಕೆ ನಿಂತನು. ಮಣಿ ಎಲ್ಲಿಯಾದರೂ ಬೇರೆ ಮನೆಗೆ ಹೋಗುತ್ತೇನೆ ಎಂದರೂ ಜಯಾ ಒಪ್ಪಲಿಲ್ಲ. "ಪರಸ್ಥಳ. ನನಗೆ ಒಬ್ಬಳಿಗೇ ಭಯವಾಗುತ್ತೆ. ಈ ಔಟ್ ಹೌಸ್ ನಾವು ಉಪಯೋಗಿಸುವುದಿಲ್ಲ. ನೀವು ಇಲ್ಲೇ ಇದ್ದು ತೀರ ಬೇಕು" ಎಂದು ಜಯಾ ಮಣಿಗೆ ಹೇಳಿದಳು. ಜಯಾ ಹೇಳಿದ ಮಾತನ್ನು ಮೀರುವುದಕ್ಕೆ ಯಾರಿಂದಲೂ ಸಾಧ್ಯವಾಗುತ್ತಿರಲಿಲ್ಲ. ಇವನ್ನೆಲ್ಲಾ ತಿಳಿದು ಗೋಪಾಲ "ಇನ್ನು ನಾನು ಮಾವನ ಮನೆಯಲ್ಲಿರಕೂಡದು. ಗುರುತಿದ್ದವ ರೆಲ್ಲಾ ಬಂದರು. ಇನ್ನು ಮಾನ ಬರೋದಿಲ್ಲ. ಮಣಿಯು ಮನೇಲಿರುವ ತಮ್ಮನನ್ನ ನನ್ನ ಮನೇಲಿ ಇಟ್ಟುಕೊಂಡು ಪಾಠಗೀಟ ಹೇಳಿಕೊಡಬೇಕು. ಉಳಿದ ಇಬ್ಬರು ತಮ್ಮಂದಿರನ್ನು ಕರೆಸಬೇಕು ಇವತ್ತು ಆಫೀಸಿನಿಂದ ಮನೆಗೆ ಹೋಗುವಾಗಲೇ ಬಾಡಿಗೆ ಮನೆ ಒಂದನ್ನು ನೋಡಿ ಬಿಡುತ್ತೇನೆ" ಎಂದು ಯೋಚಿಸಿದ. ಆಫೀಸು ಬಿಟ್ಟನಂತರ ದಾರಿಯಲ್ಲಿ ನೋಡುತ್ತಾ ಒಂದು ಮನೆಯನ್ನು ಗೊತ್ತು ಮಾಡಿದ. ಅದರ ಮುಂದಲ ಬೀದಿ ಯಲ್ಲಿಯೇ ರಘುರಾಮನ, ಮಣಿಯ ಮನೆ. ಗೋಪಾಲ ಮಣಿಯ ಮನೆಗೆ ಹೋದನು. ತಮ್ಮನೊಂದಿಗೆ ಮಾತನಾಡಿದನು. ಮಣಿಗೆ ಇವತ್ತು ನಾಳೆ ಬೇರೆ ಮನೆ ಮಾಡುತ್ತೇನೆ ಎಂದನು. ಮಣಿಯ ಮನೆ ಬಾಗಿಲಿನಲ್ಲಿ ರಘುರಾಮ ನಿಂತಿದ್ದವನು ಗೋಪಾಲನನ್ನು ಒಳಕ್ಕೆ ಕರೆದನು. ಗೋಪಾಲ ಒಳಗೆ ಹೋಗಿ ಪದ್ಧತಿಯಂತೆ ಕಾಫಿ ಕುಡಿದು ಜಯಾವಿನ ಯೋಗಕ್ಷೇಮವನ್ನು ವಿಚಾರಿಸಿಕೊಂಡು ಹೊರಟನು. ಹತ್ತು ರುಪಾಯಿ ಸಂಪಾದಿಸಿದರೂ ಚಿಂತೆ ಯಿಲ್ಲ. ಗಂಜಿ ಕುಡಿದರೂ ಚಿಂತೆಯಿಲ್ಲ. ಸ್ವತಂತ್ರವಾಗಿದ್ದರೆ ಸಾಕು ಎಂಬುದೇ ಅವನ ಆಸೆಯಾಯಿತು. ಅವನು "ರಘುರಾಮ ಇಷ್ಟು ಸುಖವಾಗಿದ್ದಾನೆ

ಅವನಿಗೆ ಮಾತ್ರ ಸುಖಕ್ಕೆ ಅರ್ಹತೆ ಇದೆ. ನನಗೆ ಇಲ್ಲವೆ ಎಂದುಕೊಂಡು ದೃಢ ಮನಸ್ಸಿನಿಂದ ಮನೆಗೆ ಹೋದನು. ಮನೆಗೆ ಹೋದ ಕೂಡಲೇ ಗೋಪಾಲನು "ಬೇರೆ ಮನೆ ಈ ಭಾನುವಾರ ಗೊತ್ತುಮಾಡಿಬಿಡುತ್ತೇನೆ. ಹೋಗಿಬಿಡಬೇಕು" ಎಂದನು. ಮನೆಯಲ್ಲಿ ಭಾರಿ ಬಾಂಬು ಬಿದ್ದಂತೆ ಆಯಿತು.

ಸುಂದರರಾಜನರು ಇವತ್ತೂ ಈ ವಿಚಾರ ಪೂರ್ತಾ ಸಾಯಿಸಬೇಕು ಎಂದುಕೊಂಡು "ಅಪ್ಪಾ ನೀನು ಹುಡುಗನ ಹಾಗೆ ಆಡಬೇಡ. ನಿತ್ಯ ನಿತ್ಯ ಇದು ಸಾಕಾಯಿತು. ನಾವು ಈ ಊರಲ್ಲಿ ಇರುವವರೆಗೆ ಈ ಮಾತು ಬೇಡ, ಅನಂತರ ಮಹಾರಾಯನಾಗಿ ನಿನ್ನ ಹೆಂಡತೀನ ನೀನು ಕರೆದುಕೊಂಡು ಹೋಗು. ಈ ಪಂಚಾಯ್ತಿ ಇನ್ನು ಸಾಕು" ಎಂದರು. ಸುಂದರಮ್ಮನವರು "ಇದೇನು ನಿತ್ಯಾ ನಿತ್ಯಾ; ಸುಮ್ನೆ ಇರಪ್ಪ. ಲಕ್ಷ್ಮಿ ಹಾಗೆ ಮಗನ್ನ ಹೆತ್ಕೊಂಡು ಸುಖ ವಾಗಿದಾಳೆ. ಏನೋ ಒಂದು ತೆಗೀಬೇಡ" ಎಂದರು. ಗೋಪಾಲನಿಗೆ ಮೈ ಉರಿಯಲು ಪ್ರಾರಂಭವಾಯಿತು. ಇವರನ್ನ ಕಟ್ಕೊಂಡು ಏನು? ವತ್ಸಲೆ ಬಂದೇ ಬರುತ್ತಾಳೆ ಎಂದುಕೊಂಡು ಅವನು ಅವಳಿಗೆ ಹೇಳಿದ. ವತ್ಸಲೆ ಸಾಕು ಸುಮ್ಮನಿರಿ ಎಂದು ಶಿಡಕಿದಳು. ಗೋಪಾಲ "ವಿಷ ಪಾತ್ರೆ ಇನ್ನು ಪೂರ್ತಿಯಾಯಿತು. ಈ ರೋಗಕ್ಕೆ ಮದ್ದು ಇಲ್ಲ" ಎಂದು ಹೇಳಿ ಬುಸು ಗುಟ್ಟುತ್ತಾ ಮಲಗಿದ. ಬೆಳಗಾದ ಮೇಲೆ ಎದ್ದು ನೆಟ್ಟಗೆ ಬ್ಯಾಂಕಿಗೆ ಹೋದ.

ಅವತ್ತೇ ಅವನ ಗ್ರಹಚಾರದ ಕಾಲವಾಗಿತ್ತು. ಗೋಪಾಲ ಆಫೀಸಿ ನಲ್ಲಿ ಮುಂಕನಾಗಿ ಕುಳಿತಿದ್ದನು. ಅವತ್ತು ಬ್ಯಾಂಕಿನಲ್ಲಿ ವ್ಯವಹಾರ ಬಹಳ ಹೆಚ್ಚು. ಹಣ ತಂದುಕೊಡುವವರ ಮತ್ತು ತೆಗೆದುಕೊಂಡು ಹೋಗುವವರ ಸಂಖ್ಯೆ ಬಹಳ ಹೆಚ್ಚಾಗಿತ್ತು. ಗೋಪಾಲನ ಕೈಗಳು ನೂರು, ಸಾವಿರ ರುಪಾಯಿಗಳ ನೋಟುಗಳನ್ನು ಎಣಿಸುತ್ತಾ ಇದ್ದರೂ ಅವನ ಮನಸ್ಸೆಲ್ಲಾ ಬೇರೆ ಕಡೆಯೇ ಇತ್ತು. ಮೂರು ಗಂಟೆಗೆ ಬ್ಯಾಂಕಿನ ವ್ಯವಹಾರ ಮುಗಿದು ಗೋಪಾಲನು ಹಣ ಲೆಕ್ಕಮಾಡಿದಾಗ ಎರಡುಸಾವಿರ ರುಪಾಯಿ ಕಡಿಮೆ ಇತ್ತು. ಗೋಪಾಲನ ಎದೆ ಒಂದೇ ಸಮನೆ ದಡದಡನೆ ಬಡಿದುಕೊಂಡಿತು. ಅವನು ಅನ್ಯಮನಸ್ಕನಾಗಿ ಯೋಚಿಸುತ್ತಿರುವಾಗ ಯಾರೋ ಅವನಿಗೆ ಗಸ್ತು ಕೊಟ್ಟುಬಿಟ್ಟಿದ್ದರು. ಗೋಪಾಲ ಕ್ಯಾಶಿಯರ್ ಗಣಪತಿಯ ಹತ್ತಿರ ಹೋಗಿ

ನಡೆದ ಸಂಗತಿ ಹೇಳಿದನು. ಗಣಪತಿಯು "ಅಯ್ಯೊ ಗ್ರಹಚಾರವೇ. ಇದನ್ನ ಪತ್ತೆ ಮಾಡುವುದು ಕಷ್ಟ. ಮೊದಲು ಈ ಹಣ ಈಗ ಭರ್ತಿ ಆಗಿ ಬಿಡಬೇಕು. ಬ್ಯಾಂಕಿನ ಲೆಕ್ಕ ೫ ಗಂಟೆಗೆ ಮುಗಿಯುವಾಗ ಹಣ ಸರಿಯಾಗಿಲ್ಲದಿದ್ದರೆ ಆಗುವ ಪರಿಣಾಮ ನಿಮಗೆ ಗೊತ್ತೆ ಇದೆ" ಎಂದ. ವಿಷಯಗಳೆಲ್ಲಾ ಚೆನ್ನಾಗಿ ತಿಳಿದ ಮೇಲೆ "ಈ ಹಣ ನಿಮಗೆ ಸಿಕ್ಕುವುದಿಲ್ಲ. ಹೋಯಿತು ಆದರೆ ಹಣದ ಜತೆಯಲ್ಲಿ ಮಾನಾನೂ ಕಳ್ಕೋಬೇಡಿ, ನಿಮಗೆ ಗುರ್ತು ಇರುವವರು ಯಾರಾದರೂ ಎರಡುಸಾವಿರ ರುಪಾಯಿ ಕೊಡೋರು ಇದಾರೆಯೇ" ಎಂದನು. ಗೋಪಾಲನು "ನಮ್ಮಂತಹವರಿಗೆ ಅಂತಹ ಸಾಹುಕಾರ ಸ್ನೇಹಿತರು ಯಾರು ಸಿಕ್ಕುತ್ತಾರೆ. ನಾವು ಸುದಾಮನ ಗೋತ್ರ" ಎಂದನು ಗಣಪತಿಯು "ನಿಮ್ಮ ಮಾವಂದಿರು ಇದ್ದಾರಲ್ಲ. ಇಂತಹ ಸಮಯದಲ್ಲಿ ಖಂಡಿತ ನಿಮ್ಮ ಸಹಾಯಕ್ಕೆ ಬಂದೇ ಬರುತ್ತಾರೆ. ಅವರ ಕರೆಂಟ್ ಅಕೌಂಟ್ ನೋಡುತ್ತೇನೆ ತಾಳಿ" ಎಂದು ಲೆಡ್ಜರ್ ಬಿಚ್ಚಿ ನೋಡಿ "ಗೋಪಾಲ್ ನೀವು ಯೋಚಿಸಬೇಡಿ. ಭಗವಂತನ ದಯದಿಂದ ಸುಂದರರಾಜನ್‌ರವರ ಕರೆಂಟ್ ಅಕೌಂಟ್ ನಿಮ್ಮಂತಹ ನಾಲ್ಕು ಜನರನ್ನು ಕಾಪಾಡಲು ಶಕ್ತವಾಗಿದೆ. ಆಫೀಸಿನಿಂದ ಅವರಿಗೆ ವಿಷಯ ಟೆಲಿಫೋನ್ ಮಾಡಿ ಒಂದು ಚೆಕ್ಕು ಕಳುಹಿಸುವಂತೆ ಹೇಳಿ" ಎಂದರು. ಗೋಪಾಲನು "ಬೇಡ ಬೇಡ ಪ್ರಾಣಹೋದರೂ ಹೋಗಲಿ ಆಗೋದು ಆಗಲಿ ಅವರನ್ನು ಮಾತ್ರ ಕೇಳುವುದಿಲ್ಲ" ಎಂದನು. ಗಣಪತಿಯು "ಛೇ ಛೇ ನೀವು ಇನ್ನೂ ಅನುಭವವಿಲ್ಲದವರು. ಹೀಗೆಲ್ಲಾ ಸಿಟ್ಟುಮಾಡಿಕೊಂಡರೆ ಏನು ಪ್ರಯೋಜನ. ಸುಂದರರಾಜನ್ ದೊಡ್ಡ ಸಂಸಾರಿ ಕಷ್ಟಸುಖಗಳನ್ನು ಬಲ್ಲವರು. ಖಂಡಿತ ನಿಮ್ಮ ಸಹಾಯಕ್ಕೆ ಬರುತ್ತಾರೆ. ಮಗಳಿಗೆ ಸುಖಬೇಕು ಅಳಿಯನಿಗೆ ಏನೂ ಮಾಡೋಲ್ಲ ಅಂದರೆ ಹೇಗೆ ಆಗುತ್ತೆ ಬನ್ನಿ; ಎಂದು ಗೋಪಾಲನನ್ನು ಟೆಲಿಫೋನ್‌ಗೆ ಕರೆದುಕೊಂಡು ಹೋದರು. ಗೋಪಾಲನು "ಟೆಲಿಫೋನಿನಲ್ಲಿ ಬೇಡ. ಹೋಗಿ ಎದುರಿಗೇ ಮಾತನಾಡುತ್ತೇನೆ. ಅವರ ಆಫೀಸು ಹತ್ತಿರವೇ ಅಲ್ಲವೆ" ಎಂದನು. ಗಣಪತಿಯು "ಇದೇನು ಹೀಗೆ ಹೇಳುತ್ತೀರಿ ಬ್ಯಾಂಕಿನಿಂದ ಲೆಕ್ಕಗಳನ್ನು ಪೂರ್ತಿಮಾಡಿ ಅಲ್ಲವೆ ಹೊರಗೆ ಹೋಗಬೇಕಾದದ್ದು" ಎಂದರು. ಗೋಪಾಲನಿಗೆ ತಿಳಿಯಿತು. ಹಣ ಒದಗಿಸದೆ ಹೋದರೆ

ತಾನು ಅಲ್ಲಿಂದಲೇ ಪೋಲೀಸರ ವಶವಾಗಬೇಕು ಎಂದು. ಹಾಳಾದ ಮಾನ ಒಂದು ಇಲ್ಲದೆ ಇದ್ದಿದ್ದರೆ ಅವನು ಯಾವುದಕ್ಕೂ ಹೆದರುತ್ತಿರಲಿಲ್ಲ. ಈ ಬಾಳಿಗಿಂತ ಜೈಲಿನಲ್ಲಿ ಖೈದಿಯಾಗಿರುವುದು ಮೇಲು ಎಂದು ಅವನಿಗೆ ಎನ್ನಿಸಿತು. ಗಣಪತಿಯು ಟೆಲಿಫೋನಿನಲ್ಲಿ ಸುಂದರರಾಜನ್‌ರವನ್ನು ಮಾತನಾಡಿಸಿ ಫೋನನ್ನು ಗೋಪಾಲನ ಕೈಗೆ ಕೊಟ್ಟರು. ಗೋಪಾಲನಿಗೆ ಸಂಕೋಚದಿಂದ ಬಾಯಲ್ಲಿ ಮಾತೇ ಹೊರಡಲಿಲ್ಲ. ಅಂತೂ ಹೇಗೆ ಹೇಗೋ ಸುಂದರರಾಜನ್‌ಗೆ ತಿಳಿಸಿದನು. ಸುಂದರರಾಜನ್ ಟೆಲಿಫೋನ್ ಒಡೆಯುವಂತೆ ಗರ್ಜಿಸುತ್ತಾ "ಇದು ಹೀಗೇ ಆಗುತ್ತೆ ಅಂತ ನನಗೆ ಗೊತ್ತು. ನನ್ನ ಹತ್ತಿರ ಮೂರುಕಾಸು ಎಲ್ಲಿ ಬಂತು. ನನ್ನ ಸಂಸಾರ ಸಾಗಿಸಿಕೊಂಡು ಹೋಗುವುದೇ ನನಗೆ ಸಾಕಾಗಿದೆ. ನಾನು ನಿನಗೆ ಮಾಡುವಷ್ಟು ಮಾಡಿದೆ. ಇನ್ನು ನನ್ನಿಂದ ಸಾಧ್ಯವಿಲ್ಲ" ಎಂದರು. ಗಣಪತಿ, ಗೋಪಾಲನ ಕೈಯಿಂದ ಟೆಲಿಫೋನ್ ಕಿತ್ತುಕೊಂಡು "ನಿಮ್ಮ ಕರೆಂಟ್ ಅಕೌಂಟ್‌ನಲ್ಲಿ ಹದಿಮೂರು ಸಾವಿರ ರುಪಾಯಿ ಇದೆ. ಈಗ ನಿಮ್ಮ ಅಳಿಯನ ಮಾನ ಪ್ರಾಣ ಎರಡೂ ಹೋಗುತ್ತೆ. ಎರಡುಸಾವಿರ ರುಪಾಯಿ ಅಡ್ಜಸ್ಟ್ ಮಾಡುತ್ತೇನೆ ಪರ್ಮಿಶನ್ ಕೊಡಿ" ಎಂದರು. ಗಣಪತಿಗೆ, ಸುಂದರರಾಜ ಟೆಲಿಫೋನಿನಲ್ಲಿ ಹಲ್ಲು ಕಡಿಯುತ್ತಿರುವುದು ಕೇಳಿಸಿತು. ಅವರು "ನನ್ನ ಕರೆಂಟ್ ಅಕೌಂಟ್ ನೀವು ಯಾಕೆ ನೋಡಿದಿರಿ. ನಿಮ್ಮ ಮ್ಯಾನೇಜರಿಗೆ ಕಂಪ್ಲೇಂಟ್ ಮಾಡುತ್ತೇನೆ. ಅಕೌಂಟನ್ನು ಬೇರೆ ಬ್ಯಾಂಕಿಗೆ ಬದಲಾಯಿಸುತ್ತೇನೆ" ಎಂದರು. ಗಣಪತಿಯು ಕೋಪದಿಂದ "ಎಲಾ ಪಿಶಾಚಿ" ಎಂದರು. ಅದನ್ನು ಕೇಳಿ ಸುಂದರರಾಜನ್ ಟೆಲಿಫೋನ್ 'ಡಿಸ್ ಕನೆಕ್ಟ್' ಮಾಡಿಬಿಟ್ಟರು.

ಗಂಟೆ ನಾಲ್ಕು ಆಗಿಹೋಯಿತು. ಗಣಪತಿ ಪದೇ ಪದೆ ಗಡಿಯಾರವನ್ನು ನೋಡುತ್ತಿದ್ದರು. ಬ್ಯಾಂಕಿನ ಉಳಿದ ಗುಮಾಸ್ತರೆಲ್ಲಾ ತಮ್ಮತಮ್ಮ ಲೆಕ್ಕಗಳಲ್ಲಿ ತೊಡಗಿದ್ದರು. ಗೋಪಾಲ ಟೆಲಿಫೋನಿನ ಕುರ್ಚಿಗೆ ಒರಗಿಕೊಂಡು, ಪ್ರಪಂಚದ ಜ್ಞಾನವೇ ಇಲ್ಲದೆ ಸಪ್ಪೆ ಮುಖ ಹಾಕಿಕೊಂಡಿದ್ದನು. ಅವನಿಗೆ ಎಲ್ಲಾ ಅರ್ಧ ನಿದ್ರೆಯಲ್ಲಿ ನಡೆಯುತ್ತಿರುವಂತೆ ತೋರಿತು. ಗಣಪತಿ ಟೆಲಿಫೋನ್ ಡೈರೆಕ್ಟರಿ ನೋಡಿಕೊಂಡು ಮತ್ತಾರನ್ನೋ ಟೆಲಿಫೋನಿನಲ್ಲಿ ಕರೆದರು. ಟೆಲಿಫೋನ್ ಬಾಯನ್ನು ಕೈಯಿಂದ ಮುಚ್ಚಿ ಗೋಪಾಲ್

ಇಂತಹ ವೇಳೆಗಳಲ್ಲಿ ಸಂಕೋಚಪಟ್ಟರೆ ನಡೆಯುವುದಿಲ್ಲ. ನಾವೆಲ್ಲಾ ಮಾಡಿರುವುದೇ ಇದು. ನಿಮ್ಮ ಹೆಂಡತಿ ಹತ್ತಿರ ಇರುವ ಜ್ಯುಯೆಲ್ಸ್ (ಒಡವೆಗಳನ್ನು) ಕೇಳಿ ಎಂದರು. ಗೋಪಾಲನನ್ನು ಚೇಳು ಕಡಿದಂತೆ ಆಯಿತು. ಅವನು ಎಚ್ಚೆತ್ತು "ಆದದ್ದಾಗಲಿ ನಿಮಗೆ ಕೈ ಮುಗಿಯುತ್ತೇನೆ.... ..." ಎಂದು ಮುಂದುವರಿಸುತ್ತಿರುವಾಗ ಗಣಪತಿಯು ಗೋಪಾಲನ ಕೈಗೆ ಟೆಲಿಫೋನ್ ಕೊಟ್ಟು "ಆ ಮಾತನ್ನು ಅದರೊಳಕ್ಕೆ ಹೇಳಿ ನನಗ್ಯಾಕೆ ಹೇಳುತ್ತೀರಿ" ಎಂದರು. ಗೋಪಾಲನು ಟೆಲಿಫೋನನ್ನು ಕೈಯ್ಯಲ್ಲಿ ಹಿಡಿದುಕೊಂಡು "ಯಾರು" ಎಂದನು. ವತ್ಸಲೆಯ ಧ್ವನಿಯಲ್ಲಿ ಪ್ರತ್ಯುತ್ತರ ಬಂತು. ಗೋಪಾಲನಿಂದ ಮಾತು ಹೊರಡಲಿಲ್ಲ. ಗಣಪತಿ ಗುದ್ದಿಗುದ್ದಿ ಒಂದೊಂದಾಗಿ ಹೇಳಿಸಿದನು. ವತ್ಸಲೆಗೆ, ಮಾತು ಪ್ರಾರಂಭಿಸಿದ ಕೂಡಲೇ ಪೂರ್ತಾ ತಿಳಿದು ಹೋಯಿತು. ಅವಳು ಗೋಪಾಲನಿಗೆ "ಇದೊಂದು ಬಾಕಿ ಇತ್ತು. ಇದೂ ಬಂತು. ಅಷ್ಟು ದಿನಗಳಿಂದ ಬೇರೆ ಸಂಸಾರ ಹೊಡೋಣ ಅಂತ ನೀವು ಹೇಳುತ್ತಿದ್ದುದು ಈ ಒಡವೆಗಳ ಆಸೆಯಿಂದಲೇ" ಎಂದು ನಮಗೆಲ್ಲಾ ಗೊತ್ತಿತ್ತು. "ನಮ್ಮ ಮಗನ್ನ ನೆನೆಸಿಕೊಳ್ಳಿ. ನನ್ನ ಕೈಲಿರೋದು ೪ ಸಾವಿರ ರೂಪಾಯಿ ಚಿನ್ನ. ಅದೂ ಹೋದರೆ ಮಾಡೋದೇನು ನಿಮಗೆ ಯಾವಾಗಲೂ ಇದರ ಮೇಲೇ ಜ್ಞಾನ" ಎಂದಳು. ಗೋಪಾಲನು ಸಿಟ್ಟಿನಿಂದ ಟೆಲಿಫೋನನ್ನು ಫಟ್ಟೆಂದು ಅದರ ಸ್ಟಾಂಡಿನ ಮೇಲೆ ಒಗೆದು "ಗಣಪತಿ ನಾನು ಯಾವುದಕ್ಕೂ ಸಿದ್ಧನಾಗಿದ್ದೇನೆ. ಮಾನ ಅಂತ ಹೆದರಿದೆ–ಭ್ರಷ್ಟನಾದ ನನಗೆ ಮಾನವೆಲ್ಲಿ ಬಂತು. ಮ್ಯಾನೇಜರಿಗೆ ತಿಳಿಸಿಬಿಡಿ" ಎಂದನು. ವತ್ಸಲೆಯ ಮಾತುಗಳನ್ನು ಕೇಳಿ ಗೋಪಾಲನಿಗೆ ಆಗಿದ್ದುದಕ್ಕಿಂತಲೂ ಗಣಪತಿಗೇ ಹೆಚ್ಚು ಆಶ್ಚರ್ಯವಾಯಿತು. ಗಣಪತಿಯು ಗೋಪಾಲ ಇಂತಹ ಸಂದರ್ಭಗಳಲ್ಲಿ ಎಲ್ಲರೂ ಕೈಬಿಡುತ್ತಾರೆ. ಸ್ವಂತ ತಂದೆ ತಾಯಿಗಳೂ ಹಣದ ವಿಷಯದಲ್ಲಿ ಬಹಳ ಹಿಡಿತವುಳ್ಳವರಾಗಿರುತ್ತಾರೆ. ನಾವು ಕೊನೆಯ ರಕ್ಷಣೆ ಎಂದು ಒಬ್ಬನನ್ನು ಇಟ್ಟಿದ್ದೇವೆ. ಅವನು ಸರಿಯಾದ ಜಾಮಾನು ಕೊಟ್ಟರೆ ಹಣ ಎಷ್ಟು ಬೇಕಾದರೂ ಕೊಡುತ್ತಾನೆ. ಅವನ ಗಿರಾಕಿಗಳೆಲ್ಲಾ ಸರ್ಕಾರಿ ಅಧಿಕಾರಿಗಳು, ತಿಂಗಳು ತಿಂಗಳು ಸಂಬಳ ಬರುವವರು ಇವರೇ. ಬಹಳ ಹೆಚ್ಚು ಬಡ್ಡಿ ಹಾಕುತ್ತಾನೆ. ಪ್ರತಿಯೊಂದು ಬ್ಯಾಂಕು

ಪ್ರತಿಯೊಂದು ಆಫೀಸುಗಳಲ್ಲಿಯೂ ನಮ್ಮಂತಹ ಕೆಲಸಗಾರರದೇ ಗುಟ್ಟಾದ ಒಂದು ಕೂಟ. ಒಬ್ಬರನ್ನೊಬ್ಬರು ಬಿಟ್ಟುಕೊಡುವುದಿಲ್ಲ. ಆದರೆ ಈ ಮಾರ್ವಾಡಿಗಳ ಹತ್ತಿರ ಒಂದು ಸಲ ಸಾಲ ತೆಗೆದುಕೊಂಡುಬಿಟ್ಟರೆ ಸತ್ತಂತೆ. ಎಷ್ಟು ವಾಪಸು ಕೊಟ್ಟರೂ ತೀರುವುದೇ ಇಲ್ಲ. ತಿಂಗಳು ತಿಂಗಳು ನೀವು ಕೊಡುತ್ತಿರುವವರೆಗೆ ಅವನು ನಿಮ್ಮನ್ನು ಮಾತನಾಡಿಸುವುದಿಲ್ಲ. ಅವನು ಕ್ರೂರಿ. ಆದರೆ ಎಂತಹ ಸಮಯದಲ್ಲಿಯೂ ನಿಮ್ಮನ್ನು ಆತುಕೊಳ್ಳುತ್ತಾನೆ. ತಂದೆ ತಾಯಿ ಹೆಂಡತಿ ಮಾವ ಸ್ನೇಹಿತ ಅಣ್ಣತಮ್ಮಂದಿರು ಎಲ್ಲರೂ ಕೈ ಬಿಟ್ಟರೂ ಇವನು ಬಿಡುವುದಿಲ್ಲ. ಅವನ ಹತ್ತಿರ ಆಡುವುದು ಹಾವಿನ ಹತ್ತಿರ ಆಡಿದಂತೆ. ಆದರೆ ಅವನು ನಿಜವಾದ ಹಾವು ; ಹಗ್ಗದಂತೆ ಕಾಣುವ ಹಾವಲ್ಲ. ೨೦೦೦ ಸಾವಿರ ರೂಪಾಯಿ ಅವನ ಹತ್ತಿರ ನೀವು ತೆಗೆದುಕೊಂಡರೆ ಸಾಯುವವರೆಗೆ ಅವನಿಗಾಗಿ ದುಡಿಯಬೇಕು. ಆದರೆ ಎಂತಹ ಸಮಯದಲ್ಲಿ ನಿಮ್ಮನ್ನು ಉಳಿಸುತ್ತಾನೆ ನೋಡಿ. ನಾವು ಸಾಯುವವರೆಗೆ ಅನೇಕರಿಗೆ ದುಡಿಯಬೇಕಾಗುತ್ತೆ. ಆದರೆ ಹೀಗೆ ಅದಕ್ಕೆ ಪ್ರತಿಮಾಡುವವರು ಸಿಕ್ಕುವುದು ಕಷ್ಟ. ನೀವು ಇನ್ನು ಸಂಸಾರ ಹೆಂಡತಿ ಮಕ್ಕಳು ಎಲ್ಲರ ಆಸೆಗಳನ್ನೂ ಬಿಡಬೇಕು. ಹಣ ಪೂರ್ತಾ ದೊರೆತರೆ ಕೊಟ್ಟು ಬಿಡುಗಡೆ ಹೊಂದಬಹುದು. ಆದರೆ ಇಂತಹ ವೇಳೆಯಲ್ಲಿ ಕೊಡದವರು ಇನ್ನು ಯಾವಾಗತಾನೆ ಕೊಡುತ್ತಾರೆ. ಈಗ ನೀವು ಹಣ ಕೊಡದಿದ್ದರೆ ಇನ್ನು ಮುಕ್ಕಾಲು ಗಂಟೆ ಒಳಗೆ ನೀವು ಪೋಲೀಸರ ವಶವಾಗಬೇಕಾಗುತ್ತೆ. ಮಾರವಾಡಿಗೆ ಹೇಳಿಕಳುಹಿಸಲೆ" ಎಂದರು. ಗೋಪಾಲನು "ಗಣಪತಿ ನನ್ನ ಜವಾಬ್ದಾರಿಯ ಮೇಲೆ ಯಾರೂ ಇಷ್ಟು ಹಣ ಕೊಡುವುದಿಲ್ಲ. ನಿಮ್ಮನ್ನು ಇದಕ್ಕೆ ಜಾಮೀನು ಮಾಡಿ ನಿಮ್ಮ ಮನಸ್ಸಿನ ನೆಮ್ಮದಿಯನ್ನು ಹಾಳುಮಾಡುವುದಿಲ್ಲ. ನಾನು ಹಣ ಹಿಂತಿರುಗಿಸುವುದು ಏನು ಗೊತ್ತು. ಈ ಲೋಕದಲ್ಲಿ ನನಗಾಗಿ ಒಂದು ಕಾಸು ಕೊಡುವವರೂ ಯಾರೂ ಇಲ್ಲ. ಏನಾದರೂ ಹೆಚ್ಚು ಕಡಿಮೆ ಸಂಭವಿಸಿದರೆ, ನನ್ನ ಕೆಲಸ ಹೋದರೆ, ನಾನು ಸತ್ತರೆ ಈ ಬೆಟ್ಟ ಹೇಗೆ ನಿಮ್ಮ ತಲೆ ಮೇಲೆ ಎಳೆಯಲಿ. ಆದದ್ದು ಆಗಲಿ. ಬೇಡ" ಎಂದನು. ಗಣಪತಿ "ನಿಮಗೆ ಬೇಜಾರಾಗಿರುವುದರಿಂದ ಹೀಗೆ ಹೇಳುತ್ತೀರಿ. ಮುಂದೆ ಒಂದು ದಿನ ನನ್ನ ಈ ಉಪದೇಶದ ಬೆಲೆ ನಿಮಗೆ ಅನುಭವವಾಗುವುದು. ಸಾಯುವವರೆಗೆ

ಒಳ್ಳೆಯದಾಗುವುದೆಂಬ ಆಸೆಯಿಂದ ಹೆಜ್ಜೆ ಹೆಜ್ಜೆಗೂ ಕಾದಬೇಕು. ಖಂಡಿತ ಸೋಲನ್ನು ಒಪ್ಪಿಕೊಳ್ಳಬಾರದು" ಎಂದು ಹೇಳಿ ಅದೇ ಟೆಲಿಫೋನಿನಲ್ಲಿ ಮಾರ್ವಾಡಿ ಸೇಟನೊಂದಿಗೆ ಮಾತನಾಡಿದರು. ಸೇಟಿನ ಗುಮಾಸ್ತ ತತ್‌ಕ್ಷಣ ಪ್ರೊನೋಟು ಫಾರಂ ಹಣ ತೆಗೆದುಕೊಂಡು ಬಂದನು. ಗೋಪಾಲನೂ ಗಣಪತಿಯೂ ಇಬ್ಬರೂ ಸೇರಿ ಬರೆದು ಕೊಟ್ಟು ಹಣವನ್ನು ಬ್ಯಾಂಕಿನ ಕ್ಯಾಷ್‌ಗೆ ಅಡ್ಜಸ್ಟ್ ಮಾಡಿದರು. ಗೋಪಾಲನು "ಈ ಮಾರ್ವಾಡಿ ನಿಜವಾಗಿಯೂ ಧೈರ್ಯಶಾಲಿ. ಗಣಪತಿಯು ಮಾರ್ವಾಡಿಗಿಂತ ಧೈರ್ಯಶಾಲಿ. ನನ್ನಂತಹ ಸುಧಾಮನಿಗೆ ಎರಡು ಸಾವಿರ ರೂಪಾಯಿ ಕೊಟ್ಟುಬಿಟ್ಟನಲ್ಲ. ಮಾರ್ವಾಡಿಗಳನ್ನು ಕಂಡರೆ ಹುಟ್ಟುದ್ವೇಷ ನನಗೆ ಈ ವಿಷಜಂತುಗಳನ್ನು ನಿರ್ನಾಮ ಮಾಡಬೇಕೆಂದು ಮಾಡಿದ್ದೆ. ಆದರೆ ಈಗ ಏನೂ ಹೊಳೆಯುವುದಿಲ್ಲ. ವಿಷಜಂತು ಯಾರೋ ಮಿತ್ರರು ಯಾರೊ ಒಂದು ತಿಳಿಯದುದಾಗಿದೆ ಎಂದು ಕೊಂಡನು ಗಣಪತಿಯು ಗೋಪಾಲನಿಗೆ ಧೈರ್ಯದ ಮಾತುಗಳನ್ನು ಹೇಳಿ "ನಾನೂ ಒಂದು ಸಲ ಹೀಗೆ ಸಾಲಮಾಡಬೇಕಾಯಿತು. ನಮ್ಮ ತಲೆಯಲ್ಲಿಯೂ ಕೈಯಲ್ಲಿಯೂ ತ್ರಾಣವಿರುವವರೆಗೆ ಇವಕ್ಕೆಲ್ಲಾ ಹೆದರಬಾರದು" ಎಂದರು. ಗೋಪಾಲನು ಗಣಪತಿಯನ್ನು ವಂದಿಸಿ ಆಫೀಸಿನಿಂದ ಹೊರಕ್ಕೆ ಹೊರಟನು.

## ೧೨ ಪುನರ್ಜನ್ಮ

ಸುಂದರರಾಜನ್ ಗೋಪಾಲನಿಗೆ ಆರೀತಿ ಪ್ರತ್ಯುತ್ತರ ಕೊಟ್ಟವರು ನೆಟ್ಟಗೆ ಮನೆಗೆ ಹೋದರು. ಮನೆಯಲ್ಲಿಯೂ, ಆ ವೇಳೆಗೆ ಗೋಪಾಲ ವತ್ಸಲೆಯೊಂದಿಗೆ ಮಾತನಾಡಿದ್ದುದರಿಂದ ವಿಚಾರ ಎಲ್ಲರಿಗೂ ತಿಳಿದಿದ್ದಿತು. ಮನೆಯಲ್ಲಿ ಭಾರಿ ಸಭೆಯೇ ಸೇರಿಬಿಟ್ಟಿತು. ಕೊನೆಗೆ ಅವರು ಈ ರೀತಿ ತೀರ್ಮಾನಕ್ಕೆ ಬಂದರು. "ಈಗ ಈ ಹಣ ಕೊಡದೆ ಇದ್ದರೆ, ಹೇಗಾದರೂ ಯಾರಿಂದಲಾದರೂ ತೆಗೆದುಕೊಳ್ಳುತ್ತಾನೆ. ಅಂತೂ ಪ್ರಶ್ನೆ ಆಗ ತೀರ್ಮಾನವಾಗುತ್ತೆ. ಯಾರೂ ಕೊಡಲಿಲ್ಲ, ಆಗೋದು ಆಗುತ್ತೆ. ಆ ಮೇಲೆ ಬಂದೇ ಬರ್‍ತಾನೆ. ಆಗಲೂ ನಾವೇ ಆತ್ಕೋಬೇಕು. ಈಗ ಈ ಹಣ ಕೊಡಬಾರದು. ಜೈಲು ಅನುಭವಿಸಿದರೂ ಅನುಭವಿಸಲಿ. ಈಗೇನು; ಹುಡುಗರೆಲ್ಲಾ ಕಾಂಗ್ರೆಸ್

ಹೆಸರಿನಲ್ಲಿ ಜೈಲಿಗೆ ಹೋಗುತ್ತಾರೆ. ಬುದ್ಧಿ ಬರುತ್ತೆ, ಮುಂದೆ ವಿವೇಕ ವಾಗಿರುತ್ತಾನೆ. ಆಗ ಏನುಬೇಕಾದರೂ ಮಾಡೋಣ" ಎಂದು. ಸುಂದರಮ್ಮ ನವರು ಸರಿ ಎಂದರು. ವತ್ಸಲೆ "ನಾನು ಆಗಲೇ ಜವಾಬು ಕೊಟ್ಟೆ" ಎಂದಳು. ಮನೆಯಲ್ಲಿ ಹುಡುಗರು ಹುಡುಗಿಯರು ಯಾರು ಇರಲಿಲ್ಲ. ಶಾರದೆಯು ಮಾತ್ರ ವತ್ಸಲೆಯ ಕೊಠಡಿಯಲ್ಲಿ ಮಂಚದ ಮೇಲೆ ಮಲಗಿದ್ದಳು. ಅವಳಿಗೆ ಈ ಎಲ್ಲಾ ಮಾತುಗಳೂ ಕೇಳಿಸಿದುವು. ಶಾರದೆ ಮದುವೆಗೆ ಲಾಯಕ್ಕಾಗಿದ್ದ ಹುಡುಗಿ, ಒಳ್ಳೆ ಉತ್ಸಾಹಿ. ಅವಳು "ವತ್ಸಲೆ, ಇಂತಹ ಸಮಯದಲ್ಲಿ ಹೀಗೆ ಪರೀಕ್ಷಿಸಬಾರದು. ಭಾವ ಪಾಪ ಎಷ್ಟು ಕಷ್ಟಪಡಬೇಕೊ, ಎಷ್ಟು ಸಾಧು. ನೀನು ಹೇಳಿದ ಹಾಗೆ ಕೇಳ್ತಾನೆ. ಅವನಿಗೆ ಕಷ್ಟಬಂದಾಗ ನೀನು ಹೀಗೆ ಹೇಳುವುದು ಸರಿಯಲ್ಲ. ಕೋಪದಿಂದ ನಿನ್ನನ್ನು ಬಿಟ್ಟರೆ ನೀನು ಮಾಡೋ ದೇನು ನಿನಗೆ ಯಾವಾಗಲೂ ಒಡವೆಗಳ ದುರಾಶೆ. ಈಗಲೇ ಹೋಗಿ ಕೊಟ್ಟು ಬಾ" ಎಂದಳು. ವತ್ಸಲೆಗೆ ಯಾವಾಗಲೂ ಶಾರದೆಯ ಈ ತಲೆ ಹರಟೆ ಸೇರುತ್ತಿರಲಿಲ್ಲ. ತನ್ನ ಗಂಡನ ವಿಚಾರದಲ್ಲಿ ತಾನು ಸರಿಯಾಗಿ ನಡೆದುಕೊಳ್ಳುತ್ತಿಲ್ಲವೆಂಬುದು ಶಾರದೆಯ ಅಭಿಪ್ರಾಯವೆಂಬುದು ವತ್ಸಲೆಗೆ ಹಿಂದೆಯೇ ಗೊತ್ತಾಗಿದ್ದಿತು. ಅಂದಿನಿಂದ ಅವಳಿಗೆ ಶಾರದೆ ಮೇಲೆ ಸಿಟ್ಟು. ಈಗ ಶಾರದೆ ಹೇಳಿದುದನ್ನು ಕೇಳಿ ವತ್ಸಲೆ "ಬಾಯಿಮುಚ್ಚು ನೀನು ಬೇರೆ ವಿವೇಕ ಹೇಳೋದಕ್ಕೆ ಬಂದೆಯೋ" ಎಂದು ಗದರಿಸಿದಳು. ಸುಂದರರಾಜನ್‌ರು ವತ್ಸಲೆಯನ್ನು ನೋಡುತ್ತಾ "ನನ್ನ ಕೈಲಿ ಹಣ ಇಲ್ಲ. ನಿನಗೆ ನಾನು ಕೊಟ್ಟಿರುವ ಒಡವೆಗಳು ನಿನ್ನ ಸ್ವಂತ. ನೀನು ಏನುಬೇಕಾದರೂ ಮಾಡಿ ಕೊಳ್ಳಬಹುದು ನಿನ್ನ ಇಷ್ಟಕ್ಕೆ ನಾನು ವಿರೋಧನಾಗಿ ಬರುವುದಿಲ್ಲ. ಬೇಕಾ ದರೆ ನೀನು ಗೋಪಾಲನಿಗೆ ಕೊಡಬಹುದು" ಎಂದರು. ವತ್ಸಲೆ ತನ್ನ ಒಡವೆಗಳನ್ನು ಆಸೆಯಿಂದ ಮುಟ್ಟಿ ನೋಡಿಕೊಳ್ಳುತ್ತಾ "ಈಗ ಒಂದು ಜವಾಬ್ ಕೊಟ್ಟಿದ್ದೇನೆ. ಮತ್ತೆ ಕೇಳಿದರೆ ನೋಡೋಣ, ಮನೆಗೆ ಬರ್ತಾ ರಲ್ಲಾ" ಎಂದಳು.

ಸುಂದರರಾಜನ್ ತಮ್ಮ ಆಫೀಸಿಗೆ ವಾಪಾಸು ಹೋದರು. ಆವತ್ತು ಅವರು ಅಲ್ಲಿ ಸಾಯಂಕಾಲ ೭ ಗಂಟೆವರೆಗೆ ಕೆಲಸ ಮಾಡುತ್ತಿದ್ದರು. ಅವರ ಮನಸ್ಸು ಸಮಾಧಾನದಲ್ಲಿರಲಿಲ್ಲ. ತಾವು ಒಂದು ಪೆಚ್ಚು ಕೆಲಸ

ಮಾಡಿದಂತೆ ಅವರಿಗೆ ತೋರುತ್ತಿದ್ದಿತು. ಅವರು ಬ್ಯಾಂಕ್ ಮ್ಯಾನೇಜರಿಗೆ ಟೆಲಿಫೋನ್ ಮಾಡಿದರು. ಮ್ಯಾನೇಜರು ಆಗತಾನೆ ಆಫೀಸು ಕೆಲಸ ಮುಗಿಸಿಕೊಂಡು ಕಬ್ಬಿಣದ ಪೆಟ್ಟಿಗೆ ರಿಕಾರ್ಡು ಮೊದಲಾದುವುಗಳಿಗೆ ಪದ್ಧತಿಯಂತೆ ಬೀಗ ಸೀಲ್ ಹಾಕಿಸಿ, ಆಫೀಸಿನ ಮೇಲುಗಡೆಯೇ (ಮಹಡಿ ಮೇಲೆಯೇ ಇದ್ದ) ತಮ್ಮ ಮನೆಯಲ್ಲಿ ಕುಳಿತಿದ್ದರು. ಸುಂದರರಾಜನ್‌ರು "ನಮಸ್ಕಾರ ಏನು ಸಮಾಚಾರ ಯಾರೋ ಬ್ಯಾಂಕಿನಲ್ಲಿ ಕಳವು ಕ್ಯಾಷ್ ಹೊಡೆದುಕೊಂಡು ಹೋಗಿದ್ದಾರೆ ಎಂದರಲ್ಲ. ನಿಜವೇ" ಎಂದರು. ಮ್ಯಾನೇಜರು ನಗುತ್ತಾ "ಛೇ ಛೇ ನಿಮಗೆ ಯಾರೋ ತಪ್ಪು ತಿಳಿಸಿರಬೇಕು, ನಮ್ಮ ಬ್ಯಾಂಕಿನಲ್ಲಿ ಅಂತಹ ಪ್ರಸಂಗ ನಡೆಯುವುದೇ ಇಲ್ಲ" ಎಂದರು. ಸುಂದರರಾಜನ್‌ರು "ಹೊ, ನಾನು ಕೇಳಿದ್ದು ಮಿಸ್ಟೇಕ್" ಎಂದು ಹೇಳಿ ಟೆಲಿಫೋನ್ ಕೆಳಗಿಟ್ಟು ಸುಮ್ಮನಾದರು. "ವತ್ಸಲೆ ಏನು ಇವತ್ತಿನ ಮಗುವಲ್ಲ. ಅವಳ ಜವಾಬ್ದಾರಿ ಅವಳಿಗೆ ಗೊತ್ತಿರಬೇಕು. ಇವತ್ತೇನಾದರೂ ಹೆಚ್ಚುಕಡಿಮೆಯಾದರೆ ತಪ್ಪು ಅವಳ ತಲೆಗೆ ಕಟ್ಟಿದ್ದು. ತಮ್ಮ ಶಕ್ತಿ ಎಷ್ಟು ? ಹಗ್ಗ ಕೀಳದಂತೆ ಎಷ್ಟು ದೂರ ಎಳೆಯಬಹುದು ಎಂಬುದು ಈ ವಯಸ್ಸಿನ ಹೆಣ್ಣು ಗಂಡುಗಳಿಗೆ ತಿಳಿದಿರಬೇಕು" ಎಂದು ಯೋಚಿಸುತ್ತಾ ಕ್ಲಬ್‌ಗೆ ಹೋಗಿ ಅನಂತರ ಮನೆಗೆ ಹೋದರು.

ಆ ರಾತ್ರಿ ಗೋಪಾಲ ಮಾವನ ಮನೆಗೆ ಹೋಗಲಿಲ್ಲ. ಸುಂದರ ರಾಜನ್ ಮನೆಗೆ ಹೋಗಿ ಬ್ಯಾಂಕಿನಲ್ಲಿ ತಾವು ವಿಚಾರಿಸಿದುದನ್ನು ತಿಳಿಸಿದರು. ವತ್ಸಲೆಯು "ನಾನು ಮಾಡಿದ್ದೇ ಸರಿಯಾಯಿತು. ಹೇಗೋ ಎಲ್ಲಾ ಸರಿ ಮಾಡಿಕೊಂಡಿದ್ದಾರೆ. ಇದ್ದ ಒಡವೆ ಕೊಟ್ಟಿದ್ದರೆ ಅದೂ ಹೋಗುತ್ತಿತ್ತು" ಎಂದಳು. ಸುಮಾರು ಹತ್ತು ಗಂಟೆವರೆಗೆ ಗೋಪಾಲ ಬರದೇ ಇರಲು ಸುಂದರಮ್ಮ ಅವರ ಅಕ್ಕನ ಮನೆಗೆ ಹೋಗಿರಬಹುದು ಎಂದುಕೊಂಡು ಕಾರನ್ನು ಮಣಿಯ ಮನೆಗೆ ಕಳುಹಿಸಿದರು. ಗೋಪಾಲನು ಅಲ್ಲಿಗೆ ಹೋಗಿಲ್ಲ ಎಂದು ಡ್ರೈವರನು ಅರ್ಧ ಗಂಟೆಯೊಳಗಾಗಿ ವಾಪಾಸು ಬಂದನು. ಸುಂದರ ರಾಜನ್‌ರು "ಎರಡನೆಯ ಸಿನಿಮಾಕ್ಕೆ ಪದ್ಧತಿಯಂತೆ ಹೋಗಿದ್ದಾನೆ. ಅರ್ಧ ರಾತ್ರಿಗೆ ಬರುತ್ತಾನೆ ಮಲಗಿಕೊಳ್ಳಿ" ಎಂದರು. ಆ ರಾತ್ರಿ ಗೋಪಾಲನು ನಿಷಾದ್ ಬಾಗ್‌ನ ಒಂದು ಮರದ ಬೆಂಚಿನಮೇಲೆ ಮಲಗಿದ್ದನು.

ತಣ್ಣಗೆ ಗಾಳಿ ಬೀಸುತ್ತಿದ್ದುದರಿಂದ ನಿದ್ರೆ ಬರಲಿಲ್ಲ. ವಿಶಾಲವಾದ ಈ ಜಗತ್ತಿನಲ್ಲಿ ಅವನಿಗೆ ಬೇಕಾದುದು ಏನೂ ಇದ್ದಂತೆ ತೋರಲಿಲ್ಲ. ತಾನು ಒಬ್ಬ ಅನಾಥ ಎಂಬ ಭಾವ ಅವನಿಗೆ ಬಂದಿತು. 'ನನ್ನಿಂದ ಯಾರಿಗೆ ತಾನೆ ಏನು ಪ್ರಯೋಜನ. ನನ್ನ ಆವಶ್ಯಕತೆ ಕೊನೆಯ ಪಕ್ಷ ಒಂದು ಪ್ರಾಣಿಗಾದರೂ ಇದೆ ಎಂದುಕೊಂಡಿದ್ದೆ, ಅದೂ ಇಲ್ಲ. ನನಗೆ ನಾನೆ ಯಜಮಾನ ಸುಖವಾಗಿ ಪ್ರಾಣ ಬಿಟ್ಟುಬಿಟ್ಟರೆ ಕಷ್ಟಗಳೆಲ್ಲಾ ತೀರಿತು. ಆದರೆ ಗಣಪತಿ ಒಬ್ಬರು ಇದ್ದಾರೆ. ಹೇಗಾದರೂ ಮಾಡಿ ಅವರ ಜವಾಬ್ದಾರಿ ಈ ಸಾಲಕ್ಕೆ ಬಿಡಿಸಿ ಬಿಟ್ಟರೆ ನನ್ನ ಪ್ರಾಣ ನನ್ನದು; ಆಮೇಲೆ ಇಷ್ಟಬಂದಂತೆ ಮಾಡಬಹುದು ಎಂದು ಯೋಚಿಸುತ್ತಾ ರಾತ್ರಿಯನ್ನು ಕಳೆದನು ಬೆಳಗಾದ ಮೇಲೆ ಹೋಟಲಿನಲ್ಲಿ ಸ್ವಲ್ಪ ತಿಂಡಿ ತಿಂದು ಆಫೀಸಿಗೆ ಹೋಗಿ ತನ್ನ ಡ್ಯೂಟಿಯ ಮೇಲೆ ಹಾಜರಾದನು. ಅವನ ಸ್ವಾಭಾವಿಕವಾದ ಚಟುವಟಿಕೆ ಚುರುಕು ಹಿಂದಿರುಗಿತ್ತು. ಅವನಿಗೆ ಒಂದು ವಿಧವಾದ ಸನ್ಯಾಸಿಯ ಅನಾಸಕ್ತಿ ಕೆಲಸದಲ್ಲಿ ಉಂಟಾದುದರಿಂದ ಆ ಕೆಲಸವನ್ನು ಬಹಳ ಶ್ರದ್ಧೆಯಿಂದ ಮಾಡುತ್ತಿದ್ದನು. ಗಣಪತಿಯು ಸ್ವಲ್ಪ ಹೊತ್ತು ಅವನನ್ನು ನೋಡುತ್ತಿದ್ದು "ನೆನ್ನೆ ಇವನನ್ನು ಹಿಡಿದಿದ್ದ ರಾವು ಬಿಟ್ಟಿದೆ. ಇನ್ನು ಯೋಚನೆಯಿಲ್ಲ" ಎಂದುಕೊಂಡು ತಮ್ಮ ಕೆಲಸದಲ್ಲಿ ತೊಡಗಿದರು.

ಸಾಯಂಕಾಲ ಗೋಪಾಲ ೫॥ ಗಂಟೆಗೆ ಬ್ಯಾಂಕಿನಿಂದ ಹೊರಕ್ಕೆ ಬಂದನು. ಬಾಗಿಲಿನಲ್ಲಿ ಸುಂದರರಾಜರ ಗಾಡಿ ನಿಂತಿತ್ತು. ಗೋಪಾಲನನ್ನು ಕಂಡ ಕೂಡಲೆ ವತ್ಸಲೆ ಕಾರಿನಿಂದ ಕೆಳಕ್ಕೆ ಇಳಿದು ನಿಂತುಕೊಂಡಳು. ಯಾವತ್ತೂ ಕಾರಿನಿಂದ ಇಳಿಯದವಳು ಈವತ್ತು ಯಾಕೆ ಇಳಿಯುತ್ತಾಳೆ ಎಂದು ಗೋಪಾಲನಿಗೆ ಆಶ್ಚರ್ಯವಾಯಿತು. ಆದರೆ ಮರುಕ್ಷಣದಲ್ಲಿ ಕಾರಣ ತಿಳಿದು ಆಶ್ಚರ್ಯ ಮರೆಯಾಯಿತು. ವತ್ಸಲೆ ಮನಸ್ಸನ್ನು ಅಪಹರಿಸುವ ಮೇಘವರ್ಣದ ರೇಶ್ಮೆಯ ಸೀರೆ ಉಟ್ಟಿದ್ದಳು. ಗೋಪಾಲ ಯಾವಾಗಲೂ ಅವಳ "ಎತ್ತರವಾದ ನಿಲುವನ್ನು ನೋಡಿ ನನ್ನ ರಾಣಿ ನೋಡಿದರೇ ಭಯವಾಗುತ್ತೆ" ಎಂದು ಹಾಸ್ಯಮಾಡುತ್ತಿದ್ದನು. ತನ್ನ ಆಕೃತಿ ತನ್ನ ಎತ್ತರ ಗೋಪಾಲನ ಮಂಕು ಎಂಬುದು ವತ್ಸಲೆಗೂ ತಿಳಿದಿದ್ದಿತು. ಅವಳು ಯಾವಾಗ ಗೋಪಾಲನನ್ನು ಪ್ರಸನ್ನಮಾಡಿಕೊಳ್ಳಬೇಕಾದರೂ ನಿಂತುಕೊಂಡು ದೇಹವನ್ನು ಹೊ

ಬಿಟ್ಟ ಲತೆಯಂತೆ ಬಳುಕಿಸುತ್ತಾ ಮಾತನಾಡುತ್ತಿದ್ದಳು. ಆದರೆ ಇವತ್ತು ಅವಳು ಗಾಡಿಯಿಂದ ಇಳಿದುದನ್ನು ನೋಡಿ ಗೋಪಾಲನಿಗೆ "ಅಬ್ಬ ಇವಳು ಎಷ್ಟು ಕುರೂಪಿಯಾಗಿದ್ದಾಳೆ ಒಳ್ಳೆ ಒಂಟೆ" ಎಂದು ತೋರಿತು. ಗೋಪಾಲ ಕಾರಿನ ಕಡೆ ಬರುವನೆಂದು ವತ್ಸಲೆ ನಿರೀಕ್ಷಿಸುತ್ತಾ ನಿಂತಳು. ಗೋಪಾಲ ಒಂದು ಸಲ ಅವಳ ಕಡೆ ನೋಡಿ ಸರ್ರನೆ ಮುಖವನ್ನು ಬೇರೆ ಕಡೆ ತಿರುಗಿಸಿ ಕೊಂಡು ಬ್ಯಾಂಕಿನ ಬಾಗಿಲನ್ನು ದಾಟಿ ರಸ್ತೆಗೆ ಹೋದನು. ವತ್ಸಲೆ ರಸ್ತೆಯಲ್ಲಾದರೂ ಅವನನ್ನು ಹಿಡಿಯೋಣ ಎಂದು ಮೋಟಾರನ್ನು ಬಿಡಿಸಿ ಕೊಂಡು ರಸ್ತೆಯಲ್ಲಿ ಬಂದಳು. ಆದರೆ ಗೋಪಾಲ ಎಲ್ಲಿಯೂ ಕಾಣಲಿಲ್ಲ.

ಮರುದಿವಸ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಇತ್ತು. ಆವತ್ತು ಬ್ಯಾಂಕಿನ ಕೆಲವು ಕೆಲಸಗಾರರ ಸಂಬಳ ಅಲೋಯನ್ಸ್ ಹೆಚ್ಚಿಸುವ ವಿಚಾರ ಚರ್ಚೆ ಬಂತು. ಉಳಿದವರ ಜತೆಯಲ್ಲಿ ಗೋಪಾಲನ ಹೆಸರನ್ನೂ ಮ್ಯಾನೇ ಜರು ಸಿಫಾರಸು ಮಾಡಿದರು. ಡೈರೆಕ್ಟರುಗಳು ಗೋಪಾಲನಿಗೆ ಹತ್ತು ರೂಪಾಯಿ ಸಂಬಳ ಏರಿಸಿದರು. ಗೋಪಾಲನು ಸುಬ್ಬಯ್ಯ ರೋಡಿನ ಒಂದು ಸಣ್ಣ ಹೊಟೇಲಿನಲ್ಲಿ ಇಳಿದುಕೊಂಡನು. ಊಟ ತಿಂಡಿ ರೂಮು ಬಾಡಿಗೆ ಎಲ್ಲಾ ಸೇರಿ ಇಪ್ಪತ್ತು ರೂಪಾಯಿ ಗೊತ್ತುಮಾಡಿದನು. ಪ್ರತಿ ತಿಂಗಳೂ ಒಂದನೆಯ ತಾರೀಖು ಗಣಪತಿಗೇ ೪೦ ರುಪಾಯಿ ಕೊಟ್ಟು ಮಾರವಾಡಿ ಸೇಟ್‌ಗೆ ತೀರಿಸುತ್ತಿದ್ದನು. ಸುಂದರರಾಜನ್‌ರು ಬ್ಯಾಂಕಿನಲ್ಲಿ ಗೋಪಾಲ ಕೆಲಸಮಾಡುತ್ತಿದ್ದಾನೆ ಎಂಬುದು ತಿಳಿದ ಮೇಲೆ "ಇರಲಿ ನಿಧಾನವಾಗಿ ಸರಿಹೋಗುತ್ತೆ" ಎಂದು ಸುಮ್ಮನಾದರು. ವತ್ಸಲೆಯು ಗೋಪಾಲನ ಮೇಲಿನ ಕೋಪವನ್ನು ತನ್ನಲ್ಲಿ ತಾನು ನುಂಗಿಕೊಂಡು ಸುಮ್ಮನೆ ಇದ್ದಳು.

ಸುಂದರರಾಜನ್‌ರ ಕಾರು ಮಣಿಯ ಮನೆಗೆ ಗೋಪಾಲನನ್ನು ಹುಡುಕಿ ಕೊಂಡು ಹೋದ ದಿನವೇ ಮಣಿಗೆ ಅಳಿಯನಿಗೂ ಮಾವನಿಗೂ ಏನೋ ಮಾತು ನಡೆದಿದೆ ಎಂದು ತಿಳಿಯಿತು. ಮರುದಿವಸವೇ ಮಣಿಯ ಗಂಡ ಬ್ಯಾಂಕಿಗೆ ಬಂದು ಗೋಪಾಲನನ್ನು "ಬಾ ಮನೆಯಲ್ಲಿ ಇರು" ಎಂದು ಬಲಾ ತ್ಕರಿಸಿದನು. ಗೋಪಾಲ ಒಪ್ಪಲಿಲ್ಲ. ಹೋಟಲಿನ ರೂಮಿನಲ್ಲಿ ಇರುತ್ತಿದ್ದನು. ಆದರೆ ಭಾವ ಪ್ರತಿದಿನವೂ ಬರುವುದಕ್ಕೆ ಪ್ರಾರಂಭಿಸಿದನು. ಕೊನೆಗೆ "ನೀನು ನನ್ನ ಮನೆಯಲ್ಲಿ ಇರುವುದಕ್ಕೆ ಸಂಕೋಚಪಡಬೇಡ. ಬೇಕಾದರೆ

ಹೋಟಲಿಗೆ ಕೊಡುವ ರೂಪಾಯಿ ನನಗೆ ಕೊಡು ನಿನ್ನ ಮನಸ್ಸಿಗೂ ನಿರಾಳವಾಗುತ್ತೆ. ಮನೆ ಮಕ್ಕಳಿಗೂ ಸ್ವಲ್ಪ ಪಾಠ ಹೇಳಬಹುದು" ಎಂದನು. ಕೊನೆಯಲ್ಲಿ ಗೋಪಾಲ ಒಪ್ಪಿ ಮಣಿಯ ಮನೆಗೆ ಬಂದನು. ತಿಂಗಳಿಗೆ ೧೫ ರುಪಾಯಿ, ಸಂಬಳದಿಂದ ಕೊಡುತ್ತಿದ್ದನು.

ಹೀಗೆ ೮ ತಿಂಗಳು ಕಳೆದುಹೋಯಿತು. ಗೋಪಾಲನ ಮಗ ಶಾಮುಗೆನಿ ವರ್ಷದ ಹೆಚ್ಚು. ಗೋಪಾಲ ಅಕ್ಕನ ಮನೆಯಲ್ಲಿ ನಿಂತ ದಿನದಿಂದಲೂ ಅವ ನನ್ನು ಬಂದು ಕರೆದುಕೊಂಡು ಹೋಗಬೇಕು ಎಂದು ವತ್ಸಲೆಗೆ ಆಶೆಯಿತು. ಗಂಡ ಬಿಟ್ಟವಳು ಎಂಬ ಮಾತಿನಿಂದ ತನ್ನ ಯೋಗ್ಯತೆ ಸರೀಕರ ಎದುರಿ ನಲ್ಲಿ ಸ್ವಲ್ಪ ಕಡಿಮೆಯಾದಂತೆ ಎಂದು ಅವಳಿಗೆ ಮಬ್ಬುಮಬ್ಬಾಗಿ ಹೊಳೆ ಯಿತು. ಒಂದು ಕಾಸನ್ನೂ ಸಂಪಾದಿಸದಿದ್ದರೂ, ಗೋಪಾಲ ತನ್ನ ಮನೆ ಯಲ್ಲಿದ್ದಾಗ ತನಗೆ ದೊರೆಯುತ್ತಿದ್ದ ಗೌರವ ಈಗ ದೊರೆಯುತ್ತಿಲ್ಲ ಎಂದೂ ಒಂದೊಂದು ಸಲ ಅವಳಿಗೆ ಅನುಮಾನ ಬರುತ್ತಿದ್ದಿತು. ಆದರೆ ಮರು ಕ್ಷಣವೇ ಆ ಅನುಮಾನವನ್ನು ಅವಳು ದೂರಕ್ಕೆ ತಳ್ಳಿ "ಛೇ ಹಾಗೆ ಇಲ್ಲ. ಈ ಮನೆಗೆ ನನ್ನಿಂದ ಅವರೇ ಹೊರತು ಅವರಿಂದ ನಾನಲ್ಲ" ಎಂದು ಮನ ಸ್ಸನ್ನು ಬಲಪಡಿಸಿಕೊಳ್ಳುವಳು. ಎರಡುಮೂರು ಸಲ ಗೋಪಾಲನನ್ನು ಹೋಗಿ ಕರೆಯೋಣ ಎನ್ನಿಸಿತು. ಒಂದು ದಿನ ಚೆನ್ನಾಗಿ ಅಲಂಕರಿಸಿ ಕೊಂಡು (ರಜಾ) ಕಾರಿನಲ್ಲಿ ಕುಳಿತುಕೊಂಡು ಮಣಿಯ ಮನೆಗೆ ಹೊರಟಳು. ಆದರೆ ಅರ್ಧ ದಾರಿ ಹೋದಮೇಲೆ, ಮಣಿಯ ಕೋಪದ ಮುಖವನ್ನು ನೆನಸಿಕೊಂಡು ಅವಳಿಗೆ ಮುಂದೆಹೋಗಲು ಇಷ್ಟವಾಗಲಿಲ್ಲ. ಅಲ್ಲದೆ ಅವರು ಒಬ್ಬರೇ ಇದ್ದರೆ ನನಗೆ ಇಷ್ಟಬಂದಂತೆ ಬಗ್ಗಿಸಬಹುದು. ಅತ್ತು ನಕ್ಕೂ ಬೇಕಾದ ಬಿನ್ನಾಣ ತೋರಿಸಿ ಕರೆದುಕೊಂಡು. ಬರಬಹುದು. ಆದರೆ ಆ ನಾದಿನಿ ಎದುರಿಗೆ....ಸಾಧ್ಯವಿಲ್ಲ" ಎಂದುಕೊಂಡು ಹಿಂದಿರುಗಿ ಹೋಗಿ ಬಿಟ್ಟಳು. "ಇದೊಂದು ಸಲ ಅವರು ಬಂದುಬಿಟ್ಟರೆ ಸಾಕು. ಮುಂದೆ ಹೇಗೆ ನಡೆದುಕೊಳ್ಳಬೇಕು ಎಂಬುದು ತಿಳಿದುಹೋಯಿತು" ಎಂದುಕೊಳ್ಳು ವಳು. ಆದರೆ ಗೋಪಾಲ ಮಾವನ ಮನೆಯನ್ನೂ ಹೆಂಡತಿಯನ್ನೂ ಮಗ ನನ್ನೂ ಪೂರ್ಣವಾಗಿ ೬ ತಿಂಗಳು ಮರೆತೇ ಬಿಟ್ಟ. ವತ್ಸಲೆಯು ಮಗುವಿನ ವರ್ಷದ ಹೆಚ್ಚು ಹತ್ತಿರ ಬಂತು. ಹೇಗಾದರೂ ಆವತ್ತು ಮನೆಗೆ ಅವ

ರನ್ನು ಕರೆದುಕೊಂಡು ಬರದೆ ಬಿಡುವುದಿಲ್ಲ ಎಂದುಕೊಂಡು ಆ ದಿನವನ್ನೇ ಆಸೆಯಿಂದ ನಿರೀಕ್ಷಿಸುತ್ತಿದ್ದಳು.

ವತ್ಸಲೆ ಸುಂದರರಾಜನ್‌ರಿಗೆ "ನೋಡಿ ಅಪ್ಪಾ, ನಾಳೆ ಶಾಮುನ ವರ್ಷದ ಹೆಚ್ಚು. ಆವರನ್ನು ಕರೆದುಕೊಂಡು ಬರುತ್ತೇನೆ" ಎಂದಳು. ಸುಂದರರಾಜನ್‌ರು "ಹಾಗೆ ಮಾಡಮ್ಮ ಇದುವರೆಗೆ ಆದದ್ದಾಯಿತು. ಇನ್ನಾದರೂ ಸುಖವಾಗಿರೋಣ" ಎಂದರು. ಆ ರಾತ್ರಿ ಸುಮಾರು ೯ ಗಂಟೆ ಹೊತ್ತಿಗೆ ವತ್ಸಲೆಯೂ ಅವಳ ತಂಗಿ ರಮಾವು ಕಾರಿನಲ್ಲಿ ಕುಳಿತು ಕೊಂಡು ಮಣಿಯ ಮನೆಗೆ ಹೋದರು. ಮಾರನೆ ದಿವಸ ಊಟಕ್ಕೆ ಬರ ಬೇಕೆಂದು ಹೇಳಿ "ಗೋಪಾಲ ಎಲ್ಲಿ" ಎಂದು ಕೇಳಿದರು. ಮಣಿಯು "ಎಲ್ಲಿಹೋಗಿದಾನೊ ಯಾರು ಬಲ್ಲರು? ಒಂದು ದಿನ ಮನೆಗೆ ರಾತ್ರಿ ೧ ಗಂಟೆಗೆ ಬರುತ್ತಾನೆ ಒಂದು ದಿನ ಬರುವುದೇ ಇಲ್ಲ. ಊಟ ಮಾಡಿದ ದಿನ ಮಾಡ್ತಾನೆ, ಬಿಟ್ಟ ದಿನ ಬಿಡ್ತಾನೆ" ಎಂದಳು. ಮಣಿಯ ಮಾತಿನಲ್ಲಿ ಇದಕ್ಕೆಲ್ಲ ನೀನೇ ಕಾರಣ ಎಂದು ವತ್ಸಲೆಗೆ ಹೇಳುತ್ತಿದ್ದಂತೆ ತೋರಿತು. ವತ್ಸಲೆಗೆ ಅದು ತಿಳಿಯದಿರಲಿಲ್ಲ. ಅವಳು "ಅಮ್ಮಾ ನಾನು ಹತ್ತು ಗಂಟೆ ವೇಳೆಗೆ ಮತ್ತೆ ಬರುತ್ತೇನೆ" ಎಂದು ಹೇಳಿ ಮಾರ್ಕೆಟ್ಟಿನಿಂದ ಬೇಕಾದ ಸಾಮಾನುಗಳನ್ನು ಮನೆಗೆ ತೆಗೆದುಕೊಂಡು ಹೋಗಿ ಮತ್ತೆ ಹತ್ತುವರೆ ಗಂಟೆ ವೇಳೆಗೆ ಮಣಿಯ ಮನೆಗೆ ಬಂದಳು. ಮಣಿಯ ಮನೆಯವರು ಆಗತಾನೆ ಮಲಗಿದ್ದರು. "ಗೋಪಾಲನು ಇನ್ನೂ ಮನೆಗೆ ಬಂದಿಲ್ಲ" ಎಂದು ಮಣಿ ಎದ್ದು ಹೇಳಿದಳು. ವತ್ಸಲೆಯು "ಎರಡನೆಯ ಸಿನಿಮಾಕ್ಕೆ ಹೋಗಿರ ಬಹುದು. ಇಂತಹ ಸಿನಿಮಾಕ್ಕೆ ಹೋಗುತ್ತೇನೆ ಅಂತ ಹೇಳಿದರೆ?" ಎಂದಳು. ಮಣಿಗೆ ಕೋಪ ಬಂತು. ಅವಳು "ನಿನ್ನ ಸುಮಾನದ ಮಾತು ನಿನಗೆ. ಸಿನಿಮಾದ ಮುಖ ಅವ ನೋಡಿ ಆರು ತಿಂಗಳಾಯಿತು. ಆಫೀಸಿ ನಲ್ಲಿರುವಾಗ ಹೋಟಲು ಕಾಫಿ ಕುಡಿಯೋಕೆ ಅವನ ಜೇಬಿನಲ್ಲಿ ಒಂದು ಆಣೆ ಇಲ್ಲ........ಪಾಪ ನೀನು ದೊಡ್ಡ ಮನುಷ್ಯರ ಮಗಳು. ನಿನಗೆ ನಿದ್ರೆ ಕೆಟ್ಟರೆ ಆಗುವುದಿಲ್ಲ, ಹೋಗಿ ಮಲಗಿಕೋ" ಎಂದಳು. ವತ್ಸಲೆಗೆ ಮೊದಲೇ ಮಣಿಯ ಮೇಲಿದ್ದ ಕೋಪ ಮತ್ತಷ್ಟು ಹೆಚ್ಚಾಯಿತು. "ಅವರಿಗೆ ನನ್ನ ವಿಚಾರದಲ್ಲಿ ಮುಖ ಸ್ವಲ್ಪ ಕಪ್ಪಾಗಿರುವುದರಿಂದ ಇವಳಿಗೆ ಇಷ್ಟು ಜೋರಾಗಿ

ಮಾತನಾಡೋ ನಾಲಿಗೆ ಬಂದಿದೆ. ಇರಲಿ. ಅವರು ಇವತ್ತಲ್ಲ ನಾಳೆ ನನ್ನ ಕೈಯೊಳಗೆ ಬಂದೇ ಬರ್‍ತಾರೆ. ಆ ಮೇಲೆ ಇವರಿಗೆ ಬುದ್ಧಿ ಕಲಿಸುತ್ತೇನೆ" ಎಂದುಕೊಂಡಳು. ವತ್ಸಲೆ ಆ ರಾತ್ರಿ ಎಲ್ಲಾ ಸಿನಿಮಾಗಳಲ್ಲಿಯೂ ಹೋಗಿ ನೋಡಿದಳು. ಗೋಪಾಲ ಎಲ್ಲೂ ಇರಲಿಲ್ಲ. ಬೆಳಿಗ್ಗೆ ಮತ್ತೆ ಮಣಿಯ ಮನೆಗೆ ಹೋದಾಗ ಅವನು ಅಲ್ಲಿಯೂ ಬಂದಿರಲಿಲ್ಲ. ಮರುದಿನ ಭಾನುವಾರ ವಾದುದರಿಂದ ಬ್ಯಾಂಕಿಗೆ ರಜಾ ಇತ್ತು. ಮಧ್ಯಾಹ್ನ ಊಟಕ್ಕೆ ಜನರೆಲ್ಲ ಸೇರಿದ ಮೇಲೆ ವತ್ಸಲೆ ಮತ್ತೆ ಒಂದು ಸಲ ಕಾರನ್ನು ಕಳುಹಿಸಿದಳು. ಗೋಪಾಲ ಮನೆಗೆ ಬಂದಿರಲಿಲ್ಲ. ಮಣಿಯ ಮನೆಯವರು ಯಾರೂ ಸುಂದರರಾಜನ್‌ರ ಮನೆಗೆ ಊಟಕ್ಕೆ ಬರಲಿಲ್ಲ. ಗೋಪಾಲನಿಲ್ಲದೆ ಅವನ ಮಗನ ವರುಷದ ಹೆಚ್ಚು ನಡೆದುಹೋಯಿತು.

ಗೋಪಾಲ ನಿಜವಾಗಿಯೂ ಆ ದಿನ ಮೈಸೂರಿನಲ್ಲಿ ಇರಲಿಲ್ಲ. ಮಣಿ, ವತ್ಸಲೆಗೆ ಹೇಳಿದ್ದ ಮಾತುಗಳೆಲ್ಲಾ ನಿಜವಾಗಿದ್ದುವು. ಗೋಪಾಲ ತನ್ನ ಮಿತ್ರನೊಂದಿಗೆ ಶನಿವಾರ ಸಾಯಂಕಾಲ ಕನ್ನಂಬಾಡಿಗೆ ಹೋದವನು ಭಾನು ವಾರವೆಲ್ಲ ಅಲ್ಲಿ ಇದ್ದುಕೊಂಡು ಸೋಮವಾರ ಬೆಳಿಗ್ಗೆ ಮೈಸೂರಿಗೆ ಬಂದು ನೆಟ್ಟಗೆ ತನ್ನ ಆಫೀಸಿಗೆ ಹೋದನು.

ವತ್ಸಲೆಯು "ಇರಲಿ ಇವತ್ತಲ್ಲಾ ನಾಳೆ ಬರುತ್ತಾರೆ" ಎಂದುಕೊಂಡು ಸುಮ್ಮನಾದಳು.

ಬ್ಯಾಂಕಿನಲ್ಲಿ ಹಣ ಕಳೆದುಹೋಗಿ ಹೆಂಡತಿಯ ಹಿಡಿತದಿಂದ ಗೋಪಾಲನು ತಪ್ಪಿಸಿಕೊಂಡ ಅನಂತರ ಗೋಪಾಲನಿಗೆ ಇದ್ದಕ್ಕಿದಂತೆ ತನ್ನಲ್ಲಿ ಸುಪ್ತವಾಗಿದ್ದ ಸಂಗೀತ ವಿದ್ಯೆ ಚಿಗುರುತ್ತಿರುವುದು ಅನುಭವಕ್ಕೆ ಬಂದಿತು. ಅದರ ಜತೆಯಲ್ಲಿ ತನ್ನಲ್ಲಿ ಇದೆ ಎಂದು ಅವನು ಅದುವರೆಗೆ ತಿಳಿದುಕೊಳ್ಳದೆ ಇದ್ದ ಒಂದು ಶಕ್ತಿಯೂ ಪ್ರಕಾಶಕ್ಕೆ ಬಂತು. ಅದೇ ಗೋಪಾಲನ ಕಾವ್ಯಶಕ್ತಿ. ಗೋಪಾಲ ಕಾಲೇಜಿನಲ್ಲಿ ಓದುತ್ತಿರುವಾಗ ಅವನಿಗೆ ಕವಿತೆಗಳನ್ನು ಬರೆಯುವ ಸ್ಫೂರ್ತಿ ಇದ್ದು ಅವನು ಕಾಲೇಜು ತ್ರೈಮಾಸಿಕದಲ್ಲಿ ಕೆಲವು ಪದ್ಯಗಳನ್ನು ಪ್ರಕಟಿ ಸಿದ್ದನು. ಒಂದೆರಡು ಕತೆಗಳನ್ನೂ ಬರೆದಿದ್ದನು. ಈಚೆಗೆ ವಿವಾಹದ ನಂತರ ಕವಿತೆಯ ಚಾಪಲ್ಯ ಬಿಟ್ಟುಹೋಗಿತ್ತು. ಮದುವೆಯಾದ ಹೊಸದರಲ್ಲಿ ಗೋಪಾಲ "ಒಲಿದಿರುವ ಈ ಸರಸ್ವತಿಯೇ ಸಾಕು. ಆ ಸರಸ್ವತಿಯನ್ನು

ಬೇರೆ ಒಲಿಸಿಕೊಳ್ಳುವುದು ಬೇಡ" ಎಂದು ಸುಮ್ಮನಾದನು. ಆದರೆ ಜೀವನ ದಲ್ಲಿ ಇನ್ನೂ ಪ್ರಾರಂಭದಲ್ಲಿ ತಡವರಿಸಿಕೊಳ್ಳುವ ಅಂತಹ ಏಟು ಬಿದ್ದು ದೇಹದ ಸೌಂದರ್ಯಕ್ಕಿಂತಲೂ ಒಳಗಿನ ಗುಣದ ಸೌಂದರ್ಯ ಹೆಚ್ಚು ಎಂಬುದು ಅವನ ಮನಸ್ಸಿಗೆ ಬಂದ ಮೇಲೆ ಅವನ ಬುದ್ಧಿ ಯೋಚನಾಪರ ವಾಯಿತು; ಅಂತರ್ಮುಖವಾಯಿತು. ಜಗತ್ತು, ಸುಖದುಃಖ, ಬಾಳು, ಹೆಂಡತಿ, ನಮ್ಮ ದೇಶದ ಸ್ಥಿತಿ, ಬಡತನ ಇವುಗಳಗನ್ನು ಕುರಿತು ಹೆಚ್ಚು ಹೆಚ್ಚಾಗಿ ಯೋಚಿ ಸಿದಂತೆ ಅವು ಇನ್ನೂ ರಹಸ್ಯಗಳಾಗಿಯೇ ತೋರತೊಡಗಿದವು. ಈ ತನ್ನ ಮನಸ್ಸಿಗೆ ಬಂದ ವಿಧ ವಿಧಗಳಾದ ಭಾವಗಳನ್ನು ಅವನು ಸಣ್ಣ ಸಣ್ಣ ಕತೆಗಳ ರೂಪದಲ್ಲಿ ಬರೆಯತೊಡಗಿದನು. ಸ್ನೇಹಿತರೊಬ್ಬರು ನೋಡಿ ಇವು ನಮ್ಮ ಸಾಹಿತ್ಯದಲ್ಲಿ ಹೊಸ ಮಾದರಿ. ಅಭಿಪ್ರಾಯಗಳು ಬಹಳ ಕ್ರಾಂತಿಕಾರಕ; ಆದರೂ ಚಿಂತೆಯಿಲ್ಲ ಪ್ರಕಟಿಸಿ ಎಂದರು. ಗೋಪಾಲನು ಗ್ರಂಥವನ್ನು ಒಬ್ಬ ಪುಸ್ತಕ ವ್ಯಾಪಾರಿಗೆ ಕೊಟ್ಟನು. ಅವರೂ ಆ ಗ್ರಂಥದ ಧ್ವನಿ ನೋಡಿ ಸ್ವಲ್ಪ ಹೆದರಿ ಹೆದರಿಯೇ ಪ್ರಕಟಿಸಿದರು. ಪುಸ್ತಕ ಹೊರಬಿದ್ದ ದಿನವೇ ಗೋಪಾಲನ ಪ್ರಸಿದ್ಧಿ ನಾಡಿನಲ್ಲಿ ಹರಡಿತು. ಎಲ್ಲಾ ಪತ್ರಿಕೆಗಳೂ ಪುಸ್ತಕ ವನ್ನು ಬಹು ಚೆನ್ನಾಗಿ ವಿಮರ್ಶಿಸಿ ಪ್ರಶಂಸೆ ಮಾಡಿದುವು. ಗೋಪಾಲನಿಗೆ ದುಡ್ಡಿನ ಲಾಭವಾಗದಿದ್ದರೂ ಅವನು ಒಳ್ಳೆ ಪ್ರಬಲನಾದ ಗ್ರಂಥಕರ್ತ ಎಂಬ ಕೀರ್ತಿ ಎಲ್ಲೆಲ್ಲಿಯೂ ಹರಡಿತು. ಗೋಪಾಲನ ಗೌರವವೂ ಪ್ರತಿಷ್ಠೆಯೂ ಏರಿತು.

ಇನ್ನೂ ಆರು ತಿಂಗಳು ಕಳೆಯಿತು ಸುಂದರರಾಜನ್‌ರವರಿಗೆ ಕೆಲಸ ದಿಂದ ನಿವೃತ್ತಿಯಾಯಿತು. ಆದರೂ ಮಕ್ಕಳ ವಿದ್ಯಾಭ್ಯಾಸದ ದೃಷ್ಟಿಯಿಂದ ಅವರು ಮೈಸೂರಿನಲ್ಲಿಯೇ ನಿಂತರು. ಶಾರದೆಗೆ ವಯಸ್ಸು ಹದಿನಾರಕ್ಕಿಂತ ಹೆಚ್ಚಾಗುತ್ತಿದ್ದರೂ ಇನ್ನೂ ಮದುವೆಯಾಗಿರಲಿಲ್ಲ. ಕನ್ಯೆಯನ್ನು ನೋಡುವು ದಕ್ಕೆ ಬಂದವರು ಮದುವೆಗೆ ಒಪ್ಪದಿರಲು ಇತರ ಕಾರಣಗಳ ಪೈಕಿ ವತ್ಸಲೆ ಗಂಡನನ್ನು ಬಿಟ್ಟಿರುವುದನ್ನೂ ಒಂದು ಕಾರಣವಾಗಿ ಹೇಳಿದರು. ಸುಂದರ ರಾಜನ್ ಸುಂದರಮ್ಮ ಇಬ್ಬರಿಗೂ ವತ್ಸಲೆಯ ಮೇಲೆ ಸ್ವಲ್ಪ ಅಸಮಾಧಾನ ವುಂಟಾಯಿತು. ಅವಳ ತಂಗಿಯರು ವತ್ಸಲೆ ಒಂದು ಮಾತು ಹೆಚ್ಚಾಗಿ ಹೇಳಿದರೂ "ಸಾಕು ಮುಚ್ಚು, ಹೀಗೆ ತಲೆಹರಟೆ ಮಾಡೋ ಹೊತ್ತಿಗೇ

ರಾಜನಂತ ಗಂಡನ್ನ ಕಳ್ಕೊಂಡೆ" ಎನ್ನುತ್ತಿದ್ದರು. ವತ್ಸಲೆಗೆ ಎಲ್ಲರ ಮೇಲೂ ಕೋಪವುಂಟಾಯಿತು. ತನ್ನ ಮೇಲೂ ಕೋಪವುಂಟಾಯಿತು.

ಆ ಸಾಯಂಕಾಲ ವತ್ಸಲೆ ಶಾಮುನನ್ನು ಕರೆದುಕೊಂಡು ಮಣಿಯ ಮನೆಗೆ ಹೋದಳು. ಗೋಪಾಲ ಒಂದು ಕೊಠಡಿಯಲ್ಲಿ ಏನನ್ನೋ ಬರೆಯುತ್ತಾ ಕುಳಿತ್ತಿದ್ದನು. ವತ್ಸಲೆ ಮಗುವನ್ನು ಎತ್ತಿಕೊಂಡು ಒಳಕ್ಕೆ ಬಂದರೂ ಅವನು ಮಾತನಾಡದೆ ಮಗುವಿನ ಕಡೆಯೇ ನೋಡುತ್ತಾ ಸುಮ್ಮನೆ ಕುಳಿತನು. ಮಗುವನ್ನು ಕಂಡಕೂಡಲೆ ಅವನ ಕಣ್ಣಿನಲ್ಲಿ ಇದ್ದಕ್ಕಿದ್ದಂತೆ ಒಂದು ಹೊಸ ಬೆಳಕೂ, ಮುಖದಲ್ಲಿ ಪ್ರೇಮಕಾತರಗಳೂ ಉಂಟಾದುವು. ಆದರೆ ಮರುಕ್ಷಣದಲ್ಲಿಯೇ ಅವುಗಳನ್ನು ಅವನು ಅಲ್ಲೆ ಅಮುಕಿದನು. ಆ ಭಾವ ಅವನ ಮುಖದಲ್ಲಿ ಹೊಳೆದುದು ಒಂದೇ ಒಂದು ಗಳಿಗೆಯಾದರೂ ವತ್ಸಲೆಗೆ ಅದು ತಿಳಿಯದೆ ಹೋಗಲಿಲ್ಲ. ಆದರೆ ಅವಳು ಗೋಪಾಲನ ಹಿಂದಲ ಸ್ವಭಾವವನ್ನು ನೆನೆದು "ಅವರ ಕಣ್ಣಿನಲ್ಲಿ ಕಂಡ ಬೆಳಕು ನನಗಾಗಿಯೇ ಸುಮ್ಮನೆ ತೋರಿಕೆಗೆ ಔದಾಸೀನ್ಯದ ಮುಸುಕು ಹಾಕಿಕೊಂಡಿದ್ದಾರೆ" ಎಂದುಕೊಂಡಳು. ಗೋಪಾಲ ಮಾತನಾಡಿಸಬಹುದು. ಮಗುವನ್ನು ಎತ್ತಿಕೊಳ್ಳಬಹುದು ಎಂದು ವತ್ಸಲೆ ಸುಮಾರು ಹತ್ತು ನಿಮಿಷ ನಿರೀಕ್ಷಿಸಿದಳು. ಗೋಪಾಲ ಕಾಗದದ ಮೇಲೆ ಇಟ್ಟ ದೃಷ್ಟಿ ತೆಗೆಯಲಿಲ್ಲ. ಅವನ ಮುಖ ಸ್ವಲ್ಪ ಸುಸ್ತಿನಿಂದ ಬಾಡಿದ್ದರೂ ಅವನು ಒಳ್ಳೇ ಏಕಾಗ್ರತೆಯಿಂದ ತನ್ನ ಕೆಲಸದಲ್ಲಿ ತೊಡಗಿದ್ದನು. ವತ್ಸಲೆ "೬ ತಿಂಗಳ ಮೇಲೆ ಬಂದಿದ್ದೇನೆ. ಆದರೂ ಒಂದು ಸಲ ಮಾತಾಡಿಸಬೇಕು ಅಂತ ತೋರಲಿಲ್ಲ. ಈ ಹಾಳು ಬರವಣಿಗೆಗೆ ಬೆಂಕಿಹಾಕಿತು. ಏನು ಬರೆಯುತ್ತಾರೋ" ಎಂದುಕೊಂಡಳು. ಅವಳಿಗೆ ಇನ್ನು ಸಹಿಸುವುದಕ್ಕೇ ಆಗಲಿಲ್ಲಿ. "ಅದೇನು ಕೆತಕ್ತಾ ಇದೀರಿ. ನನ್ನ ಮಾತನಾಡಿಸಬೇಕು ಎನ್ನುವುದೂ ತಿಳಿಯಲುವುದಿಲ್ಲವೆ ?" ಎಂದಳು. ಅವಳ ಧ್ವನಿಯಲ್ಲಿ ಗೋಪಾಲನ ಬರವಣಿಗೆ ಕುರಿತು ತಿರಸ್ಕಾರ ತುಂಬಿತ್ತು. ಅದು ಗೋಪಾಲನಿಗೆ ಚೆನ್ನಾಗಿ ತಿಳಿಯಿತು. ಅವನು ಮನಸ್ಸಿನಲ್ಲಿ "ಇದು ನಿನಗೆ ತಿಳಿಯುವುದು ಕಷ್ಟ. ಆದರೂ ಮಾತನಾಡದೆ ಇದ್ದರೆ ಚೆನ್ನಾಗಿರುತ್ತದೆ" ಎಂದುಕೊಂಡನು. ವತ್ಸಲೆ ಕೋಪದಿಂದ "ಇದೆಲ್ಲಾ ಏನು ? ಈ ಪುಸ್ತಕ ಯಾರಿಗೆ ಬೇಕು. ಬನ್ನಿ ಹೋಗೋಣ.

ಸುಖವಾಗಿರೋಣ. ಈ ವಯಸ್ಸಿನಲ್ಲಿ ಹೀಗೆ ಯಾಕೆ ಗೋಳು ಹುಯ್ಕೊ ತೀರಿ" ಎಂದಳು. ಗೋಪಾಲ ಅದಕ್ಕೂ ಮಾತನಾಡಲಿಲ್ಲ. ವತ್ಸಲೆಯು "ನನಗೆ ನೀವು ಬೇಕು. ನಿಮಗೆ ನಾನು ಬೇಕು" ಎಂದಳು. ಗೋಪಾಲನು ತಲೆಎತ್ತಿ "ನಿನಗೆ ಬೇಕಾದುದು ನಾನಲ್ಲ" ಎಂದನು. ವತ್ಸಲೆಗೆ ನಿಜ ವಾಗಿಯೇ ಸ್ವಲ್ಪ ಗಾಬರಿಯಾಯಿತು. ಅವಳು ಕೋಪದಿಂದ ಸರಿ ಮತ್ತಾರು ಎಂದಳು. ಗೋಪಾಲನು ಪ್ರತ್ಯುತ್ತರ ಕೊಡಲಿಲ್ಲ. ಒಂದು ಸಲ ಅವಳನ್ನು ಆಪಾದಮಸ್ತಕ ನೋಡಿದನು.

ಜಯಾ ಕೊಠಡಿಯೊಳಕ್ಕೆ ಬಂದಳು. ವತ್ಸಲೆಯನ್ನೂ ಮಗುವನ್ನೂ ನೋಡಿ ಸಂತೋಷದಿಂದ ಶಾಮುನನ್ನು ಎತ್ತಿಕೊಂಡಳು. ವತ್ಸಲೆಯನ್ನು ಮಾತನಾಡಿಸಿ ಯೋಗಕ್ಷೇಮ ಕೇಳಿ ಗೋಪಾಲನನ್ನು ಕುರಿತು "ಗೋಪಾಲಣ್ಣ ರಾತ್ರಿ ಅವರು ನಿನ್ನ ಕತೆ ಓದ್ತಾ ಇದ್ದರು. ಅವರ ಪಾಡಿಗೆ ಅವರು ಓದ್ತಾ ಇದ್ರು. ನನ್ನ ಕಿವಿಗೆ ಬಿತ್ತು. ಕಣ್ಣಲ್ಲಿ ನೀರು ಬಂತು. ಕನಸಿನಲ್ಲೆಲ್ಲಾ ಇದೇ ಆಯಿತು." ಎಂದಳು. ಗೋಪಾಲ "ನಿಜವಾಗಿಯೂ" ಎಂದನು. ಜಯಾವು "ನಿಜವಲ್ಲದೆ ಸುಳ್ಳು ಬೇರೆಯೆ. ನಾನು ಅಳ್ತಾ ಇದ್ದದ್ದನ್ನು ನೋಡಿ ಅವರು ಅಯ್ಯೋ ಪೆಚ್ಚೆ. ಇದು ಕತೆ. ಯಾವ್ದೂ ನಡೆದದ್ದಲ್ಲ. ಆದರೆ ದುಃಖ ಅನುಭವಿಸಿದವರಿಂದ ಮಾತ್ರ ಇಂಥದ್ದನ್ನು ಬರೆಯಲು ಸಾಧ್ಯ ಎಂದರು" ಎಂದಳು. ಗೋಪಾಲನು "ರಘುರಾಮ ಓದ ಬೇಕು ಅಂತ ಕೊಟ್ಟೆ. ಅದು ನಿನ್ನ ಕಿವಿಗೆ ಬೀಳುತ್ತೆ ಅಂತ ತಿಳಿ ದಿರಲಿಲ್ಲ" ಎಂದನು. ಜಯಾವು "ಅದ್ಯಾಕೆ ನನ್ನ ಕಿವಿಗೆ ಬೀಳೋ ಕಾಗದ? ನನಗೇನು ಓದೋದಕ್ಕೆ ಬರೋಲ್ವೆ. ಲೋಕವೆಲ್ಲ ನಿನ್ನ ಪುಸ್ತಕ ಓದಿ ನಿನ್ನ ಹೆಸರು ಕೊಂಡಾಡ್ತಿದ್ರೆ ನಾವು ಮಾತ್ರ, ನಿನ್ನ ನೆಂಟರು ಅದೇನೂ ತಿಳಿಯದವರಂತೆ ಇರಬೇಕೆ?" ಎಂದಳು. ಗೋಪಾಲ ಮಾತನಾಡಲಿಲ್ಲ. ಮಗ್ಗುಲು ಮನೆಗೆ ಹೋಗಿದ್ದ ಮಣಿಯೂ ಆ ವೇಳೆಗೆ ಬಂದಳು. ಎಲ್ಲರೂ ಗೋಪಾಲನ ಕೊಟಡಿ ಬಿಟ್ಟು ಹೊರಕ್ಕೆ ಹೋದರು. ವತ್ಸಲೆಗೆ ಆ ದಿನ ಜಯಾವಿನ ಮೇಲೂ ಅಸಮಾಧಾನವಾಯಿತು. "ಕತೆ ಬರೆಯುವವರು ಅವರು. ಒಪ್ಪುವವಳು ಇವಳು. ಈ ಮಧ್ಯೆ ನನಗೆ ಜಾಗ ಎಲ್ಲಿ" ಎಂದು ಕೊಂಡಳು. ಜಯಾವಿಗೆ ವತ್ಸಲೆಯ ಅಸಮಾಧಾನ ತಿಳಿಯದಿರಲಿಲ್ಲ

ಅವಳು ಕೋಪದಿಂದ "ನಿನ್ನ ಗಂಡನ ಕತೆ ನಾವು ಒಪ್ಪಿ ಹೊಗಳಕೂಡದು. ಅದೂ ತಪ್ಪು ಅದೂ ಹೊಟ್ಟೆಕಿಚ್ಚು. ಗಂಡ ನಿನ್ನ ಆಸ್ತಿ. ಮತ್ತೊಬ್ಬರು ಅವನ ಹತ್ತಿರ ಮಾತನಾಡಿದರೂ ನಿನಗೆ ಸಹಿಸುವುದಿಲ್ಲ. ಇಂತ ನಿನ್ನ ಆಸ್ತಿನ ಬ್ಯಾಂಕಿನಲ್ಲಿ ಪೋಲೀಸಿನವರು ಅರೆಸ್ಟು ಮಾಡುವುದಕ್ಕೆ ಬಂದರೂ ಸುಮ್ಮನೆ ಇದ್ದೆ. ಗಂಡಸರ ಸ್ವಭಾವ ಚೆನ್ನಾಗಿ ತಿಳಿದುಕೋ. ತಮ್ಮ ಹೆಂಡತಿಯಲ್ಲಿ ಸಹಾನುಭೂತಿ ಸಿಗದಿದ್ದರೆ ಎಲ್ಲಿ ಸಿಗುತ್ತೊ ಅಲ್ಲಿ ತೆಗೆದು ಕೊಳ್ಳುತ್ತಾರೆ. ಈಗಲೂ ನಿನಗೆ ದಾರಿ ಹೇಳಿಕೊಡ್ತೇನೆ. ಜಂಭದಿಂದ ನಿನ್ನ ಕಣ್ಣು ಕುರುಡಾಗಿದ್ದುದರಿಂದ ಈವರೆಗೆ ನಿನಗೆ ತಿಳಿಯಲಿಲ್ಲ. ಮತ್ತಾರಾಗಿದ್ದರೂ ತಿಳಿದುಕೊಳ್ಳುತ್ತಿದ್ದರು. ಸುಮ್ಮನೆ ಇಲ್ಲಿ ಇದ್ದುಬಿಡು. ಎಲ್ಲಾ ಸರಿ ಹೋಗುತ್ತೆ" ಎಂದಳು. ವತ್ಸಲೆ "ಸಾಕು ನಿನ್ನ ಉಪದೇಶ ಗಂಡನ್ನ ಕೊಡು ಅಂತ ನಿನ್ನ ಕೇಳೋಕ್ಕೆ ಬಂದಿಲ್ಲ" ಎಂದು ಹೇಳಿ ಸರಸರನೆ ಹೋಗಿ ಮೋಟಾರಿನಲ್ಲಿ ಕುಳಿತುಕೊಂಡು ಮನೆಗೆ ಹೋದಳು.

ಮತ್ತೆ ಹತ್ತು ತಿಂಗಳು ಕಳೆದುಹೋಯಿತು. ಶಾಮುನಿಗೆ ಎರಡೂ ಕಾಲು ವರುಷವಾಯಿತು. ಗೋಪಾಲ ಒಂದೇ ಸಮನೆ ಮಾರ್ವಾಡಿಗೆ ದುಡ್ಡು ಕೊಡುತ್ತಲೇ ಇದ್ದನು. ಅದು ಅವನ ಜೀವಮಾನ ಕಾಲದಲ್ಲಿ ತೀರುವಂತೆ ಅವನಿಗೆ ತೋರಲಿಲ್ಲ. ಒಂದು ಸಲ ರಘುರಾಮನು "ನನ್ನ ಹತ್ತಿರ ಹಣ ತೆಗೆದುಕೊಂಡು ಮಾರವಾಡಿಗೆ ಕೊಟ್ಟುಬಿಡು. ನಿನಗೆ ಸಂಕೋಚವಾದರೆ ಅದೇ ರೀತಿ ನನಗೇ ಕೊಟ್ಟುಕೊಂಡು ತೀರಿಸು. ಇದರಿಂದ ನನಗೇನೂ ನಷ್ಟವಿಲ್ಲ. ನಿನ್ನ ಬ್ಯಾಂಕಿನಲ್ಲಿಯೇ ಇರುವ ನನ್ನ ಕರೆಂಟ್ ಅಕೌಂಟ್ ನೋಡಿದರೆ ನಿನಗೇ ಗೊತ್ತಾಗುತ್ತೆ. ಮಾರವಾಡಿ ಸಹವಾಸ ಕಷ್ಟ" ಎಂದನು. ಗೋಪಾಲನು ಒಪ್ಪಲಿಲ್ಲ. "ಒಂದು ಸಲ ಗಣಪತಿಯನ್ನು ಈಡುಮಾಡಿಯಾಯಿತು. ಮತ್ತೆ ನಿಮಗೆ ಯಾಕೆ ಕಷ್ಟಕೊಡಲಿ" ಎಂದುಬಿಟ್ಟ. ಸುಂದರರಾಜನ್ ತಮ್ಮ ಸ್ವಂತ ಜೋಡೀ ಗ್ರಾಮಕ್ಕೆ ಹೋಗಬೇಕೆಂದು ಯೋಚಿಸಿ ಪ್ರಯಾಣದ ತಾರೀಖನ್ನು ನಿಶ್ಚಯಿಸಿ ಇಟ್ಟರು. ವತ್ಸಲೆಯು ಯೋಚನೆ ಅವರು ಪೂರ್ತಾ ಬಿಟ್ಟಂತೆ ತೋರಿತು. ನಾನು ಇರುವವರೆಗೆ ನನ್ನ ಮನೆಯಲ್ಲಿ ಊಟಮಾಡಿಕೊಂಡಿರಲಿ. ಆ ಮೇಲೆ ಭಗವಂತನು ಮಾಡಿದಂತೆ ಆಗಲಿ ಎಂದುಬಿಟ್ಟರು. ವತ್ಸಲೆಯಲ್ಲಿ ಮನೆಯವರು ಯಾರಿಗೂ

ಗೌರವ ಆದರವಿರುವಂತೆ ಕಾಣಲಿಲ್ಲ. ವತ್ಸಲೆಗೆ ಈ ತಿರಸ್ಕಾರದ ಭಾವ ಹೊರುವುದು ಕಷ್ಟವಾಯಿತು. ಸ್ವಭಾವದಿಂದ ಗರ್ವಿಷ್ಟಳಾದ ಅವಳಿಗೆ, ಗೋಪಾಲ ಯಾವ ಕೆಲಸವನ್ನೂ ಮಾಡದೆ ಮನೆಯಲ್ಲಿದ್ದಾಗ ತನಗೆ ಇದ್ದ ಗೌರವ ಈಗ ಅವನು ಮನೆಬಿಟ್ಟು ಹೋದದರಿಂದ ಹೋದದನ್ನು ಕಂಡು ಆಶ್ಚರ್ಯವಾಯಿತು. "ತಾನು ಚಂದ್ರನಂತೆ. ಗೋಪಾಲನೇ ಸೂರ್ಯ. ಆ ಸೂರ್ಯನ ಪ್ರಕಾಶ ತನ್ನ ಮೇಲೆ ಬಿದ್ದು ತನಗೆ ಹೊಳಪು ಕೊಡುತ್ತದೆ. ಇದು ನನ್ನ ಸ್ವಂತ ಕಾಂತಿ ಅಂತ ಮೋಸ ಹೋದೆ. ಗಂಡ, ನಾನು ಹೇಳಿದ ಹಾಗೆ ಕೇಳಿಕೊಂಡು ಅವನನ್ನು ನಾನು ನನ್ನ ಕಿರುಬೆರಳಿನ ಸುತ್ತಾ ನನಗೆ ಇಷ್ಟಬಂದಂತೆ ಕುಣಿಸುತ್ತಿರುವಾಗ ಆ ವಸ್ತುವಿನ ನಿಜವಾದ ಯೋಗ್ಯತೆ ಅರಿಯದಾದೆ. ಕಪಿಯ ಕೈಯ್ಯಲ್ಲಿ ಹೂವಿನ ಹಾರದಂತೆ. ಅವರು ತಮ್ಮ ಹೃದಯವನ್ನೇ ತಂದು ನನಗೆ ಅರ್ಪಿಸಿದರು. ಅದನ್ನು ಕಾಲ ತಳದಲ್ಲಿ ಹಾಕಿ ತುಳಿದೆ. ನನ್ನ ಸುಖವೂ ಹೋಯಿತು. ಅವರ ಸುಖವೂ ಹೋಯಿತು. ಈಗ ನನ್ನನ್ನು ಕೇಳುವವರಿಲ್ಲ" ಎಂದುಕೊಂಡಳು. ಆದರೂ ಗರ್ವ ಅವಳನ್ನು ಬಿಡಲಿಲ್ಲ. "ಏನಾದರೂ ಮಾಡಿ ಇವರನ್ನು ಹಳ್ಳಿಗೆ ಕರೆದುಕೊಂಡುಹೋಗಿ ಬಿಡಬೇಕು. ಅಲ್ಲಿಯ ವಾತಾವರಣ ಶಾಂತಿಯಲ್ಲಿ ಮತ್ತೆ ಇವರ ಹೃದಯ ವನ್ನು ಗೆಲ್ಲಬೇಕು. ಅದರಲ್ಲಿ ನನಗೆ ಸಂಶಯವಿಲ್ಲ. ನಾಲ್ಕೇ ನಾಲ್ಕು ದಿನ ಅವರು ನನ್ನ ಕೈಗೆ ಸಿಕ್ಕಿದರೆ ಐದನೆಯ ದಿನ ಶರಣಾಗತರಾಗುವಂತೆ ಮಾಡು ತ್ತೇನೆ. ಆದರೆ ಈ ಮಣಿ ಜಯಾ ರಾಕ್ಷಸಿಯರು ಇರಬಾರದು" ಎಂದು ಕೊಂಡಳು. ಹಿಂದೆ ಮಲ್ಲಿಗೆಹಳ್ಳಿಗೆ ಅವಳೊಬ್ಬಳನ್ನೇ ಗಾಡಿಯಲ್ಲಿ ಕರೆದು ಕೊಂಡು ಹೋಗಬೇಕು ಎಂದು ಯೋಚಿಸಿದಾಗ ಗೋಪಾಲನಿಗೆ ಎಷ್ಟು ಕಾತುರ ಆಸೆಗಳಿದ್ದವೋ ಈಗ ಅವಳಿಗೆ ಅಷ್ಟೇ ಉಂಟಾಯಿತು. ಆದರೆ ಗೋಪಾಲನ ಆಗಿನ ಆತುರ ಅವಳಿಗೆ ತಿಳಿಯುಲಿಲ್ಲ.

ವತ್ಸಲೆ ಮಣಿಯ ಮನೆಗೆ ಬಂದಳು. ಗೋಪಾಲ ಕೊಠಡಿಯಲ್ಲಿ ಇದ್ದನು. ಅಂಗಳದಲ್ಲಿ ಜಯವೂ ಮಣಿಯೂ ಮಾತನಾಡುತ್ತಾ ಕುಳಿ ತಿದ್ದರು. ಜಯಾವಿನ ಕೈಯಲ್ಲಿ ಒಂದು ಪುಸ್ತಕವಿತ್ತು. ಅದು ಗೋಪಾಲ ಹೊಸದಾಗಿ ಬರೆದಿದ್ದುದು. ವತ್ಸಲೆ ಹೋಗಿ ಮಣಿಯ ಮುಂದೆ ಕುಳಿತು ಕೊಂಡಳು. ಜಯಾವನ್ನು "ಅದೇನು ಬುಕ್ಕು" ಎಂದು ಕೇಳಿದಳು.

ಜಯೂ ವತ್ಸಲೆಯ ಕೈಗೆ ಕೊಟ್ಟು "ಗೋಪಾಲಣ್ಣ ಬರೆದ ಹೊಸ ಪುಸ್ತಕ" ಎಂದಳು. ವತ್ಸಲೆ ಪುಸ್ತಕ ಕೈಗೆ ತೆಗೆದುಕೊಂಡು ನೋಡಿದಳು. ಅದರಲ್ಲಿ ಒಳಗಿನ ಪುಟದಲ್ಲಿ ಈ ಪುಸ್ತಕ ನನಗೆ ಈ ಲೋಕದಲ್ಲಿ ಉಳಿದಿರುವ ಒಬ್ಬಳೇ ಬಂಧುವೂ ಹಿತೈಷಿಯೂ ಆದ ಭಾರತಿಗೆ ಅರ್ಪಿಸಿದ್ದೇನೆ ಎಂದಿತ್ತು. ವತ್ಸಲೆ ಕೋಪದಿಂದ "ನೀನೆಯೊ ಭಾರತಿ ನನಗಿಂತ ನೀವು ಅವರಿಗೆ ಬಂಧುಗಳಾಗಿ ಬಿಟ್ಟಿರಲ್ಲವೆ ?" ಎಂದಳು. ಜಯುವು "ಅಯ್ಯೊ ಪೆಚ್ಚಿ ಭಾರತಿ ಎಂದರೆ ನಮ್ಮ ದೇಶ. ನಾವ್ಯಾರೂ ಅಲ್ಲ. ನಮ್ಮ ಮೇಲೆ ರೇಗಿ ಏನು ಪ್ರಯೋಜನ, ಗಂಡನನ್ನು ಆಳುವುದಕ್ಕೆ ಹೆಂಡತಿಗೆ ಬರದಿದ್ದರೆ ಇವೆಲ್ಲಾ ಗಂಡನ ತಪ್ಪುಗಳಾಗಿಯೇ ತೋರುತ್ತವೆ" ಎಂದಳು. ವತ್ಸಲೆ ನೆಟ್ಟಗೆ ಗೋಪಾಲನ ಕೊಠಡಿಗೆ ಹೋದಳು. "ತಂದೆ ಹಳ್ಳಿಗೆ ಹೋಗುತ್ತಾರೆ; ಖಂಡಿತ ನೀವೂ ಬರಬೇಕು ಅಂತ ಹೇಳಿಕಳುಹಿಸಿದ್ದಾರೆ. ಹೋಗಿ ಬರೋಣ ಬನ್ನಿ" ಎಂದಳು. ಗೋಪಾಲ ಮಾತ ನಾಡದೆ ತನ್ನ ಪಾಡಿಗೆ ತಾನು ಕುಳಿತಿದ್ದನು. ವತ್ಸಲೆ "ನಾಳೆ ಅವರೆಲ್ಲಾ ಹೋಗುತ್ತಾರೆ. ಅವರನ್ನು ಬಿಟ್ಟು ಬಿಟ್ಟು ಕಾರು ಮತ್ತೆ ಬರುತ್ತೆ. ನಾವಿಬ್ಬರೇ ಅದರಲ್ಲಿ ಹೋಗೋದು" ಎಂದಳು. ಗೋಪಾಲನ ಮುಖದಲ್ಲಿ ಇದ್ದಕ್ಕಿದಂತೆ ಸ್ವಲ್ಪ ಆಸೆ ತೋರಿತು. ವತ್ಸಲೆ "ಹಾಗೆ ಬನ್ನಿ" ಎಂದುಕೊಂಡಳು. ಆದರೆ ಆ ಆಸೆ ಸಾರ್ಥಕವಾಗಲಿಲ್ಲ. ಗೋಪಾಲ ಮೊದಲಿನಂತೆಯೇ ಔದಾಸೀನ್ಯ ಭಾವವನ್ನು ಹೊಂದಿದನು. ವತ್ಸಲೆ "ಹೋಗಿ ಒಂದು ತಿಂಗಳು ಇದ್ದು ನಿಮ್ಮ ಆರೋಗ್ಯನೂ ನೆಟ್ಟಗೆ ಮಾಡಿಕೊಂಡು ಬಂದು, ಒಂದು ಸಣ್ಣ ಮನೆ ಬಾಡಿಗೆ ತೆಗೆದುಕೊಂಡು ನಮ್ಮ ಪಾಡಿಗೆ ನಾವು ಇರೋಣ. ಇದು ನನಗೆ ಸಾಕಾಗಿದೆ" ಎಂದಳು. ಗೋಪಾಲ ಅದಕ್ಕೂ ಜವಾಬ್ ಕೊಡಲಿಲ್ಲ.

ವತ್ಸಲೆ ಮತ್ತೆ ಜಯೂವಿನ ಮನೆಗೆ ಹೋದಳು. ಜಯೂವಿಗೆ ವತ್ಸಲೆ ಗೋಪಾಲನಿಗೆ ಹೇಳಿದ ಮಾತುಗಳು ತಿಳಿಯುವು. ಆದರೂ ಅವಳು ತಾನು ಪದ್ಧತಿಯಂತೆ "ವತ್ಸಲೆ ನೀನು ಇಲ್ಲಿ ಇದ್ದು ಬಿಡು. ಖಂಡಿತ ಎಲ್ಲಾ ಸರಿಹೋಗುವುದು. ನಾವೂ ಮಣಿಯೂ ಯಾತ್ರೆಗೆ ಹೋಗಬೇಕೆಂದು ಮಾಡಿದ್ದೇವೆ. ಮನೆ ಖಾಲಿ ಇರುತ್ತೆ. ಯಾತ್ರೆಗೆ ಹೋದರೆ ಬರುವುದು ೨-೨॥ ತಿಂಗಳಾಗುತ್ತೆ. ನೀನೇನು ತಿಳಿಯದವಳಲ್ಲ. ೨-೨॥ ತಿಂಗಳಿನಲ್ಲಿ ಎಂತಹ ಹುಲಿ ನಿನ್ನ ಕೈಗೆ ಸಿಕ್ಕಿದರೂ ಇಲಿ ಮಾಡ್ತೀಯೆ; ಹಾ! ಹಾ!

ಕೋಪಿಸ್ಕೊಬೇಡ. ಬೈದೆ ಅಂತ ತಿಳ್ಕೊಬೇಡ. ನಾನೂ ಮಾಡ್ತೇನೆ. ಮುಖ್ಯ ನಾವು ಮನಸ್ಸು ಮಾಡಿದರೆ ಸಾಕು. ಆದರೆ ನಮಗೆ ವಿವೇಕವಿಲ್ಲ. ನಿನಗೆ ವಿವೇಕವಿಲ್ಲ. ಸುಮ್ಮನೆ ಎರಡು ವರ್ಷ ಕಷ್ಟಪಟ್ಟೆ" ಎಂದಳು. ವತ್ಸಲೆಯು "ಆ ಪುರಾಣ ನನಗೆ ಬೇಡ. ನಮ್ಮ ತಂದೆ ಹಳ್ಳಿಗೆ ಹೋಗುತ್ತಾರೆ ನಾನೂ ಹೋಗುತ್ತೇನೆ" ಎಂದಳು. ಜಯಾವು "ಈಗ ಹೋಗಬೇಡ. ಗೋಪಾಲನನ್ನು ಒಬ್ಬನ್ನೇ ಬಿಟ್ಟು ಹೋಗಬಾರದು. ಅವನನ್ನ ಯಾರಾದರೂ ಒಬ್ಬರು ನೋಡಿಕೋಬೇಕು. ನಾವು ಯಾತ್ರೆಯಿಂದ ಬಂದ ಮೇಲೆ ನೀನು ಹೋಗುವಿಯಂತೆ" ಎಂದಳು. ವತ್ಸಲೆಯು "ನಿನ್ನ ಮಧ್ಯಸ್ತಿಕೆ ನನಗೆ ಬೇಕಿಲ್ಲ. ನಾನು ಇರಬೇಕಾಗಿದ್ದರೆ ಅವರೇ ಹೇಳುತ್ತಿದ್ದರು" ಎಂದುಕೊಂಡು ಬಂದ ದಾರಿ ಹಿಡಿದು ಹೊರಟಳು.

ಸುಂದರರಾಜನ್‌ರು ಜೋಡಿಗ್ರಾಮಕ್ಕೆ ಹೋದರು. ತಮ್ಮ ಹಳೆಯ ಮನೆಯನ್ನು 'ರಿಪೇರಿ' ಮಾಡಿಸಿದರು. ಮೈಸೂರಿನಲ್ಲಿದ್ದಷ್ಟೇ ಜಬರ್ದಾಗಿ ಅಲ್ಲಿಯೂ ಇರತೊಡಗಿದರು. ಬಹು ಕಾಲ ಸರ್ವಿಸ್ ಮಾಡಿ ಅದರಲ್ಲಿಯೂ ಬೇಸರಿಕೆ ಹೊಂದಿ, ಸದ್ಯ ಈ ವಯಸ್ಸಿನಲ್ಲಿ ನನ್ನ ಪಾಡಿಗೆ ಶಾಂತಿಯಿಂದ ಇರೋಣ ಎಂದುಕೊಂಡು ದೇವರು ಧರ್ಮ ದೇವಸ್ಥಾನ ಪುರಾಣ ಹರಿಕತೆ ಇವುಗಳಲ್ಲಿ ತೊಡಗಿದರು. ಅವರಿಗೆ ತಮ್ಮ ಪೆನಶನ್ ತೆಗೆದುಕೊಂಡು ತಮ್ಮ ಪಾಡಿಗೆ ಇರುವುದರ ಹೊರತು ಮತ್ತೆ ಯಾವುದರಲ್ಲಿಯೂ ಉತ್ಸಾಹವಿರಲಿಲ್ಲ. ಶಾರದೆಗೆ ಅವರು ಮೈಸೂರಿನಲ್ಲಿರುವಾಗ ಮದುವೆಯಾಗಿತ್ತು. ಉಳಿದ ಇಬ್ಬರು ಹುಡುಗಿಯರ ಮದುವೆ ಯೋಚನೆ ಅವರು ಹಚ್ಚಿಕೊಳ್ಳಲಿಲ್ಲ. ದೇವರು ಮಾಡಿಸುತ್ತಾನೆ ಆಗುತ್ತೆ ಎಂದು ಮನಶ್ಶಾಂತಿಯಿಂದ ಇದ್ದರು. ಕೈಲಿ ಹರಿಯದೆ ವಯಸ್ಸಾಗಿ ರಿಟೈರ್ ಆದಮೇಲೆ ಇಂತಹ ವೈರಾಗ್ಯ ಬರುವುದು ಎಲ್ಲರಿಗೂ ಸ್ವಾಭಾವಿಕವಾದುದು.

ವತ್ಸಲೆ ಹಳ್ಳಿಗೆ ಹೋಗಿ ಒಂದು ತಿಂಗಳಾಯಿತು. ಅದು ವಸಂತ ಕಾಲ. ಪ್ರಕೃತಿ ಎಲ್ಲೆಲ್ಲೂ ಸಂತೋಷ ಸಂಭ್ರಮದಿಂದ ನಲಿದಾಡುತ್ತಿತ್ತು. ಸುಗ್ಗಿ ಆಗ ತಾನೆ ಕಳೆದಿದ್ದುದರಿಂದ ಹಳ್ಳಿಯ ರೈತರು ಒಳ್ಳೆ ಉತ್ಸಾಹದಿಂದ ಹಾಡುತ್ತಿದ್ದರು. ರಾತ್ರಿ ಮನೆಯಲ್ಲಿ ಕುಳಿತಿರುವಾಗ ವತ್ಸಲೆಗೆ ದೂರದಲ್ಲಿ ರೈತರು ಕಣಗಳಲ್ಲಿ ಹಾಡುತ್ತಿರುವುದೂ ಕೊಳಲೂದುತ್ತಿರುವುದೂ ಕೇಳುತ್ತಿರು

ತ್ತಿದ್ದಿತು. ಸಂಜೆಗಳಲ್ಲಿ ಅಂಗಳದಲ್ಲಿ ಅರಳಿದ್ದ ಜಾಜಿಯ ಹೂವುಗಳ ವಾಸನೆಯನ್ನು ಮಂದ ಮಾರುತ ಹೊತ್ತು ಕೊಂಡು ಬಂದು ಆಪ್ತಮಿತ್ರನಂತೆ ಅಪ್ಪುತಿತ್ತು. ಗಗನದಲ್ಲಿ ನಕ್ಷತ್ರಗಳು ಗುರುತಿದ್ದವರಂತೆ ಸ್ನೇಹದಿಂದ ಹೊಳೆಯುತ್ತಿದ್ದುವು. ಜಗತ್ತು ಪ್ರೇಮದಲ್ಲಿಯೂ ಸೇವೆಯಲ್ಲಿಯೂ ತ್ಯಾಗದಲ್ಲಿಯೂ ತೊಡಗಿದ್ದಂತೆ ವತ್ಸಲೆಗೆ ತೋರಿತು. ಆದರೆ ಅವಳಿಗೆ ಮಾತ್ರ ಸುಖ ಶಾಂತಿ ಒಂದೂ ಇರಲಿಲ್ಲ. ದಿನಸ ದಿವಸಕ್ಕೂ ಅವಳ ಬೇಜಾರು ಹೆಚ್ಚುತ್ತಾ ಬಂತು. ಶಾರದೆಯ ಗಂಡನಿಂದ ಮೂರು ದಿನಗಳಿಗೆ ಒಂದು ಕಾಗದದಂತೆ ಬರುತ್ತಿತ್ತು. ಶಾರದೆ ಜವಾಬ್ ಬರೆಯುವುದಕ್ಕೆ ಒಂದು ದಿವಸ ತೆಗೆದುಕೊಳ್ಳುತ್ತಿದ್ದಳು. ಸುಂದರಮ್ಮನವರು ಕೂಡ ಶಾರದೆಯನ್ನು ನಿನ್ನ ಗಂಡನಿಗೆ ಗಜಪಟ ಬರೆದು ಆಯಿತೆ ಎಂದು ಕೇಳುತ್ತಿದ್ದರು. ಶಾರದೆ ನಾಚಿಕೆಯಿಂದಲೂ ಸಂತೋಷದಿಂದಲೂ ತಲೆ ತಗ್ಗಿಸಿಕೊಂಡು ಓಡಿಬಿಡುತ್ತಿದ್ದಳು. ಶಾರದೆಯ ಈ ಸುಖ ನೋಡಿ ವತ್ಸಲೆಗೆ ಸಹಿಸುವುದಕ್ಕೆ ಆಗಲಿಲ್ಲ. "ಶಾರದೆಯ ಗಂಡ ಹಳ್ಳಿಯ ಜಮೀನ್‌ದಾರ. ಗೋಪಾಲನಂತಹ ವಿದ್ಯಾವಂತನಲ್ಲ. ಶಾರದೆ ತನ್ನಷ್ಟು ಚೆಲುವೆ ಅಲ್ಲ. ನನ್ನ ಕಾಲು ಬೆರಳಲ್ಲಿ ಇರುವ ಕಾಂತಿ ಅವಳ ಹಣೇಲಿಲ್ಲ. ಆದರೂ ಎಷ್ಟು ಮೆರೀತಾಳೆ" ಎಂದುಕೊಂಡಳು ವತ್ಸಲೆ. ಈ ಅಸೂಯೆಯನ್ನು ಒಳಗೆ ಇಟ್ಟುಕೊಳ್ಳಲು ವತ್ಸಲೆಯಿಂದ ಖಂಡಿತ ಸಾಧ್ಯವಾಗಲಿಲ್ಲ. ಮನೆಯಲ್ಲಿ ಅಡಿಗೆಯವನು ಇದ್ದರೂ ತಂದೆ ತಾಯಿಗಳು ವಯಸ್ಕರಾದುದರಿಂದ ಕೆಲಸದ ಬಹುಭಾಗ ವತ್ಸಲೆ ಮೇಲೆ ಬೀಳುತ್ತಿತ್ತು. ಮಗು ಶಾಮನ್ನ ಬೇರೆ ಆಗಾಗ ಸಮಾಧಾನ ಪಡಿಸಬೇಕಾಗಿತ್ತು. ಒಂದು ದಿನ, ಸುಂದರಮ್ಮನಿಗೆ ಎಣ್ಣೆನೀರು ಹಾಕಿ ವತ್ಸಲೆ ಸೋತಿದ್ದಳು. ಒಂದು ಕಡೆ ಶಾಮನು ಹೋ ಎಂದು ಅಳುತ್ತಿದ್ದನು. ಸುಂದರರಾಜನ್‌ರು ಸ್ನಾನದ ಮನೆಯಿಂದ ವತ್ಸಲೆ ಟವಲು ತತ್ತಾಮ್ಮಾ ಎಂದರು. ವತ್ಸಲೆಯು ಶಾಮನನ್ನು ಸಮಾಧಾನ ಪಡಿಸುತ್ತಾ "ಶಾರದಾ ಅಣ್ಣಾ ಟವಲಿಗೆ ಕೂಗ್ತಾ ಇದಾರೆ. ತೆಗೆದುಕೊಂಡು ಹೋಗಿ ಕೊಡು" ಎಂದಳು. ಶಾರದೆಗೆ ಆಗತಾನೆ ಗಂಡನ ಕಾಗದ ಬಂದಿತ್ತು. ಅವಳು ಅದನ್ನು ಬಿಚ್ಚಿ "ನನ್ನ ಚಿನ್ನ" ಎಂದಿದ್ದ ಮೊದಲನೆ ಮಾತುಗಳನ್ನು ನೋಡಿ ಮುಂದಲ ಒಂದು ಮಾತು ನೋಡಿ ಹೋಗೋಣ ಎಂದು ನಿಂತಳು. ವತ್ಸಲೆ ಕೋಪದಿಂದ "ನಿನಗೆ ಹಗಲು ರಾತ್ರಿ ಗಂಡನ ಕಾಗದ ಓದೋದೆ

ಆಯ್ತು. ಏನು ಮಹಾ ಬಿ. ಎ., ಬಿ. ಎಲ್. ನಿನ್ನ ಬಡಾಯಿಗೆ ಬೆಂಕಿ ಹಾಕಿತು" ಎಂದಳು. ಶಾರದೆಯು "ಬಿ. ಎ., ಬಿ. ಎಲ್. ಗಂಡನನ್ನ ಅಷ್ಟು ಚೆನ್ನಾಗಿ ಬಾಳಿಸಿದೆಯಲ್ಲ" ಎಂದಳು. ವತ್ಸಲೆಯ ಅಡಗಿದ್ದ ದುಃಖವೆಲ್ಲ ಹೊರಗೆ ಬಂತು. ಹೋ ಎಂದು ಕೂಗಾಡಿದಳು. ಸುಂದರಮ್ಮನವರೂ ಸುಂದರರಾಜನ್‌ರೂ ಬಂದು ಸಮಾಧಾನ ಮಾಡಿದರು. ಕೊನೆಯಲ್ಲಿ ಸುಂದರ ರಾಜನ್‌ರು "ಅಮ್ಮಾ ನೀವು ನಿತ್ಯಾ ಹೀಗೆ ಕಾದಾಡ್ತ ಇದ್ದೀರಿ. ಇನ್ನು ನಿಲ್ಲಿಸಿ ಬಿಡಿ. ನೋಡಿದವರು ನಗುತ್ತಾರೆ. ಶಾರದೆ ಮನೇಲಿ ಇನ್ನು ಎಷ್ಟು ದಿವಸ ಇರತಾಳೆ. ಇವತ್ತೋ ನಾಳೆಯೋ ಅವಳ ಗಂಡ ಬಂದು ಅವಳನ್ನ ಕರೆದುಕೊಂಡು ಹೋಗ್ತಾನೆ" ಎಂದರು. ವತ್ಸಲೆಯು "ಇವಳ್ಯಾಕೆ ನನ್ನ ಯಜಮಾನರ ಹೆಸರು ಎತ್ತಿ ನನ್ನನ್ನು ಹಾಸ್ಯಮಾಡಬೇಕು. ಅವರು ನನಗೆ ಕಾಗದ ಬರೆಯದೆ ಇದ್ದರೆ, ಬರೆದೇ ಇದ್ದರೆ ತಪ್ಪು ನನ್ನದೇ" ಎಂದಳು. ಶಾರದೆಯು "ಯಜಮಾನರು ಅಬ್ಬಾ. ಈಗ ಯಜಮಾನರಲ್ಲವೆ ?" ಎಂದಳು. ಸುಂದರರಾಜನ್‌ರು "ಅಮ್ಮಾ ಆದದ್ದು ಕಟ್ಟಿಕೊಂಡು ಏನು ಪ್ರಯೋಜನ. ಮುಖ್ಯ ತಪ್ಪು ನಿನ್ನದೆ. ಕಷ್ಟಕಾಲದಲ್ಲಿ ನೀನು ಗಂಡನಿಗೆ ಸಹಾಯಮಾಡದೆ ಹೋದೆ" ಎಂದರು. ವತ್ಸಲೆಗೆ ತನ್ನ ತಂದೆ ಹೀಗೆ ಹೇಳಿ ಯಾರೆಂದು ತಿಳಿದಿರಲಿಲ್ಲ. ಅವಳು "ಅಣ್ಣಾ ಆಗ ನೀವೇ ಸುಮ್ಮನೆ ಇದ್ದಿರಿ. ನಿಮ್ಮ ಮಾತಿನಂತೆ ನಡೆಯುತ್ತಿದ್ದೆ" ಎಂದಳು. ಸುಂದರರಾಜನ್‌ರು "ವತ್ಸಲೆ ನಾವು ಹೇಳಿದ್ದರೂ ನೀನು ನಡೆಯುತ್ತಿರಲಿಲ್ಲ. ನಿನ್ನ ಹಟಮಾರಿತನ ನಮಗೆ ಗೊತ್ತಿಲ್ಲವೆ? ನಿನಗೆ ವಯಸ್ಸು ಕಡಿಮೆ ಆಗಿರಲಿಲ್ಲ. ವಿದ್ಯೆ ಇಲ್ಲದೆ ಇಲ್ಲ. ಗೋಪಾಲ ನಿನ್ನನ್ನು ಕಂಡರೆ ಪ್ರೀತಿಸದೆ ಇರುತ್ತಿರಲಿಲ್ಲ. ಇಂತಹ ಸಮಯಗಳಲ್ಲಿ ನೀನು ಸ್ತ್ರೀ ಸಹಜ ಸ್ವಭಾವದಿಂದ ಗಂಡನನ್ನು ಹೇಗೆ ನಿನ್ನ ಸ್ವಾಧೀನದಲ್ಲಿ ಇಟ್ಟುಕೊಳ್ಳಬೇಕೆಂಬುದನ್ನು ಅರಿಯಬೇಕಾಗಿತ್ತು. ಬೇಕಾದ ಮಾಟ ಮಾಡಿ ಅಂತಹ ಉತ್ತಮವಾದ ಗಂಡನ್ನ ನಿನಗೆ ಕೊಟ್ಟೆ. ಅದನ್ನ ಸೆರಗಿನಲ್ಲಿ ಮುಚ್ಚಿಕೊಂಡು ನೀನು ಜೋಪಾನವಾಗಿ ಕಾಪಾಡಿಕೊಳ್ಳದೆ ಯಾವುದು ಯಾವುದನ್ನೋ ನೆಚ್ಚಿಕೊಂಡು ಅದನ್ನು ಬೀದಿಗೆ ಎಸೆದೆ. ಇನ್ನಾರೋ ಎತ್ತಿಕೊಂಡರು ಎಂದರು. ವತ್ಸಲೆಯ "ಇದೆಲ್ಲಾ ಆ ಹಾಳು ಒಡವೆಯಿಂದ ಆಯಿತು" ಎಂದಳು. ಸುಂದರರಾಜನ್‌ರು "ಒಡವೆ ಯಾಕೆ ಬಯ್ತೀಯ

ಅದನ್ನು ಉಪಯೋಗಿಸಿಕೊಳ್ಳೋಕೆ ನಿನಗೆ ತಿಳಿಯಲಿಲ್ಲ. ನಿನಗೆ ಸಮಯಕ್ಕೆ ಉಪಯೋಗಕ್ಕೆ ಬರಲಿ ಅಂತ ಅಲ್ಲವೇ ಆ ಒಡವೆ ನಾವು ಕೊಟ್ಟಿರುವುದು. ಅದನ್ನು ಯಾವ ಕಾಲದಲ್ಲಿ ಉಪಯೋಗಿಸಬೇಕು ಎಂಬುದು ನಿನಗೆ ತಿಳಿದಿರಬೇಕು. ತಿಳಿಯಲಿಲ್ಲ. ಗಂಡನನ್ನೂ ಇದನ್ನೂ ತೂಕಹಾಕಿದೆ. ಇದರ ಬೆಲೆಯೇ ಹೆಚ್ಚಾಯಿತು. ಹಣ ನಿನ್ನ ಹತ್ತಿರ ಇದ್ದು ಇಲ್ಲದಂತೆ ಆಯಿತು. ಈಗ ನೀನು ಅನುಭವಿಸಬೇಕು. ನಾವು ನೋಡಬೇಕು. ಲೋಕದಲ್ಲಿ ಗಂಡಸರು ಹೆಂಗಸರನ್ನು ಒಂದೊಂದೇ ಸಲ ಪರೀಕ್ಷಿಸುವುದು. ಆ ಪರೀಕ್ಷೆಯಲ್ಲಿ ತೇರ್ಗಡೆಯಾಗದಿದ್ದರೆ ಬಾಳು ಹಾಳಾಗುವುದು. ನಾನು ೯ ತಿಂಗಳಿನಿಂದ, ಗೋಪಾಲನ ತಪ್ಪು ಏನು ಎಂದು ಯೋಚಿಸಿದೆ. ಅವನ ಸುಖದುಃಖದಲ್ಲಿ ಒಂದಾಗಲು ನಿನಗೆ ಶಕ್ತಿಯಿಲ್ಲದುದರಿಂದ ನಿನ್ನನ್ನು ಅವನು ತ್ಯಜಿಸಿದನು. ಇನ್ನು ನೀನು ಹಿಂದಲಂತೆ ಅವನನ್ನು ನಿನ್ನ ರೂಪ ಯವ್ವನ ಥಳಕಿನಿಂದ ಮರುಳು ಮಾಡಲಾರೆ" ಎಂದರು. ವತ್ಸಲೆಯ ಕಣ್ಣುಗಳಲ್ಲಿ ನೀರು ಸುರಿಯಿತು. ಅವಳು "ಅಣ್ಣಾ ನೀನು ಹೇಳುವುದು ನಿಜ. ನನಗೆ ಯಾವುದು ಅಮೃತ ಯಾವುದು ವಿಷ ಎಂಬುದೂ ತಿಳಿಯದೆ ಹೋಯಿತು" ಎಂದಳು.

ಸುಂದರರಾಜನ್‌ರು ಹಳ್ಳಿಗೆ ಹೊರಟಾಗ ಅವರ ಜೊತೆಯಲ್ಲಿ ಬರದೆ ನಿಂತಿದ್ದ ಸೀತೆಯೂ ಅವಳ ಗಂಡ, ಮಕ್ಕಳೂ ಹಳ್ಳಿಗೆ ಬಂದು ಹಿರಿಯರನ್ನು ನೋಡಿಕೊಂಡು ಹೋದರು. ಶಾರದೆಯ ಗಂಡ ತಿಂಗಳಿಗೆ ಒಂದು ಸಲದಂತೆ ಬರುತ್ತಿದ್ದನು. ಬಂದಾಗಲೆಲ್ಲಾ ಹೆಂಡತಿಯೊಡನೆ ಈಗ ಇಂತಹ ಜಮೀನನ್ನು ಹೀಗೆ ಮಾಡಿಸುತ್ತೇನೆ; ಒಂದು ಎತ್ತು ಸತ್ತು ಹೋಯಿತು. ಬೇರೆ ಎತ್ತು ತೆಗೆದುಕೊಳ್ಳಲು ದುಡ್ಡಿಲ್ಲ. ಸಾಲ ಸಿಕ್ಕುತ್ತೆ ತೆಗೆದುಕೊಳ್ಳಲೇ" ಎನ್ನುವನು. "ಮನೆಯ ಒಂದು ಭಾಗ ಬಿದ್ದು ಹೋಗಿದೆ ರಿಪೇರಿ ಮಾಡಿಸಿ ಬಿಡುತ್ತೇನೆ. ನೀನು ಬರುವ ವೇಳೆಗೆ ಹೊಸ ಮನೆ ನಿನಗೆ" ಎನ್ನುವನು. ಇನ್ನೊಂದು ಸಲ ಬಂದಾಗ "೧೦೦ ಮಣ ಬೆಲ್ಲ ಕೊಂಡು ಇಟ್ಟಿದ್ದೆ. ಈಗ ಮಾರಿದರೆ ಮಣಕ್ಕೆ ಒಂದು ರೂಪಾಯಿ ಲಾಭ ಬರುತ್ತೆ. ಮಾರಿಬಿಟ್ಟು ಎತ್ತಿಗೆ ಮಾಡಿರುವ ಸಾಲ ತೀರಿಸಿಬಿಡಲೇ" ಎನ್ನುವನು. ಇದನ್ನೆಲ್ಲಾ ನೋಡಿ ವತ್ಸಲೆಗೆ "ಈ ಶಾರದ ನೋಡಿದರೆ ಕಪಿ ಹಾಗಿದೆ. ಈ ಗಂಡ ಎಲ್ಲಾದಕ್ಕೂ ಅವಳನ್ನ ಕೇಳ್ತಾನೆ. ಅವಳು ಇಟ್ಟಗೆರೆ

ವಿಧಾರೊಲ್ಲ" ಎಂದುಕೊಂಡಳು. "ಗಂಡನ್ನ ಸ್ವಾಧೀನದಲ್ಲಿ ಇಟ್ಟುಕೊಳ್ಳದ ಹೆಂಗಸು ಹೆಂಗಸೇ. ಅವರು ನನ್ನ ಬಿಟ್ಟು ಹೋದರು. ಅವರ ಜತೆಯಲ್ಲಿ ನನ್ನ ಎಲ್ಲಾ ವೈಭವವೂ ಹೋಯಿತು" ಎಂದು ಯೋಚನಾಪರಳಾದಳು ಹೀಗೆ ಮತ್ತೆ ೨ ತಿಂಗಳು ಕಳೆಯಿತು. ವತ್ಸಲೆ, ಗೋಪಾಲನಿಗೆ ನಾಲ್ಕು ಐದು ಕಾಗದ ಬರೆದಳು. ಒಂದಕ್ಕೂ ಜವಾಬ್ ಬರಲಿಲ್ಲ. ಇನ್ನು ಅವಳಿಂದ ಸಹಿಸುವುದು ಸಾಧ್ಯವಾಗಲಿಲ್ಲ. ಅವಳು ಒಂದು ಮಧ್ಯಾಹ್ನ ಸುಂದರರಾಜನ್ ರೊಂದಿಗೆ "ಅಣ್ಣಾ ನಾನು ನಾಳೆ ಬೆಳಿಗ್ಗೆ ಮೈಸೂರಿಗೆ ಹೋಗುತ್ತೇನೆ. ಶಾಮು ಅಣ್ಣ ಬೇಕು ಅಂತ ಮೊಂಡು ಹಿಡಿಯೋಕೆ ಶುರುಮಾಡಿದಾನೆ" ಎಂದಳು. ಸುಂದರರಾಜನ್‌ರು "ನಾನೂ ಜತೆಯಲ್ಲಿ ಬರಲೆ" ಎಂದರು. ವತ್ಸಲೆಯು "ಬೇಡ. ನನಗೆ ಯಾರ ಸಹಾಯವೂ ಬೇಡ. ನಾನೊಬ್ಬಳೇ ಶಾಮುನೊಡನೆ ಹೋಗುತ್ತೇನೆ" ಎಂದಳು. ಸುಂದರರಾಜನ್‌ರು "ಆಗಲಿ ಡ್ರೈವರಿಗೆ ಹೇಳುತ್ತೇನೆ" ಎಂದರು. ವತ್ಸಲೆಯು "ಡ್ರೈವರು ಬೇಡ. ನಾನು ರೈಲಿನಲ್ಲಿ ಹೋಗುತ್ತೇನೆ" ಎಂದಳು. ಸುಂದರರಾಜನ್‌ರು ಏನೂ ಮಾತನಾಡ ಲಿಲ್ಲ. ಅವರಿಗೆ ವಿಷಯ ತಿಳಿದಿತ್ತು. ಅವರು "ಅಮ್ಮಾ ಯಾವುದಕ್ಕೂ ನಾನು ಇದ್ದೇನೆ. ಅದನ್ನು ಮರೆಯಬೇಡ" ಎಂದರು.

ಮರುದಿವಸ ಬೆಳಿಗ್ಗೆ ವತ್ಸಲೆ ಮೈಸೂರಿಗೆ ಬಂದು ಮಣಿ ಜಯ ಅವರಿದ್ದ ಮನೆಗೆ ಹೋದಳು. ಜಯಾ ವಾಸವಾಗಿದ್ದ ದೊಡ್ಡಮನೆಯೂ ಮಣಿ ಇದ್ದ ಔಟ್ ಹೌಸೂ ಬೀಗಹಾಕಿದ್ದುವು. ಮಗ್ಗಲು ಮನೆಯವರನ್ನು ಕೇಳಿದು ದಕ್ಕೆ ಅವರು "ಗೊತ್ತಿಲ್ಲ" ಎಂದರು. ಮೈಸೂರು ಬೆಂಗಳೂರಲ್ಲಿ ಮನೆ ಕಂಡುಹಿಡಿಯುವುದು ಕಷ್ಟ. ವತ್ಸಲೆ ಸ್ಟೇಶನ್ನಿಂದ ಜಟಕಾದಲ್ಲಿ ಮಗುವಿನ ಜತೆಯಲ್ಲಿ ಬಂದಿದ್ದಳು. ಗೋಪಾಲ ಮನೆಯಲ್ಲಿದ್ದಾಗ ಹೋಗಬೇಕು ಎಂದು ಕೊಂಡು ಅವಳು ಭಾನುವಾರ ಬಂದಿದ್ದಳು. ಆದುದರಿಂದ ಅವಳು ಬ್ಯಾಂಕಿಗೆ ಹೋಗುವಂತೆ ಇರಲಿಲ್ಲ. ವತ್ಸಲೆ ಎರಡು ಮೂರು ಗಂಟೆ ಜಟ್ಕಾದಲ್ಲಿ ಸುತ್ತಿ ಯಾರು ಯಾರನ್ನೋ ಕೇಳಿ ಮಧ್ಯಾಹ್ನ ೨ ಗಂಟೆ ಬಿಸಿಲಿನಲ್ಲಿ ಬಾಡಿದ ಬಾಳೆ ಎಲೆಯಂತೆ ಸೊರಗಿ ಜಯಾವಿನ ಮನೆಯ ಮುಂದೆ ಗಾಡಿಯಿಂದ ಇಳಿದಳು. ಅವಳನ್ನು ನೋಡಿದ ಕೂಡಲೇ ಜಯಾವಿಗೆ, ಅವಳು ಬಹಳ ದಣಿದಿರುವಳೆಂದು ತಿಳಿಯಿತು. ಬಾಗಿಲು ಕಾಯುತ್ತಿದ್ದ ಜವಾನ ಜಟಕಾ

ದಿಂದ ವತ್ಸಲೆಯ ಹಾಸಿಗೆಯನ್ನೂ ಪೆಟ್ಟಿಗೆಯನ್ನೂ ತೆಗೆದಿಡಲು ಹೊರಟನು. ವತ್ಸಲೆ "ಸ್ವಲ್ಪ ತಡಿ" ಎಂದು ಹೇಳಿ ಜಟಕಾದವನನ್ನೂ ಅಲ್ಲಿಯೇ ನಿಲ್ಲಿಸಿದಳು.

ಜಯಾವು ವತ್ಸಲೆಯನ್ನು "ಊಟ ಮಾಡು ಏಳು. ಮುಖ ಬಹಳ ಬಳಲಿ ಸುಸ್ತಾಗಿದೆ. ಆ ಮೇಲೆ ಮಾತನಾಡೋಣ ಎಂದಳು. ವತ್ಸಲೆ "ಈಗ ಊಟ ಮಾಡೊಲ್ಲ. ನನಗೆ ಹಸಿವಿಲ್ಲ. ಹಿಂದಲ ಮನೇನ ಯಾಕೆ ಬಿಟ್ಟಿರಿ. ಮಣಿ ಎಲ್ಲಿ? ಅವರು ಎಲ್ಲಿ ಬೇಗ ಹೇಳು" ಎಂದಳು. ಜಯಾವು "ಆಗುವುದಾಯಿತು. ಇನ್ನು ಈಗ ಗಾಬರಿಪಟ್ಟು ಪ್ರಯೋಜನವೇನು? ಪಾಪ ಶಾಮುನ ಮುಖ ನೋಡು. ಅವನಿಗೆ ಆಗಲೆ ನಿದ್ರೆ. ಮೊದಲು ಒಂದು ಗುಕ್ಕು ಅನ್ನ ಅವನಿಗೆ ಹಾಕಿ ಮಲಗಿಸಿಬಿಟ್ಟು ಮಾತನಾಡೋಣ. ಇಷ್ಟು ದಿವಸ ಮೀರಿ ಹೋಗದ್ದು ಈಗ ಒಂದು ಗಳಿಗೆಯಲ್ಲಿ ಮೀರಿಹೋಗುವುದಿಲ್ಲ. ಆಗುವುದೆಲ್ಲಾ ಒಳ್ಳೇದಕ್ಕೇಯೇ" ಎಂದಳು. ವತ್ಸಲೆ "ಹೆಚ್ಚು ಚರ್ಚಿಸಿದರೆ ಸುಮ್ಮನೆ ಸಾವಕಾಶವಾಗುವುದಿಲ್ಲ" ಎಂದುಕೊಂಡು ಜಯಾ, ಶಾಮುನಿಗೆ ಅನ್ನ ಹಾಕುವವರೆಗೆ ಸುಮ್ಮನಿದ್ದಳು. ಶಾಮು ನಾಲ್ಕು ಗುಕ್ಕು ತಿಂದವನು ಐದನೆ ಗುಕ್ಕು ತಿನ್ನುವಾಗಲೇ ಕಣ್ಣು ಮುಚ್ಚಿಕೊಂಡು ಮಲಗಿಯೇ ಬಿಟ್ಟನು.

ಅದು ೯೪೨ನೆಯ ಆಗಸ್ಟು. ಭಾರತ ಸ್ವತಂತ್ರ ರಾಷ್ಟ್ರವೆಂದು ದೇಶದ ಪ್ರತಿನಿಧಿಯಾದ ಕಾಂಗ್ರೆಸ್ಸು ಘೋಷಿಸಿತ್ತು. ಭಾರತೀಯರೆಲ್ಲಾ ಇನ್ನು ಮುಂದೆ ಸ್ವತಂತ್ರರಂತೆ ಆಚರಿಸಬೇಕೆಂಬುದು ಕಾಂಗ್ರೆಸ್ ಸಂದೇಶವಾಗಿದ್ದಿತು. ದೇಶದಲ್ಲಿ ಹೊಸ ಜೀವ ಹೊಸ ವಾತಾವರಣ ಹೊಸ ಚೈತನ್ಯ ಉಂಟಾಗಿದ್ದಿತು. ಎಲ್ಲಿ ನೋಡಿದರೂ ಬ್ರಿಟಿಷರೇ ಭಾರತದಿಂದ ತೊಲಗಿ ಎಂಬ ಕ್ರಾಂತಿಯ ಕೂಗು ಗಗನವನ್ನು ಮುಟ್ಟುತ್ತಿದ್ದಿತು. ಕಾರ್ಖಾನೆಗಳ ಕೆಲಸಗಾರರು ಉಪಕರಣಗಳನ್ನು ಕೆಳಗಿಟ್ಟು ಬಂದರು. ಅಧಿಕಾರಿಗಳು ತಮ್ಮ ಕೆಲಸಕ್ಕೆ ಸರಿಯಾಗಿ ಹೋಗುತ್ತಿರಲಿಲ್ಲ. ಶಾಲೆ ಕಾಲೇಜುಗಳಿಂದ ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಪುಸ್ತಕಗಳನ್ನು ಎಸೆದು ಹೊರಕ್ಕೆ ಬಂದರು. ಎಲ್ಲಿ ನೋಡಿದರೂ ಜನರು ಗುಂಪು ಗುಂಪಾಗಿ ಸ್ವತಂತ್ರ ರಾಷ್ಟ್ರಧ್ವಜವನ್ನು ಹಿಡಿದುಕೊಂಡು ಭಾರತವು ಸ್ವತಂತ್ರ, ಈ ದೇಶವನ್ನು ಆಕ್ರಮಿಸಿರುವರು

ಯಾರೇ ಆಗಲಿ ಅವರು ದಸ್ಯುಗಳೆ. ಮಾಡಿ ಅಥವ ಮಡಿಯಿರಿ. ಸ್ವಾತಂತ್ರ್ಯ ಕ್ಕಾಗಿ ಪ್ರಾಣವನ್ನೇ ತ್ಯಜಿಸಿ ಎನ್ನುವ ಕೂಗು ದೇಶದ ಉಸಿರಾಯಿತು.

ಭಾರತೀಯರ ತ್ಯಾಗ ದಿನದಿನವೂ ಕಿವಿಗೆ ಬೀಳುತ್ತಿದ್ದಿತು. ಕಣ್ಣಿಗೆ ಕಾಣುತ್ತಿದ್ದಿತು. ಇವತ್ತು ಇಲ್ಲಿ ಗಂಡಿನ ಸುರಿಮಳೆ; ಇವತ್ತು ಇಲ್ಲಿ ಮಿಶನ್ ಗನ್ ಗೋಳಿಬಾರು; ಆಕಾಶ ವಿಮಾನದಿಂದ ಮಿಶನ್‌ಗನ್ ಗೋಳಿಬಾರು; ಆಕಾಶ ವಿಮಾನದಿಂದ ಬಾಂಬು. ಎಲ್ಲಾ ನಿರಾಯುಧರಾದ ಭಾರತೀಯರ ಮೇಲೆಯೆ. ಭಾರತ ರಕ್ಷಣೆಯ ಹೆಸರಿನಲ್ಲಿ ಕರಾಚಿಯ ಇಪ್ಪತ್ತು ವರುಷದ ಹುಡುಗನಿಗೆ ಮರಣದಂಡನೆ ಸುದ್ದಿ. ಸುದ್ದಿಗಳನ್ನು ಕೇಳಿ ಗೋಪಾಲನ ರಕ್ತ ಕುದಿಯಲಾರಂಭಿಸಿತು. ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ದಿನ ದಿನವೂ ಪ್ರಚಂಡವಾದ ಸಭೆಗಳನ್ನು ನಡೆಸುತ್ತಿದ್ದರು. ಅವರ ಸ್ಫೂರ್ತಿಯುತ ವಾದ ತಾರುಣ್ಯದ ಕೆಚ್ಚಿನ ಮಾತುಗಳಿಂದ ನಿರ್ವೀರ್ಯರಾದ ನಮ್ಮವರು ಎಚ್ಚೆತ್ತರು.

ದೇಶದ ಗುಲಾಮಗಿರಿಯ ಈ ಬೆಳಕಿನಲ್ಲಿ ಗೋಪಾಲನಿಗೆ ತನ್ನ ಕಷ್ಟ ಅತ್ಯಂತ ಅಲ್ಪವಾದುದಾಗಿ ತೋರಿತು. ನಲವತ್ತು ಕೋಟಿ ಜನ, ಜೀವನ ಮರಣ ಗಳ ಹೋರಾಟದಲ್ಲಿ ತೊಡಗಿರುವ ತನ್ನ ಹೆಂಡತಿಯ ಪ್ರೇಮ ತನಗೆ ದೊರೆಯ ಲಿಲ್ಲವಲ್ಲ ಎಂದು ತಾನು ಕೊರಗುತ್ತಿರುವುದು ಅವನಿಗೆ ಮೂರ್ಖತನವಾಗಿ ತೋರಿತು. ಇದುವರೆಗೆ ಬಾಳನ್ನು ನಾನು ವ್ಯರ್ಥ ಮಾಡಿದೆ ಎಂದೇ ಅವನು ಕೊರಗಿದನು. ದೇಶದ ಸ್ವಾತಂತ್ರ್ಯದ ಮುಂದೆ ಉಳಿದ ಎಲ್ಲಾ ಪ್ರಶ್ನೆಗಳೂ ಹುಡುಗಾಟವಾದುವು. ಅವನಿಗೆ ಹೆಂಡತಿಯ ಮೇಲಿನ ಕೋಪ ಸಹ ಮಾಯ ವಾಯಿತು. ಅನೇಕ ಕೋಟಿ ಜನರ ಸುಖದ ಸಾಧನೆಯ ಮಾರ್ಗದಲ್ಲಿ ಹೊರಟವನು ಹೆಂಡತಿಯೊಬ್ಬಳ ಮೇಲೆ ಕೋಪವನ್ನೂ ತಿರಸ್ಕಾರವನ್ನೂ ಇಟ್ಟು ಕೊಳ್ಳುವುದು ಹೇಗೆ ಸಾಧ್ಯ. ಗೋಪಾಲನ ಮನಸ್ಸು ಪೂರ್ಣವಾಗಿ ಶುದ್ಧವಾಯಿತು. ಸೇವೆಯ ತ್ಯಾಗದ ಉತ್ಸಾಹದ ಅಗ್ನಿಯಲ್ಲಿ ಅವನ ದೌರ್ಬಲ್ಯ ಪೂರ್ಣವಾಗಿ ಉರಿದುಹೋಯಿತು. ಅವನು ಹೊಸ ತೇಜಸ್ಸಿ ನಿಂದ ಸ್ವತಂತ್ರ ಭಾರತದ ಆಂದೋಳನದಲ್ಲಿ ಧುಮುಕಿದನು.

ಚಳುವಳಿಯಲ್ಲಿ ಸೇರುವವರಿಗೆ ತನ್ನ ಶಕ್ತಿ ತನಗೆ ಗೊತ್ತಿರಲಿಲ್ಲ ಗೋಪಾಲನಿಗೆ. ಯಾವುದೋ ಒಂದು ಮಂತ್ರಶಕ್ತಿ ಅವನನ್ನು ಆಡಿಸುತ್ತಿರು

ವಂತೆ ತೋರಿತು. ಸ್ವಾತಂತ್ರ್ಯದ ಮೇಲಿನಷ್ಟು ಆಸೆ ಅವನಿಗೆ ಯಾವಾಗಲೂ ಯಾತರ ಮೇಲೆಯೂ ಉಂಟಾಗಲಿಲ್ಲವೆಂದೂ ಚೆನ್ನಾಗಿ ಮುಂದಟ್ಟಾಯಿತು. ತನ್ನ ಹೆಂಡತಿ, ತನ್ನ ಮಗು, ತನ್ನ ಸಾಲ, ತನ್ನ ಕಾವ್ಯ, ತನ್ನ ಪ್ರಸಿದ್ಧಿ, ಶಕ್ತಿ ಎಲ್ಲವೂ ಈ ದೇವತೆಗೆ ಅರ್ಪಣೆ. "ಗಂಡುಸಾದರೆ ನಿನ್ನ ಬಲಿ ಕೊಡುವೆಯೇನು" ಎಂಬ ಸವಾಲನ್ನು ಗೋಪಾಲನು ಎತ್ತಿಕೊಂಡನು. ಅವನು ಪ್ರತಿದಿನವೂ ೨೦-೨೫ ಸಭೆಗಳಲ್ಲಿ ಭಾಷಣ ಮಾಡುತ್ತಿದ್ದನು. ಅವನ ಮಾತುಗಳು ಸಿಡಿಲಿನಂತೆ ಬಾಂಬಿನಂತೆ ಇರುತ್ತಿದ್ದವು. ಪೋಲೀಸಿನವರು ಅವನ ಮೇಲೆ ಕಣ್ಣಿಟ್ಟಿದ್ದರು.

ವತ್ಸಲೆ ಮೈಸೂರಿಗೆ ಬಂದ ದಿನ ಗಾಂಧಿ ಮೈದಾನದಲ್ಲಿ ಪ್ರಚಂಡವಾದ ಸಭೆ. ಗೋಪಾಲನು ಸಭೆಯಲ್ಲಿ ಮಾತನಾಡುವವನಾಗಿದ್ದನು. ವಾಸ್ತವವಾಗಿ ಗೋಪಾಲ ಮಾತನಾಡದ ಸಭೆಯೆ ಮೈಸೂರಲ್ಲಿ ಇರಲಿಲ್ಲ. ಅವನು ಮನೆಗೆ ಬಂದರೆ ಬರುತ್ತಿದ್ದ. ಇಲ್ಲದಿದ್ದರೆ ವಿದ್ಯಾರ್ಥಿಗಳ ಜೊತೆಯಲ್ಲಿಯೇ ಇರುತ್ತಿದ್ದ. ಎಂಟು ಹತ್ತು ದಿನಗಳಿಂದ ರಿಜರ್ವ್ ಪೋಲೀಸಿನವರು ಗೋಪಾಲನು ಉಪನ್ಯಾಸ ಮಾಡುತ್ತಿದ್ದ ಸಭೆಯಲ್ಲಿ ಒನಕೆ ಗಾತ್ರದ ಲಾಠಿಗಳನ್ನು ಹಿಡಿದುಕೊಂಡು ನಿಲ್ಲುತ್ತಿದ್ದರು. ಆಯುಧ ಕೈಯಲ್ಲಿದ್ದರೆ ಸುಮ್ಮನೆ ಇರಗೊಡುವುದೆ ? ಇವರು ಸಭೆಯಲ್ಲಿ ಏನಾದರೂ ಚೇಷ್ಟೆ ಮಾಡಿಯೇ ಮಾಡುತ್ತಾರೆ ಎಂದು ಜನರು ಹೆದರಿದರು.

ಜಯ ಈ ಸಂಗತಿಗಳನ್ನೆಲ್ಲಾ ವತ್ಸಲೆಗೆ ಹೇಳಿದಳು. ಗೋಪಾಲ ಸಭೆಗೆ ಹೋಗಿದ್ದಾನೆ. ಸಭೆ ಮುಗಿದನಂತರ ರಾತ್ರಿ ಇಲ್ಲಿಗೆ ಬರಬಹುದು. ಬರುತ್ತಾನೆ. ಆ ಮೇಲೆ ಮಾತನಾಡೋಣ ಎಂದಳು. ವತ್ಸಲೆಗೆ ಇನ್ನು ಒಂದು ಗಳಿಗೆಯೂ ತಡೆಯುವುದಾಗಲಿಲ್ಲ. ಅವಳು ಜಯಾವಿಗೆ ನಾನು ಗಾಂಧೀ ಮೈದಾನಕ್ಕೇ ಹೋಗುತ್ತೇನೆ ಎಂದು ಹೇಳಿ ಹೊರಟಳು. ಜಯಳು ನಿನಗೇನು ಹುಚ್ಚೆ. ಆ ಜನ ಸಮುದಾಯದಲ್ಲಿ ಹೋದರೆ ನಾವು ಉಳಿಯುತ್ತೇವೆಯೆ ? ಗೋಪಾಲಣ್ಣ ಉಪನ್ಯಾಸ ಮಾಡುವ ಸಭೆಯಲ್ಲಿ ಪೋಲೀಸರು ಲಾಠಿ ಛಾರ್ಜು ಮಾಡಬೇಕೆಂದು ನೆಪ ಹುಡುಕುತ್ತಿದ್ದಾರಂತೆ. ಅಲ್ಲಿ ಹೋಗುವುದು ಖಂಡಿತ ಬೇಡ ಎಂದಳು. ವತ್ಸಲೆಯು ಧೈರ್ಯದಿಂದ ಇದುವರೆಗೆ ಆದದು ಆಯಿತು. ಇನ್ನು ಅವರೆಲ್ಲಿಯೋ ನಾನು ಅಲ್ಲಿಯೇ. ಸುಖ

ದಲ್ಲಿಯಂತೂ ಅವರ ಪಾಲುಗಾರಳಾಗಲಿಲ್ಲ. ಕಷ್ಟದಲ್ಲಿಯಾದರೂ ಆಗು ತ್ತೇನೆ. ಶಾಮುನಿಗೆ ನೀನೆ ತಾಯಿ ಎಂದು ಹೇಳಿ ಗಾಂಧಿ ವ್ಯೈದಾನದ ಕಡೆ ಹೊರಟಳು. ಅವಳು ಹೋಗುತ್ತಿದ್ದುದನ್ನು ನೋಡಿ ಜಯುಳ ಕಣ್ಣು ನೀರಿನಿಂದ ಮಂಜಾಯಿತು.

ನಲವತ್ತೆರಡನೆಯ ಇಸವಿಯ ಪ್ರಚಂಡ ಸಭೆಗಳು ನಮ್ಮವರಿಗೆ ಗೊತ್ತು. ದೂರದಿಂದಲೇ ಮಹಾಸಭೆಯ ಧ್ವನಿ ಸಮುದ್ರದ ಘರ್ಜನೆಯಂತೆ ವತ್ಸಲೆಗೆ ಕೇಳಿಸಿತು. ಭಾರತವು ಸ್ವತಂತ್ರ ಎಂಬ ಧ್ವನಿ ಗಗನವನ್ನು ಭೇಧಿಸಿಕೊಂಡು ಸ್ವರ್ಗಕ್ಕೆ ಮುಟ್ಟಿತು. ಆ ಮಹಾ ಸಮುದ್ರದ ಮಧ್ಯದಲ್ಲಿ ಗೋಪಾಲ ಸಿಂಹದಂತೆ ಘರ್ಜಿಸುತ್ತಿದ್ದನು. " ಈ ನಲವತ್ತು ಕೋಟಿ ಜನ ರನ್ನು ಗುಲಾಮಗಿರಿಯಲ್ಲಿಡುವುದು ಯಾರಿಂದಲೂ ಸಾಧ್ಯವಿಲ್ಲ. ಒಂದು ದೇಶವನ್ನು ಆಳಲು ಮತ್ತೊಂದು ದೇಶಕ್ಕೆ ಖಂಡಿತ ಯೋಗ್ಯತೆಯಿಲ್ಲ. ತ್ಯಾಗ ವಿಲ್ಲದೆ ಮೋಕ್ಷವಿಲ್ಲ. ಹೇಡಿಗಳಿಗೆ ಸ್ವಾತಂತ್ರವಿಲ್ಲ. ತನು ಮನ ಧನಗಳ ನೆಲ್ಲಾ ಸ್ವಾತಂತ್ರ್ಯದ ಅಡಿದಾವರೆಯಲ್ಲಿ ಅರ್ಪಿಸಿ. ಸ್ವಾತಂತ್ರ್ಯ ದೇವಿ ಕಠಿಣೆ. ಅವಳಲ್ಲಿ ಚೌಕಸಿ ನಡೆಯುವುದಿಲ್ಲ. ಪೂರ್ಣತ್ಯಾಗವೇ ಅಲ್ಲಿಯ ಅರ್ಹತೆ. (ಸ್ತ್ರೀಯರ ಕಡೆ ನೋಡಿ) ಎಲ್ಲಿ ನಿಮ್ಮ ಬೆಲೆಯಾದ ಆಭರಣಗಳನ್ನೆಲ್ಲಾ ಅರ್ಪಿಸಿ. ಪತಿಯನ್ನೂ ಪುತ್ರರನ್ನೂ ಅಣ್ಣತಮ್ಮಂದಿರನ್ನೂ ಸ್ವಾತಂತ್ರ ಪೀಠದಲ್ಲಿ ಬಲಿಕೊಡಲು ಕಲ್ಲು ಮನಸ್ಸು ಮಾಡಬೇಕಾದವರಿಗೆ ಈ ಅಲ್ಪವಾದ ಒಡವೆಗಳ್ಯಾಕೆ ?

ಮಹಿಳೆಯರಲ್ಲಿ ಗೋಪಾಲನ ಮಾತು ವ್ಯರ್ಥವಾಗಲಿಲ್ಲ. ಬಳೆಗಳು ಸರಗಳು ಉಂಗರಗಳು ಜಡೆಬಿಲ್ಲೆ ಸ್ವಯಂಸೇವಕರ ಕೈಗೆ ಬರತೊಡಗಿದವು. ವತ್ಸಲೆ ಗೋಪಾಲನ ಮಾತುಗಳನ್ನು ಕೇಳುತ್ತಿದ್ದಳು. ಹಿಂದಲ ಜೀವನ ವೆಲ್ಲ ಒಂದು ಘಳಿಗೆಯಲ್ಲಿ ಅವಳ ಮನೋನೇತ್ರದ ಮುಂದೆ ನಡೆದು ಹೋಯಿತು. ಆ ಘಳಿಗೆಯ ಪ್ರಭಾವವೋ, ಆ ಜನ ಸಮೂಹವೊ ? ಗೋಪಾಲನ ಮಾತುಗಳೋ ? ಇತರ ಮಹಿಳೆಯರ ತ್ಯಾಗವೋ ? ಅಂತೂ ವತ್ಸಲೆಗೆ ಇದ್ದಕ್ಕಿದ್ದಂತೆ ತನ್ನ ಆಭರಣಗಳಲ್ಲಿ ದ್ವೇಷವುಂಟಾಯಿತು. ನಮ್ಮ ದೇಶದ ಜನ ಹೀಗೆ ಪ್ರಾಣಗಳನ್ನರ್ಪಿಸುತ್ತಿರುವಾಗ ನಾನು ಯಾವ ಬಿಸಿಲು ಕುದುರೆಯನ್ನು ನೆಚ್ಚಿಕೊಂಡು ಈ ವ್ಯರ್ಥವಾದ ಬಾಳನ್ನು ನಡೆಸುತ್ತಿರುವೆ

ಎಂದು ಅವಳಿಗೆ ತನ್ನಲ್ಲಿಯೇ ತಿರಸ್ಕಾರವುಂಟಾಯಿತು. ದುಃಖಾನುಭವ ದಿಂದ ಮಾತ್ರ ದೊರೆಯುವ ಒಂದು ಸಂಸ್ಕಾರ ಅವಳಿಗೆ ಆ ಘಳಿಗೆಯಲ್ಲಿ ದೊರೆಯಿತು. ಅವಳು ತನ್ನ ಎಲ್ಲಾ ಆಭರಣಗಳನ್ನೂ ತೆಗೆದು ಸ್ವಯಂ ಸೇವಕನ ಕೈಗೆ ಕೊಟ್ಟಳು. ಅದರ ಜತೆಯಲ್ಲಿ ಅವಳ ದೇಹದ ಕೊಳೆಯೂ ಮನಸ್ಸಿನ ಪಾಪವೂ ಪರಿಹಾರವಾದಂತೆ ಅವಳಿಗೆ ತೋರಿತು. ತನ್ನ ಪಾಪಕ್ಕೆ ಯಾವುದೋ ಪ್ರಾಯಶ್ಚಿತವನ್ನು ಮಾಡಿಕೊಂಡಂತೆ ಅವಳಿಗೆ ಮನಸ್ಸು ಹಗುರವಾಯಿತು.

ಇದ್ದಕ್ಕಿದ್ದಂತೆ ಜನರಲ್ಲಿ ಗದ್ದಲ ಪ್ರಾರಂಭವಾಯಿತು. ಪೋಲೀಸಿನವರು ತಮ್ಮ ಮೇಲೆ ಕಲ್ಲು ಬಿದ್ದಿತೆಂದು ಲಾಠಿ ಛಾರ್ಜು ಪ್ರಾರಂಭಿಸಿದರು. ಹಕ್ಕಿಗಳ ನಡುವೆ ಬಂದೂಕನ್ನು ಹಾರಿಸಿದರೆ ಹೇಗೋ ಹಾಗೆ ಜನ ದಿಕ್ಕಾಪಾಲಾಗಿ ಓಡತೊಡಗಿದರು. ಗೋಪಾಲನಿಗೆ ಲಾಠಿ ಏಟು ಬಿದ್ದಿತು. ಪೋಲೀಸ್ ಅಧಿಕಾರಿ "ಹತ್ತು ನಿಮಿಷದಲ್ಲಿ ಚದುರಿ ಹೋಗಿ ಆ ಮೇಲೆ ಇಲ್ಲಿ ಉಳಿದವರನ್ನು ಜೈಲಿಗೆ ಕರೆದುಕೊಂಡು ಹೋಗುತ್ತೇವೆ" ಎಂದು ಅಪ್ಪಣೆ ಮಾಡಿದನು. ಚದುರಿದವರು ಚದುರಿದರು. ಉಳಿದವರು ಉಳಿದರು. ಪೋಲೀಸ್ ಅಧಿಕಾರಿ ಗೋಪಾಲನನ್ನು ಗಾಡಿಯಲ್ಲಿ (ವ್ಯಾನ್) ಕೂಡಿದನು. ಉಳಿದವರನ್ನು ಒಬ್ಬೊಬ್ಬರನ್ನಾಗಿ ಕೂಡಿದನು. ವತ್ಸಲೆಯನ್ನು ನೋಡಿ ನಿಮ್ಮ ಪಾಡಿಗೆ ನೀವು ಮನೆಗೆ ಹೋಗಿ ಇಲ್ಲದಿದ್ದರೆ ನಿಮ್ಮನ್ನೂ ಜೈಲಿಗೆ ಎಳೆದುಕೊಂಡು ಹೋಗುತ್ತೇವೆ ಎಂದನು. ವತ್ಸಲೆಯು ಮಾತನಾಡಲಿಲ್ಲ. ಅಧಿಕಾರಿ ಇನ್ನೂ ಒಂದು ನಿಮಿಷ ವಾಯಿದೆ ಕೊಟ್ಟನು. ಕೊನೆಗೆ ವತ್ಸಲೆಯನ್ನೂ ಗಾಡಿಗೆ ಕೂಡಿದನು. ಕತ್ತಿನ ಮೇಲೆ ಬಿದ್ದಿದ್ದ ಏಟಿನಿಂದ ಚೇತರಿಸಿಕೊಳ್ಳುತ್ತಾ ಗೋಪಾಲ ಇನ್ನೂ ಕಣ್ಣು ಮುಚ್ಚಿಕೊಂಡು ಕತ್ತನ್ನು ಸವರಿಕೊಳ್ಳುತ್ತಿದ್ದನು. ವತ್ಸಲೆಯನ್ನು ಗಾಡಿಗೆ ಕೂಡಿದುದನ್ನು ನೋಡಿ ಸ್ವಯಂಸೇವಕರು "ಮಹಿಳೆಯರಿಗೆ ಸ್ವಲ್ಪ ಜಾಗ ಮಾಡಿಕೊಡಿ" ಎಂದರು. ಒಬ್ಬ ಸತ್ಯಾಗ್ರಹಿ ಎದ್ದು ನಿಂತನು. ಗೋಪಾಲನು ಈ ವೀರ ರಮಣಿ ಯಾರೆಂದು ಕಣ್ಣು ಬಿಟ್ಟು ನೋಡಿದನು. ಅವನಿಗೆ ಒಂದು ಗಳಿಗೆ ಆಶ್ಚರ್ಯವಾಯಿತು. ಅನಂತರ ನೀನು ಎಂದನು. ವತ್ಸಲೆ ಹೂ, ಎಂದು ತಲೆಯಲ್ಲಾಡಿಸಿದಳು.

ಅಂದು ವತ್ಸಲೆಗೆ ಪುನರ್ಜನ್ಮವಾಯಿತು. ಗಾಡಿ ಹೊರಟಾಗ ಸ್ವಯಂಸೇವಕನು,

ರಕ್ತ ಗುಲಾಲಸೆ ಭರಲೆ ಜ್ಯೋಲಿ
ಆಜ ಹಮಾರ ಹೋಲಿ

ಎಂದು ಹಾಡಿದುದು ದೂರದ ಗಾನದಂತೆ ಮಧುರವಾಗಿ ಕೇಳಿಸಿತು.

"ಶಂಕರ ಮುದ್ರಣಾಲಯ", ಅವಿನ್ಯೂ ರಸ್ತೆ, ಬೆಂಗಳೂರು-೨

ಆದರ್ಶ ಸಾಹಿತ್ಯ ಮಾಲೆಯ ಮುಂದಿನ ಕಾದಂಬರಿಗಳು

ಪದ್ಮ

ಪೈಯ್ಯಾರಿ

ಗಂಡುಬೀರಿ ಹೊಸಬಿ

ಪುಟ್ಟಮಲ್ಲಿಗೆ

ಬೈಲಹಳ್ಳಿ ಸರ್ವೆ

ಬೆಲೆ: ೦—೧೦—೦

ಗುಂಡೂರಾಮಯ್ಯನವರ

# ಜಗದ್ಗುರು ಶಂಕರಾಚಾರ್ಯರು

ಬೆಲೆ ೧—೮—೦